TIGHT BINDING BOOK

Osmania University Library

Call No. K:83 K98H

Name of Book

Name of Author

UNIVERSAL LIBRARY

OU_200089

UNIVERSAL LIBRARY

೯ ಶೇಷಾಚಲ ಗ್ರಂಥಮಾಲೆ, ಆನಂದವನ.

# ಹಂಸಾ

(ಐತಿಹಾಸಿಕ ಕಾದಂಬರಿ)

ಇದನ್ನು

ಸ್ತ್ರೀಮಯಿ, ಕಂಕಣ ಚೋರ, ಸೌಭಾಗ್ಯ ತಿಲಕ, ಬಂಧುಪ್ರೇಮ, ಭಗವಾ
ದಾಸ, ವಿಚಿತ್ರಚಟ, ಇಂದುಮುಖಿ, ಘಾತುಕಶಿತಿಕಂಠ, ವಡಗಾಂವದ
ವಿಜಯ, ನರವೀರ ಕಾಸೀಮ, ವಿಲಕ್ಷಣ ಪತಿಸೇವೆ, ಮಿತ್ರದುಃಖ,
ಫಿರಂಗಿಗಳ ಉತ್ಪಾತ್,ತಾಯಿನಾಡು, ಮರಾಟರೂ ಇಂಗ್ಲಿಷರೂ,
ಸ್ಕೂಲಮಿಸ್ಟ್ರೆಸ್, ಕಮಲಾಕಾಂತ ಸಾಧು ಇತ್ಯಾದಿ ಐತಿ
ಹಾಸಿಕ, ಸಾಮಾಜಿಕ, ಪತ್ತೆದಾರಿ ಕಾದಂಬರಿಗಳ
ಕರ್ತೃಗಳಾದ

## ಭಿ. ಪ. ಕಾಳೆ.

ಇವರು ಬರೆದದ್ದು

[೨ನೇ ಮುದ್ರಣ]

1917

ಬೆಲೆ ೧। ರೂ.

ಪ್ರಕಾಶಕ:—

ಭಿ. ಪ. ಕಾಳೆ,

ಶ್ರೀ ಶೇಷಾಚಲ ಗ್ರಂಥಮಾಲೆ,

ಆನಂದವನ (ಅಗಡಿ)

CHECKED 1956




(ಎಲ್ಲ ಹಕ್ಕುಗಳು ಕಾದಿಡಲ್ಪಟ್ಟಿವೆ.)

Checked 1965

# ಉಪೋದ್ಘಾತ.

ಸುಪ್ರಸಿದ್ಧ ಕಾದಂಬರಿಕಾರ ಕೈ. ವಾ. ನಾಥಮಾಧವರ ಒಂದು ಮರಾಠೀ ಕಾದಂಬರಿಯ ಆಧಾರದಿಂದ ಇದನ್ನು ಬರೆದಿದೆ. ಔರಂಗಜೇಬ ಬಾದಶಹನ ಅಂತ್ಯಕಾಲ ಪ್ರಸಂಗದ ಇದೊಂದು ಉಜ್ವಲವಾದ ಕಾದಂಬರಿಯು. ಹಿಂದುಗಳ ದೃಷ್ಟಿಯಿಂದ ಔರಂಗಜೇಬನು ಎಂಥ ಕ್ರೂರನೂ, ಅಧಮನೂ, ನೀಚನೂ ಆಗಿದ್ದರೂ ಆತನಲ್ಲಿಯ ಸ್ವಧರ್ಮನಿಷ್ಠೆ, ಕಾರ್ಯತತ್ಪರತೆ, ವಿಲಾಸ ವಿರಾಗತೆ, ಉದ್ಯೋಗಪ್ರಿಯತೆ ಹಾಗು ದಾನ-ಧರ್ಮಗಳ ವಿಷಯಕ ನಿಜವಾದ ವಿಚಾರ್ನತೆ ಮೊದಲಾದ ಉಜ್ವಲ ಗುಣಗಳು ಹೊಗಳತಕ್ಕವುಗಳಾಗಿದ್ದವಲ್ಲದೆ, ಆತನ ಪ್ರಸಂಗಾವಧಾನತೆಯಂತೂ ಅವರ್ಣನೀಯವಾಗಿತ್ತು. ಆತನು ತನ್ನ ಗುಟ್ಟನ್ನು ಎಂದೂ ಯಾರಿಗೂ ಕೊಟ್ಟಿರಲಿಲ್ಲ. ಆದರಿಂದ ಆತನ ಮರಣ ಕಾಲದ ಬಗ್ಗೆ ಯಾರಿಗೂ ನಿಜವಾದ ಅನುಮಾನವಾಗಿರಲಿಲ್ಲ. ಆತನ ಅವಸಾನ ಕಾಲದಲ್ಲಿ ಆತನಿಗೊಬ್ಬ ಮೊಮ್ಮಗನು ಹುಟ್ಟಿದ್ದನು. ಆಗ ಆ ಕೂಸಿಗೆ ಏನು ಹೆಸರಿಡಬೇಕೆಂದು ಅವನನ್ನು ಕೇಳಿದರು. ಆ ಕೂಸಿಗೆ ಇವನು ತನ್ನ ಹೆಸರೇ ಇಡಿರೆಂದು ಹೇಳಿದ್ದರೆ, ಆತನ ಮರಣ ಕಾಲವು ಸಮೀಪಿಸಿತೆಂದು ಎಲ್ಲರಿಗೂ ಗೊತ್ತಾಗುತ್ತಿತ್ತು; ಆದರೆ ಆಗ ಆತನು ಹಾಗೆ ತನ್ನ ಅಂತ್ಯಕಾಲವನ್ನು ಯಾರಿಗೂ ತಿಳಿಸಲಿಲ್ಲ; ಯಾಕೆಂದರೆ, ತಾನು ತನ್ನ ತಂದೆಯನ್ನು ಸೆರೆಯಿರಿಸಿದಂತೆ, ತನ್ನ ಮಕ್ಕಳೂ ತನ್ನನ್ನು ಸೆರೆಮನೆಯ ಕೋಣೆಗೊಳಿಸಬಹುದೆಂದು ಅವನು ಮನಸ್ಸಿನಲ್ಲಿ ಅಂಜಿದ್ದನು; ಆದ್ದರಿಂದ ಆಗ ಆತನು ಒಳ್ಳೇ ಅವಧಾನವನ್ನು ತಂದುಕೊಂಡು:-"ಈ ಪ್ರಶ್ನೆಯ ಉತ್ತರವನ್ನು ನಾನು ಈಗಲೆ ಹೇಳಲಾರೆನು. ಈಗ ಈ ಹುಡುಗನ ಹೆಸರನ್ನು ನೀವೇ ಇಡಿರಿ. ಈ ಹುಡುಗನಿಗೆ ಮಗನು ಹುಟ್ಟಿದನೆಂದರೆ, ಆಗ ನಾನು ಆತನ ಹೆಸರನ್ನಿಟ್ಟೇನಂತೆ!" ಎಂದು ಹೇಳಿ, ತಾನು ಇನ್ನೂ ೭೦-೭೫ ವರ್ಷಗಳ ವರೆಗೆ ಸಹಜವಾಗಿ ಬದುಕುವೆನೆಂದು ಅಲ್ಲಿದ್ದವರಿಗೆಲ್ಲ ಸೂಚಿಸಿದನು!

ಈ ಕಾದಂಬರಿಯೊಳಗಿನ ಪ್ರಧಾನ ಪಾತ್ರವಾದ ಹಂಸೆಯ ಭವಿಷ್ಯವು ನಿಜವಾದರೂ, ದೈವದುರ್ವಿಪಾಕದ ಮೂಲಕ ಆಕೆಯ ಸೌಭಾಗ್ಯವು ಅಲ್ಪಾವಧಿಯಲ್ಲೇ ಲುಪ್ತವಾಯಿತು. ಈಶ ಇಚ್ಛೆಯ ಮುಂದೆ ಯಾರ ಆಟವೇನು ನಡೆಯಬೇಕಾಗಿದೆ? ಹಂಸೆಯ ಭವಿಷ್ಯದಂತೆ ಮರಾಟರ ರಾಜ್ಯದ ಭವಿಷ್ಯವೂ ಆಗಿ, ಅದೂ ಕ್ಷಿಪ್ರದಲ್ಲಿಯೇ ಪರಾಧೀನವಾಗಿ ನಿರ್ನಾಮಗೊಂಡಿತು!

ಶ್ರೀ ರಾಮನವಮೀ, ಶಕೆ ೧೮೫೩

# ವಿಷಯಾನುಕ್ರಮಣಿಕೆ


| ಪಟಲ | ವಿಷಯ |
|---|---|
| ೧ | ಬುಡುಬುಡಿಕನ ಭವಿಷ್ಯ |
| ೨ | ಅವ್ವಾ, ಹಸಿವೆ |
| ೩ | ಹಂಸೆಯ ಸಾಹಸ |
| ೪ | ಹಂಸೆಯ ಸತ್ಯಸ್ವರೂಪ |
| ೫ | ಆಕಸ್ಮಿಕ ದಾಳಿ |
| ೬ | ಇಸ್ಮಾಯಿಲನ ಮೂರ್ಖತನ |
| ೭ | ಪುನರ್ದರ್ಶನ |
| ೮ | ಕೊಲ್ಲಿರಿ, ಈ ಹರಾಮಖೋರರನ್ನು! |
| ೯ | ದಾಭಾಡೆಯವರ ವಾಡೆಯಲ್ಲಿ |
| ೧೦ | ಹಂಸೆಯ ಅಂತರ್ಧಾನ |
| ೧೧ | ಕಟುಕರ ಕೈಯೊಳಗಿನ ಆಕಳು |
| ೧೨ | ಬೇಗಮ್‌ಸಾಬಕಾ ಫರ್ಮಾನ |
| ೧೩ | ಝೇಬುನ್ನಿಸೆಯ ಹಟ |
| ೧೪ | ಶಹಾಜಿ ಪಾಟೀಲನ ಸುಸ್ವಭಾವ |
| ೧೫ | ಪತಿತ ಪಿತನ ಅಧಃಪತನ |
| ೧೬ | ವಿಚಿತ್ರ ಯೋಗಾಯೋಗ |
| ೧೭ | ಏಸಿಯ ಕಾರಸ್ಥಾನ |
| ೧೮ | ತಂಗಿಯ ಬಿಡುಗಡೆ, ಅಣ್ಣನ ಬಂಧನ |
| ೧೯ | ತಾನೊಂದು ಬಗೆದರೆ ದೈವವೊಂದು ಬಗೆಯುವುದು |
| ೨೦ | ತಕ್ಕ ಪ್ರಾಯಶ್ಚಿತ್ತ |
| ೨೧ | ಹೃದಯ ಮಿಲನ |
| ೨೨ | ಹುಚ್ಚನ ನಿಚ್ಚಳವಾದ ಮಾತು |
| ೨೩ | ಶಾಹೂರಾಜನ ಬಂಧಮುಕ್ತತೆ |
| ೨೪ | ಹಂಸೆಯ ದುಃಸ್ವಪ್ನ |
| ೨೫ | ಭವಿಷ್ಯವು ನಿಜವಾಯಿತು |

# ಹಂಸಾ

(ಐತಿಹಾಸಿಕ ಕಾದಂಬರಿ)

## ಬುಡುಬುಡಿಕನ ಭವಿಷ್ಯ.

"ಎಲೆ, ನಡೆ! ಅವನೇನು ಸುಸೂತ್ರ ತರುವನು? ನಾನು ನಿನ್ನ ಸಂಗಡ ಬರುವದಿಲ್ಲವೆ? ಇನ್ನು ನಾವು ಪಾವಳಿಗೆ ಹೋಗಿ, ಹಾ ಹಾ ಅನ್ನುವಷ್ಟರೊಳಗೆ ತಿರುಗಿ ಬರೋಣ. ನೀನು ಇಷ್ಟೇಕೆ ಅಂಜುತ್ತೀ? ನಡೆ ಬೇಗನೆ! ಆ ದೇವರಿಗೇನೋ ಹರಕು ಅರಿವೆ ಕಟ್ಟಬೇಕಂತೆ-ಹರಕು ಅರಿವೆ!!" ಎಂದು ಹಸನನು ತುಚ್ಛತಾಪೂರ್ವಕವಾಗಿ ನುಡಿದನು; ಆದರೆ ಆತನ ಮಾತಿಗೆ ಹತ್ತು ವರ್ಷ ವಯಸ್ಸಿನ ಆ ಪಿಂಜಾರ ಹುಡಿಗೆಯು ಒಪ್ಪಲಿಲ್ಲ. ಲೈಲೆಯು ಸುಮ್ಮನೆ ಆ ಹಳೇ ಹುಣಸೀ ಮರಕ್ಕೆ ಹೋದಳು; ಹಾಗು ತಮ್ಮ ಮನೆಯಿಂದ ಬೇಕಂತ ತಂದಿದ್ದ ಒಂದು ಅರಿವೆಯ ತುಂಡನ್ನು ಆ ಗಿಡದ ಟೊಂಗೆಗೆ ಕಟ್ಟಿದಳು. ಆ ಗಿಡವು ಬಹು ಪುರಾತನ ಕಾಲದ್ದು. ಅದರ ಟೊಂಗೆಗಳಲ್ಲೆಲ್ಲ ಅರಿವೆಯ ತುಂಡುಗಳೇ ತುಂಡುಗಳು! ಆ ಗಿಡವು ಹಳ್ಳದ ಒಡ್ಡಮುರಿಯ ಒಂದು ಪಕ್ಕದ ದಿನ್ನೆಯ ಮೇಲಿದ್ದು, ಬಹು ದಿನಗಳಿಂದ ಅದು ದೇವತ್ವವನ್ನು ಪಡೆದಿತ್ತು. ಆ ದಾರಿಯು ಆಯಕಟ್ಟಿನದೂ, ಕಲ್ಲು-ಮುಳ್ಳು-ಕೆಸರುಗಳುಳ್ಳದ್ದೂ ಆದುದರಿಂದ, ಅಲ್ಲಿಂದ ಹಾದಾಡುವಾಗ ಸಾಕುಸಾಕಾಗುತ್ತಿತ್ತು. ಆ ಒಡ್ಡಮುರಿಯ ಹಳ್ಳದ ದಾರಿಯಲ್ಲಿ ಮಳೆಗಾಲದಲ್ಲಿ ಮೊಣಕಾಲುಮಟ ನೀರು ಹರಿಯುತ್ತಿತ್ತು. ಮಳೆ ನಿಂತಿತೆಂದರೆ, ಆ ನೀರು ಅಲ್ಲಿಯೇ ಮಲೆತು, ಹೆಚ್ಚಾಗಿ ಕೆಸರಾಗುತ್ತಿತ್ತು. ಪಾವಳಿಯಿಂದ ಲೋಣಿ, ಧಾಮಣೆ, ವಡಗಾವ ಮುಂತಾದ ಹಳ್ಳಿಗಳಿಗೆ ಹೋಗಲಿಕ್ಕೆ ಅದೊಂದೇ ಸಮೀಪದ ದಾರಿಯಾಗಿತ್ತು. ಆ ದಾರಿಯಿಂದ ಹಾದಾಡುವ ಪ್ರತಿಯೊಬ್ಬ ಪ್ರವಾಸಿಯು ಆ ಹುಣಸೇಮರದ ದೇವರಿಗೆ ಒಂದು ಹರಕು ಅರಿವೆಯನ್ನು ಕಟ್ಟಿ, ತನ್ನನ್ನು ಈ ದಾರಿಯಲ್ಲಿ ನಿರ್ವಿಘ್ನವಾಗಿ ಸಾಗುವಂತೆ ಅನುಗ್ರಹಿಸಬೇಕೆಂದು ಬೇಡಿಕೊಳ್ಳುವ ಪರಿಪಾಠ ಬಿದ್ದಿತ್ತು. ಆ ದಾರಿಯಲ್ಲಿ ಕೆಸರು ಮುಳ್ಳುಗಳ ಕಾಟವಿಷ್ಟೇ ಇರಲಿಲ್ಲ; ಆ ಹಳ್ಳದ ಪಾರ್ಶ್ವದಲ್ಲಿ ಗಿಡಗಳು ದಟ್ಟವಾಗಿ ಬೆಳೆದಿದ್ದು,

ಅಲ್ಲಿ ದುಷ್ಟ ಮೃಗಗಳೂ ಕಳ್ಳರು-ಕಾಕರೂ ಆಶ್ರಯಹೊಂದಿ, ದಾರಿಕಾರರಿಗೆ ನಾನಾ ಬಗೆಯಿಂದ ಹಿಂಸಿಸುತ್ತಿದ್ದರು. ಅಂತೇ ದಾರಿಕಾರರು ಅತ್ಯಂತ ಶ್ರದ್ಧೆಯಿಂದ ಆ ಹುಣಸೇಗಿಡದ ದೇವರಿಗೆ ಹಾಗೆ ಹರಕೆ ಹೊರುತ್ತಿದ್ದರು.

ಮೇಲೆ ಹೇಳಿದಂತೆ ಆ ಪಿಂಜಾರ ಹುಡುಗೆಯು ಆ ಗಿಡಕ್ಕೆ ಅರಿವೆಯನ್ನು ಕಟ್ಟಿದಳು. ಆಗ ಈ ಗಿಡದ ಹಿಮ್ಮಗ್ಗಲಿನ ವಿಶಾಲವಾದ ಕಲ್ಲ ಮೇಲೆ ಒಬ್ಬ ಮನುಷ್ಯನು ವಿಶ್ರಾಂತಿಗಾಗಿ ಕುಳಿತಿದ್ದನು. ಸೂರ್ಯನು ಪಶ್ಚಿಮದಿಕ್ಕಿನ ಕಡೆಗೆ ಹೆಚ್ಚಾಗಿ ಒಲೆದಿದ್ದನು. ಆ ಹಳ್ಳದ ಬದಿಯ ಘಟ್ಟಕ್ಕೆ ತಿಂಬವೇಹರದ ಘಾಟವೆಂದೂ ಆ ಘಟ್ಟದ ಬಳಿಯ ಚಿಕ್ಕ ಹಳ್ಳಿಗೆ ವಾಘಗಾವ ಎಂದೂ ಹೆಸರುಗಳು. ಆಗಿನ ಅಲ್ಲಿಯ ಆ ಭಯಂಕರವಾದ ಉಷ್ಣತೆಯನ್ನು ಅನುಭವಿಸಿದವರಿಗೆ ಆ ಊರಿಗೆ ಉಗೆಯ ಆ ಹೆಸರಿಟ್ಟದ್ದು ಯೋಗ್ಯವೆನಿಸದಿರುತ್ತಿರಲಿಲ್ಲ. ಲೈಲೆಯು ಅತ್ತ ಗಿಡಕ್ಕೆ ಅರಿವೆಯ ತುಂಡು ಕಟ್ಟಿ ಹರಕೆಯನ್ನು ಹೊರುತ್ತಿರಲು, ಇತ್ತ ಹಸನನು ಒಂದು ಒಳ್ಳೇ ಕಲ್ಲು ತಕ್ಕೊಂಡು ಆ ಗಿಡಕ್ಕೆ ಹೊಡೆದು, ಹುಣಸೇಹಣ್ಣು ಕೆಡವಹತ್ತಿದನು. ಅವನ ಕಲ್ಲಿನ ಏಟಿಗೆ ಹಣ್ಣಂತೂ ಬೀಳಲೇ ಇಲ್ಲ; ಆದರೆ ಅದು ಮರದ ಆಚೆಗೆ ವಿಶ್ರಮಿಸುತ್ತಿದ್ದ ಆ ಮನುಷ್ಯನ ತಲೆಯ ಮೇಲೆ ಬೀಳತಕ್ಕದ್ದು; ಸ್ವಲ್ಪದರಲ್ಲಿ ತಪ್ಪಿತು. ಆ ಕಲ್ಲು ಆ ವಿಶಾಲವಾದ ಶಿಲೆಯ ಮೇಲೆ ಹೋಗಿ ಬೀಳಲು, ಅದು ಆ ಮನುಷ್ಯನಿಗೆ ಬಡಿಯಿತೆಂದೂ, ಅವನು ಇನ್ನು ತನ್ನನ್ನು ಚೆನ್ನಾಗಿ ಥಳಿಸುವನೆಂದೂ ಭಾವಿಸಿದ ಹಸನನು "ಲೈಲೀ, ಓಡು" ಎಂದೆನ್ನುತ್ತ ತನ್ನ ಕಾಲಿಗೆ ಬುದ್ಧೀ ಹೇಳಿದನು. ತನ್ನ ಅಣ್ಣನು ಒಮ್ಮೆಲೆ ಓಡ ಹೇಳಿದ ಕಾರಣವನ್ನು ತಿಳಿಯದ ಆ ಹುಡಿಗೆಯು ಗಾಬರಿಗೊಂಡು, ಅತ್ತಿತ್ತ ಹೊರಳಿ ನೋಡತೊಡಗಿದಳು. ಅಷ್ಟರಲ್ಲಿ ಓಡತೊಡಗಿದ್ದ ಹಸನನು ಆ ಒಡ್ಡಮುರಿ ಹಳ್ಳದೊಳಗಿನ ಒಂದು ಗುಮುಟ ಕಲ್ಲನ್ನು ಎಡವಿ ದೊಪ್ಪನೆ ನೆಲಕ್ಕೆಬಿದ್ದನು! ಅದರಿಂದ ಅವನ ಮೊಳಕಾಲು ಒಡೆದು ರಕ್ತವು ಹೋರಚಿಮ್ಮಹತ್ತಿತು. ಅದನ್ನು ಕಂಡು ಲೈಲೆಯು:--"ನೋಡಿದೆಯಾ ಅಣ್ಣಾ, ಈ ದೇವರಿಗೆ ಹೆಸರಿಟ್ಟಿದ್ದರ ಪರಿಣಾಮವಿದು! ಎಂದಳು.

"ಎಲೆ, ನಡೆ! ಎಲ್ಲಿಯ ದೇವರು?...." ಎಂದು ಸಿಟ್ಟಿನಿಂದ ಅನ್ನುತ್ತ, ಹಸನನು ತನ್ನ ಮೊಳಕಾಲ ರಕ್ತವನ್ನು ಒರಸಿಕೊಳ್ಳಹತ್ತಿದನು. ಅಷ್ಟರಲ್ಲಿ ಆ ಗಿಡದ ಹಿಮ್ಮಗ್ಗಲಲ್ಲಿ ವಿಶ್ರಾಂತಿ ಹೊಂದುತ್ತಲಿದ್ದ ಮನುಷ್ಯನು ಆ ಹುಡುಗರನ್ನು ಬೆದರಿಸುವದಕ್ಕೆಂದು:-"ಎಲೇ, ಯಾರವರು? ಕಲ್ಲು ಒಗೆಯು

ಎರಾ? ಬಂದೆನು ತಡೆಯಿರಿ" ಎಂದು ಕೂಗು ಹಾಕಿದನು. ಆ ದನಿಯನ್ನು ಕೇಳಿ ಹಸನನೂ ಲೈಲೆಯೂ ಓಡತೊಡಗಿದರು. ಹಾಗೆ ಅವರು ಅವಸರದಿಂದ ಓಡುತ್ತಿರಲು, ಅಲ್ಪಾವಕಾಶದಲ್ಲಿಯೇ ಹಸನನ ಕಾಲ್ತೊಡಕಿ ಅವನು ಮತ್ತೆ ಬಿದ್ದನು. ಆ ಕೂಡಲೆ ಆತನ ಮೊಳಕಾಲ ಸಂದು ತಪ್ಪಿ ಅವನಿಗೆ ಬಹು ಬಾಧೆಯಾಯಿತು. ಅದನ್ನು ಕಂಡು ಲೈಲೆಯು ಅಳತೊಡಗಿದಳು. ಆ ದೇವರಿಗೆ ಕಲ್ಲು ಹೊಡೆದನೆಂವೇ ತನ್ನ ಅಣ್ಣನಿಗೆ ಈ ಶಿಕ್ಷೆಯಾಯಿತೆಂದು ಆ ದೈವೀ ಭಾವನೆಯ ಹುಡುಗೆಯ ತಿಳುವಳಿಕೆಯಾಯಿತು!

ಆ ಹುಡುಗರು ಓಡಿ ಹೋದ ಬಳಿಕ ಆ ಮನುಷ್ಯನು ಆ ಕಲ್ಲಮೇಲೆ ಮತ್ತೆ ಚೆನ್ನಾಗಿ ಕುಳಿತು, ತನ್ನಷ್ಟಕ್ಕೇ ತಾನೇ ಅನ್ನುತ್ತಾನೆ:-"ಈ ಮುಸುಲರ ಕಾಟವು ಹೆಚ್ಚಾಯಿತು. ನಮ್ಮ ದೇವರನ್ನು ಕಂಡ ಕೂಡಲೆ ಈ ಲಂಡರಿಗೆ ಪಿಂಗಾಲಿನಿಂದ ನಡುನೆತ್ತಿಯವರೆಗೆ ಉರಿಯಹತ್ತುತ್ತದೆ. ಈ ಚಂಡಾಲರು ನಮ್ಮ ದೇವರ ಮೂರ್ತಿಗಳನ್ನು ಒಡೆದು ವಿಧ್ವಂಸ ಮಾಡುತ್ತಾರೆ. ಇವರು ತಮ್ಮ ಈ ಪಾಪದ ಪ್ರಾಯಶ್ಚಿತ್ತವನ್ನು ಅವಾವ ನರಕಕ್ಕೆ ಹೋಗಿ ಭೋಗಿಸುವರೋ ತಿಳಿಯದು! ಆದರೆ ಈ ನೀಚ ಯವನ ಪೋರನು ಈ ನಮ್ಮ ದೇವರನ್ನು ಕಲ್ಲಿನಿಂದ ಹೊಡೆಯುಬೇಕನ್ನುತ್ತಾನಲ್ಲವೆ? ಛೀ! ಛೀ!! ಇದನ್ನು ಸಹಿಸುವದೆಂತು? ಈ ಬಗ್ಗೆ ನಮ್ಮ ಹಾಲ್ಹಕ್ಕಿಯ ಭವಿಷ್ಯವನ್ನೇ ಕೇಳಬೇಕು" ಎಂದಂದು, ಅವನು ಆ ಗಿಡದ ಮೇಲಿನ ಹಕ್ಕಿಯ ಕಡೆಗೆ ತನ್ನ ಬಗಲೊಳಗಿನ ಚೀಲದೊಳಗಿಂದ ಒಂದು ಚಿಮುಕಿಗೆ ಬೂದಿಯನ್ನು ತೂರಿ ಸುಮ್ಮನೆ ಕುಳಿತನು.

ಆ ಮನುಷ್ಯನು ಮೈಯಲ್ಲಿ ಒಂದು ಹರಕಾದ ನಿಲುವಂಗಿಯನ್ನು ಹಾಕಿದ್ದು, ಹೆಗಲಮೇಲೆ ಹಲವು ಬಣ್ಣದ ಹರಕು-ಬರಕಾದ ವಸ್ತ್ರಗಳನ್ನು ಮೊಣಕಾಲ ವರೆಗೂ ಸಾಲುಸಾಲಾಗಿ ಇಳಿಬಿಟ್ಟಿದ್ದನು; ಹಾಗು ಅವು ಜಾರಿ ಬೀಳಬಾರದೆಂದು ಅಂಥದೇ ಒಂದು ಹರಕು ದೋತರವನ್ನು ಹರಿದಾಸರಂತೆ ಅವುಗಳ ಮೇಲೆ ಟೊಂಕಕ್ಕೆ ಬಿಗಿದಿದ್ದನು. ಆವನ ತಲೆಯ ಮೇಲೆ ಇಷ್ಟಗಲವಾಗಿ ಸುತ್ತಲ್ಪಟ್ಟಿದ್ದ ಚಿತ್ರವಿಚಿತ್ರವಾದ, ಆದರೆ ತೀರ ಮಾಸಿದ ಬಣ್ಣದ ಮುಂಡಾಸವಿದ್ದಿತು. ಬಲಗೈಯ ಹತ್ತರ ಆಗಾಗ್ಗೆ "ಬುಡು ಬುಡು" ಎಂದು ಬಾರಿಸುವ ಚಿಕ್ಕ ಡಮುರು ವಾದ್ಯವು ಟೊಂಕಕ್ಕೆ ನೇತಾಡುತ್ತಿತ್ತು. ಎದೆಯ ಮೇಲೆ ಎಲುಬಿನಂತಹ ೨-೩ ಗಣಿಕೆಗಳು ತೂಗು ಬಿದ್ದಿದ್ದವು. ಎಡ-ಬಲ ಬಗಲಲ್ಲಿ ಒಂದೊಂದು ದೊಡ್ಡವಾದ ಜೋಳಿಗೆಗಳು ಇಳಿಬಿದ್ದಿದ್ದವು. ಈ

ವಿಚಿತ್ರವೇಷದ ಆ ವ್ಯಕ್ತಿಯು ಬುಡುಬುಡಿಕನೆಂಬದನ್ನು ನಮ್ಮ ವಾಚಕರಿಗೆ ಬಿಚ್ಚಿ ಹೇಳುವ ಅವಶ್ಯಕತೆಯಿಲ್ಲ.

ಆತನು ಪಣತೊಟ್ಟು ಕ್ಷಣಕಾಲ ಹಾಗೆಯೇ ಸುಮ್ಮನೆ ಕೂಡ್ರಲು, ಆ ಮರದ ಮೇಲಿನ ಒಂದು ಹಕ್ಕಿಯು ನುಡಿಯಿತು. ಆ ಶಬ್ದವನ್ನು ಕೇಳಿ ಅವನು:- "ಮೂರ್ಖ, ಲಂಡ-ಪುಂಡಾ, ನೀನು ನಮ್ಮ ದೇವರನ್ನು ಜಜ್ಜ ಬಂದಿದ್ದೆಯಲ್ಲವೆ? ನಿನ್ನನ್ನು ದೇವರು ಹೇಗೆ ಜಜ್ಜಿರುವನು ನೋಡು!'' ಎಂದು ತನ್ನಷ್ಟಕ್ಕೆ ತಾನೇ ಅಂದುಕೊಂಡು, ಮತ್ತೆ ಆ ಹಕ್ಕಿಯ ನುಡಿಯನ್ನು ಆಲಿಸಲಿಕ್ಕೆ ಸುಮ್ಮನೆ ಕುಳಿತನು.

ಅಷ್ಟರಲ್ಲಿ ಆ ಗಿಡದ ಆಚೇ ಬದಿಗೆ ಬಳೆಯ ಸಪ್ಪಳವಾದಂತೆ ಭಾಸವಾಯಿತು. ಕೂಡಲೆ ಅವನು ಮೆಲ್ಲನೆ ಅತ್ತಕಡೆಗೆ ಬಂದು ನೋಡುತ್ತಾನೆ, ಓರ್ವ ೧೫-೧೬ ವಯಸ್ಸಿನ ನವತರುಣಿಯು ಆ ಗಿಡದ ಕೆಳಗಿನ ಕಲ್ಲದೇವರನ್ನು ನಮಸ್ಕರಿಸುತ್ತ ಮನಸ್ಸಿನಲ್ಲಿ ಏನೇನೋ ಪ್ರಾರ್ಥಿಸುತ್ತಿದ್ದಳು. ಅವಳು ಒಮ್ಮನಸ್ಸಿನಿಂದ ದೇವರಲ್ಲಿ ಅನುರಕ್ತಳಾಗಿದ್ದರಿಂದ, ಅವಳಿಗೆ ಆ ಬುಡುಬುಡಿಕನ ಆಗಮನವು ಗೋಚರವಾಗಲಿಲ್ಲ. ಆ ತರುಣಿಯು ಕರೇ ಚಂದ್ರಕಾಳಿಯ ಸೀರೆಯನ್ನುಟ್ಟಿದ್ದಳು. ಅದರ ಅಂಚುಗಳು ಇಷ್ಟಗಲವಾಗಿದ್ದವು. ಆ ಸೀರೆಯನ್ನು ಕೊಂಡ ಕಾಲಕ್ಕೆ ಅದು ಬಹು ಮೂಲ್ಯದ್ದಾಗಿದ್ದರೂ, ಈಗ ತೀರ ಹಳೆಯದಾದ್ದರಿಂದ, ಅದು ಅಷ್ಟೊಂದು ಚಂದ ಕಾಣುತ್ತಿರಲಿಲ್ಲ. ಅವಳ ಎಡಗಿವಿಯ ಮೇಲಿನಿಂದ ಮುಚ್ಚಿಕೊಂಡಿದ್ದರೂ ಬಲಗಿವಿಯೊಳಗಿನ ಮುತ್ತು-ರತ್ನಗಳ ವಾಲಿಗಳು ಹೊಳೆಯುತ್ತಿದ್ದವು. ಕೊರಳೊಳಗಿನ ಕಂಠಾಭರಣವು ಹೃದಯಪ್ರದೇಶದ ಮೇಲೆ ಶೋಭಿಸುತ್ತಿತ್ತು. ಅವಳು ಕೇತಗಿಯ ಬಣ್ಣದವಳಾಗಿದ್ದು, ನಾಜೂಕ ಶರೀರದವಳಾಗಿ ತೋರುತ್ತಿದ್ದಳು. ಅವಳು ಹಣೆಗೆ ಕುಂಕುಮ ತಿಲಕವನ್ನಿಟ್ಟಿದ್ದರೂ ಅವಳ ಕೊರಳಲ್ಲಿ ಮಂಗಲಸೂತ್ರವಿರಲಿಲ್ಲ. ಅದರಿಂದ ಅವಳು ಇನ್ನೂ ಕುಮಾರಿಕೆಯೇ ಆಗಿದ್ದಳೆಂದು ತರ್ಕಿಸಬಹುದಾಗಿದ್ದಿತು. ಒಟ್ಟಿನಲ್ಲಿ ಅವಳು ಪರಮ ಸುಂದರಿಯಾಗಿದ್ದಳೆಂದು ನಿರ್ವಿವಾದವಾಗಿ ಅನ್ನಬಹುದು.

ಈಕೆಯು ಈ ದೇವರಿಗೆ ಇಷ್ಟು ಪರಿಯಿಂದ ನಮಸ್ಕರಿಸಿ ಬೇಡಿಕೊಳ್ಳುವದಾದರೂ ಏನಿರಬಹುದು? ತರುಣಿಯರು ಬೇಡುವದೇನು? ತಮಗೆ ಸುಂದರ ಮಗನಾಗಬೇಕು; ತನ್ನ ಗಂಡನು ತನ್ನನ್ನು ಹೆಚ್ಚಾಗಿ ಪ್ರೀತಿಸಬೇಕು; ತನಗೆ

ತನ್ನ ಗೆಳತಿಯರಿಗಿಂತ ಹೆಚ್ಚು ಹಾಗು ಭಾರಿಯಾದ ವಸ್ತ್ರ-ಒಡವೆಗಳು ದೊರೆಯಬೇಕು; ಇತ್ಯಾದಿ. ಇತ್ಯಾದಿ. ಆದರೆ ಈ ನವತರುಣಿಯ ಏನಾಶೆಯು ಇನ್ನೂ ಆದಂತೆ ತೋರುವದಿಲ್ಲ. ಆಗದಿದ್ದರೆ ಇವಳು ಬೇಡಿಕೊಳ್ಳುವದಾದರೂ ಏನಿರಬಹುದು? ಎಂದು ಮನಸ್ಸಿನಲ್ಲಿ ಯೋಚಿಸಿ, ಆ ಬುಡುಬುಡಿಕನು ತನ್ನ ಹಕ್ಕಿಯ ನುಡಿಯ ಕಡೆಗೆ ಲಕ್ಷ್ಯಗೊಟ್ಟು ನಿಂತುಕೊಂಡನು. ಇಷ್ಟರಲ್ಲಿ ಆ ಹಕ್ಕಿಯು ಮತ್ತೆ ಏನೇನನ್ನೋ ವಿವರವಾಗಿ ನುಡಿಯಹತ್ತಿತು. ಆತನು ಆ ನುಡಿಗಳನ್ನೆಲ್ಲ ಕೇಳಿಕೊಂಡು, ತುಸ ಮುಂದಕ್ಕೆ ಬಂದು, ಆ ತರುಣಿಯನ್ನು ಕುರಿತು:—ತಾಯಿ, ನೀವು ದೇವರಿಗೆ ಹರಕೆ ಕಟ್ಟಿ ನಿಮ್ಮ ಮನಸ್ಸಿನಲ್ಲಿ ಯೋಚಿಸಿದ್ದು ಆಗುವದೋ ಇಲ್ಲವೋ ಎಂಬದನ್ನು ಇನ್ನು ಯೋಚಿಸುವ ಕಾರಣವಿಲ್ಲ. ತಾಯಿ, ಅಹಮ್ಮದನಗರದ ಈ ಬುಡುಬುಡಿಕಪ್ಪನು ಅದರ ಉತ್ತರವನ್ನು ಈಗಲೆ ತಮಗೆ ತಿಳಿಸಬಲ್ಲನು. ತಾಯಿ, ನೀನು ಪುತ್ರಾಪೇಕ್ಷೆಯಾಗಿರುವಿಯಲ್ಲವೆ? ನಿನ್ನ ಹೊಟ್ಟೆಯಲ್ಲಿ ರಾಜಪುತ್ರನ ಉದಯವಾಗಬೇಕೆಂದು ಬಯಸಿರುವೆಯಲ್ಲವೆ? ತಾಯಿ, ನೀನು ಈ ಬಗ್ಗೆ ಕೊಂಚವೂ ಅನುಮಾನಿಸಬೇಡ. ಈ ಬುಡುಬುಡಿಕಪ್ಪನ ಭವಿಷ್ಯವು ಕಾಲತ್ರಯದಲ್ಲಿಯೂ ಸುಳ್ಳಾಗಲಾರದು, ಎಂದು ಏನೇನೋ ಹರಟೆ ಹತ್ತಿದನು.

ಆ ಅಪರಿಚಿತ ಬುಡುಬುಡಿಕಪ್ಪನ ಆ ಅನಪೇಕ್ಷಿತ ವಚನಗಳನ್ನು ಕೇಳಿ, ಆ ತರುಣಿಯು ತುಂಬಾ ನಾಚಿಕೊಂಡಳು. ಆವಳು ಅವನನ್ನು ಮುಂದೆ ಮಾತಾಡಗೊಡದೆ:- "ನನ್ನ ಹರಕೆಯು ಹಾಗಿರಲಿಲ್ಲ. ನಾನು ಆ ತರದ ಹರಕೆಯನ್ನು ಮಾಡಿದವನಾದರೂ ಹೇಗೆ? ಯಾಕೆಂದರೆ, ಇನ್ನೂ ನನ್ನ ಲಗ್ನವೇ ಆಗಿಲ್ಲ; ಹಾಗು ಅದು ಈ ಜನ್ಮದಲ್ಲಿ ಆಗುವ ಸಂಭವವೂ ಇಲ್ಲ......" ಎಂದೆಂದು ತನ್ನ ಮೋರೆಯ ಮೇಲೆ ಸೆರಗನ್ನೆಳೆದು ಮುಳು ಮುಳು ಎಂದು ಅಳಲಾರಂಭಿಸಿದಳು.

ಕೂಡಲೆ ಆ ಬುಡಬುಡಿಕನಿಗೆ ಪರಮ ಸೋಜಿಗವೆನಿಸಿತು! ತಾನು ಇಷ್ಟು ದಿನಗಳ ವರೆಗೆ ತನ್ನ ಕುಲ-ಧರ್ಮದಂತೆ ನಡೆದು ಈ ಹಾಲ್ವಕ್ಕಿಗಳ ನುಡಿಗಳನ್ನು ಅಭ್ಯಾಸಿಸಿದ್ದು ಇಂದು ವ್ಯರ್ಥವಾಯಿತೆಂದು ಅವನು ತಿಳಿದುಕೊಂಡನು. ಈ ಮೋಸಗಾರ ಹಾಲ್ವಕ್ಕಿ ನುಡಿದದ್ದು ನಿಜವೋ, ಈ ತರುಣಿಯು ನುಡಿದದ್ದು ನಿಜವೋ? ಎಂಬುದು ಅವನಿಗೆ ತೋಚದಾಯಿತು. ಕೂಡಲೆ ಆವನು ಮತ್ತೆ ತನ್ನ ಮನಸ್ಸಿನಲ್ಲಿ ಏನೇನೋ ಗುಣುಗುಟ್ಟಿಕೊಂಡು, ತನ್ನ

ಬಗಲೊಳಗಿನ ಚೀಲದಿಂದ ಒಂದು ಚಿಮುಟಿಗೆ ಬೂದಿಯನ್ನು ಆ ಗಿಡದ
ಮೇಲ್ಬದಿಗೆ ತೂರಿ ಬಣಾತೊಟ್ಟು, ಸುಮ್ಮನೆ ನಿಂತುಕೊಂಡನು. ಕ್ಷಣಾರ್ಧದಲ್ಲಿ
ಯೇ ಗಿಡದ ಮೇಲಿನ ಹಕ್ಕಿಯು ಮತ್ತೆ ನುಡಿಯಿತು. ಅದನ್ನು ಕೇಳಿ ಆತನು
ಹುರುಪುಗೊಂಡು, ಆ ತರುಣಿಯನ್ನು ಕುರಿತು ಅನ್ನುತ್ತಾನೆ:-ತಾಯೀ, ನೀನು
ಅನ್ನುವದಾದರೂ ಏನು? ಇನ್ನೂ ನಿನ್ನ ಲಗ್ನವಾಗಿಲ್ಲವೆಂದೇ? ಆದರೆ ತಾಯೀ,
ಈ ನಗರದ ಬುಡುಬುಡಿಕನ ಭವಿಷ್ಯವು ಕಾಲತ್ರಯದಲ್ಲೂ ಸುಳ್ಳಾಗ
ಲಿಕ್ಕಿಲ್ಲ. ಅದು ಸುಳ್ಳಾಗುವ ಬಗೆಯಾದರೂ ಹೇಗೆ? ಅಜ್ಜ ಆರು ತಲೆ,
ಮುತ್ತ್ಯಾ ಮೂರು ತಲೆಗಳಿಂದ ನಾವು ಇದೇ ಕಸಬನ್ನು ಮಾಡುತ್ತ ಬಂದಿರು
ತ್ತೇವೆ; ಈ ಹಾಲ್ವಕ್ಕಿಯ ಶಕುನ ತಿಳಿಯುವ ವಿದ್ಯೆಯನ್ನು ಅಭ್ಯಾಸಿಸಿದ್ದೇವೆ.
ಆದ್ದರಿಂದ ನನ್ನ ಭವಿಷ್ಯವು ಎಂದೂ ಸುಳ್ಳಾಗಲಾರದು. ತಾಯೀ, ನೀನು
ಕೊಂಚವೂ ಅನುಮಾನಪಡಬೇಡ. ನಿನ್ನ ಇಚ್ಛೆಯಂತೆ ನಿನ್ನ ಹೊಟ್ಟೆಯಲ್ಲಿ
ರಾಜಪುತ್ರನೇ ಜನಿಸುವನು. ಅಗೋ, ನಿನ್ನ ಹೊಟ್ಟೆಯಲ್ಲಿ ರಾಜಪುತ್ರನೇ
ಜನಿಸುವನೆಂದು ನಮ್ಮ ಹಾಲ್ವಕ್ಕಿಯು ಮತ್ತೆ ಮತ್ತೆ ನುಡಿಯುತ್ತದೆ
ನೋಡು ತಾಯೀ, ಆದರೆ ನಿನ್ನ ಲಗ್ನವಿನ್ನೂ ಆಗಿಲ್ಲವೆನ್ನುವಿಯಲ್ಲವೆ?
ಹಾಗಾದರೆ ತಂಗೀ, ನಿನ್ನ ಹೆಸರು ಹೇಳು ನೋಡುವಾ. ಈ ನನ್ನ ಹೊತ್ತಿಗೆ
ಯೊಳಗಿನ ಗಣಿತವನ್ನು ಚತುರ್ಮುಖ ಬ್ರಹ್ಮನು ತನ್ನ ನಾಲ್ಕೂ ಮುಖ
ಗಳಿಂದ ಒಮ್ಮೆಲೆ ಹೇಳಿದ್ದನ್ನು ಗಣಾಧಿಪನು ತನ್ನ ನಾಲ್ಕೂ ಕೈಗಳಿಂದ ಏಕ
ಕಾಲಕ್ಕೆ ಬರೆದಿಟ್ಟಿರುತ್ತಾನೆ. ತಾಯೀ, ಈ ಹೊತ್ತಿಗೆಯೇ ನಮ್ಮ ಮನೆತನದ
ಪೂರ್ವಾಪರ ಸೂತ್ರವಾಗಿರುತ್ತದೆ. ಇರಲಿ ತಾಯೀ, ಹೇಳು ನಿನ್ನ
ಹೆಸರನ್ನು, ಎಂದು ಕೇಳಲು,

ಆ ತರುಣಿಯು ನನಗೆ 'ಹಂಸಾ' ಎಂದು ಕರೆಯುವರು, ಎಂದಳು.

ಹಂಸಾ ಎಂದಲ್ಲವೆ? ಒಳ್ಳೇದು ನಿನ್ನ ಹೆಸರಿನ ಆದ್ಯಕ್ಷರವು 'ಹ' ಎಂದು.
ಮರಾಠೀ ಭಾಷೆಯಲ್ಲಿ ಸಹಾ-ಸಾ ಆರು ಎಂದಿರುವ ನಿನ್ನ ಹೆಸರಿನ ಕಡೆಯ
ಅಕ್ಷರವು. ಅಂದಮೇಲೆ ತಂಗೀ, ಇಂದಿನಿಂದ ಆರುವರ್ಷಗಳಿಗೆ ನಿನ್ನ ಲಗ್ನ
ವಾದೀತು; ಆದರೆ ತಂಗೀ, ನಿನ್ನ ಲಗ್ನಕ್ಕೆ ಕಂಟಕಗಳು ಬಹಳ. ಪರಮೇಶ್ವರನ
ಕೃಪೆಯಿಂದ ಆ ಎಲ್ಲ ವಿಘ್ನಗಳ ಪರಿಹಾರವಾಗಿ, ನಿನ್ನ ಲಗ್ನವಾಗುವದು.
ನಿನಗೆ ಪತಿಸುಖವು ಅತ್ಯಲ್ಪವಾಗಿದೆ. ನಿನ್ನ ಉದರದಲ್ಲಿ ಹುಟ್ಟುವ ರಾಜ
ಪುತ್ರನು ನಿನ್ನನ್ನು ಆನಂದಬಡಿಸುವನು; ಆದರೆ ತಂಗೀ, ಹಂಸಾ, ನೀನು

ಮನೆತನಸ್ತ ಮರಾಟರ ಮಗಳಾಗಿದ್ದು, ನಿನ್ನ ಲಗ್ನವು ಇದುವರೆಗೂ ಏಕಾಗಿರುವದಿಲ್ಲವವ್ವಾ? ಸರಿ ಸರಿ. ನಿನ್ನ ಲಗ್ನವು ತಡವಾಗಿ ಆಗಬೇಕೆಂದು ವಿಧಿಯೇ ಬರೆದಿರುವದರಿಂದ, ನಿನ್ನ ತಂದೆ ತಾಯಿಗಳಾದರೂ ಮಾಡುವವೇನು? ಆದರ ತಂಗೀ, ನಿನ್ನ ಲಗ್ನವಾಗುವದಿಲ್ಲೆಂದು ಅದಾರು ನಿನಗೆ ಹೇಳಿದವರು?

ನನ್ನ ಲಗ್ನವಾಗದಕ್ಕೆ ಅಂಥ ಬಲವತ್ತರದ ಕಾರಣವೇ ಇದೆ.

ತಂಗೀ, ಹಾಗಾದರೆ ಹೇಳು ನೋಡು. ಈ ಬುಡುಬುಡಿಕನ ಎದುರಿಗೆ ಯಾವ ಸಂಗತಿಯನ್ನೂ ಬಚ್ಚಿಡಬಾರದು, ಹೇಳು.

ನನ್ನ ತಂದೆಯು ಮುಸಲ್ಮಾನನಾಗಿ ಬಾದಶಹನಿಗೆ ಕೂಡಿಕೊಂಡಿರುವದರಿಂದ, ನಮ್ಮೊಡನೆ ಸಂಬಂಧ ಬೆಳಿಸಲಿಕ್ಕೆ ಯಾವ ಮರಾಟರೂ ಸಿದ್ಧರಾಗುವದಿಲ್ಲ.

ಎಲ ಎಲ! ಅದರ ಚಿಂತೆಯಿಲ್ಲ. ಈ ಬುಡುಬುಡಿಕನ ಭವಿಷ್ಯವು ಎಂದೂ ಸುಳ್ಳಾಗುವದಿಲ್ಲೆಂಬುದನ್ನು ಖಚಿತವಾಗಿ ತಿಳಿ ಹೋಗು. ಇನ್ನು ನಿಶ್ಚಿಂತೆಯಿಂದ ನಿನ್ನ ಮನೆಗೆ ಹೋಗು. ಈ ಬುಡುಬುಡಿಕನಿಗೆ ಒಂದು ದುಡ್ಡು, ಪೈ ಅಥವಾ ಹಿಡಿ ಕಾಳನ್ನಾದರೂ ಮೊದಲು ಕೊಡು; ಅಂದರೆ ನಿನ್ನ ವಿಘ್ನಗಳೆಲ್ಲ ದೂರಾಗುತ್ತವೆ; ನಿನ್ನ ಲಗ್ನವಾಗುತ್ತದೆ; ನಿನ್ನ ಹೊಟ್ಟೆಯಲ್ಲಿ ರಾಜಪುತ್ರನು ಜನಿಸುತ್ತಾನೆ: ಹಾಗು ದೇವರು ನಿನ್ನ ಮನೋವಾಂಛಿತಗಳನ್ನೆಲ್ಲ ಈಡೇರಿಸುತ್ತಾನೆ!

ಕೂಡಲೆ ಹಂಸೆಯು ತನ್ನ ಟೊಂಕವೊಳಗಿನ ಒಂದು ದುಡ್ಡನ್ನು ತೆಗೆದು ಆ ಬುಡುಬುಡಿಕನ ಕೈಗಿತ್ತು— ಈ ದೇವರಿಗೆ ನಾನು ಇಷ್ಟೇ ಬೇಡಿಕೊಳ್ಳುತ್ತಿರಲಿಲ್ಲ. ನನ್ನ ಅಣ್ಣನು ಊರಿಗೆ ಯಾವಾಗ ಹಿಂದಿರುಗುವನೆಂದು ಕೇಳುತ್ತಿದ್ದೆನು, ಎಂದಳು. ಬುಡುಬುಡಿಕನು ಆಕೆಯ ಆ ಪ್ರಶ್ನೆಗೆ ಉತ್ತರ ಕೊಡುವ ಗೊಡವೆಗೆ ಹೋಗದೆ, ಕೈಯಲ್ಲಿ ದುಡ್ಡು ಬಿದ್ದೊಡನೆಯೇ ಒಳ್ಳೇ ಆನಂದದಿಂದ ತನ್ನ ಪದ್ಧತಿಯಂತೆ ಹಂಸಾಬಾಯಿಯನ್ನು ನಾನಾ ಬಗೆಯಾಗಿ ಹರಸತೊಡಗಿದನು! ನಂತರ ಆತನು ಮತ್ತೆ ಆಕೆಯನ್ನು ಕುರಿತು: ತಂಗೀ, ನಿನ್ನ ಅಣ್ಣನು ಯಾವಾಗ ಬರುವನೆಂದು ಕೇಳಿದೆಯಲ್ಲವೆ? ಇಂದು ಭಾನುವಾರ. ನೀನು ಪ್ರಶ್ನೆ ಕೇಳಿದ ವೇಳೆಯು ಸದ್ಯಃಫಲದಾಯಕವಾದುದು. ಅದರಿಂದ ನಿನ್ನ ಅಣ್ಣನು ಇಂದೇ ರವಿಯು ಅಸ್ತಂಗತನಾಗುವಷ್ಟರಲ್ಲಿಯೇ

ನಿಮ್ಮಲ್ಲಿಗೆ ಬರುವದು ಖಂಡಿತವು. ತಾಯಿ, ನನ್ನ ಭವಿಷ್ಯವು ಎಂದಿಗೂ ಸುಳ್ಳಾಗಲಾರದೆಂಬದನ್ನು ಖಂಡಿತವಾಗಿ ತಿಳಿ.

ಕೂಡಲೆ ಹಂಸೆಯು ಭಕ್ತಿಭಾವದಿಂದ ಆ ದೇವರ ಹುಣಸೇಮರಕ್ಕೆ ಕೈಮುಗಿದಳು. ಇಷ್ಟರಲ್ಲಿ ಆ ಬುಡುಬುಡಿಕನು ಅಲ್ಲಿಂದ ಹೊರಟು ಹೋಗಿದ್ದನು. ಹಂಸೆಯೂ ಅಲ್ಲಿ ಹೆಚ್ಚು ಹೊತ್ತು ನಿಲ್ಲದೆ, ಆ ಗಿಡದ ಬೊಡ್ಡೆಗೆ ಒರಿಸಿ ಇಟ್ಟಿದ್ದ ತನ್ನ ಕಟ್ಟಿಗೆಯ ಹೊರೆಯನ್ನು ಹೊತ್ತುಕೊಂಡು ಮನೆಯ ದಾರಿ ಹಿಡಿದಳು. ಆಕೆಯು ಆ ಬುಡುಬುಡಿಕನು ಹೇಳಿದ ಭವಿಷ್ಯದ ಬಗ್ಗೆ ವಿಚಾರ ಮಾಡುತ್ತ ದಾರಿ ತುಳಿಯುತ್ತಿದ್ದದರಿಂದ ಹಳ್ಳವನ್ನು ದಾಟಿ, ಊರ ಹತ್ತರ ಬಂದದ್ದು ಕೂಡ ಅವಳಿಗೆ ಗೊತ್ತಾಗಲಿಲ್ಲ. ಹಂಸೆಯು ಮನೆಯ ಬಾಗಲಿಗೆ ಬಂದಾಗ, ಅವಳ ತಾಯಿಯು ಬಾಗಿಲಲ್ಲೇ ಕಾಳುಗಳನ್ನು ಹಸನ ಮಾಡುತ್ತ ಕುಳಿತಿದ್ದಳು. ತಾಯಿಯ ದರ್ಶನವಾಗುತ್ತಲೆ ಅವಳು ದೇಹಭಾನಗೊಂಡು, ತಾನು ಮನೆಗೆ ಬಂದೆನೆಂದು ತಿಳಿದುಕೊಂಡಳು.

ಹಂಸೆಯು ಮನೆಗೆ ಬಂದವಳೇ ತಾಯಿಯನ್ನು ಕುರಿತು:—"ಅವ್ವಾ, ಅಣ್ಣನು ಇಂದು ಖಂಡಿತವಾಗಿ ಬರುವನು" ಹೀಗೆಂದು ಒಬ್ಬ ಬುಡುಬುಡಿಕಪ್ಪನು ಬಹು ವಿಚಿತ್ರವಾದ ಭವಿಷ್ಯವನ್ನು ಹೇಳಿದನು, ಎಂದು ತನ್ನ ತಾಯಿಗೆ ಅಲ್ಲಿ ನಡೆದ ಸಮಸ್ತ ಸಂಗತಿಯನ್ನೂ ತಿಳಿಸಿದಳು.

## ಅವ್ವಾ, ಹಸಿವೆ!

ಹುಚ್ಚೀ! ಆ ಭವಿಷ್ಯವು ನಿಜವಾಗುವದೆಂತು? ನಮ್ಮಂತಹ ಬಡ ಜನರು ಬಾಯಿಗೆ ಬಂದದ್ದನ್ನು ಬಡಬಡಿಸಿದರೆ ಈಡೇರುವದುಂಟೆ? ಇಂಥ ಸೊಟ್ಟ ಬುಡುಬುಡಿಕಪ್ಪಗಳ ಭವಿಷ್ಯಗಳು ನಿಜವಾಗುತ್ತ ಹೋದರೆ, ಇಂದು ದುಡ್ಡಿಗಾಗಿ-ಹಿಡಿ ಕಾಳಿಗಾಗಿ ಅವರು ಮನೆ ಮನೆ ಅಂಡಲೆಯುವದೇಕೆ? ನಿನ್ನ ಹಡೆದವರು ಧರ್ಮಬಾಹಿರರಾದುದರಿಂದ ನಿನ್ನ ಲಗ್ನವು ಎಲ್ಲಿಯೂ ಕೂಡಿಬರಲೊಲ್ಲದು; ಒಂದು ವೇಳೆ ನಿಶ್ಚಿತವಾದರೂ ನೀನು ಬಯಸುವಂತೆ ರಾಜಪುತ್ರನ ಕೂಡ, ಅದೂ ನಮ್ಮ ಶಿವಾಜಿಮಹಾರಾಜರ ಮೊಮ್ಮಗನಾದ ಶಾಹೂಮಹಾರಾಜನ ಕೂಡ ನಿಶ್ಚಿತವಾಗುವ ಸಂಭವವಾದರೂ ಉಂಟೇ? ಅಂಥ ವರನೇ ಸಿಗದ ಬಳಿಕ, ನಿನ್ನ ಹೊಟ್ಟೆಯಲ್ಲಿ ರಾಜಪುತ್ರನು ಜನಿಸುವದೆಂತು?

ಈ ಭವಿಷ್ಯವು ನಿಜವಾಗುವದೆಂದರೆ, ಅಶಕ್ಯದೊಳಗಿನ ತೀರ ಅಶಕ್ಯ ಸಂಗತಿಯೇ ಸರಿ! ನೀನು ಪಿಸಾಳರ ಕನ್ಯೆಯೆಂಬುದು ಗೊತ್ತಾದರಂತೂ ಛತ್ರಪತಿಗಳು ನಿನ್ನ ಕಡೆಗೆ ಕಣ್ಣೆತ್ತಿ ಕೂಡ ನೋಡಲಿಕ್ಕಿಲ್ಲ; ಇಷ್ಟೇ ಅಲ್ಲ, ಅವರಿಂದ ನಿನ್ನ ಜೀವಕ್ಕೆ ಅಪಾಯವಾಗದಿರುವದು ಕೂಡ ದೈವಗತಿಯನ್ನೇ ಅವಲಂಬಿಸಬೇಕಾಗುವದು.

"ಅವ್ವಾ, ಹೀಗೇಕೆ ನುಡಿಯುವೆ? ನಮ್ಮ ಛತ್ರಪತಿಗಳು ಅಷ್ಟು ನಿಷ್ಠುರರಿರುವರೇ? ನೀನಂತೂ ಅವರ ಬಗ್ಗೆ ಹಗಲಿರುಳು ಹಳಹಳಿಸುತ್ತಿರುತ್ತೀ."

"ಹಂಸಾ, ಅವರ ವಿಷಯವಾಗಿ ಆದಾರು ಹಳಹಳಿಸಲಿಕ್ಕಿಲ್ಲ? ಪ್ರತಿಯೊಬ್ಬ ಮನೆತನಸ್ಥ ಮರಾಟನು ಅವರ ವಿಷಯಕ್ಕೆ ಹಳಹಳಿಸುವವನೇ. ಈಗಲೂ ಆ ನಮ್ಮ ಬಾಲರಾಜರ ಮೂರ್ತಿಯು ನನ್ನ ಕಣ್ಣೆದುರಿಗೆ ಕಟ್ಟಿದೆ. ನಿಜವಾದ ರಾಜತೇಜವೇ ಅದು! ಆದರೆ ಹಂಸಾ, ನಿನ್ನ ಹಿರಿಯರು ಎಲ್ಲವನ್ನೂ ಘಾತಮಾಡಿಬಿಟ್ಟರು! ಅವರಿಗೆ ಅರಿಷ್ಟ ಬಡಕೊಂಡಿತ್ತಾದ್ದರಿಂದ ಅವರು ಎಲ್ಲರ ಬಾಯಿಗೂ ಮಣ್ಣು ಎರಚಿದರು! ಒಳ್ಳೇ ವಿಶ್ವಾಸದವರೆಂದು ದೊಡ್ಡ ಮಹಾರಾಜರು ಇವರಿಗೆ ರಾಯಗಡದ ಸುಭೇದಾರಿಕೆಯನ್ನು ಒಪ್ಪಿಸಿದ್ದರು. ಅದರಿಂದ ನಮ್ಮೆಲ್ಲರಿಗೂ ದಿನಾಲು ಅನಾಯಾಸವಾಗಿ ರಾಜದರ್ಶನವಾಗುತ್ತಿತ್ತು; ಆದರೆ ಇವರ ದೈವದೊಳಗಿನ ಭಾಗ್ಯವು ತೀರಿದ ಕೂಡಲೆ ಇವರಿಗೆ ಆ ಸೆಗಣಿ ತಿನ್ನುವ ದುರ್ಬುದ್ಧಿಯುಂಟಾಯಿತು. ಆಗ ನೀನು ಕೇವಲ ಐದು ವರ್ಷದ ಬಾಲಿಕೆಯಾಗಿದ್ದೆ, ಹಾಗು ಪದಮುಜಿಯು ಒಂಬತ್ತು ವರ್ಷದವನಿದ್ದನು ನಿನ್ನ ಹಿರಿಯರು ಮಹಾರಾಜರ ಅನ್ನವನ್ನುಂಡು ಬಾದಶಹನಿಗೆ ಫಿತೂರಾದರು, ಹಾಗು ಆ ರಾಯಗಡವನ್ನು ಬಾದಶಹನ ಸ್ವಾಧೀನ ಪಡಿಸಿದರು! ರಾಣೀಸಾಹೇಬರನ್ನೂ ಯುವರಾಜರನ್ನೂ ಆ ಯವನನಿಗೆ ಒಪ್ಪಿಸಿದರು!! ಹಾಗು ನನ್ನನ್ನು ನನ್ನ ಮಕ್ಕಳೊಡನೆ ಹೀಗೆ ದೇಶಾಂತರಕ್ಕೆ ಅಟ್ಟಿದರು!!! ಹೀಗೆ ಎಲ್ಲರ ಸತ್ಯಾನಾಶಗೊಳಿಸಿ ಇವರು ಮಾಡಿದ್ದೇನಂದರೆ, ಧರ್ಮಾಂತರ! ಥೂ! ಅವರ ಬಾಳಿಗೆ ಬೆಂಕೀ ಬಡಿಯಲಿ!!" ಹೀಗೆಂದು ನುಡಿದು, ಹಂಸೆಯ ತಾಯಿಯು ತನ್ನ ಗಂಡನ ಹೆಸರಿಲೆ ಲಟಿಗೆ ಮುರಿಯ ಹತ್ತಿದಳು!

ತನ್ನ ತಾಯಿಗೆ ಹಿಂದಿನ ನೆನಪಾದ ಕೂಡಲೆ ಅವಳು ಹೀಗೆಯೇ ಸಂತಾಪಗೊಂಡು, ಬೈದು, ಅಂದು, ಹಾಸಳಿಸಕತ್ತುತ್ತಿದ್ದಳೆಂಬದು ಹಂಸೆಯು

ಪರಿಚಯದ ವಿಷಯವಾಗಿತ್ತು; ಆದುದರಿಂದ ಅವಳು ತಾಯಿಯ ಆ ಬಡಬಡಿಕೆಯನ್ನು ದುರ್ಲಕ್ಷಿಸಿ, ಬಾಗಿಲ ಬಳಿಗೆ ಹೋಗಿ ನಿಂತಳು. ಇಷ್ಟರಲ್ಲಿ ಎದುರಿಗಿನ ಹೊಲದಲ್ಲಿ ದೂರದಲ್ಲಿ ಧೂಳಿ ಏಳಹತ್ತಿತು. ಕೆಲ ಕ್ಷಣಗಳಲ್ಲಿಯೇ ಮೂವರು ಸವಾರರು ಧಾವಿಸುತ್ತ ಬರುತ್ತಿರುವದನ್ನು ಕಂಡು ತನ್ನ ಅಣ್ಣನೇ ಬರುತ್ತಿರುವನೆಂದು ಅವಳಿಗನಿಸಿತು. ಅದರಿಂದ ಅವಳು ಒಳ್ಳೇ ಉತ್ಸುಕತೆಯಿಂದ ಆ ಸವಾರರ ಕಡೆಗೆ ದೃಷ್ಟಿಸಿ ನೋಡಹತ್ತಿದ್ದಳು. ಆ ಸವಾರರು ಆ ಮನೆಗೆ ಬಂದು ತಲುಪುವಷ್ಟರಲ್ಲಿ ಆ ತಾಯಿ-ಮಗಳ ಪರಿಚಯವನ್ನು ನಮ್ಮ ವಾಚಕರಿಗಷ್ಟು ಮಾಡಿಕೊಡುವೆವು.

ಸೂರ್ಯಾಜಿ ಪಿಸಾಳ ಎಂಬವನು ಶ್ರೀ ಶಿವಛತ್ರಪತಿಯ ಕಾಲಕ್ಕೆ ರಾಯಗಡದ ಸುಭೇದಾರನಾಗಿದ್ದನು. ಆತನ ಹೆಂಡತಿಯ ಹೆಸರು ಸಾವಿತ್ರಿ ಎಂದು. ಮಗನ ಹೆಸರು ಪದಮಜಿ. ಅವರ ಮಗಳೇ ನಮ್ಮ ಕಥಾನಾಯಕೆಯಾದ ಹಂಸೆಯು. ಈ ಕಥಾನಕದ ಕಾಲಕ್ಕೆ ಅಂದರೆ ಕ್ರಿ. ಶ. ೧೭೦೦ ರಲ್ಲಿ ಆ ಕುಟುಂಬವು ತೀರ ಕಂಗಾಲಾವಸ್ಥೆಯಲ್ಲಿದ್ದಿತು. ಅದು ಅಷ್ಟು ದೈನ್ಯಾವಸ್ಥೆಗೆ ಬರುವದು ಸ್ವಾಭಾವಿಕವೇ ಆಗಿದ್ದಿತು; ಯಾಕಂದರೆ ಸೂರ್ಯಾಜಿಯು ಫಿತೂರಾಗಿ ಛತ್ರಪತಿಯ ಕುಟುಂಬದವರ ಸಹಿತವಾಗಿ ಆ ಗಡವನ್ನು ಮೊಗಲ ಬಾದಶಹನಿಗೆ ಒಪ್ಪಿಸಿದ್ದನು. ಸೂರ್ಯಾಜಿಯು ಶೂರನೂ, ಇಮಾನಿಯೂ ಆಗಿದ್ದನು. ಅಂತೇ ಅಂಥವನ ವಶಕ್ಕೆ ಶಿವರಾಯನು ತನ್ನ ಸರ್ವಸ್ವವಾದ ರಾಯಗಡವನ್ನು ಒಪ್ಪಿಸಿದ್ದನು; ಆದರೆ ಕಾಲಗತಿಯಿಂದ ಸಂಭಾಜಿಯ ವಧೆಯನಂತರ ಆತನು ಬೇಇಮಾನನಾದನು; ಹಾಗು ಬಾದಶಹನು ಕೊಡಲಿರುವ ವಾಯಿಯ ದೇಶಮುಖಗಿರಿಗೆ ಮನಸೋತನು! ಬಳಿಕ ಬಾದಶಹನು ರಾಜಮಾತಾ ಏಸೂಬಾಯಿಯನ್ನೂ ಬಾಲಕ ಶಾಹೂ ಮಹಾರಾಜನನ್ನೂ ಸೆರೆಹಿಡಕೊಂಡು ಹೋದನು!! ನಂತರ ಸೂರ್ಯಾಜಿಯು ಔರಂಗಜೇಬನಿಗೆ ಭೆಟ್ಟಿಯಾಗಿ ವಾಯಿಯ ದೇಶಮುಖಗಿರಿಯನ್ನು ಕೊಡಬೇಕೆಂದು ಕೇಳಿಕೊಂಡನು. ಕಪಟ ವಿದ್ಯೆಯಲ್ಲಿ ಪಾರಂಗತನಾದ ಆ ಬಾದಶಹನು ಆ ಮೊದಲು ಮಾತುಕೊಟ್ಟಂತೆ ವಾಯಿಯ ದೇಶಮುಖಗಿರಿಯನ್ನು ಆ ಸೂರ್ಯಾಜಿ ಪಿಸಾಳನಿಗೆ ಅಷ್ಟು ಸಹಜವಾಗಿ ಕೊಡುವನೇ? ಆಗ ಅವನು ಸೂರ್ಯಾಜಿಯನ್ನು ಕುರಿತು:—ನೀನು ಮುಸಲ್ಮಾನನಾದರೆ ಮಾತ್ರ ನಿನಗೆ ಆ ದೇಶಮುಖತ್ವವು ಲಭಿಸುವದು, ಎಂದು ತಿಳಿಸಿದನು.

ಈ ಮನೆತನಸ್ಥ ಹಾಗು ಕೇವಲ ಅಭಿಮಾನೀ ಸ್ವಭಾವದ ಮರಾಟನು ಮುಸಲ್ಮಾನನಾಗಲಿಕ್ಕೆ ಒಪ್ಪಲಾರನೆಂದೇ ಅವನಿಗೆ ಬಾದಶಹನು ಹಾಗೆ ಹೇಳಿದ್ದನು; ಆದರೆ ಸ್ವಾಮಿದ್ರೋಹ, ಸ್ವಜನದ್ರೋಹ, ದೇಶದ್ರೋಹ ಮುಂತಾದ ಪರೀಕ್ಷೆಗಳಲ್ಲಿ ತೇರ್ಗಡೆಹೊಂದಿದ್ದ ಸೂರ್ಯಾಜಿಯು ಕಡೆಯ ಧರ್ಮದ್ರೋಹದ ಪರೀಕ್ಷೆಯಲ್ಲೂ ಉತ್ತೀರ್ಣನಾದನು! ಬಾದಶಹನು ತನ್ನೊಡನೆ ಹೀಗೆ ಕಪಟಾಚರಣ ಮಾಡಿದ್ದಕ್ಕಾಗಿ ಅವನು ಮೊದಲು ಆ ಧರ್ಮ ದ್ರೋಹಕ್ಕೆ ಮನಸ್ಸು ಮಾಡಲಿಲ್ಲ; ಆದರೆ ತನ್ನ ದ್ರೋಹಪರಂಪರೆಗಳ ಮೂಲಕ ತನ್ನನ್ನು ತನ್ನವರಾರೂ ಮುಂದೆ ಕರೆಯಲಾರರೆಂದು ಮನಗಂಡ ಆ ಸೂರ್ಯಾಜಿಯು, ಕಡೆಗೆ ಮುಸಲ್ಮಾನನಾದನು! ಮುಸಲ್ಮಾನನಾಗದ ಹೊರತು ಆಗ ಅವನಿಗೆ ಗತಿಯೇ ಇರಲಿಲ್ಲ.

ತನ್ನ ಗಂಡನು ಮುಸಲ್ಮಾನನಾದನೆಂಬ ಸುದ್ದಿಯು ತಿಳಿಯುತ್ತಲೆ ಸಾವಿತ್ರಿಯು ಮತ್ತಿಷ್ಟು ದುಃಖಿಸಿಯಾದಳು. ಸೂರ್ಯಾಜಿಯು ರಾಯಗಡದ ಮೇಲಿರುವಾಗ ಆತನು ಗುಪ್ತವಾಗಿ ಶತ್ರುಪಕ್ಷದವರೊಡನೆ ಮಾತುಕಥೆಗಳ್ನಾಡುವದನ್ನು ನೋಡಿ ಸಾವಿತ್ರಿಯು ಅವನಿಗೆ ಬುದ್ಧಿ ಹೇಳುತ್ತಿದ್ದಳು; ಆದರೆ ಪಿಸಾಳನು ಅವಳಿಗೆ:—"ನಿನ್ನ ಸಂಶಯವು ವ್ಯರ್ಥವಾದದ್ದು. ವೈರಿಗಳ ಗುಪ್ತಸಂಗತಿಗಳನ್ನು ತಿಳಿಯುವದಕ್ಕೆಂದೇ ನಾನು ಹಾಗೆ ಅವರಿಗೆ ಗುಪ್ತವಾಗಿ ಭೆಟ್ಟಿಯಾಗುತ್ತಿರುತ್ತೇನೆ" ಎಂದು ಹೇಳಿ, ತನ್ನ ಹುಳುಕನ್ನು ಬಚ್ಚಿಕೊಳ್ಳುವ ಉದ್ಯೋಗ ನಡಿಸಿದ್ದನು. ಯಾವ ದಿವಸ ಸೂರ್ಯಾಜಿಯು ದುರ್ಗದ ಬಾಗಿಲ ತೆರೆದು ಕೊಟ್ಟು ಶತ್ರುಗಳ ಸೈನ್ಯವನ್ನು ಒಳಗೆ ಬರಗೊಟ್ಟನೋ, ಆ ದಿನ ಸಾವಿತ್ರಿಯ ಕಣ್ಣುಗಳು ಚನ್ನಾಗಿ ತೆರೆದವು. ಅವಳು ತನ್ನ ಗಂಡನ ಬಗ್ಗೆ ಹಲ್ಲು ಕಡಿಯ ಹತ್ತಿದಳು; ಆದರೆ ಅದರಿಂದ ಆಗ ಉಪಯೋಗವೇನೂ ಆಗುವಂತಿರಲಿಲ್ಲ. ವೈರಿಗಳ ಅಂಜಿಕೆಯ ಮೂಲಕ ದುರ್ಗದ ಮೇಲಿನವರೆಲ್ಲರೂ ಹೌಹಾರಿ, ದಾರಿ ಸಿಕ್ಕತ್ತ ಓಡಿಹೋಗಿ ಜೀವ ಉಳಿಸಿಕೊಳ್ಳುವ ಉದ್ಯೋಗವನ್ನು ಕೈಕೊಳ್ಳಬೇಕಾಯಿತು. ಶತ್ರುಗಳ ಆ ಭಯಂಕರವಾದ ಉಪಟಳದಲ್ಲಿ ಸಾವಿತ್ರಿಯೂ ತನ್ನ ಇಬ್ಬರು ಮಕ್ಕಳೊಡನೆ ದುರ್ಗದಿಂದ ಗುಪ್ತವಾಗಿ ಓಡಿಹೋದಳು. ಆಗಿನ ಕಾಲದ ಅವಳ ಮೇಲಿನ ಆ ವಿಪತ್ತಿಯನ್ನು ಎಷ್ಟೆಂದು ವರ್ಣಿಸಬೇಕು?

ಸಾವಿತ್ರಿಯು ಸುಭೇದಾರನ ಹೆಂಡತಿಯಾದುದರಿಂದ ದುರ್ಗದ ಮೇಲೆ

ಅವಳ ಅಧಿಕಾರವು ಹೆಚ್ಚಾಗಿದ್ದಿತು; ರಾಣಿಯ ತರುವಾಯ ಸಾವಿತ್ರಿಯೇ ಆ ದುರ್ಗದಲ್ಲಿಯ ಪ್ರಮುಖ ಸ್ತ್ರೀ ಅಧಿಕಾರಿಣಿಯಾಗಿದ್ದಳು. ಅಂದು ದುರ್ಗವು ಶತ್ರುಗಳ ಸ್ವಾಧೀನವಾದ ಬಳಿಕ ಅಲ್ಲಿ ಅವಳ ಮಾತನ್ನು ಕೇಳುವವರಾರು? ತನ್ನ ಗಂಡನೊಡನೆ ಅವಳೂ ವೈರಿಗಳಿಗೆ ಫಿತೂರಿಯಾಗಿದ್ದರೆ, ಅವಳಿಗೆ ಅಂಥ ದುರ್ದೆಸೆಯುಂಟಾಗುತ್ತಿರಲಿಲ್ಲ. ರಾಣಿಯನ್ನು ಶತ್ರುಗಳು ಸೆರೆಹಿಡಿದೊಯ್ದಿದ್ದರೂ ಸಾವಿತ್ರಿಗೆ ಆ ಪ್ರಸಂಗವುಂಟಾಗುತ್ತಿರಲಿಲ್ಲ. ಅವಳನ್ನು ಅವಳ ಗಂಡನು ಒಳ್ಳೇ ಮಾನ-ಮರ್ಯಾದೆಯಿಂದ ಕರಕೊಂಡು ಹೋಗುತ್ತಿದ್ದನು. ದುರ್ಗವನ್ನು ತ್ಯಜಿಸುವಾಗ ಸೂರ್ಯಾಜಿಯು ನಾನಾ ಪರಿಯಿಂದ ಅವಳನ್ನು ಪ್ರಾರ್ಥಿಸಿದನು; ಆದರೆ ಆ ಸ್ವಾಭಿಮಾನೀ ಹೆಂಗಸಿಗೆ ತನ್ನ ಗಂಡನ ಆ ಕಿವಿ ಮಾತುಗಳು ರುಚಿಸುವವೆಂತು? ಅವಳು ಅವನನ್ನು ಹೆಚ್ಚಾಗಿ ಧಿಃಕರಿಸಿದಳು; ಹಾಗು ತನ್ನ ಮಕ್ಕಳೊದನೆ ಅಲ್ಲಿಂದ ಹೊರಟು ದೇಶಾಂತರಕ್ಕೆ ನಡೆದಳು! ಸೂರ್ಯಾಜಿ ಪಿಸಾಳನ ಹೆಂಡತಿಯೆಂದು ಆ ಪ್ರಾಂತದ ಜನರು ಅವಳಿಗೆ ಕೊಂಚವೂ ಆಶ್ರಯ ಕೊಡದಾದರು. ಆದರಿಂದ ಅವಳು ತನ್ನ ಚಿಕ್ಕಮಕ್ಕಳೊಡನೆ ವರ್ಷಗಟ್ಲೆ ಅರಣ್ಯ-ಕಾಡುಗಳಲ್ಲಿಯೇ ಕಳೆಯಬೇಕಾಯಿತು. ಆದರೂ ಅಂಥ ಸ್ಥಿತಿಯಲ್ಲೂ ಆ ಮಾನೀ ಹೆಂಗಸು ಕಾಲ ಕಳೆದು, ತನ್ನ ಮಕ್ಕಳನ್ನು ಸಂರಕ್ಷಿಸಿದಳು. ಆಕೆಯು ದುರ್ಗದಿಂದ ಹೊರಡುವಾಗ ಉಟ್ಟಸೀರೆಯಿಂದಲೇ ಹೊರಡಬೇಕಾದರೂ, ಅವಳ ಮೈಮೇಲೆ ೨-೩ ಸಾವಿರ ರೂಪಾಯಿಗಳ ಬೆಲೆಯ ವಸ್ತ-ಒಡವೆಗಳಿದ್ದವು ಕೆಲ ದಿನಗಳವರೆಗೆ ಅವುಗಳ ಮೇಲೆಯೇ ಆ ತಾಯಿ ಮಕ್ಕಳ ಉಪಜೀವನವು ಸಾಗಿತು.

ಮಗನು ತುಸ ದೊಡ್ಡವನಾದ ಬಳಿಕ ಸಾವಿತ್ರಿಯು ಖೇಡದ ಹತ್ತರದ ಲೋಣಿ ಎಂಬ ಚಿಕ್ಕ ಹಳ್ಳಿಯಲ್ಲಿ ಬಂದಿರಹತ್ತಿದ್ದಳು. ಆ ಹಳ್ಳಿಯಲ್ಲಿ ೨೦-೩೦ ಮರಾಟರ ಮನೆಗಳೂ, ೮-೧೦ ಮುಸಲ್ಮಾನ ಪಿಂಜಾರರ ಮನೆಗಳೂ, ಮಿಕ್ಕ ಕಸುಬುದಾರರ ೧೦-೧೫ ಮನೆಗಳೂ ಇದ್ದವು. ಸಾವಿತ್ರಿಯು ಆ ಊರ ಹೊರಗಿನ ಒಂದು ಮುರುಕ ಮನೆಯಲ್ಲಿ ವಾಸಿಸಹತ್ತಿದ್ದಳು. ಆ ಖೇಡಪ್ರಾಂತವು ಮೊದಲು ಶಹಾಜಹಾನ ಬಾದಶಹನ ಅಧೀನಕ್ಕೊಳಪಟ್ಟಿತ್ತು; ಆದರೆ ಶಹಾಜಿಗೆ ವಿಜಾಪುರದವರಿಂದ ಪುಣೆ-ಸುಪೆ ಮುಂತಾದ ಪ್ರಾಂತಗಳು ಜಹಾಗೀರಾಗಿ ದೊರೆತ ಬಳಿಕ, ಈ ಖೇಡಪ್ರಾಂತವೂ ಸ್ವಾಭಾವಿಕವಾಗಿ ಆತನ ಸ್ವಾಧೀನವಾಯಿತು. ಸಾವಿತ್ರಿಯ ನಿರಾಶ್ರಿತ ಸ್ಥಿತಿಯನ್ನು

ಕಂಡು ಆ ಊರವರು ಆ ಹಾಳು ಮನೆಯನ್ನು ಅವಳಿಗೆ ಇರಲಿಕ್ಕೆಂದು ಕೊಟ್ಟಿದ್ದರು. ಲೋಣಿಗೆ ಬಂದ ಆರು ವರ್ಷಗಳ ವರೆಗೂ ಅವಳು ತನ್ನಲ್ಲಿಯ ವಸ್ತ್ರ-ಒಡವೆಗಳ ಮೇಲೆಯೇ ತನ್ನ ನಿರ್ವಾಹ ಸಾಗಿಸಿದಳು. ಅಷ್ಟರಲ್ಲಿ ಪದಮಜಿಯು ೧೫ ವರ್ಷದವನಾದನು. ಹಂಸೆಗೆ ಹನ್ನೊಂದರಲ್ಲಿ ಬಿತ್ತು. ಅವಳ ಲಗ್ನದ ಬಗ್ಗೆ ಸಾವಿತ್ರಿಯಲ್ಲಿ ಚಿಂತೆಯುಂಟಾಯಿತು. ಯಾವ ಯಾವ ಸ್ಥಳಗಳಲ್ಲಿ ಅವಳು ತನ್ನ ಮಗಳ ಲಗ್ನದ ಬಗ್ಗೆ ಮಾತೆತ್ತುವಳೋ, ಆ ಯಾ ಕಡೆಯಿಂದ "ಈ ಹುಡುಗಿಯ ತಂದೆಯು ಮುಸಲ್ಮಾನನಾಗಿರುವನು; ಆದುದರಿಂದ ಅಂಥ ಕುಲಗೇಡಿಯ ಮಗಳು ನಮಗೆ ಬೇಡ" ಎಂಬ ತಿರಸ್ಕಾರ ದರ್ಶಕ ಉತ್ತರಗಳು ಬರುತ್ತಿದ್ದವು. ಅದರಿಂದ ಹಂಸೆಯ ಲಗ್ನದ ಬಗ್ಗೆ ನಿರಾಶೆಯೇ ಆಗಿತ್ತು. ತನ್ನ ಗಂಡನ ಧರ್ಮಾಂತರದ ಮೂಲಕ ತನ್ನ ಮಗಳ ಬಾಳು ವ್ಯರ್ಥವಾಗುತ್ತಿರುವದನ್ನು ಕಂಡು ಅವಳಿಗೆ ಕಡು ದುಃಖವೆನಿಸುತ್ತಿತ್ತು.

ಹಂಸೆಯು ನೋಡುತ್ತಿದ್ದ ಹಾಗೆಯೇ ಮೂವರು ಸವಾರರ ಕುದುರೆಗಳು ಭರದಿಂದ ಅವರ ಮನೆಯ ಕಡೆಗೇ ಬರತೊಡಗಿದವು. ಅಂದು ಅವಳು ಆ ಬುಡುಬುಡಿಕನ ಭವಿಷ್ಯವನ್ನು ಕೇಳಿದ್ದರಿಂದ ಆ ಮೂವರು ಸವಾರರಲ್ಲಿ ತನ್ನ ಅಣ್ಣನಾದ ಪದಮಜಿಯೂ ಒಬ್ಬನಾಗಿರಬೇಕೆಂದು ಅವಳ ಮನೋಭಾವನೆಯಾಗಿ ಬಿಟ್ಟಿತು. ಅವಳ ಮನೋಗತದಂತೆ ಹಾಗು ಬುಡುಬುಡಿಕನ ಭವಿಷ್ಯದಂತೆ ಆ ಮೂವರಲ್ಲಿ ನಿಜವಾಗಿಯೂ ಪದಮಜಿಯೊಬ್ಬನಾಗಿದ್ದನು. ಅಣ್ಣನನ್ನು ಕಂಡಾಕ್ಷಣವೇ ಹಂಸೆಯು ನಿಂತಲ್ಲಿಂದಲೇ ಗಟ್ಟಿಯಾಗಿ:-"ಅವ್ವಾ, ಅಣ್ಣನು ಬಂದನು. ನಿಜವಾಗಿಯೂ ಬಂದನು. ಅವನೊಡನೆ ನಾಗೋಜಿ...' ಎಂದಂದಳು. ಅವಳ ಬಾಯಿಂದ ಮುಂದೆ ಶಬ್ದಗಳೇ ಹೊರಡಲಿಲ್ಲ. ಯಾಕಂದರೆ, ಇಷ್ಟರಲ್ಲಿ ಆ ಸವಾರರು ಅವಳ ಎದುರಿಗೆ ಬಂದೇ ಬಿಟ್ಟರು. ಮನೆಯೊಳಗಿಂದ ತಾಯಿಯೂ ಬಂದು ಅವರಿಗೆ ಸಮ್ಮುಖಳಾದಳು. ಸಾವಿತ್ರಿಯು ಬಾಗಿಲೊಳಗಿಂದಲೇ ಪದಮಜಿಯನ್ನು ದಿಟ್ಟಿಸಿ ನೋಡುತ್ತ:- "ಹಂಸಾ, ನಿನ್ನ ಬಾಯಲ್ಲಿ ಸಕ್ಕರೆ ಹಾಕುವೆನು. ನಿನ್ನ ಆ ಬುಡುಬುಡಿಕನ ಭವಿಷ್ಯವು ಇಷ್ಟರಮಟ್ಟಿಗಂತೂ ಸತ್ಯವಾಯಿತು. ತಂಗೀ, ಹೀಗೆ ಬೆಪ್ಪಳಂತೆ ನಿಂತೆಯೇಕೆ? ಸರಿ, ಹಿಂದಕ್ಕೆ. ಅಗೋ, ದೇಶಮುಖ ನಾಗೋಜಿರಾಯರೂ ಭಾವುರಾಯನೂ ಬಂದರು ನೋಡು, ಎಂದು ಹೇಳಲು, ಹಂಸೆಯು ನಾಚಿ

ಕೊಂಡು ಮನೆಯೊಳಗೆ ಹೋದಳು. ಸಾವಿತ್ರಿಯು ಅವರ ಕೈ-ಕಾಲಿಗೆ ನೀರು ಕೊಟ್ಟಳು.

ಸಾವಿತ್ರಿಯು ಲೋಣೆಗೆ ಬಂದು ಇರಹತ್ತಿದಾಗಿನಿಂದ ಪದಮಜಿಯು ಸಮೀಪದ ಖೇಡದ ಸಂತೆಗೆ ಹೋಗಿ ಬರುತ್ತಿದ್ದನು. ಖೇಡದ ದೇಶಮುಖ ರಾದ ಸಯಾಜಿ ಘಾಟಗೆ ಎಂಬವರು ಸಜ್ಜನರಾಗಿದ್ದರು. ಅವರು ಪದಮ ಜಿಯ ವಿಷಯವಾಗಿ ಪರಸ್ಪರವಾಗಿ ತಿಳಿದು, ಅವನನ್ನು ತಮ್ಮಲ್ಲಿಗೆ ಕರೆಸಿ ಕೊಂಡು ಅವನಿಗೆ ಬಗೆಬಗೆಯಿಂದ ಸಹಾಯ ಮಾಡುತ್ತಿದ್ದರು. ಅದರಿಂದ ಪದಮಜಿಗೂ ದೇಶಮುಖರ ನಾಗೋಜಿಗೂ ಸ್ನೆಹವುಂಟಾಯಿತು. ಬರ ಬರುತ್ತ ಅವರು ಜೀವದ ಗೆಳೆಯರಾದರು. ನಾಗೋಜಿಯು ತಮ್ಮ ಲಾಯದೊಳಗಿನ ಒಂದು ಚಲೋ ಕುದುರೆಯನ್ನು ಪದಮಜಿಗೆ ಕೊಡಿ ಸಿದನು. ಅಂದಿನಿಂದ ಪದಮಜಿಯು ಮುಂಜಾವು-ಸಂಜೆಗಳಲ್ಲಿ ಖೇಡಕ್ಕೆ ಹೋಗಿ ಬರಲಾರಂಭಿಸಿದನು. ದೇಶಮುಖರ ನೆರವಿನಿಂದ ಪದಮಜಿಯು ದಾಂಡಪಟ್ಟೆ, ಭಲ್ಲೆ, ಖಡ್ಗ ಮುಂತಾದವುಗಳ ಶಿಕ್ಷಣವನ್ನು ಹೊಂದಿ, ವರ್ಷಾರು ತಿಂಗಳಲ್ಲಿಯೇ ನಿಷ್ಣಾತನಾದನು. ಬರಬರುತ್ತ ಅವನಿಗೆ ಉದ್ಯೋಗವಿಲ್ಲದೆ ಮನೆಯಲ್ಲಿ ಸುಮ್ಮನೆ ಕಾಲಹರಣ ಮಾಡುವದು ಬೇಸರ ವುಂಟಾಗಹತ್ತಿತು. "ಇನ್ನು ನಾನು ಹೊಟ್ಟೆಯ ಪಾಡಿಗಾಗಿ ಯಾವ ದೊಂದು ದಂಡಿನಲ್ಲಿ ಸೇರುವೆನು." ಎಂದು ಒಂದು ದಿನ ಪದಮಜಿಯು ತನ್ನ ತಾಯಿಗೆ ತಿಳಿಸಿದನು. ಕೂಡಲೆ ಅವಳು ಅವನಿಗೆ ಹೊರಡಲಿಕ್ಕೆ ಆನಂದದಿಂದ ಸಮ್ಮತಿಯನ್ನಿತ್ತಳು.

ಆಗಿನ ಕಾಲವೇ ಅಂತಹದಾಗಿತ್ತು. ಯಾವನೊಬ್ಬ ತರುಣನು ಒಂದು ಚಪಲವಾದ ಕುದುರೆ, ಬಂದೂಕು, ಖಡ್ಗ, ಭಲ್ಲೆ ಮುಂತಾದವುಗಳನ್ನು ಕೂಡಿಸಿಕೊಂಡು ಶಿಪಾಯಿಯಾಗುವನು. ಅಂಥ ಕೆಲ ಜನ ಶಿಪಾಯಿಗಳು ಒಂದು ಗುಂಪು ಮಾಡಿಕೊಳ್ಳುವರು; ಹಾಗು ಯಾವನೊಬ್ಬ ಸರದಾರನ ಕೈಕೆಳಗಿದ್ದು, ಮುಲುಖಗಿರಿಗೆ ಹೊರಡುವರು. ಅವರಿಗೆ ವತನ-ವಾಡೆಗಳ ಚಿಂತೆಯಿರಲಿಲ್ಲ. ಸುಲಿಗೆಯ ಮೇಲೆಯೇ ಅವರೆಲ್ಲರು ತಮ್ಮ ನಿರ್ವಾಹ ಸಾಗಿಸುತ್ತಿದ್ದರು ವಿಜಯದಶಮಿಗೆ ಹೊರಬಿದ್ದ ಅಂಥ ಜನರು, ಮೃಗ ಪ್ರವೇಶಕ್ಕೇ ಮರಳಿ ಮನೆ ಸೇರುತ್ತಿದ್ದರು. ಅಂಥ ಜನರ ಗುಂಪುಗಳಿಂದಲೇ ಆಗ ಆ ಮಹಾರಾಷ್ಟ್ರ ದೇಶವೆಲ್ಲ ವ್ಯಾಪಿಸಿಬಿಟ್ಟಿತ್ತು; ಆದರೆ ಪದಮಜಿ

ಮುಂತಾದ ಕೆಲ ಸ್ವದೇಶಭಕ್ತರು ಮಾತ್ರ ಉಳಿದವರಂತೆ ತಮ್ಮ ಜನರನ್ನೇ ಸುಲಿದು ಹೊಟ್ಟೆ ಹೊರೆಯುವ ಎತ್ತುಗಡೆಗೆ ಹತ್ತುತ್ತಿರಲಿಲ್ಲ. ಅವರು ಸ್ವರಾಜ್ಯಕ್ಕಾಗಿ ದೇಹವನ್ನು ಸವೆಸುವ ಪಣ ತೊಡುತ್ತಿದ್ದರು. ಪದಮಾಜಿಯಾದರೂ ಹಾಗೆ ಪಣ ತೊಟ್ಟಿದ್ದನಲ್ಲದೆ, ತನ್ನ ತಂದೆಯು ತನ್ನ ವಂಶಕ್ಕೆ ಹಚ್ಚಿದ್ದ ಕಲಂಕವನ್ನು ತೊಳೆದು ಉಜ್ವಲಗೊಳಿಸಬೇಕೆಂದು ಸಂಕಲ್ಪಿಸಿದ್ದನು.

ಪದಮಾಜಿಯು ಹೊರಟ ಕೂಡಲೆ ದೇಶಮುಖರು ತಮ್ಮ ಮಗನಾದ ನಾಗೋಜಿಯನ್ನೂ, ಆತನ ಸೇವೆಗಾಗಿ ಆತನ ವಯಸ್ಸಿನವನೂ ಕೇವಲ ವಿಶ್ವಾಸಿಗನೂ ಆದ ಭಾವೂರಾಯನನ್ನೂ ಕಳಿಸಿದರು. ಆ ಮೂವರೂ ಧನಾಜಿಯ ಪಥಕದಲ್ಲಿ ಸೇರಿದ್ದರು. ಆಗ ಧನಾಜಿಯು ಸ್ವರಾಜ್ಯದ ಶ್ರೇಷ್ಠ ಸೇವಕನಾಗಿದ್ದನು. ಅವನ ದಂಡಿನೊಡನೆ ಅಲೆದಾಡುವದು ನಾಗೋಜಿಯಂಥ ಶ್ರೀಮಂತರ ಮಗನಿಗೆ ಜಡವೆನಿಸಿತು; ಅದರಿಂದ ಅವನು ಅಲ್ಪಾವಧಿಯಲ್ಲಿಯೇ ತನ್ನ ಸೇವಕನೊಡನೆ ಆ ಪಥಕವನ್ನು ಬಿಟ್ಟು, ಸಾತಾರೆಗೆ ಹೋಗಿ ರಾಜರ ಪಥಕದಲ್ಲಿ ಸೇರಿಕೊಂಡನು.

ಮೊದಲು ೧-೨ ವರ್ಷಗಳ ಮಳೆಗಾಲದಲ್ಲಿ ಅವರಿಬ್ಬರು ಕೂಡಿಯೇ ಮನೆಗೆ ಬಂದಿದ್ದರು; ಆದರೆ ಕಳೆದ ೨ ವರ್ಷಗಳಿಂದ ಮಹಾರಾಷ್ಟ್ರದಲ್ಲಿ ವಿಶೇಷ ಗೊಂದಲವೆದ್ದದ್ದರಿಂದ ಪದಮಾಜಿಗೆ ಮನೆಗೆ ಬರಲಿಕ್ಕಾಗಿರಲಿಲ್ಲ. ಆಗ ಔರಂಗಜೇಬ ಬಾದಶಹನು ಭೀಮಾ ತಟಾಕದೊಳಗಿನ ಬ್ರಹ್ಮಪುರಿಯಲ್ಲಿಯ ತನ್ನ ಠಾಣ್ಯವನ್ನು ಕಿತ್ತಿ, ಮರಾಟರ ಕಿಲ್ಲೆಗಳನ್ನು ಹಸ್ತಗತ ಮಾಡಿಕೊಳ್ಳುವದಕ್ಕೆಂದು ಸ್ವತಃ ಸಸೈನ್ಯವಾಗಿ ಮಹಾರಾಷ್ಟ್ರಕ್ಕೆ ಬಂದಿದ್ದನು.

ಹಾಗೆ ಬಹು ದಿನಗಳಿಂದ ಬಂದ ಪದಮಾಜಿಯನ್ನು ಕಂಡು ಸಾವಿತ್ರಿಗೂ ಹಂಸೆಗೂ ಆದ ಆನಂದವನ್ನು ವರ್ಣಿಸಲಶಕ್ಯವು. ಕುದುರೆಯಿಂದಿಳಿದವನೇ ಪದಮಾಜಿಯು ತಾಯಿಯ ಕಾಲಿಗೆ ಪೊಡಮಟ್ಟು:—"ಅವ್ವಾ,: ಹಂಸೆಯೆಲ್ಲಿ?" ಎಂದು ಕೇಳಿದನು. ಅಷ್ಟರಲ್ಲಿ ಹಂಸೆಯು ಮುಂದರಿದು ಬಂದು:--"ಅಣ್ಣಾ, ಇಗೋ, ನಾನು ಇಲ್ಲಿಯೇ ಇರುತ್ತೇನೆ;" ಎಂದು ನುಡಿಯಲಿಕ್ಕೂ ನಾಗೋಜಿಯೂ ಆತನ ಸಂಗಡಿಗನಾದ ಭಾವೂರಾಯನೂ ಅಲ್ಲಿಗೆ ಬರಲಿಕ್ಕೂ ಗಂಟೇ ಬಿದ್ದಿತು. ಕೂಡಲೆ ಹಂಸೆಯು ಮತ್ತೆ ನಾಚಿಕೊಂಡು ಒಳಸೇರಿದಳು.

"ಅವ್ವಾ, ಹಸಿವೆ! ಅವ್ವಾ, ನಮಗೆಲ್ಲರಿಗೂ ಒಳ್ಳೇ ಹಸಿವೆಯಾಗಿದೆ.

ಈಗಲೇ ಏನನ್ನಾದರೂ ತಿನ್ನಲಿಕ್ಕೆ ಕೊಡು" ಎಂದು ಪದಮಜಿಯು ತಾಯಿಯನ್ನು ಕೇಳಲು, ಆ ಬಡವೆಯು ಬಹು ಕಕ್ಕುಲಾತಿಯಿಂದ:-"ತಮ್ಮಾ, ನೀವೆಲ್ಲರೂ ಕೈಕಾಲು ತೊಳೆದು ನಿಮ್ಮ ಮಾಸಿದ ಅರಿವೆಗಳನ್ನು ತೆಗೆದಿಟ್ಟು ಒಳಗೆ ಬರುವಷ್ಟರಲ್ಲಿ ನಾನು ನಿಮಗಾಗಿ ಬಿಸಿಬಿಸಿ ರೊಟ್ಟಿಗಳನ್ನೂ, ಅಂಬಲಿಯನ್ನೂ ಮಾಡುವೆನು" ಎಂದವಳೇ, ಒಳಗೆ ಹೋಗಿ ಅಡಿಗೆಯ ಉದ್ಯೋಗಕ್ಕೆ ತೊಡಗಿದಳು. ಹಂಸೆಯು ನೀರು-ನಿಡಿ ತಂದುಕೊಟ್ಟು ಅವಳಿಗೆ ನೆರವಾಗ ಹತ್ತಿದಳು. ಪದಮಜಿಯು ನಾಗೋಜಿಯೊಡನೆ ಕೈ-ಕಾಲು-ಮೋರೆ ತೊಳೆದು ಪಡಸಾಲೆಯ ಮೇಲಿನ ಗೊಂಗಡಿಯ ಮೇಲೆ ಕುಳಿತು ವಿಶ್ರಮಿಸಹತ್ತಿದನು. ಭಾವೂರಾಯನು ಮೂವರ ಕುದುರೆಗಳನ್ನೂ ಒಳಂಗಳದ ಚಪ್ಪರದಲ್ಲಿ ಕಟ್ಟಿ, ಜೀನು ತೆಗೆದು, ಅವುಗಳಿಗೆ ಮೇವು-ಡಾಣಿಗಳನ್ನು ಕೊಡುವ ಉದ್ಯೋಗಕ್ಕೆ ತೊಡಗಿದನು.

## ಹಂಸೆಯ ಸಾಹಸ.

ಸಾವಿತ್ರೀಬಾಯಿಯು ಅಡಿಗೆಯಾಗುವವರೆಗೆ ಪದಮಜಿ-ನಾಗೋಜಿಯರು ಪಡಸಾಲೆಯ ಮೇಲಿನ ಝೂಡಿಯಮೇಲೆ ಕುಳಿತು ಹರಟೆ ಹೊಡೆಯಹತ್ತಿದ್ದರು. ಭಾವೂರಾಯನು ಚಪ್ಪರದೊಳಗೆ ಕಟ್ಟಿದ್ದ ಕುದುರೆಗಳ ಚಾಕರಿ ಮಾಡುತ್ತಿದ್ದನು. ಆಗ ನಾಗೋಜಿಯು:— ಪದಮಜೀ, ನಾನು ಬೇಗನೆ ಮರಳಿ ಮುಲುಖಗಿರಿಗೆ ಹೋಗಬೇಕೆನ್ನುತ್ತೇನೆ; ಆದರೆ ತಂದೆಯವರು ಅಶಕ್ತರಾಗಹತ್ತಿರುವದರಿಂದ, ಅವರು ನನಗೆ ಹೋಗಗೊಡುವಂತೆ ಕಾಣುವದಿಲ್ಲ. ಆದರೂ ನಾನು ಅವರಿಗೆ ತುಸ ದಿನಗಳಲ್ಲಿಯೇ ದೊಡ್ಡ ಜಹಗೀರು ಸಂಪಾದಿಸಿಕೊಂಡು ಬರುವೆನೆಂದು ಹೇಳಿ ಹೊರಟೇ ಹೋಗುವೆನು. ಈವರೆಗೆ ನಾನು ಸಾತಾರೆಯಲ್ಲಿ ಸುಮ್ಮನೆ ಕೊಳೆಬೀಳುವೆ, ಸಂತಾಜಿ ಘೋರ್ಪಡೆಯ ಮಕ್ಕಳಾದ ರಾಣೋಜಿ--ಪಿರಾಜಿಯರಂತೆ ಸ್ವತಂತ್ರ ಉದ್ಯೋಗ ನಡೆಸಿದ್ದರೆ, ಅವರು ಸಂಪಾದಿಸಿರುವಂತೆ ನಾನೂ ಕೆಲವು ಜಹಗೀರುಗಳನ್ನು ಸಹಜವಾಗಿ ಸಂಪಾದಿಸಬಹುದಾಗಿತ್ತು; ಎಂದು ಅಂದನು.

ಆದಕ್ಕೆ ಪದಮಜಿಯು:— ಗೆಳೆಯಾ, ಅವರ ಬಳಿಯಲ್ಲಿ ನಾಕಸು

ದಂಡಿದೆಯೆಂಬದನ್ನು ನೀನು ಕಣ್ಮರೆ ಮಾಡುವಿಯೇನು? ಆದರೆ ನಿನ್ನಲ್ಲೇ ನಿದೆ? ಒಬ್ಬ ಭಾವುರಾಯನೇ ನಿನ್ನ ದಂಡಾಳುವಲ್ಲವೆ?

"ಎಲೇ ಹುಡುಗಾ, ನಾನು ಆ ಉದ್ಯೋಗಕ್ಕೇ ತೊಡಗಿದ್ದರೆ, ದಂಡು-ಗಿಂಡುಗಳಿಗೇನು ಕೊರತೆ? ಪನ್ಹಾಳಿಯಲ್ಲಿರುವಾಗ ನಾನು ಈ ಉದ್ಯೋಗಕ್ಕೆ ಹತ್ತಿದ್ದರೂ ರಾಣೀಸಾಹೇಬರಿಂದ ನನಗೆ ಸಾಕಷ್ಟು ದಂಡೂ, ಉತ್ತೇಜನವೂ ದೊರೆಯುಬಹುದಾಗಿತ್ತು. ಯಾವನೊಬ್ಬ ಖಂಬೀರನು ಸ್ವಂತದ ರಟ್ಟೆಯ ಕಸುವಿನ ಮೇಲೆ ಮುಂದೆ ಬಂದರೆ, ರಾಣೀಸಾಹೇಬರು ಅವನಿಗೆ ಸಂತೋಷದಿಂದ ಸಹಾಯ ಮಾಡುವರು."

"ಅದೆಲ್ಲ ವಿಹಿತವೇ; ಆದರೆ ನೀನು ಸ್ವತಂತ್ರ ಉದ್ಯೋಗ ಮಾಡಿ ಹೊಸ ಜಹಗೀರುಗಳನ್ನು ಸಂಪಾದಿಸಿದ್ದರೂ, ಅವುಗಳ ಉಪಭೋಗವು ನಿನಗೆ ಎಷ್ಟರ ಮಟ್ಟಿಗೆ ಲಭಿಸುತ್ತಿದ್ದಿತೆಂಬದನ್ನು ಅದಾರು ಹೇಳಬೇಕು? ಯಾಕಂದರೆ, ಹಾಗೆ ಹೊಸದಾಗಿ ದೊರಕಿಸಿದವರ ಜಹಗೀರುಗಳನ್ನು ನಮ್ಮ ರಾಣೀಸಾಹೇಬರು ಕಸಗೊಂಡದ್ದನ್ನು ಅರಿಯೆಯಾ?"

ಪದಮಜಿಯು ಮತ್ತೆ ಏನೋ ಹೇಳತಕ್ಕವನಿದ್ದನು; ಅಷ್ಟರಲ್ಲಿ ಹಂ-ಸೆಯು ಬಾಗಿಲ ಮರೆಯಲ್ಲಿ ನಿಂತು:—"ಅಣ್ಣಾ, ಕೈಕಾಲು ನೋರೆ ತೊಳೆದುಕೊಂಡು ಊಟಕ್ಕೆ ನಡೆಯಿರಿ" ಎಂದು ಕರೆದು, ನೀರು ತಂದಿಟ್ಟಳು.

ಆಕೆಯನ್ನು ಕಂಡು ನಾಗೋಜಿಯು:—"ನೀವೇಕೆ ನೀರು ತಂದಿರಿ? ನಮ್ಮ ಭಾವೂರಾಯನಿದ್ದಿಲ್ಲವೆ?" ಎಂದು ಒಳ್ಳೇ ಸಲಿಗೆಯಿಂದ ನುಡಿದನು. ಹಂಸೆಯು ಚಿಕ್ಕವಳಿರುವಾಗ ನಾಗೋಜಿಯು ಅವಳೊಡನೆ ಬಹು ಸಲಿಗೆಯಿಂದ ನಗೆಚೇಷ್ಟೆ ಮಾಡುತ್ತಿದ್ದನು; ಆದರೆ ಅವಳೀಗ ಪ್ರಾಪ್ತವಯಸ್ಕಳಾಗಿದ್ದಳು. ಅದರಿಂದ ಈಗ ಸ್ತ್ರೀ ಸ್ವಭಾವಕ್ಕನುಗುಣವಾದ ಸ್ವಾಭಾವಿಕ-ಶಾಲೀನತೆಯಿಂದ ಪರಪುರುಷನಾದ ನಾಗೋಜಿಯೊಡನೆ ಮಾತಾಡಲಿಕ್ಕೂ ಅವನ ಮುಂದೆ ಹಾದಾಡಲಿಕ್ಕೂ ಅವಳು ನಾಚುತ್ತಿದ್ದಳು.

ಹಂಸೆಯು ಊಟಕ್ಕೇಳಿರೆಂದು ಹೇಳಿ, ನೀರು-ತಂಬಿಗೆಗಳನ್ನು ಒಳ ಮಗ್ಗಲಲ್ಲೇ ಇಟ್ಟು ಹೊರಡಲು, ಪದಮಜಿಯು ಅವಳನ್ನು ಕರೆದು:-"ಹಂಸಾ, ತಂಬಿಗೆಗಳನ್ನು ಅಲ್ಲಿಯೇ ಏಕೆ ಇರಿಸಿದೆ? ತಕ್ಕೊಂಡು ಬಾ, ಮುಂದಕ್ಕೆ; ಹಾಗು ಹಣಿಸು ನಮ್ಮ ಕೈ-ಕಾಲುಗಳಿಗೆ ನೀರನ್ನು" ಎಂದನು.

ಲಜ್ಜೆಯಿಂದ ನಾಚುತ್ತ ನೋರೆದೋರದೆ ಹಿಂದಿಂದೇ ಆಡ್ಡಾಡುತ್ತಿದ್ದ

ಹಂಸೆಗೆ ಈಗ ಮಾತ್ರ ಅನಿರ್ವಾಹ ಪ್ರಸಂಗ ಒದಗಿತು. ಅವಳು ಹೊರಗೆ ಬಂದಳು. ಅಸ್ತಂಗತವಾಗುತ್ತಿದ್ದ ದಿನಮಣಿಯ ಸುಂದರವಾದ ಕಿರಣಗಳು ಆ ಮುರುಕ ಪಡಸಾಲೆಯೊಳಗಿನ ಕಿಂಡಿಗಳೊಳಗಿಂದ ಅವಳ ಮುಖದ ಮೇಲೆ ಬಿದ್ದಿದ್ದವು. ಅದೇ ಕಾಲಕ್ಕೆ ನಾಗೋಜಿಯು ಅವಳ ಕಡೆಗೆ ನೋಡಿದನು; ಹಂಸೆಯೂ ಅವನನ್ನು ನೋಡಿದಳು. ಕ್ಷಣದಲ್ಲಿಯೇ ಅವರಿಬ್ಬರ ದೃಷ್ಟಿಗಳು ಸಮ್ಮಿಲಿತವಾದವು. ವಿಸ್ಮಯಭರದಿಂದ ಇವಳೇ ಪದಮಜಿಯ ತಂಗಿಯಾದ ಹಂಸೆಯೇನೆಂದು ನಾಗೋಜಿಯು ಅವಳನ್ನು ಟಕಮಕ ನೋಡುತ್ತ ನಿಂತನು.

ಅವರಿಬ್ಬರನ್ನು ನಡುನಡುವೆ ಲಕ್ಷಿಸುತ್ತಿದ್ದ ಪದಮಜಿಯು, ಕೈ-ಕಾಲು ತೊಳೆಯುವದಾದ ಮೇಲೆ ನಾಗೋಜಿಯನ್ನು ಕುರಿತು:"ನಾಗೋಜೀ, ನಮ್ಮ ಹಂಸೆಯನ್ನು ಕಂಡು ನೀನು ಆಶ್ಚರ್ಯಭರಿತನಾದದ್ದೇನೂ ಸೋಜಿಗ ವಲ್ಲ. ಇದು ಮೊದಲು ಅವಳು ನನ್ನ ಕಣ್ಣಿಗೆ ಬಿದ್ದಾಗ ನಾನೂ ಚಮ ಕಿತನಾಗಿದ್ದೆನು. ಕಳೆದ ಎರಡು ವರ್ಷಗಳಲ್ಲಿ ಅವಳು ಬಹಳೇ ದೊಡ್ಡವ ಳಾಗಿರುತ್ತಾಳೆ." .

ನಾಗೋಜಿಯು ಅದಕ್ಕೆ ಏನೊಂದೂ ಉತ್ತರ ಕೊಡಲಿಲ್ಲ; ಆದರೆ ಅವನ ಮುಖಮುದ್ರೆಯ ಮೇಲಿಂದ ಅವನ ಮನಸ್ಸಿನಲ್ಲಿ ಹಂಸೆಯ ಸಂಬಂಧದ ವಿಚಾರವೇ ನಡೆದಿರಬೇಕೆಂದು ಅನಿಸುತ್ತಿತ್ತು. ಎರಡು ವರ್ಷಗಳ ಮುಂಚೆ ಸಾವಿತ್ರೀಬಾಯಿಯು ನಾಗೋಜಿಯ ತಂದೆಯ ಬಳಿಗೆ ಪದಮಜಿಯನ್ನು ಕಳಿಸಿ, ತನ್ನ ಮಗಳಾದ ಹಂಸೆಯನ್ನು ನಿಮ್ಮ ಮಗನಾದ ನಾಗೋಜಿರಾಯ ನಿಗೆ ಮಾಡಿಕೊಂಡು ನಮ್ಮನ್ನು ಕೃತಾರ್ಥರನ್ನಾಗಿ ಮಾಡಿಕೊಳ್ಳಿರೆಂದು ಪ್ರಾರ್ಥಿಸಿಕೊಂಡಿದ್ದಳು. ಅದಕ್ಕೆ ನಾಗೋಜಿಯ ತಂದೆಯು "ಮಗನ ಮನ ಸ್ಸಿಗೆ ಬಂದರೆ ಆಗಬಹುದೆ"ಂದು ತಿಳಿಸಿದ್ದನು; ಆದರೆ ಮುಂದೆ ಸ್ವಲ್ಪ ದಿನ ಗಳಲ್ಲೇ ಹಂಸೆಯ ಕುಲಗೇಡಿ ತಂದೆಯಾದ ಸೂರ್ಯಾಜಿ ಪಿಸಾಳನು ಬಹು ದಿನಗಳ ಶೋಧದ ನಂತರ ಲೋಣಿಯಲ್ಲಿ ತನ್ನ ಹೆಂಡಿರು-ಮಕ್ಕಳಿರುವರೆಂಬ ದನ್ನು ತಿಳಿದು, ಅವರನ್ನು ಕಂಡು ವಾಯಿಗೆ ತನ್ನ ಬಳಿಗೆ ಕರೆದೊಯ್ಯ ಬೇಕೆಂದು ಲೋಣಿಗೆ ಬಂದನು. ಸೂರ್ಯಾಜಿಯು ಲೋಣಿಗೆ ಬಂದುದನ್ನು ಕೇಳಿದ ಕೂಡಲೆ ಪ್ರತಿಯೊಬ್ಬ ಮನೆತನಸ್ಥ ಮರಾಟನೂ ಸೂರ್ಯಾಜಿ ಯನ್ನು ನಿಂದಿಸಹತ್ತಿದನು; ಹಾಗು ಸಾವಿತ್ರಿಬಾಯಿಯೊಡನೆ ಅಲ್ಪ ಸ್ವಲ್ಪ ಬಳಿಕೆ ಮಾಡತೊಡಗಿದವನು ಚದರಿ, ಅವಳಿಂದ ದೂರ ಸರಿಯಹತ್ತಿದನು.

ಅದೇ ಕಾಲಕ್ಕೆ ನಾಗೋಜಿಯ ತಂದೆಯಾದರೂ "ನಿಮ್ಮ ಮಗಳು ನಮ್ಮ ಮಗನಿಗೆ ತಕ್ಕವಳಲ್ಲ" ಎಂದು ನಿಷ್ಠುರವಾಗಿ ಹೇಳಿ ಕಳಿಸಿದನು.

ವಿಚಾರಗ್ರಸ್ತನಾದ ನಾಗೋಜಿಯು ಪದಮಜಿಯೊಡನೆ ಒಳಗೆ ಬಂದು ಬಡಿಸಿದ ಎಲೆಯ ಮೇಲೆ ಕುಳಿತನು. ಆಗ ಪದಮಜಿಯು ತನ್ನ ತಾಯಿಯನ್ನು ಕುರಿತು:—"ಅವ್ವಾ, ನಮ್ಮ ಹಂಸೆಯನ್ನು ಕಂಡು ಇಂದು ಈ ನಾಗೋಜಿರಾಯನು ಬೆರಗಾಗಿ ಹೋಗಿರುವನು" ಎಂದು ಅಂದನು.

ಸಾವಿತ್ರೀಬಾಯಿಯು ದೀರ್ಘನಿಶ್ವಾಸವನ್ನು ಬಿಡುತ್ತ:—'ನಾಗೋಜಿರಾಯನು ನಮ್ಮ ಹಂಸೆಯನ್ನೇನು ಇಂದೇ ನೋಡಿರುವದಿಲ್ಲ. ಇವಳು ಅವರ ಮನೆತನಕ್ಕೆ ತಕ್ಕವಳಾಗಿರುತ್ತಾಳೆ. ಇವರು ಇವಳನ್ನು ವರಿಸಬೇಕೆಂದು ನನ್ನ ಇಚ್ಛೆಯಿದೆ; ಆದರೆ ಹಂಸಾ, ಬಡಿಸುವದನ್ನು ಬಿಟ್ಟು ನೀನು ನಡುವೇ ಹೊರಗೆ ಏಕೆ ಹೋದೆ? ಪದಮಜೀ, ನನಗೆ ನೀನೇ ಎಲ್ಲ ಬಗೆಯ ಆಧಾರವೆಂದು ತಿಳಿದಿರುತ್ತೇನೆ. ನೀನು ಕರ್ತೃತ್ವಶಾಲಿಯಾಗದ ವಿನಃ ನಾಲ್ಕು ಮಂದಿಯ ಎದುರಿಗೆ ನಾವು ಮೋರೆ ಎತ್ತುವಂತಿಲ್ಲ."

"ಅವ್ವಾ, ಇನ್ನು ಆ ಬಗ್ಗೆ ಚಿಂತೆ ಬೇಡ. ಅದಿರಲಿ. ನಾಗೋಜೀ, ನೀನು ನಮ್ಮ ಹಂಸೆಯನ್ನು ಇನ್ನೂ ನೋಡಬೇಕಾಗಿದೆಯೇನು? ನಿನ್ನ ಅಂಬೋಣವಾದರೂ ಏನಿದೆ? ಅವ್ವನು ಕೇಳಿದ ಪ್ರಶ್ನೆಗೆ ನೀನು ಏನೆಂದು ಹೇಳುವೆ? ಹಂಸೆಯನ್ನು ಇನ್ನೊಮ್ಮೆ ನೋಡಿಯೇ ಒಡನುಡಿಯುತ್ತಿದ್ದರೆ, ಹಂಸಾ, ಇತ್ತ ಬಾ. ಈ ನಾಗೋಜಿರಾಯರ ಎದುರಿಗೆ ಬಂದು ನಿಲ್ಲು."

"ಇದೇನೋ ಅಣ್ಣಾ, ನಿನ್ನ ನಗೆಚೇಷ್ಟೆ? ಅವರು ನನ್ನನ್ನು ನೋಡಿಯೇ ಇಲ್ಲವೇನು?"

"ಎಲ ಇವಳ! ಅವರು ಅಂದರೆ ಯಾರೇ? ಶಾಬಾಸ್! ಈ ಸರ್ವನಾಮಗಳ ಉಪಯೋಗದಿಂದ ಇವರಿಬ್ಬರೂ ಒಬ್ಬರನ್ನೊಬ್ಬರು ಆರಿಸಿಕೊಂಡಿರುವಂತೆಯೇ ತಿಳಿಯುತ್ತದೆ. ವಾಹವ್ವಾ! ನಾಗೋಜಿರಾಯರೇ, ನಿಮ್ಮ ಅಂಬೋಣವೇನೆಂಬದಷ್ಟು ತಿಳಿದು ಹೋಗಲಿ."

"ನಾನನ್ನುವದೇನು? ಅವ್ವನವರನ್ನುವ ಮಾತಿಗೆ ನನ್ನ ಅಡ್ಡಿಯಲ್ಲಿದೆ? ನನ್ನನ್ನು ವರಿಸುವಿರೇನೆಂದು ನಾನು ಹಂಸಾಬಾಯಿಯನ್ನು ಕೇಳುವಾಗ ಅವರು ಅದಕ್ಕೆ ಸಮ್ಮತಿಸಿದರೆ, ನನ್ನಷ್ಟು ಭಾಗ್ಯವಂತನು ಇನ್ನೊಬ್ಬನಿಲ್ಲೆಂದು ತಿಳಿಯುವೆನು."

"ಆದರೆ ನಿಮ್ಮ ಮನೆಯವರು ಅದಕ್ಕೆ ಸಮ್ಮತಿಸಬೇಕಲ್ಲವೆ?" ಎಂದು ಸಾವಿತ್ರೀಬಾಯಿಯು ನಡುವೇ ಪ್ರಶ್ನೆ ಹಾಕಿದಳು.

"ಆ ಬಗ್ಗೆ ನೀವು ನಿಶ್ಚಿಂತೆಯಿಂದಿರ್ರಿ. ಅವರನ್ನೊಡಂಬಡಿಸುವ ಕೆಲಸ ನನ್ನ ಕಡೆಗೆ; ಅಥವಾ ಅವರೇ ನಿಮ್ಮ ಕಡೆಗೆ ಬಂದು ನಿಮ್ಮ ಹಂಸಾಬಾಯಿಯನ್ನು ನಮ್ಮ ನಾಗೋಜಿಗೆ ಕೊಡುವಿರೇನೆಂದು ಕೇಳುವ ವ್ಯವಸ್ಥೆ ಮಾಡುವೆನು; ಅಂದರಾಯಿತಷ್ಟೆ?"

"ಹೀಗಾದರೆ ಮುತ್ತಿಗಿಂತಲೂ ಉತ್ತಮವಾಗುವದು!" ಎಂದಂದು ಸಾವಿತ್ರೀಬಾಯಿಯು ಸುಮ್ಮನಾದಳು. ಅಷ್ಟರಲ್ಲಿ ಹೊರಗೆ ಕತ್ತಲೆ ಬೀಳ ಹತ್ತಿರುವದನ್ನು ಕಂಡು ಅವಳು ಹಂಸೆಯನ್ನುದ್ದೇಶಿಸಿ:—"ಹಂಸಾ, ಕತ್ತಲಾಗುವಷ್ಟರಲ್ಲಿ ಎದುರಿಗಿನ ಬಾವಿಯಿಂದ ೨-೩ ಕೊಡ ನೀರು ತರಲಿಕ್ಕೆ ಬೇಕು. ಮನೆಯಲ್ಲಿ ಒಂದು ಮುಕ್ಕು ನೀರು ಕೂಡ ಇರುವದಿಲ್ಲ," ಎಂದು ಅಂದಳು.

ಅಲ್ಲಿಂದ ಎಲ್ಲಿಗಾದರೂ ಹೋಗಿ, ನಾಗೋಜಿರಾಯನ ಕಣ್ಮರೆಯಾಗುವದೇ ಆಗ ಹಂಸೆಗೆ ಬೇಕಾಗಿತ್ತು. ಕೂಡಲೆ ಅವಳು ಕೊಡಪಾನ, ಬಿಂದಿಗೆ, ಸೇದುವ ಹಗ್ಗಗಳನ್ನು ತಕ್ಕೊಂಡು ಬಾವಿಯ ದಾರೀ ಹಿಡಿದಳು. ಅಷ್ಟರಲ್ಲಿ ಭಾವೂರಾಯನು ತನ್ನ ಯಜಮಾನನ ಹಾಗು ಪದಮಜಿಯ ಮಾಸಿದ ಅರಿವೆಗಳನ್ನು ತಕ್ಕೊಂಡು ಅದೇ ಬಾವಿಗೆ ಮಡಿಮಾಡಲಿಕ್ಕೆ ನಡೆದಿದ್ದನು. ಆಗ ಹಂಸೆಯು ಭಾವುನನ್ನು ತಡೆದು ನಿಲ್ಲಿಸಿ:—"ಭಾವೂರಾಯಾ, ಇಂದಿನ ದೂರದ ಪ್ರವಾಸದಿಂದ ನೀನು ಹೆಚ್ಚಾಗಿ ದಣಿದಿರುತ್ತಿ; ಮೇಲಾಗಿ ಬಂದವನು ತುಸು ಹೊತ್ತು ಸಹ ವಿಶ್ರಮಿಸಿಲ್ಲ; ಕುದುರೆಗಳ ಚಾಕರಿ ಮಾಡಿರುವೆ. ಕಾರಣ ನೀನು ಇನ್ನು ಈ ಬಟ್ಟೆಗಳನ್ನು ತೊಳೆಯುವದಕ್ಕೆ ಹೊರಡದೆ, ಕೈಕಾಲು ಮೋರೆ ತೊಳೆದುಕೊಂಡು ಒಳಗೆ ಊಟಕ್ಕೆ ನಡೆ. ನಾನು ಹೇಗೂ ಬಾವಿಗೆ ನಡೆದಿರುತ್ತೇನೆ. ಈ ಬಟ್ಟೆಗಳನ್ನೆಲ್ಲ ಅಲ್ಲಿಗೆ ಒಯ್ದು ಜಳಜಳ ಮಾಡಿಕೊಂಡು ಬರುತ್ತೇನೆ," ಎಂದಳು.

"ಛೀ-ಛೀ! ಹಂಸಾಬಾಯಿ, ಅದಾಗದು. ಈ ಪ್ರವಾಸವೇನು? ನಮ್ಮ ಜನ್ಮಕ್ಕೇ ಹತ್ತಿದ್ದು. ಅದರಿಂದ ನನಗೆ ದಣುವಿಕೆಯಾಗಿಲ್ಲ; ಅಲ್ಲದೆ ಈಗಲೆ ಮುಚ್ಚಿಂಜೆಯಾಗಿದ್ದು, ಈ ಎಲ್ಲ ಬಟ್ಟೆಗಳನ್ನು ತೊಳೆದುಕೊಂಡು ನೀರು ತರುವದೆಂದರೆ, ನಿಮಗೆ ಬಹಳ ಕತ್ತಲಾಗುವದು; ಆದುದರಿಂದ ನಾನೂ

ಬಾವಿಗೆ ಬರುತ್ತೇನೆ ನಡೆಯಿರಿ," ಎಂದು ಹೊರಟನು,

ಅವರಿಬ್ಬರೂ ಬಾವಿಗೆ ತಲುಪಿದಾಗ ಮುಚ್ಚಿಂಜೆಯು ಮೀರಿತ್ತು. ಬಾವಿಯೊಳಗೆ ಕತ್ತಲವೇ ಕತ್ತಲಾಗಿ ಬಿಟ್ಟಿತ್ತು. ಇಂಥ ಹೊತ್ತಿನಲ್ಲಿ ಊರಿಂದ ತುಸ ದೂರದಲ್ಲಿರುವ ಬಾವಿಗೆ ನೀರಿಗೆಂದು ಆದಾರು ಬರಬೇಕು? ಅಲ್ಲಿ ಯಾರೂ ಇರದ್ದರಿಂದ ಅವರಿಬ್ಬರು ಮಾತನಾಡುತ್ತ ತಮ್ಮ ತಮ್ಮ ಕೆಲಸ ಗಳನ್ನು ನಡೆಸಿದ್ದರು. ಭಾವೂರಾಯನು ಕೊಡವನ್ನು ಬಿಡುತ್ತ ಬಾವಿಯಲ್ಲಿ ಹಣಿಕಿ ಹಾಕಿದನು. ಇಷ್ಟರಲ್ಲಿ ಕರ್ಮ-ಧರ್ಮ ಸಂಯೋಗದಿಂದ ಅವನ ಕಾಲಿಗೆ ಕೊಡದ ಹಗ್ಗವು ಸುತ್ತುವರೆಯಿತು; ಹಾಗು ಅವನು ಆ ಕಟ್ಟೆ-ಗೋಡೆಗಳಿಲ್ಲದ ಬೋಳು ಬಾವಿಯಲ್ಲಿ ಒಮ್ಮೆಲೆ ಬಿದ್ದು ಬಿಟ್ಟನು! ಅದನ್ನು ಕಂಡು ಹಂಸೆಯು:—"ಅಣ್ಣಾ, ಓಡಿ ಬಾ; ಭಾವೂರಾಯನು ಬಾವಿಯಲ್ಲಿ ಬಿದ್ದನು!" ಎಂದು ಭಯಕಂಪಿತ ದನಿಯಿಂದ ಚೀರಿಕೊಂಡಳು. ಅವಳು ೪-೬ ಸಾರೆ ಹಾಗೆ ಚೀರಿಕೊಂಡರೂ ಗಾಳಿಯು ವಿರುದ್ಧ ಗತಿಯಿಂದ ಬೀಸು ತ್ತಿದ್ದರಿಂದ, ಪದಮುಜೆಗಾಗಲಿ ಬೇರೆಯುವರಿಗಾಗಲಿ ಅದು ಕೇಳಿಸಲಿಲ್ಲ. ಕಡೆಗೆ ಹಂಸೆಯೇ ಅಂಜುತ್ತಂಜುತ್ತ ಆ ಬಾವಿಯಲ್ಲಿ ಇಣಿಕಿ ಹಾಕಿದಳು. ಒಳಗೆ ಕತ್ತಲು ಗವಿದಿದ್ದರಿಂದ ಆಕೆಗೇನೂ ಕಾಣಿಸಲಿಲ್ಲ. ನಂತರ ಅವಳು:— "ಭಾವೂರಾಯಾ," ಎಂದು ಕೂಗಿದಳು.

ಕೂಡಲೆ ಭಾವುವು ತತ್ತರಿಸುವ ದನಿಯಿಂದ:—"ಹಂಸಾಬಾಯಿ, ನಾನಿನ್ನು ಸಾಯುವೆನು. ಏನನ್ನಾದರೂ ಹಿಡಕೊಂಡು ನಿಲ್ಲಬೇಕೆಂದರೆ, ಕೈಗೆ ಏನೂ ಸಿಗಲೊಲ್ಲದು," ಎಂದ ಶಬ್ದಗಳನ್ನು ಕೇಳಿ, ಹಂಸೆಯು ಹಿಂದು ಮುಂದಿನ ವಿಚಾರ ಮಾಡುತ್ತ ಕೂಡ್ರದೆ, ಭಾವೂರಾಯನು ಮಡಿ ಮಾಡ ಲಿಕ್ಕೆ ತಂದಿದ್ದ ಎರಡು ದೋತರಗಳನ್ನು ಒಂದಕ್ಕೊಂದು ಗಂಟು ಹಾಕಿ ಬಾವಿ ಯಲ್ಲಿ ಇಳಿಬಿಟ್ಟಳು; ಆದರೆ ಆ ಬಾವಿಯು ಆಳವಾದದ್ದರಿಂದ, ಆ ದೋತರದ ಕೊನೆಯು ಭಾವುನ ಕೈಗೆ ಮುಟ್ಟಲಿಲ್ಲ. ಕಡೆಗೆ ಅವಳು ತಾನು ಉಟ್ಟಿದ್ದ ಸೀರೆಯ ನೀರಿಗೆಗಳನ್ನು ಬಿಚ್ಚಿ ಅತ್ತಕಡೆಯ ಸೆರಗನ್ನೂ ಆ ದೋತರದ ಸೆರ ಗನ್ನೂ ತುದಿಗೆ ತುದಿ ಕಟ್ಟಿ ಇಳಿಬಿಡಹತ್ತಿದಳು; ಹಾಗು:——"ಭಾವೂ ರಾಯಾ, ನಾನು ದೋತರವನ್ನು ಇಳಿಬಿಟ್ಟಿದ್ದೇನೆ. ಸಾವಧಾನದಿಂದ ಹಿಡಿ ದುಕೋ. ಒಮ್ಮೆಲೆ ಜೋಲಿ ಹೊಡೆಯಬೇಡ; ಹಾಗೆ ಮಾಡಿದರೆ ನಾನೂ ಬಾವಿಯಲ್ಲಿ ಬೀಳಬೇಕಾದೀತು" ಎಂದು ಹೇಳಿದಳು.

ಸುದೈವದಿಂದ ಭಾವುನ ಕೈಗೆ ಆ ದೋತರದ ಚುಂಗು ಸಿಕ್ಕಿತು. ಆ ಕೂಡಲೆ ಅವನಿಗೊಳ್ಳೇ ಧೈರ್ಯವುಂಟಾಯಿತು. ಅದು ಒಳ್ಳೇ ಕಠಿಣ ಪ್ರಸಂಗವಿತ್ತು. ಹಂಸೆಯು ಆ ದೋತರವನ್ನಿಳಿಬಿಡಲಿಕ್ಕೆ ಇನ್ನು ಕೆಲಕ್ಷಣ ತಡಮಾಡಿದ್ದರೆ, ಭಾವೂರಾಯನು ಖಂಡಿತವಾಗಿಯೂ ಮುಳುಗಿ ಸಾಯುತ್ತಿದ್ದನು. ಭಾವೂರಾಯನಿಗೆ ಈಸ ಬರುತ್ತಿರಲಿಲ್ಲ. ಅದರಿಂದ ಇಷ್ಟರೊಳಗಾಗಿಯೇ ೪-೬ ತುಂಬಿಗೆ ನೀರು ಅವನ ಹೊಟ್ಟೆಯಲ್ಲಿ ಹೊಕ್ಕಿತ್ತು. ದೋತರವು ಕೈಗೆ ಸಿಕ್ಕೊಡನೆಯೇ ಭಾವುವು:—"ಹಂಸಾಬಾಯೀ, ದೋತರವನ್ನು ಗಟ್ಟಿಯಾಗಿ ಹಿಡಿಯಿರಿ. ಬಾವಿಯ ದಂಡೆಗೆ ಜೀಪಿಗ್ಗಾಲು ಕೊಟ್ಟು ನಿಲ್ಲಿರಿ. ನಾನು ಶಕ್ಯವಾದಷ್ಟು ಉಸಿರು ಬಿಗಿ ಹಿಡಿದು ಭಾರ ಬಿಡದಂತೆ ಹತ್ತಿ ಬರುವೆನು" ಎಂದು ಹೇಳಿ, ಆ ಬಾವಿಯೊಳಗಿಂದ ಏರಿ ಬರಲಾರಂಭಿಸಿದನು. ಆಗಿನ ಮರಾಟರಿಗೆ ಕೋಟೆ-ಕೊತ್ತಳಗಳ ನಿಡಿದಾದ ಗೋಡೆಗಳನ್ನು ಸಹಜವಾಗಿ ಏರಿ ಹೋಗುವ ರೂಢಿಯಿತ್ತಾದ್ದರಿಂದ, ಭಾವೂರಾಯನು ಆ ಬಾವಿಯನ್ನು ಆಯಾಸವಿಲ್ಲದೆ ಏರಹತ್ತಿದನು. ಕಠಿಣ ಪ್ರಸಂಗಗಳಲ್ಲಿ ಅಬಲೆಯರಾದ ಸ್ತ್ರೀಯರು ಬಲವಂತರಾದ ಗಂಡಸರಿಗಿಂತಲೂ ಹೆಚ್ಚು ಎದೆಗಾರರಾಗುತ್ತಾರೆಂಬದು ಸುಳ್ಳಲ್ಲ. ಯಾವದೊಂದು ಮುದ್ರಾನೆಯಂತೆ ಹಂಸೆಯು ಆ ಬಾವಿಯ ಕಟ್ಟೆಗೆ ಕಾಲು ಕೊಟ್ಟು ನಟಿದು ನಿಂತುಕೊಂಡಿದ್ದಳು. ಭಾವೂರಾಯನ ದೇಹದ ಸಂಪೂರ್ಣ ಭಾರವು ಬೀಳತೊಡಗಲು ಅವಳಿಗೆ ಜಡವೆನಿಸಿತು; ಆದರೂ ಅವಳು ಅಂಜಲಿಲ್ಲ; ಕೈಕಾಲುಗೆಡಲಿಲ್ಲ! ಅವಳು ಕ್ಷಣಕಾಲ ಆ ಭಾರವನ್ನು ಒಳ್ಳೇ ಧೈರ್ಯದಿಂದ ಸಹಿಸಿ ನಿಂತುಕೊಂಡಿರಲು, ಚಪಲನಾದ ಭಾವೂರಾಯನು ಶೀಘ್ರದಲ್ಲಿಯೇ ಬಾವಿಯಿಂದ ಏರಿ ಬಂದನು. ಅವನ ಕೂಡ ತುಂಬಿದ ಕೊಡವೂ ಮೇಲೆ ಬಂತು. ಏಕೆಂದರೆ, ಬಾವಿಯಲ್ಲಿ ಬೀಳುವಾಗ ಅದರ ಹಗ್ಗವೂ ಭಾವೂರಾಯನ ಕುತ್ತಿಗೆಗೆ ಸುತ್ತುವರೆದಿತ್ತು. ಜೀವದ ಅಂಜಿಕೆಯಿಂದ ಗ್ರಸ್ತನಾದ ಅವನು ಬಾವಿಯನ್ನು ಏರಿಬರುವಾಗ ಅತ್ತಕಡೆಗೆ ಲಕ್ಷ್ಯವನ್ನೇ ಕೊಟ್ಟಿದ್ದಿಲ್ಲ!

"ಹಂಸಾಬಾಯೀ, ಇಂದು ನೀನು ನನಗೆ ಜೀವದಾನವನ್ನಿತ್ತಿರುತ್ತೀರಿ" ಎಂದು ಭಾವೂರಾಯನು ಮೇಲೆ ಹತ್ತಿಬಂದ ಕೂಡಲೆ ನುಡಿದು, ಆಕೆಯ ಕಾಲು ಮುಟ್ಟಿ ನಮಸ್ಕಾರ ಮಾಡಿ, ಕೃತಜ್ಞತೆಯನ್ನು ತೋರ್ಪಡಿಸಿದನು; ಆದರೆ ತಾನು ಅಂಥ ಸಾಹಸವನ್ನೇನೂ ಮಾಡಿಲ್ಲವೆಂದು ಅವಳಿಗೆ ಅನಿಸಿ

ದರೂ ಭಾವೂರಾಯನು ಮರಳಿ ಬಂದದ್ದನ್ನು ನೋಡಿ ಅವಳು ಪರಮ ಸಂತೆಸ ಗೊಂಡಳು. ನಂತರ ಅವರು ಮನೆಗೆ ಹೊರಟರು. ಬರುವಾಗ ದಾರಿಯಲ್ಲಿ ಹಂಸಯು ಅಂದಿನ ದಿನ ತನಗೆ ಹೇಳಿದ ಆ ಬುಡುಬುಡಿಕನ ಭವಿಷ್ಯವನ್ನು ಭಾವೂರಾಯನಿಗೆ ತಿಳಿಸಿದಳು. ಅದನ್ನು ಕೇಳಿ ಭಾವೂರಾಯನು:—"ಆ ಬುಡುಬುಡಿಕನು ಹೇಳಿದ ಭವಿಷ್ಯವು ನಿಜವಾದರೆ, ನಿಮಗೆ ಬರಬಹುದಾದ ಪ್ರತಿಯೊಂದು ಸಂಕಟ ಪ್ರಸಂಗದಲ್ಲಿ ನಾನು ನಿಮಗೆ ಸಹಾಯಕನಾಗುವೆನು," ಎಂದು ಅಭಿವಚನವನ್ನಿತ್ತನು.

ಮನೆಗೆ ಬಂದ ಬಳಿಕ ಭಾವೂರಾಯನು ಬಾವಿಯ ಬಳಿಗೆ ನಡೆದ ಸಂಗತಿಯನ್ನು ತಿಳಿಸಿದನು. ಅದನ್ನು ಕೇಳಿ ಪದಮಜಿಯು ಹಂಸೆಯ ಕಡೆಗೆ ನೋಡುತ್ತ:--"ತಂಗೀ, ಹಂಸಾ, ನೀನಿಂದು ಒಳ್ಳೇ ಕೆಲಸ ಮಾಡಿದೆ. ಇಗೋ, ನಿನಗೆ ಈ ಪಾರಿತೋಷಕವನ್ನು!" ಎಂದಂದು ತನ್ನ ಜೇಬಿನೊಳಗಿನ ಒಂದು ಅರಿವೆಯ ಗಂಟನ್ನು ಬಿಚ್ಚಿ, ಹಂಸೆಯ ಮುಂದೆ ಸುರುವಿದನು. ಒಳ್ಳೇ ತೇಜಃಪುಂಜಗಳಾದ ದೊಡ್ಡ ದೊಡ್ಡ ಮುತ್ತು-ರತ್ನಗಳ ಆಭರಣಗಳು ಪ್ರಕಾಶಿಸುತ್ತ ಅಲ್ಲಿ ಬಿದ್ದಿದ್ದವು. ಆಭರಣಗಳ ಮೋಹವು ಹೆಣ್ಣು ಮಕ್ಕಳಿಗೆ ಸ್ವಾಭಾವಿಕವಾದದ್ದೇ! ಯಾವದೊಂದು ಆಭರಣಗಳನ್ನು ಕಂಡೊಡನೆಯೇ ಅವರು ಅದನ್ನು ಕೈಯಲ್ಲಿ ತಕ್ಕೊಂಡು, ಅತ್ತಿತ್ತ ಹೊರಳಿಸುತ್ತ ಒಳ್ಳೇ ನಿಷ್ಣಾತ ಚಿನಿವಾಲರಂತೆ ನೋಡಿ ಬೆಲೆಗಟ್ಟ ಹತ್ತುವರು. ಹಂಸೆಯಾದರೂ ಅದರೊಳಗಿನ ಒಂದು ದೊಡ್ಡ ಮುತ್ತಿನ ಕಂಠಾಭರಣವನ್ನು ಎತ್ತಿಕೊಂಡು, "ಎಂಥ ಸುಂದರ ಮುತ್ತುಗಳಿವು!" ಎಂದೆನ್ನುತ್ತ ಪರೀಕ್ಷಿಸಲಾರಂಭಿಸಿದಳು.

ಎಲ್ಲರ ಊಟ-ಪಾಟಗಳಾದ ಬಳಿಕ ಸಾವಿತ್ರಿಯು ಕಳೆದ ಎರಡು ವರ್ಷಗಳ ಸಂಗತಿಯನ್ನು ಪದಮಜಿಗೆ ಸಂಕ್ಷೇಪವಾಗಿ ತಿಳಿಸಿದಳು. ತನ್ನ ತಂದೆಯು ಲೋಣಿಗೆ ಬಂದು ಹೋದ ಸಂಗತಿಯನ್ನು ಕೇಳಿ ಅವನಿಗೆ ಒಂದು ಬಗೆಯಿಂದ ಸಂತೋಷವೂ, ಮತ್ತೊಂದು ಬಗೆಯಿಂದ ಕಡು ವಿಷಾದವೂ ಅನಿಸಿತು; ಯಾಕಂದರೆ, ಕುಲಗೆಟ್ಟ ತಮ್ಮ ತಂದೆಯಲ್ಲಿ ತಮ್ಮಗಳ ವಿಷಯವಾಗಿರುವ ಪ್ರೇಮಾದರಗಳನ್ನು ಕೇಳಿ ಪದಮಜಿಗೆ ಒಂದಿಷ್ಟು ಸಂತೋಷವಾಗುತ್ತಿದ್ದರೆ, ತಮ್ಮ ತಂದೆಯು ಆಗಮನದಿಂದ ಈ ಪ್ರಾಂತದ ಜನರಲ್ಲಿ ತಮ್ಮ ವಿಷಯವಾಗಿ ಉಂಟಾದ ಅಪ್ರಿಯತೆಯು-ಅದರಲ್ಲಿಯೂ ಈ ಮೊದಲು ತಮ್ಮ ಹಂಸೆಯನ್ನು ತನ್ನ ಸೊಸೆಯನ್ನಾಗ ಮಾಡಿಕೊಳ್ಳಲಿಕ್ಕೆ ಒಪ್ಪಿದ್ದ ನಾಗೋಜಿ

ರಾಯನ ತಂದೆಯು "ಇಂಥ ಕುಲಗೇಡಿ ತಂಬೆಯ ಮಗಳು ನಮಗೆ ಬೇಡ!" ಎಂದು ಹೇಳಿಕಳಿಸಿದ ಅಪ್ರಿಯ ಸಂಗತಿಯು ಅವನಲ್ಲಿ ಕಡು ವಿಷಾದವನ್ನುಂಟು ಮಾಡಿತು.

---

## ಹಂಸೆಯ ಸತ್ಯಸ್ವರೂಪ.

ಕೆಲ ಕ್ಷಣಗಳ ನಂತರ ತಾಯಿಯನ್ನು ಕುರಿತು:—"ಅವ್ವಾ, ಹಾಗಾದರೆ ಇನ್ನು ಹಂಸೆಯ ಲಗ್ನದ ಬಗ್ಗೆ ಏನು ಮಾಡಬೇಕು? ನಾಗೋಜಿರಾಯನ ತಂದೆಯಂತೂ ಬೇಡವೆಂದರಷ್ಟೆ? ಇನ್ನು ಈ ವಿಷಯವು ತುಸ ಕಠಿಣವೇ ಕಾಣುತ್ತದೆ."

"ಅಹುದು. ನನಗೂ ಹಾಗೆಯೇ ಕಾಣುತ್ತದೆ; ಆದರೆ ನಮ್ಮ ಹಂಸೆಯು ನಾಗೋಜಿರಾಯರ ಮನಸ್ಸಿಗೆ ಬಂದರೆ, ಅವರು ತಮ್ಮ ಮನೆಯವರನ್ನು ಒಡಂಬಡಿಸಿ ಲಗ್ನವಾಗಬಹುದಾಗಿದೆ. ಅದಾಗದಿದ್ದರೆ ನಿರುಪಾಯವೆಂದು ಸುಮ್ಮನೆ ಕೂಡದ ಹೊರತು ಗತ್ಯಂತರವೇ ಇಲ್ಲ."

"ಅವ್ವಾ, ಇವಳ ದೈವದಲ್ಲಿದ್ದಂತೆ ಆಗುವದು;" ಎಂದು ಪದಮಜಿಯು ನಿಟ್ಟುಸಿರು ಬಿಟ್ಟನು.

"ಇವಳ ದೈವದಲ್ಲೇನು, ವಿಶಿಷ್ಟವೂ ಇದೆ" ಎಂದು ಅಂದು, ಸಾವಿತ್ರೀ ಬಾಯಿಯು ಅಂದಿನ ದಿನ ಹಂಸೆಯು ತಿಳಿಸಿದ ಆ ಬುಡುಬುಡಿಕನ ಭವಿಷ್ಯವನ್ನು ಪದಮಜಿಗೆ ವಿವರಿಸಿ ಹೇಳಿದಳು. ಆ ಭವಿಷ್ಯದ್ವಾಣಿಯನ್ನು ಕೇಳಿ ಪದಮಜಿಯು:--"ಅವ್ವಾ, ಇನ್ನು ಆರು ವರ್ಷಗಳ ವರೆಗೆ ನಮ್ಮ ಹಂಸೆಯು ನಾನಾ ಸಂಕಟಗಳಲ್ಲಿ ಸಿಲುಕಿ ಪಾರಾದ ನಂತರ ಇವಳ ಲಗ್ನವಾಗಿ, ಬಳಿಕ ಇವಳ ಉದರದಲ್ಲಿ ರಾಜಪುತ್ರನು ಜನಿಸಬೇಕಲ್ಲವೆ? ಈ ಭವಿಷ್ಯದಂತೆ ಕೂಡಿ ಬರುವುದಾದರೂ ಹೇಗೆ? ರಾಜಮಾತೆಯಾಗುವ ನಮ್ಮ ಹಂಸೆಯು ಮೊಟ್ಟ ಮೊದಲು ರಾಜಪತ್ನಿಯಾಗಬೇಕಲ್ಲವೆ?" ಎಂದು ಅನ್ನಲು,

"ತಮ್ಮಾ, ಈ ದೇಶಮುಖರನ್ನು ವರಿಸಿದರೆ ತಪ್ಪೇನು? ನಮ್ಮ ದೊಡ್ಡ ಮಹಾರಾಜರಾದರೂ ಮೊದಲು ದೇಶಮುಖರೂ ಪಾಟೀಲರೂ ಆಗಿರಲಿಲ್ಲವೇನು? ಒಂದುವೇಳೆ ಹಾಗೆ ಆದರೂ ಆದೀತು. ಹಂಸೆಯ ಸತ್ಯಸ್ವರೂಪವು ಈಗ ತಿಳಿಯುವದೆಂತು?"

ಹೀಗೆಂದು ಸಾವಿತ್ರೀಬಾಯಿಯು ಹಂಸೆಯೊಡನೆ ಒಳಗೆ ಹೋದಳು. ಭಾವೂರಾಯನು ಕುದುರೆಯ ಚಪ್ಪರಕ್ಕೆ ನಡೆದನು. ನಂತರ ಪದಮಜಿಯು ಸಾತಾರೆಯ ವರ್ತಮಾನವೇನೆಂದು ನಾಗೋಜಿಗೆ ಕೇಳಿದನು. ಅವನು ಅತ್ತ ಕಡೆಯ ಸುದ್ದಿಯನ್ನು ಈ ಪ್ರಕಾರ ಹೇಳತೊಡಗಿದನು –

''ಸಾತಾರೆಯ ಸುಭೇದಾರನಾದ ಪ್ರಯಾಗಜಿಯು ಬಹು ಧೈರ್ಯ ಶಾಲಿಯು; ದೊಡ್ಡ ಮಹಾರಾಜರ ಕಾಲದಿಂದ ಆತನು ಹೆಸರುವಾಸಿಯಾಗಿರುವನು. ಅಂತೆಯೇ ಔರಂಗಜೇಬ ಬಾದಶಹನು ೪ ತಿಂಗಳುಗಟ್ಲೆ ದುರ್ಗಕ್ಕೆ ಶಹಪಸ್ತ್ರತ್ತರೂ, ಆ ಕಡುಗಲಿಯು ಕೊಂಚವೂ ಅಂಜಲಿಲ್ಲ. ಒತ್ತಟ್ಟಿಗೆ ಸ್ವತಃ ಬಾದಶಹನು ತನ್ನ ಅಪಾರ ದಂಡಿನೊಡನೆ ಮುತ್ತಿಗೆಯನ್ನು ಹಾಕಿದನು. ಮತ್ತೊತ್ತಟ್ಟಿಗೆ ಶಹಜಾದಾ ಅಜಿಮುಶಹನು ತನ್ನ ದಂಡಿನೊಡನೆ ಸಿದ್ಧವಾಗಿದ್ದನು. ಉಳಿದ ಎರಡು ಕಡೆಗೆ ತರ್ಬಿಯತ್‌ಖಾನ್ ಮತ್ತು ಸರ್ಜಾಖಾನ್‌ರು ಗುರಿಹೂಡಿ ಕುಳಿತಿದ್ದರು. ಹೀಗೆ ನಾಲ್ಕೂ ಕಡೆಗಳಿಂದ ಆ ದುರ್ಗದ ಮೇಲೆ ದಾಳಿ ನಡೆದಿದ್ದರೂ ಆ ಧೀರ ಸುಭೇದಾರನು ಏಕಪ್ರಕಾರವಾಗಿ ಕಾದುತಲಿದ್ದನು; ಹಾಗು ಕೋಟೆಯ ಮೇಲಿಂದ ವೈರಿಗಳ ಮೇಲೆ ದೊಡ್ಡ ದೊಡ್ಡ ಕಲ್ಲುಗಳನ್ನು ಉರುಳಿಸುತ್ತಲೂ, ತೋಫಿನ ಗುಂಡುಗಳನ್ನು ಹಾರಿಸುತ್ತಲೂ ಅವರನ್ನು ಜೇರಿಗೆ ತರುತ್ತಿದ್ದನು. ದುರ್ಗದ ಸುತ್ತುಮುತ್ತಲಿನ ೨೦-೩೦ ಹರದಾರಿಯ ವರೆಗಿನ ಪ್ರದೇಶವನ್ನು ಆತನು ಸುಡಿಸಿ ಸೂರೆಗೊಂಡದ್ದರಿಂದ, ಬಾದಶಹನ ದಂಡಿನ ಕುದುರೆಗಳಿಗೆ ಹಿಡಿ ಹುಲ್ಲು ಕೂಡ ದೊರೆಯದಾಯಿತು. ಬೇರೆ ಪ್ರದೇಶಗಳಿಂದ ಬಾದಶಹನ ಛಾವಣಿಗೆ ಬರುತ್ತಿದ್ದ ಧಾನ್ಯ ಮುಂತಾದವುಗಳನ್ನು ಮರಾಟರ ಟೋಳಿಗಳು ನಡುವೇ ಎತ್ತಿ ಹಾಕಿ ಬಿಡುತ್ತಿದ್ದವು. ಸಾತಾರೆಯ ಕೋಟೆಯಲ್ಲಿ ನಾಲ್ಕಾರು ತಿಂಗಳುಗಳ ವರೆಗೆ ಸಾಕಾಗುವಷ್ಟು ಸಿಧಾ-ಸಾಮುಗ್ರಿಯು ಶೇಖರಿಸಲ್ಪಟ್ಟಿತ್ತು; ಅಲ್ಲದೆ ಪರಳಿಯ ಕಿಲ್ಲೆದಾರನಾದ ಪರಶುರಾಮಪಂತನು ಭೂಗರ್ಭ ಮಾರ್ಗದಿಂದ ಸಾತಾರೆಯ ವರೆಗೆ ಆಗಾಗ್ಗೆ ಸಿಧಾ-ಸಾಮುಗ್ರಿಗಳನ್ನು ತಲುಪಿಸುತ್ತಲೇ ಇದ್ದನು. ಸಾತಾರೆಯ ಸುಭೇದಾರನು ನಿಕರದಿಂದ ಕಾದತೊಡಗಲು, ಬಾದಶಹನು ಯೋಚನೆಗೊಳಗಾದನು, ಆದರೆ ಬಾದಶಹನ ಚತುರ ಸೇನಾನಿಯಾದ ತ[illegible]ಖಾನನು ದುರ್ಗದ [illegible]ಯ [illegible]ನ ಕೆಳಗೆ ಎರಡು ದೊಡ್ಡ ಸುರಂಗಗಳನ್ನು ತೋಡಿಸಿದನು. ಈ ಸುದ್ದಿಯು ಛತ್ರಪತಿಗೆ

ತಿಳಿಯಿತು. ಆ ಸುರಂಗಗಳು ಹೇಗೆ ಹಾರುತ್ತವೆಂಬದನ್ನು ನೋಡುವ ದಕ್ಕೆಂದು ಬಾದಶಹನು ಸ್ವತಃ ಆ ಬುರುಜಿನ ಕಡೆಗೆ ಬಂದನು. ಸುರಂಗಕ್ಕೆ ಬತ್ತಿಯನ್ನು ಕೊಟ್ಟರು. ಕೂಡಲೆ ಭೂಪ್ರ್ಯಾಕಾಶದಲ್ಲಿ ಹೊಗೆ ತುಂಬಿ "ಧಬ್ಬ" ಎಂಬ ಬಹು ದೊಡ್ಡ ಸಪ್ಪಳವಾಯಿತು. ಆ ಕೂಡಲೆ ಸಾತಾರೆಯ ದುರ್ಗದ ಒಂದು ಭಾಗವು ಬಾಲಕಿಲ್ಲೆಯೊಡನೆ ಆಕಾಶದಲ್ಲಿ ಹಾರಿ ಕೋಟೆಯೊ ಳಗೆ ಒಂದು ಬಿದ್ದಿತು! ಅದರ ಕೆಳಗೆ ಸಿಕ್ಕ ಅನೇಕ ಜನ ದುರ್ಗವಾಸಿಗಳು ಪರಂಧಾಮವನ್ನು ಸೇರಿದರು!! ಕೂಡಲೆ ದುರ್ಗದಲ್ಲಿ ಹಾ! ಹಾ! ಕಾರ ವೆದ್ದಿತು. ಅವನ್ನು ಕಂಡು ಶತ್ರುಗಳು ದುರ್ಗವನ್ನು ಸೇರಲಾರಂಭಿಸಿದರು. ಅಷ್ಟರಲ್ಲಿ ಮತ್ತೊಂದು ಸುರಂಗವು ಹಾರಿತು. ಆ ಸುರಂಗವಾದರೂ ಮೊದಲಿನಂತೆ ಹಾರಿ ಕೋಟೆಯನ್ನು ನಾಶಗೊಳಿಸುವದೆಂದು ವೈರಿಗಳು ಅನು ಮಾನಿಸಿದ್ದರು; ಆದರೆ ದೈವದುರ್ವಿಪಾಕದಿಂದ ವಿಪರೀತವಾಗಿ ಪರಿಣಮಿಸಿತು. ಆ ಎರಡನೇ ಸುರಂಗವೂ ಬಹು ವೇಗದಿಂದ ಹಾರಿ, ಆ ಗುಡ್ಡದ ಒಂದು ಭಾಗವನ್ನು ಎತ್ತಿ ಒಯ್ದು ಬಾದಶಹನ ದಂಡಿನ ಮೇಲೆ ಅಪ್ಪಳಿಸಿತು. ಅದರ ಕೆಳಗೆ ೨-೨॥ ಸಾವಿರ ಮಂಡಾಳುಗಳು ಸಿಕ್ಕು ಪ್ರಾಣಕ್ಕೆರವಾದರು! ದುರ್ಗದ ಮೇಲೂ ಕೆಲವು ಕಲ್ಲು-ಮಣ್ಣುಗಳು ಹಾರಿ ಬಂದು ಬಿದ್ದಿದ್ದವು; ಆದರೆ ಅವು ತೀರ ಸ್ವಲ್ಪ.

ಆ ಅನಾಹುತವು ಶಾಂತವಾದ ಮೇಲೆ ಪ್ರಯಾಗಜಿಯು ಯಾರ ಕಣ್ಣಿಗೂ ಬೀಳಲಿಲ್ಲ. ಶೋಧದ ನಂತರ ಸುಭೇದಾರನ ದೇಹವು ಒಂದು ಕಡೆಯ ಮಣ್ಣಿನಲ್ಲಿ ಹೂತು ಪ್ರಾಣಕ್ಕೆರವಾದದ್ದು ತಿಳಿಯಿತು. ಆ ಖೇದಕರ ಸಂಗತಿಯು ಹಾ! ಹಾ! ಅನ್ನುವಷ್ಟರಲ್ಲಿ ವೈರಿಗಳಿಗೆ ಗೊತ್ತಾಯಿತು. ತನ್ನ ಅತ್ಯಲ್ಪ ದಂಡಿನೊಡನೆ ಇನ್ನು ಬಾದಶಹನಕೂಡ ಕಾದುತ್ತ ಪ್ರಾಣಹಾನಿ ಮಾಡಿಕೊಳ್ಳುವದಕ್ಕಿಂತ, ಅವನಿಗೆ ದುರ್ಗವನ್ನೊಪ್ಪಿಸಿ, ದುರ್ಗದಿಂದ ಹೊರ ಬಿದ್ದು, ಮತ್ತೆ ತನ್ನ ಕಾರಸ್ಥಾನವನ್ನು ಹೂಡಬೇಕೆಂದು ಯೋಚಿಸಿ, ಪರಶು ರಾಮಪಂತ ಪ್ರತಿನಿಧಿಯು ಸಾತಾರೆಯನ್ನು ಬಿಟ್ಟುಕೊಟ್ಟನು. ಇದಿರಲಿ. ಪದಮಜೀ, ನಿಮ್ಮ ಕಡೆಯ ಸುದ್ದಿಯೇನು? ನಾನು ಸೇನಾಪತಿ ಧನಾಜಿ ರಾಯನ ಪಥಕದಲ್ಲಿರುವಾಗ ಹೇಗೆ ಧುಮಶ್ಚಕ್ರಿಯು ನಡೆದಿತ್ತೋ, ಈಗಲೂ ಹಾಗೆಯೇ ನಡೆದಿರುವದೇನು?"

ಪದಮಜಿ:—"ಅದರಲ್ಲಿ ಕೊಂಚವೂ ಹೆಚ್ಚು ಕಡಿಮೆಯಾಗಿರುವದಿಲ್ಲ.

ಬಾದಶಹನನ್ನು ರೇಗಿಗೆಬ್ಬಿಸಿ, ನಮ್ಮ ದೇಶದಿಂದ ಓಡಿಸಿಬಿಡಬೇಕೆಂದೇ ನಮ್ಮ ಸೇನಾಪತಿಗಳ ಮುಖ್ಯ ಧ್ಯೇಯವಾಗಿರುತ್ತದೆ. ಅವರ ಆಜ್ಞೆಯ ಮೇರೆಗೆ ನಾನು ಇನ್ನು ೧-೨ ದಿನಗಳಲ್ಲೇ ಹೋಗಿ ನನ್ನ ಚಾಕರಿಗೆ ಹಾಜರಾಗಬೇಕು. ಅದರಲಿ ನಾಗೋಜಿ, ನೀನು ನಮ್ಮ ಹಂಸೆಯನ್ನು ವರಿಸುವ ಬಗ್ಗೆ ಏನು ಯೋಚನೆ ಮಾಡಿರುವೆ?"

ನಾಗೋಜಿ:—"ನಮ್ಮ ಅಜ್ಜ-ತಂದೆಯವರು ಕೊಟ್ಟ ಉತ್ತರವು ತಿಳಿಯಿತು. ನಾನು ನಮ್ಮ ಮನೆಗೆ ಹೋಗಿ ನನ್ನ ಅಜ್ಜಿಯ ಮುಖಾಂತರ ಪ್ರಯತ್ನ ನಡೆಸುವೆನು. ನನ್ನ ಅಜ್ಜಿಯು ನನ್ನನ್ನು ಹೆಚ್ಚಾಗಿ ಪ್ರೀತಿಸುವಳು. ಅವಳು ನನ್ನ ಮಾತನ್ನು ಮೀರಿ ನಡೆಯಲಾರಳು. ಅವಳಿಂದ ಅಜ್ಜನಿಗೆ ಹೇಳಿಸಿಬಿಟ್ಟೆನೆಂದರೆ ಕೆಲಸವು ಆಗಿ ಬಿಡುವದು. ಆ ಬಗ್ಗೆ ನೀನು ನಿರ್ಧಾಸ್ತನಾಗಿರು."

ಪವನುಜಿಯು ಮರಳಿ ತನ್ನ ದಂಡಿಗೆ ಹೊರಟು ಹೋದ ಬಳಿಕ ನಾಗೋಜಿಯು ೧-೨ ದಿನಗಳ ಅಂತರದಿಂದ ಲೋಣಿಗೆ ಬರಹತ್ತಿದ್ದನು. ಹಂಸೆಯು ಆತನ ದಾರಿಯನ್ನೇ ಎದುರು ನೋಡುತ್ತಿದ್ದಳು. ನಾಗೋಜಿ--ಹಂಸೆಯರು ಮಾತಾಡುತ್ತ ನಿಂತರೆಂದರೆ, ಸಾವಿತ್ರೀಬಾಯಿಯು ಬೇಕಂತಲೇ ಅಲ್ಲಿಂದ ಬೇರೆ ಕಡೆಗೆ ಹೊರಟು ಹೋಗುತ್ತಿದ್ದಳು; ಯಾಕಂದರೆ, ನಾಗೋಜಿಯನ್ನೇ ಅವಳು ತನ್ನ ಭಾವೀ ಜಾಮಾತನೆಂದು ತಿಳಕೊಂಡಿದ್ದಳು. ನಾಗೋಜಿಯು ಹೊರಟು ಹೋದ ಬಳಿಕ ಅವಳು ಹಂಸೆಯನ್ನು ಕುರಿತು:-- "ಹಂಸಾ, ನಾಗೋಜಿರಾಯರು ತಮ್ಮ ಮನೆಯ ಹಿರಿಯರ ಸಮ್ಮತಿಯನ್ನು ಪಡೆದರೇನು? ಈ ಮಾತು ತೆಗೆದಾಗ ಅವರ ಮನೆಯವರು ಏನಂದರಂತೆ? ಲಗ್ನದ ಮುಹೂರ್ತವು ಎಂದಿಗಿಡುವರಂತೆ?" ಎಂದು ಪ್ರಶ್ನೆ ಮಾಡುವಳು; ಆದರೆ ಹಂಸೆಗೆ ಆ ಪ್ರಶ್ನೆಗಳಲ್ಲೊಂದಕ್ಕೂ ಸರಿಯಾಗಿ ಉತ್ತರಕೊಡಲಿಕ್ಕೆ ಬರುತ್ತಿರಲಿಲ್ಲ. "ಎಲೆ. ಇಷ್ಟು ಅವಸರವೇಕೆ? ಕಾಲವೊದಗಿ ಬಂದರೆ ಎಲ್ಲವೂ ಯಥಾಸ್ಥಿತವಾಗಿ ಆಗುತ್ತದೆ. ನಮ್ಮ ಮನೆಯ ಜನರು ಅನ್ನುವದೇನು? ನಾನು ನಿನ್ನನ್ನೇ ವರಿಸುವೆನೆಂದು ಹೇಳಿದ ಮೇಲೆ, ನನ್ನ ಮನಸ್ಸಿನ ವಿರುದ್ಧ ಅದಾರು ನಡೆಯುವರು? ಲಗ್ನದ ಬಗ್ಗೆ ನೀನು ಕೊಂಚವೂ ಆಲೋಚಿಸಬೇಡ. ದೇಶದೊಳಗಿನ ಈ ಗೊಂದಲವು ತುಸ ಶಾಂತವಾಗಲಿ; ಅಂದರೆ ಆ ಕೂಡಲೆ ಎಲ್ಲವೂ ನಿನ್ನ ಮನಸ್ಸಿನಂತೆ ಆದೀತು?" ಎಂದು ನಾಗೋಜಿಯು ಹಂಸೆಯ

ಪ್ರಶ್ನೆಗೆ ಹಾರಿಕೆಯ ಉತ್ತರ ಕೊಡುತ್ತ ದಿನಗಳೆಯುತ್ತಿದ್ದನು. ಈ ವಿಚಿತ್ರ ಬಗೆಯ ಉತ್ತರದ ಮೂಲಕ ನಾಗೋಜಿರಾಯನ ಮನಸ್ಸಿನಲ್ಲಿ ಹಂಸೆಯನ್ನು ಲಗ್ನವಾಗುವದಿದೆಯೋ ಇಲ್ಲವೋ ಎಂಬ ಬಗ್ಗೆ ಸಹಜವಾಗಿಯೇ ಸಂಶಯ ಬರುತ್ತಿತ್ತು; ಆದರೆ ಅಂಧಪ್ರೇಮದ ಮೂಲಕ ಹಂಸೆಗೂ ಆಕೆಯ ತಾಯಿಗೂ ಆ ಸಂಶಯವು ಬಹು ದಿನಗಳ ವರೆಗೆ ಉಂಟಾಗಲಿಲ್ಲ.

ಇಂದು ಹಂಸೆಯು ತನ್ನ ಪ್ರಿಯಕರನ ಬರವನ್ನು ಒಳ್ಳೇ ಉತ್ಕಂಠೆಯಿಂದ ನೋಡುತ್ತ ಬಾಗಿಲಲ್ಲಿ ನಿಂತುಕೊಂಡಿದ್ದಳು. ಇಂದು ಅವರು ಬಂದ ಕೂಡಲೆ ಲಗ್ನದ ಬಗ್ಗೆ ಖಂಡಿತವಾಗಿ ಕೇಳಿ ಗೊತ್ತುಮಾಡಿಕೊಳ್ಳಬೇಕೆಂದು ಅವಳು ನಿಶ್ಚಯಿಸಿಕೊಂಡಿದ್ದಳು. ಇಷ್ಟರಲ್ಲಿ ನಾಗೋಜಿರಾಯರ ಕುದುರೆಯು ಖೇಡದ ಕಡೆಯಿಂದ ಒಳ್ಳೇ ವೇಗವಾಗಿ ಬರುತ್ತಿರುವದು ಕಾಣಿಸಿತು. ಲೋಣಿಯ ಊರ ಹೊರಗಿನ ಸೀ ನೀರಿನ ಬಾವಿಯು ಖೇಡದ ದಾರಿಯಲ್ಲೇ ಇದ್ದುದರಿಂದ, ನೀರಿಗೆ ಬರುತ್ತಿದ್ದ ಹೆಂಗಳೆಯರು ನಾಗೋಜಿ-ಹಂಸೆಯರ ಪ್ರತಿನಿತ್ಯದ ಆ ಸಮ್ಮೇಲನವನ್ನು ಕಂಡು, ಅವರ ಬಗ್ಗೆ ತಮ್ಮ ತಮ್ಮೊಳಗೆ ನಾನಾ ಬಗೆಯಾಗಿ ಚರ್ಚಿಸುತ್ತಿದ್ದರು. ಅದರಂತೆ ಈ ದಿನವಾದರೂ ಬಾವಿಯ ಮೇಲೆ ನಿಂತಿದ್ದ ಹೆಂಗಸರು ಭರದಿಂದ ಬರುವ ನಾಗೋಜಿರಾಯನ ಆ ಕುದುರೆಯನ್ನೂ, ಅವನ ಮಾರ್ಗಪ್ರತೀಕ್ಷೆ ಮಾಡುತ್ತ ತನ್ನ ಮನೆಯ ಬಾಗಿಲಲ್ಲಿ ಬಹಳ ಹೊತ್ತಿನಿಂದ ನಿಂತುಕೊಂಡಿದ್ದ ಹಂಸೆಯನ್ನೂ ಕಂಡು ಗಹಗಹಿಸಿ ನಗುತ್ತ ತಮ್ಮ ಚರ್ಚೆಗೆ ಪ್ರಾರಂಭಿಸಿದರು.

ಕುದುರೆಯು ಮನೆಯ ಬಳಿಗೆ ತಲುಪುತ್ತಲೆ ನಾಗೋಜಿಯು ಒಳ್ಳೇ ಆತ್ಮೀಯತೆಯಿಂದ:—"ನೀನು ಇಲ್ಲಿ ನಿಂತುಕೊಂಡು ಬಹಳ ಹೊತ್ತಾಯಿತೇನು? ನಾನು ಇಂದು ದಿನಕ್ಕಿಂತಲೂ ಬೇಗ ಬಂದೆನು. ಇಂದು ಇಲ್ಲಿಗೆ ಬರಬಾರದೆಂದೇ ಯೋಚಿಸಿದ್ದೆನು; ಆದರೆ ನಿನಗೆ ನಿರಾಶೆಯುಂಟಾಗಬಾರದೆಂದು ಬಂದೆನು. ನಾನು ಬರದಿದ್ದರೆ ನಿನಗೆ ಖಂಡಿತವಾಗಿಯೂ ಕೆಡಕೆನಿಸುತ್ತಿದ್ದಿತೇ?" ಎಂದು ಪ್ರಶ್ನೆ ಮಾಡಲು,

ಹಂಸೆಯು:--"ಕೆಡಕೆನಿಸದೇನು ಮಾಡೀತು? ನೀವು ನಿಮ್ಮ ಮನಸ್ಸಿಗೇ ಕೇಳಿಕೊಳ್ಳಿರಿ; ಅಂದರೆ ಉತ್ತರವೇನು ಬರುವದೆಂಬದು ತಿಳಿಯುವದು."

"ನನಗೆ ಹಾಗೆ ಅನಿಸಿದ್ದರಿಂದಲೇ ನಾನು ಇಷ್ಟು ಲಗುಬಗೆಯಿಂದ ಹೊರಟು ಬಂದೆನು."

"ಅದಿರಲಿ. ಅವ್ವನಂತೂ ಬಹು ಅವಸರ ಪಡಿಸುತ್ತಾಳೆ; ಆದರೆ ನೀವು ಮಾತ್ರ ಆ ಬಗ್ಗೆ ಏನೊಂದೂ ಉಸುರುವದಿಲ್ಲ. ಇದರಿಂದ ನಾನು ಕಡು ವಿಪತ್ತಿಗೆ ಗುರಿಯಾಗಬೇಕಾಗಿದೆ."

"ಲಗ್ನದ ಬಗ್ಗೆಯಲ್ಲವೆ? ನೀನು ಇಷ್ಟು ಉತಾವಳಿಯೇಕಾಗಿರುವೆ? ವೇಳೆಯೊದಗಿ ಬಂದ ಕೂಡಲೆ ತನ್ನಷ್ಟಕ್ಕೆ ತಾನೇ ಆಗಿ ಹೋಗುವದು. ಲಗ್ನವಾದರೆ ನಿನ್ನೊಡನೆಯೇ ಆಗುವೆನೆಂದು ನಾನು ಪಣ ತೊಟ್ಟಿದ್ದೇನೆ. ಅಂದಬಳಿಕ ನೀನು ಇಷ್ಟು ಅಧೀರಳಾಗುವ ಕಾರಣವೇನು?"

"ನಿಮ್ಮ ಮಾತಿನಲ್ಲಿ ನನ್ನ ವಿಶ್ವಾಸವಿದೆ; ಆದರೆ ಅವ್ವನಿಗೆ ನಿಶ್ಚಿತ ಮುಹೂರ್ತವನ್ನು ತಿಳಿಸಬೇಕಾಗಿದೆ. ಕಾರಣ ಅದನ್ನು ನೀವು ಇಂದು ನನಗೆ ತಿಳಿಸಲೇ ಬೇಕು."

"ಹಾಗಾದರೆ ನೀನು ಇನ್ನೂ ಕೆಲವು ವರ್ಷ ನಿರೀಕ್ಷಿಸಬೇಕಾಗುತ್ತದೆ. ನಿನ್ನ ಸಮ್ಮತಿಯಿದೆಯೇ ಅದಕ್ಕೆ?"

"ಅದೇಕೆ? ಕಾರಣವೇನೆಂಬದನ್ನು ತಿಳಿಸಬಾರದೇ?"

"ಆ ಸಂಗತಿ ತಿಳಿದರೆ ನಿನಗೆ ಕೆಡಕೆನಿಸುವದು; ಆದರೆ ನಿನ್ನ ಆಗ್ರಹದ ಮೂಲಕ ಹೇಳಲೇ ಬೇಕಾಗುವದು. ನಾನು ನಿನ್ನನ್ನು ವರಿಸುವ ಬಗ್ಗೆ ನಮ್ಮ ಮನೆಯವರಾರೂ ಸಮ್ಮತಿಸುವದಿಲ್ಲ. ಅದರಿಂದ ಆ ಹಳೆಯ ಜನ ರೆಲ್ಲ ಮಣ್ಣು ಪಾಲಾಗುವ ವರೆಗೆ, ಅಂದರೆ ಇನ್ನೂ ಆರು ವರ್ಷಗಳ ವರೆಗೆ ನೀನು ನಿರೀಕ್ಷಿಸಬೇಕಾಗುವದು."

"ಆರು ವರ್ಷಗಳೇ ಏಕೆ?"

"ಏಕೆಂದರೆ, ನಿನ್ನ ವಿಷಯದ ಭವಿಷ್ಯವೇ ಹಾಗಿದೆಯಲ್ಲವೆ? ಅಂದ ಬಳಿಕ ನೀನು ಅದುವರೆಗೆ ನಿರೀಕ್ಷಿಸುತ್ತಿರುವೆಯೆಂದು ನನ್ನ ಖಾತ್ರಿಯಿದೆ."

"ಆ ಮೇಲಾದರೂ ನೀವು ನನ್ನನ್ನು ಲಗ್ನವಾಗುವಿರೆನ್ನುವ ಬಗ್ಗೆ ಖಾತ್ರಿ ಯೇನು? ನಿಮ್ಮ ಮನೆಯವರ ಅಭಿಪ್ರಾಯವಾದರೂ ಏನಿದೆ?"

"ಅವರ ಅಂಬೋಣವು ಮತ್ತೇನಿರಬೇಕು? ನಿನ್ನ ತಂದೆಯು ಕುಲಗೆಟ್ಟು ಮುಸಲ್ಮಾನನಾದುದರಿಂದ ಅಂಥ ಕುಲಗೇಡಿಯ ಮಗಳು ನಮಗೆ ಬೇಡೆಂದು ಅನ್ನುತ್ತಾರೆ; ಆದರೆ ಹಂಸಾ, ಅವರ ಮಾತಿರಲಿ. ನಾವು ಇನ್ನು ಆರು ವರ್ಷ ಗಳ ವರೆಗೆ ತಡೆಯುವದೆಂದರೆ ಆಗದ ಮಾತು. ಅದರಿಂದ ನಾವು ಈಗ ಹೇಗೂ ಒಬ್ಬರನ್ನೊಬ್ಬರು ಮನಸಾ ವರಿಸಿಯೇ ಬಿಟ್ಟಿರುತ್ತೇವೆ; ಅಂದಬಳಿಕ

ನಾವೀರ್ವರೂ ಕೂಡಿ ಇರಲಿಕ್ಕೆ ತಪ್ಪೇನು? ನಾವು ಕೂಡಿ ಇರಹತ್ತಿದ ಕೂಡಲೆ ನಾನು ಬೇಗನೆ ಬಾದಶಹನ ದಂಡಿಗೆ ಸೇರಿ ಸಾಕಷ್ಟು ಜಹಗೀರು ದೊರಕಿಸುತ್ತೇನೆ. ಆ ಮೇಲೆ ನಾವು ಸುಖದಿಂದ ಕಾಲ ಕಳೆಯೋಣ.''

“ಹಾಗೆಂದೂ ಆಗದು” ಎಂದೆನ್ನುತ್ತ ಹಂಸೆಯು ಭರದಿಂದ ಮನೆಯನ್ನು ಸೇರಿದಳು; ಹಾಗು ಅಲ್ಲಿಂದಲೇ ನಾಗೋಜಿಯನ್ನು ಕುರಿತು ಒಳ್ಳೇ ತ್ವೇಷದಿಂದ:--''ನಾಗೋಜಿರಾಯರೇ, ಇದೇ ಏನು ನಿಮ್ಮ ಗುಪಿತವು? ನೀವು ನನ್ನ ಅಣ್ಣನ ಸ್ನೇಹಿತರಾದುದರಿಂದ, ನೀವಾದರೂ ಅವನಂತೆಯೇ ಸಚ್ಛೀಲರೂ ಸ್ವಾಭಿಮಾನಿಗಳೂ ಇರಬಹುದೆಂದು ತಿಳಿದಿದ್ದೆನು; ಆದರೆ ನಾಗೋಜಿರಾಯರೇ, ನಿಮ್ಮ ಈ ಹೀನಬಗೆಯ ವಿಚಾರಗಳನ್ನು ಕೇಳಿ ನಿಮ್ಮನ್ನು ಇಲ್ಲಿಗೆ ಬರಗೊಟ್ಟದ್ದೇ ನಮ್ಮ ತಪ್ಪಾಗಿದೆ; ನೀವು ಮನೆತನಸ್ಥ ದೇಶಮುಖರಾಗಿರುತ್ತೀರಿ. ನನ್ನ ಭ್ರಮವು ಬೇಗನೆ ನಿರಸನವಾಯಿತು. ಇಲ್ಲವಿದ್ದರೆ ನನ್ನಂತಹ ಲೋಕದ ಅನುಭವವಿಲ್ಲದ ಬಾಲಿಕೆಯನ್ನು ನೀವು ಯಾವ ಮೆಟ್ಟಿಗೆ ಮುಟ್ಟಿಸುತ್ತಿದ್ದಿರೋ ಅದಾರು ಹೇಳಬೇಕು? ನಾಗೋಜಿರಾಯರೇ, ಹೊರಡಿರಿ ಇಲ್ಲಿಂದ. ಬಾದಶಹನ ಕಡೆಗೆ ಹೋಗಿ, ಬಹು ದೊಡ್ಡ ಜಹಗೀರು ದೊರಕಿಸಿಕೊಳ್ಳಿರಿ; ಹಾಗು ಯಾವಳೊಬ್ಬ ಬೀಬಿಯನ್ನು ಮದುವೆಯಾಗಿ ಅಧಃಪಾತ ಮಾಡಿಕೊಳ್ಳಿರಿ. ಈ ಜಾತಿವಂತ ಮರಾಟರ ಹಂಸೆಯು ನಿಮ್ಮಂತಹ ದೊಡ್ಡ ಆದರೆ, ಮೂರ್ಖ-ದೇಶಮುಖರನ್ನು ಕೈಕಾಲೊಳಗೆ ಹರಿದಾಡುವ ಕ್ಷುಲ್ಲಕ ಜಂತುಗಳಂತೆ ತಿಳಿಯುವದು. ತಿಳಿಯಿತೇ? ನನ್ನ ತಾಯಿಯು ಪ್ರತ್ಯಕ್ಷ ತನ್ನ ಕುಲಗೇಡಿ ಗಂಡನನ್ನೇ ತ್ಯಜಿಸಿ, ಸ್ವಾಭಿಮಾನ ಸ್ವಧರ್ಮಾಭಿಮಾನಗಳ ಶಿಕ್ಷಣವನ್ನು ನನಗೆ ಹೇಗೆ ಕೊಟ್ಟಿರುತ್ತಾಳೆಂಬದನ್ನು ನೀವು ಮರೆತಿರೋ ಏನು? ನಿಮಗೆ ಸ್ವಂತದ ಅಭಿಮಾನವೇ ಇಲ್ಲ. ಅಂದಮೇಲೆ ಸ್ವಧರ್ಮ-ಸ್ವರಾಜ್ಯಗಳ ಅಭಿಮಾನವು ನಿಮಗೆಲ್ಲಿಂದ ಬರಬೇಕು? ನಡೆ, ನಾಗೋಜೀ, ಪರಮ ಘಾತುಕೇ! ಇನ್ನು ಮೇಲೆ ಇಲ್ಲಿಗೆ ಬರುವ ಶ್ರಮವಹಿಸಬೇಡ ನಡೆ. ಈ ಹಂಸೆಯು ಇನ್ನು ಮುಂದೆ ನಿನ್ನ ಕಣ್ಣಿಗೆ ಸಹ ಬೀಳಲಾರಳು'' ಎಂದೆಂದು ಆಕೆಯು ನಾಗೋಜಿಗೆ ಕಾಣದಾದಳು.

ಹಂಸೆಯು ಒಳ್ಳೇ ತವಕದಿಂದ ನಡೆದಳು; ಆದರೆ ಬಾಗಿಲ ಮರೆಗೆ ಹೋದವಳೇ ಗಕ್ಕನೆ ನಿಂತುಬಿಟ್ಟಳು. ಯಾಕಂದರೆ, ಇನ್ನು ತನ್ನ ತಾಯಿಯು ಏನಾಯಿತೆಂದು ಕೇಳಿದರೆ ಅವಳಿಗೆ ಏನೆಂದು ಹೇಳಬೇಕೆಂಬುದು ಹಂಸೆಗೆ

ಒಮ್ಮೆಲೆ ಹೊಳೆಯಲಿಲ್ಲ. ನಾಗೋಜಿರಾಯನಿಗೆ ಹೀಗೆ ಮಂಗಳಾರುತಿ ಮಾಡಿ ಕಳಿಸಿದ್ದರಲ್ಲಿ ತನ್ನಿಂದ ತಪ್ಪೇನಾದರೂ ಆಗಿರುವದೆ? ಎಂದು ಅವಳು ಕ್ಷಣಕಾಲ ಆಲೋಚಿಸಿದಳು; ಆದರೆ ಅದರಲ್ಲಿ ತನ್ನ ತಪ್ಪು ಏನೂ ಆಗಿಲ್ಲವೆಂದು ತನ್ನ ಖಾತ್ರಿಯಾಗಲು, ಅವಳು ಹಾಗೆಯೇ ಒತ್ತಲ ಬಾಗಿಲ ಬಳಿಗೆ ನಡೆದಳು. ಅಷ್ಟರಲ್ಲಿ "ಹಂಸಾಬಾಯಿ," ಎಂದು ಯಾರೋ ತನ್ನನ್ನು ಕೂಗುತ್ತಿರುವಂತೆ ಅವಳಿಗೆ ಕೇಳಿಸಿತು. ಅವಳು ಒತ್ತಲ ಬಾಗಿಲಲ್ಲಿ ಹಣಿಕಿ ನೋಡುವಷ್ಟರಲ್ಲಿ ಭಾವೂರಾಯನು ನಗುತ್ತ ಎಂದು: "ಹಂಸಾಬಾಯಿ, ನಮ್ಮ ಧಣಿಯರು ತಮ್ಮ ಹೆಸರಿನಂತೆ ಸಹಜವಾಗಿಯೂ ಘಾತುಕರಾಗಿರುತ್ತಾರೆ. ನಾನು ಆಗಲೆ ಒಂದು ನಿಮ್ಮೀರ್ವರ ಸಂಭಾಷಣವನ್ನೆಲ್ಲ ಕೇಳಿರುತ್ತೇನೆ. ಹಂಸಾಬಾಯಿ, ನೀವು ನಮ್ಮ ಯಜಮಾನರಿಗೆ ಚನ್ನಾಗಿ ಆಡಿ ಅಂದು ಅವಮಾನ ಮಾಡಿ ಕಳಿಸಿರುತ್ತೀರಿ; ಆದರೆ ಆ ನೀಚನು ಇದರಿಂದ ಬುದ್ಧಿಗಲಿಯದೆ, ನಾಗರ ಹಾವಿನಂತೆ ನಿಮ್ಮ ವಿಷಯವಾಗಿ ದಂಶವಿಡಬಹುದೆಂಬದನ್ನು ಮಾತ್ರ ನೀವು ಮರೆಯಬೇಡಿರಿ."

"ಚೆನ್ನಾಯಿತು. ಅವನು ತನ್ನ ಹೆಸರಿನಂತೆ ನನ್ನ ಮೇಲೆ ದಂಶ ಎಟ್ಟರೆ, ನಾನೂ ನನ್ನ ಹೆಸರಿನಂತೆ ಅವನನ್ನು ನಾಶಗೊಳಿಸದೆ ಬಿಡಲಿಕ್ಕಿಲ್ಲ. ಹಂಸೆಯ ಮುಂದೆ ನಾಗರಹಾವಿನ ಆಟವು ಎಷ್ಟರಮಟ್ಟಿಗೆ ನಡೆದೀತೆಂಬದನ್ನು ಅರಿಯೆಯಾ?"

ಅದೆಲ್ಲವೂ ನನ್ನ ಖಾತ್ರಿಯಾಗಿದೆ; ಆದರೆ ಊರೊಳಗಿನ ಜನರಾಡುತ್ತಿರುವ ಮಾತುಗಳನ್ನು ಕೇಳುತ್ತಲೆ, ನನ್ನ ದೇಹವು ಕ್ರೋಧಾತಿರೇಕದಿಂದ ನಡುಗ ಹತ್ತಿದೆ.

"ಭಾವೂರಾಯಾ, ಜನರು ಏನೆಂದು ಆಡಿಕೊಳ್ಳುವರು?"

ಅದಕ್ಕೆ ಭಾವು:– "ಬೇಡ-ಬೇಡ. ಅವನ್ನು ಕೇಳುವದರಿಂದ ನಿಮಗೂ ನಿಮ್ಮ ತಾಯಿಗೂ ಕಡು ದುಃಖವಾದೀತು. ಇನ್ನು ಅದನ್ನು ನಿಮಗೆ ತಿಳಿಸುವ ಕಾರಣವೂ ಇಲ್ಲ; ಯಾಕಂದರೆ, ಜನರು ಏನೇ ಅನ್ನಲಿ, ಹಂಸೆಯ ಸತ್ಯಸ್ವರೂಪವು ಇಂದು ನನಗೆ ಚನ್ನಾಗಿ ತಿಳಿದು ಹೋಗಿದೆ."

## ಆಕಸ್ಮಿಕ ದಾಳಿ.

ನಾಗೋಜಿಯು ಹಂಸೆಯನ್ನು ಲಕ್ಷ್ಯವಾಗದೆ, ಅನಾಯಾಸವಾಗಿ ತನ್ನಲ್ಲಿ ಪ್ರೇಮ ತಾಳಿದ್ದ ಈ ಯುವತಿಯನ್ನು ತನ್ನ ಉಪವಸ್ತ್ರವನ್ನಾಗಿಟ್ಟುಕೊಳ್ಳಬೇಕೆಂದು ಯೋಚಿಸಿದ್ದನು. ಭಾವೂರಾಯನಿಗೆ ನಾಗೋಜಿಯ ಸ್ವಭಾವವು ಬಹು ದಿನಗಳಿಂದ ಗೊತ್ತಾಗಿದ್ದುದರಿಂದ, ಹೇಗಾದರೂ ಮಾಡಿ ನಾಗೋಜಿಯು ತನ್ನ ಚಿತ್ತವನ್ನು ಈಡೇರಿಸಬಲ್ಲನೆಂಬುದು ತಿಳಿದಿತ್ತು. ಆದರೂ ಹಂಸೆಯ ವಿಷಯದ ಆತನ ಆ ನೀಚ ವಿಚಾರವನ್ನು ಈಡೇರಗೊಡಬಾರದೆಂದೂ, ಪ್ರಸಂಗದಲ್ಲಿ ತನಗೆ ಸ್ವಾಮಿದ್ರೋಹದ ಕಲಂಕವು ಹತ್ತಿದರೂ ಚಿಂತೆಯಿಲ್ಲ; ಹಂಸೆಯನ್ನು ಆತನ ಜಾಲದಿಂದ ಬಿಡಿಸಬೇಕೆಂದೂ ಯೋಚಿಸಿ, ನಾಗೋಜಿಯು ಲೋಣಿಗೆ ಹೊರಟಾಗೆಲ್ಲ ಭಾವುವು ಅವನಿಗೆ ತಿಳಿಯದಂತೆ ಅವನನ್ನು ಹಿಂಬಾಲಿಸಿಯೇ ಬರುತ್ತಿದ್ದನು.

ಹಂಸೆಯು ಅಷ್ಟು ಕಟ್ಟುನಿಟ್ಟಾಗಿ ಹೇಳಿದ ನಿಷ್ಠುರವಾದ ಉತ್ತರದಿಂದ ನಾಗೋಜಿಯು ಆಗಿನ ಮಟ್ಟಿಗೆ ಎದುರು ಮಾತನಾಡದೆ ತನ್ನ ಊರಿಗೆ ಹೊರಟು ಹೋದರೂ, ಅವನು ಆಕೆಯ ವಿಷಯದಲ್ಲಿ ನಾಗರಹಾವಿನಂತೆ ಒಳ್ಳೇ ಡಂಕು ಹಿಡಿದನು!

ಮರುದಿನ ಸಂಜೆಯ ಮುಂದೆ ಹಂಸೆಯು ತಾಯಿಯೊಡನೆ ತಮ್ಮ ಮನೆಯ ಪಡಸಾಲೆಯ ಮೇಲೆ ಕುಳಿತು ಕಾಳು ಹಸನಮಾಡುತ್ತಿರಲು, ದೂರದಿಂದ ಬರುತ್ತಿರುವ ಕುದುರೆಗಳ ಖುರಪುಟ ಧ್ವನಿಯು ಕೇಳಿಸಹತ್ತಿತು. ಅದನ್ನು ಕೇಳಿ ಸಾವಿತ್ರೀಬಾಯಿಯು ನಾಗೋಜಿರಾಯನೇ ತಮ್ಮಲ್ಲಿಗೆ ಮತ್ತೆ ಬರುತ್ತಿರುವನೆಂದೂ ಅವನಿಗೆ ನಿನ್ನಿನ ಮಾತಿನ ವಿಷಯವಾಗಿ ಪಶ್ಚಾತ್ತಾಪವಾಗಿರಬೇಕೆಂದೂ ತನ್ನ ಮನಸ್ಸಿನಲ್ಲಿ ತರ್ಕಿಸಿದಳು. ಮಾತು-ಮಾತಾಡುವಷ್ಟರಲ್ಲಿ ಇಬ್ಬರು ಸವಾರರು ಭರದಿಂದ ಬರುತ್ತಿರುವದು ಅವರಿಗೆ ಕಾಣಿಸತೊಡಗಿತು. ನಾಗೋಜಿರಾಯನೇ ಭಾವೂರಾಯನೊಡನೆ ಬರುತ್ತಿರುವನೆಂದು ಸಾವಿತ್ರಿಯು ಅನ್ನಲಿಕ್ಕೂ, ಹಂಸೆಯು ಆ ಸ್ವಾರರಲ್ಲಿಯ ಒಬ್ಬನನ್ನು ಗುರುತಿಸಲಿಕ್ಕೂ ಗಂಟೇ ಬಿದ್ದಿತು. ಕೂಡಲೆ ಆಕೆಯು ಉಕ್ಕೇರಿ ಆತುರದಿಂದ:-"ಅವ್ವಾ, ಅಪ್ಪನು ಬರುತ್ತಿರುವನು ನೋಡವ್ವಾ!" ಎಂದಳು.

ಅದನ್ನು ಕೇಳಿ ಸಾವಿತ್ರಿಯು ಒಳ್ಳೇ ಸಂತಾಪದಿಂದ:-"ನಾಚಿಕೆಗೇಡೀ, ನಿನ್ನ ನಾಲಿಗೆಯು ಬಹು ಚುರುಕಾಗಿರುವಂತೆ ತೋರುತ್ತದೆ. ಅದಕ್ಕೆ ಚನ್ನಾಗಿ ಬರೆ ಕೊಡಬೇಕಾಗಿದೆ. ಯಾರು?-ಅಪ್ಪನೆ? ನಿಮ್ಮಪ್ಪನು ಎಂದೋ ಸತ್ತು ಹೋಗಿರುತ್ತಾನೆ! ಅವನು ಮುಸಲ್ಮಾನರ ದರ್ಗಾದಲ್ಲಿ ಹೂತುಕೊಂಡಿರುತ್ತಾನೆ!! ನೀನು ಇನ್ನು 'ಅಪ್ಪಾ-ಅಪ್ಪಾ' ಎಂದು ಯಾರಿಗೆ ಅನ್ನುತ್ತೀ? ಮೂರ್ಖಳು ನೀನು. ನಡೆ ಒಳಗೆ" ಎಂದವಳೇ ಹಂಸೆಯನ್ನು ಮನೆಯೊಳಗೆ ದೂಡಿ ಬಾಗಿಲನ್ನಿಕ್ಕಿಕೊಂಡು ಕುಳಿತಳು. ತಾಯಿಯ ಆ ಕೃತಿಯನ್ನು ಕಂಡು ಎಂದೂ ಆಗದಂತಹ ದುಃಖವು ಹಂಸೆಗೆ ಆಗ ಆಯಿತು. ಅದರಿಂದ ಅವಳು ಮುಳುಮುಳು ಎಂದು ಅಳಹತ್ತಿದಳು ಸಹ. ಸಾವಿತ್ರಿಗೆ ಮಗಳ ಆಳೋಣವು ಕೇಳಿಸುತ್ತಿದ್ದಿಲ್ಲವೆಂತಲ್ಲ; ಆದರೆ ಗಂಡನ-ಸೂರ್ಯಾಜಿ ಪಿಸಾಳನ ಆ ಆಕಸ್ಮಿಕ ಆಗಮನದಿಂದ ಅಂದು ಅವಳು ಹೆಚ್ಚಾಗಿ ಕ್ರೋಧ ಸಂತಪ್ತಳಾದುದರಿಂದ ಮಗಳ ರೋದನದ ಕಡೆಗೆ ಲಕ್ಷ್ಯಗೊಡಲಿಲ್ಲ.

ಅಲ್ಪಾವಕಾಶದಲ್ಲಿಯೇ ಸೂರ್ಯಾಜಿ ಪಿಸಾಳನು ತನ್ನ ಸಂಗಡಿಗರೊಡನೆ ಸಾವಿತ್ರಿಯ ಮನೆಯ ಬಾಗಿಲಿಗೆ ಬಂದನು. ಕದವು ಒಳಗಿನಿಂದ ಭದ್ರವಾಗಿ ಇಕ್ಕಲ್ಪಟ್ಟಿದ್ದನ್ನು ಕಂಡು, ಅವನು ಹೆಂಡತಿಯ ಹಾಗು ಹುಡಿಗೆಯ ಹೆಸರುಗೊಂಡು ಗಟ್ಟಿಗಟ್ಟಿಯಾಗಿ ಕೂಗಿದನು. ಎಷ್ಟು ಒದರಿದರೂ ಬಾಗಿಲ ತೆರೆಯದ್ದನ್ನು ಕಂಡು ಅವನು ಅಂತರಂಗದಲ್ಲಿ ಹೆಚ್ಚಾಗಿ ಖತಿಗೊಂಡನು. ಆದರೂ ಹೊರಗೆ ಹಾಗೆ ತೋರಗೊಡದೆ, ಕುದುರೆಯ ಜೀನುಗಳನ್ನಿಳಿಸಿ, ಕುದುರೆಗಳನ್ನು ಸಮೀಪದ ಚಪ್ಪರದಲ್ಲಿ ಕಟ್ಟಿದನು. ಸೂರ್ಯಾಜಿಯ ಸಂಗಡ ಬಂದವನು ಜಮಾಲಖಾನನೆಂಬ ಹೆಸರಿನ ಔರಂಗಜೇಬ ಬಾದಶಹನ ದರ್ಬಾರದ ದೊಡ್ಡ ಸರದಾರನಾಗಿದ್ದನು. ಸೂರ್ಯಾಜಿಗೆ ಮಹಾರಾಷ್ಟ್ರ ದೇಶದ ಮಾಹಿತಿಯು ಚೆನ್ನಾಗಿದ್ದುದರಿಂದ, ಅವನ ಮುಖಾಂತರ ಯಾವುದೊಂದು ಭದ್ರವಾದ ದುರ್ಗದ ಕಿಲ್ಲೇದಾರರನ್ನು ಒಳಸಂಚಿನಿಂದ ಒಡಕೊಂಡು, ಅದನ್ನು ಬಾದಶಹನ ಸ್ವಾಧೀನಪಡಿಸಿ, ಬಾದಶಹನಿಂದ ಬಡತಿ ಹೊಂದಬೇಕೆಂಬ ಮನೀಷೆಯಿಂದ ಆ ಜಮಾಲಖಾನನು ಸೂರ್ಯಾಜಿಯೊಡನೆ ಇತ್ತ ಬಂದಿದ್ದನು. ರಾಜಾರಾಮ ಮಹಾರಾಜರು ತೀರಿಕೊಂಡು ಸ್ವಲ್ಪೇ ದಿನಗಳಾದ್ದರಿಂದ, ಆಗ ಮಹಾರಾಷ್ಟ್ರದಲ್ಲಿ ಮುಂದಾಳುವಾರೂ ಉಳಿದಿರಲಿಲ್ಲ. ಎಲ್ಲ ಕಡೆಗೂ ಅರಾಜಕತೆಯು ಗೊಂದಲವೇ ಗೊಂದಲ

ವಾಗಿತ್ತು. ಇಂಥ ಕಾಲಕ್ಕೆ ಬೀಡ-ಜುನ್ನರಗಳ ಮಧ್ಯದಲ್ಲಿಯ ಯಾವನೊಬ್ಬ ಕಿಲ್ಲೆದಾರನು ಬಾದಶಹನಿಗೆ ಫಿತೂರಾಗಬಹುದೆಂದು ಹೇಳಿ, ಸೂರ್ಯಾಜಿಯು ಆ ಖಾನನನ್ನು ತನ್ನ ಸಂಗಡ ಕರೆತಂದಿದ್ದನು. ಜಮಾಲಖಾನನ ಸಹಾಯದಿಂದ ಸೂರ್ಯಾಜಿಯು ಪಾಯಿಯ ತನ್ನ ದೇಶಮುಖಗಿರಿಯನ್ನು ಭದ್ರಪಡಿಸಿಕೊಳ್ಳಬೇಕೆಂದು ಮನಸ್ಸು ಮಾಡಿದ್ದನು.

ತಾನು ಲೋಣೀಗೆ ಈ ದೊಡ್ಡ ಸರದಾರನೊಡನೆ ಹೋದ ಕೂಡಲೆ ತನ್ನ ಹೆಂಡತಿಯು ತನ್ನನ್ನು ಹೆಚ್ಚಾಗಿ ಮನ್ನಿಸಬಹುದೆಂದು ಸೂರ್ಯಾಜಿಯು ಕಲ್ಪಿಸಿದ್ದನು. ತಾನು ಧರ್ಮಾಂತರ ತಾಳಿದ್ದಕ್ಕಾಗಿ ತನ್ನ ಹೆಂಡತಿಯು ತನ್ನನ್ನು ಕಳೆದ ಸಾರೆಯ ಭೆಟ್ಟಿಯ ಕಾಲಕ್ಕೆ ಹೆಚ್ಚಾಗಿ ತಿರಸ್ಕರಿಸಿದ್ದಳೆಂಬುದು ಅವನಿಗೆ ಗೊತ್ತಿದ್ದರೂ, ಈ ಸಾರೆ ಆಕೆಯ ಮನವನ್ನೊಲಿಸಿಕೊಂಡು, ಆಕೆಯ ಕಲ್ಯಾಣವು ಏತರಿಂದಾದೀತೆಂಬದನ್ನು ಆಕೆಗೆ ಚೆನ್ನಾಗಿ ತಿಳಿಹೇಳಿದರೆ, ಅವಳು ತನಗೆ ಅನುಕೂಲಳಾಗುವಳೆಂದು ತಿಳಿದು, ಅವನು ಅಲ್ಲಿಗೆ ಮತ್ತೆ ಬಂದಿದ್ದನು; ಆದರೆ ತನ್ನ ಮದುವೆಯ ಹೆಂಡತಿಯು ಬಹುದಿನಗಳಿಂದ ಬಂದ ತನ್ನನ್ನು ಮನೆಯಲ್ಲಿ ಕೂಡ ಸೇರಗೊಡದ್ದನ್ನೂ ತನ್ನೊಡನೆ ಮರ್ಯಾದೆಯಿಂದ ಮಾತಾಡಲಿಕ್ಕೆ ಕೂಡ ಸಿದ್ಧಳಾಗದ್ದನ್ನೂ ಕಂಡು ಅವನು ಸಂತಾಪಗೊಂಡನು. ಏನಾದರೂ ಸಾವಿತ್ರಿಯು ಬಾಗಿಲ ತೆರೆಯದ್ದರಿಂದ, ಅವನು ಆ ಸರದಾರನೊಡನೆ ಆ ಪಡಸಾಲೆಯಲ್ಲಿಯೇ ನಿರಾಹಾರಿಯಾಗಿ ಮಲಗುವ ವ್ಯವಸ್ಥೆ ಮಾಡಿಕೊಂಡನು.

ಜಮಖಾನೆಯ ಮೇಲೆ ಪವಡಿಸಿದ ಮೇಲೆ ಜಮಾಲಖಾನನು:-"ಸೂರಜಖಾ, ನಿಮ್ಮ ಹೆಂಡತಿಯು ಹುಚ್ಚು ಹಿಡಿದ ನಾಯಿಯಂತಿದ್ದಾಳೆ. ನೀವು ಇಷ್ಟು ದಿನಗಳ ತರುವಾಯದಲ್ಲಿ ಮನೆಗೆ ಬರುತ್ತಿರುವದರಿಂದ, ಅವಳು ನಿಮ್ಮನ್ನು ಚೆನ್ನಾಗಿ ಸ್ವಾಗತ ಮಾಡಿ, ಚಲೋ ಊಟ-ಪಾಟಗಳನ್ನು ಏರ್ಪಡಿಸಬಹುದೆಂದು ತಿಳಿದಿದ್ದೆನು. ಆದರೆ...."

ಸೂರ್ಯಾಜಿಯು ಅವನನ್ನು ಮತ್ತೆ ಮಾತಾಡಗೊಡದೆ:—"ಖಾನಸಾಹೇಬ, ಇನ್ನು ಅವಳ ಬಗ್ಗೆ ಹೆಚ್ಚು ಪೃಚ್ಛಾಪೃಚ್ಛೆ ಮಾಡುವದರಿಂದ ಪ್ರಯೋಜನವಿಲ್ಲ. ಬೆಳಗಾಗಲಿ. ನಾನು ಆಕೆಗೆ ಚೆನ್ನಾಗಿ ಕೈ ತೋರಿಸುತ್ತೇನೆ" ಎಂದನು.

ಹೊರಗೆ ಪಡಸಾಲೆಯಲ್ಲಿ ಆ ಇಬ್ಬರು ಖಾನರಲ್ಲಿ ನಡೆದ ಸಂಭಾಷಣವು

ಒಳಗೆ ಕುಳಿತಿದ್ದ ತಾಯಿ-ಮಕ್ಕಳಿಗೆ ಚೆನ್ನಾಗಿ ಕೇಳಬರುತ್ತಿತ್ತು. ತನ್ನ ಗಂಡನು ಆ ಶ್ರೋಣಿಯಲ್ಲಿ ವಾಸಿಸಿರುವ ವರೆಗೆ ತಾನು ಹೇಗೆ ವರ್ತಿಸ ಬೇಕೆಂಬದನ್ನು ಸಾವಿತ್ರಿಯು ನಿಶ್ಚಯಿಸಿಕೊಂಡಿದ್ದಳು. ಕಳೆದ ಸಾರೆ ಅವನು ಅಲ್ಲಿಗೆ ಬಂದಾಗಲೂ ಅವಳು ಹೀಗೆಯೇ ಕ್ರೋಧಸಂತಪ್ತಳಾಗಿದ್ದಳು. ಗಂಡನು ಧರ್ಮಾಂತರ ತಾಳಿದ್ದರಿಂದ, ತನ್ನ ಮಕ್ಕಳಿಗೆ ಎಲ್ಲ ಬಗೆಯಿಂದಲೂ ಹಾನಿಯುಂಟಾಯಿತೆಂದು ಅವಳು ತಿಳಿದಿದ್ದಳು. ಬೆಳಗಾದ ಬಳಿಕ ಸೂರ್ಯಾಜಿಯು ಮತ್ತೆ ಹೆಂಡತಿ ಹಾಗು ಮಗಳನ್ನು ಕೂಗಹತ್ತಿದನು. ಬಾಗಿಲ ಬಡಿದನು. ಹಿತ್ತಲ ಬಾಗಿಲಿಗೆ ಹೋಗಿ ಒದರಿದನು. ಏನಾದರೂ ಸಾವಿತ್ರಿಯು ಬಾಗಿಲ ತೆರೆಯಲಿಲ್ಲ. ನಿರುಪಾಯನಾಗಿ, ಕಡೆಗೆ ಅವನು ಆ ಬಾನಸಾಹೆ ಬ ನೊಡನೆ ಅಲ್ಲಿಂದ ಕಾಲ್ತೆಗೆದನು.

ತಂದೆಯ ಆ ದೈನ್ಯಾವಸ್ಥೆಯನ್ನು ಕಂಡು ಹಂಸೆಗೆ ಬಹಳ ವ್ಯಥೆಯಾಯಿತು. ತಂದೆಯ ಧರ್ಮಾಂತರದ ಬಗ್ಗೆ ಅವಳ ಮನಸ್ಸು ದೂಷಿತವಾಗಿದ್ದರೂ, ಪ್ರತ್ಯಕ್ಷವಾಗಿ ಅವನು ತಮ್ಮ ಮನೆಗೆ ಬಂದು, ಉಪವಾಸ ಬಿದ್ದು ಹೋದುದನ್ನು ನೋಡಿದ ಅವಳಿಗೆ, ತನ್ನ ತಾಯಿಯ ಆ ಬಗೆಯ ಕಠೋರ ವರ್ತನದ ಬಗ್ಗೆ ಬಹು ಕೆಡಕೆನಿಸಿತು. ಗಂಡನ ಕುದುರೆಯ ಖುರಪುಟಗಳ ಸಪ್ಪಳವು ಕೇಳಿಸದಂತಾಗಲು, ಸಾವಿತ್ರಿಯು ತನ್ನಷ್ಟಕ್ಕೆ ತಾನೆ:—"ಹೊಸ ನೊಮ್ಮೆ ತನ್ನ ಸುಡುಗಾಡ ಮೋರೆಯನ್ನು ತಕ್ಕೊಂಡು. ಹೋದ ಸಾರೆಯೇ ನಾನು ಹೀಗೆ ಕಟ್ಟುನಿಟ್ಟಾಗಿ ವರ್ತಿಸಿದ್ದರೆ, ಈ ಸಾರೆ ಈ ಪಿಶಾಚಿಯು ಇತ್ತ ಹೊರಳುತ್ತಲೇ ಇರಲಿಲ್ಲ. ಅವನು ಇನ್ನೊಮ್ಮೆ ಇಲ್ಲಿಗೆ ಬಂದಾದರೂ ಬರಲಿ, ಅವನಿಗೆ ಈ ಸಾವಿತ್ರಿಯ ನೆನಪು ಚನ್ನಾಗಿ ಉಳಿಯುವಂತೆ ಮಾಡಿ ಕಳಸುತ್ತೇನೆ." ಎಂದುಕೊಂಡಳು.

ಹೊತ್ತು ಹೊರಳಿದ ಮೇಲೆ ಸಾವಿತ್ರಿಯು ಬಾಗಿಲ ತೆರೆದಳು. ತದನಂತರ ಅವರ ಎಲ್ಲ ಪ್ರಾತಃಕೃತ್ಯಗಳೂ ಸಾಗಿದವು. ಬಳಿಕ ಹಂಸೆಯು ಆ ಪ್ರಖರವಾದ ಬಿಸಿಲಲ್ಲಿಯೇ ನೀರಿಗೆ ಹೋಗಬೇಕಾಯಿತು. ಆಕೆಯು ಬಾವಿಗೆ ಹೋದ ಕೂಡಲೆ ನೀರಿಗೆ ಬಂದಿದ್ದ ಊರ ಹೆಣ್ಣುಮಕ್ಕಳಲ್ಲಿ ಒಬ್ಬಳು:—"ಹಂಸಾ, ನಿಮ್ಮ ಅಪ್ಪನು ಊರಿಂದ ಬಂದಿರಲು, ನಿಮ್ಮ ಅವ್ವನು ಅವನಿಗೆ ಮನೆಯೊಳಗೇಕೆ ಬರಗೊಡಲಿಲ್ಲ? ಏನಾದರೂ ಅವನು ಆಕೆಯ ಮದುವೆಯ ಗಂಡನಲ್ಲವೆ? ಇನ್ನು ಅವನು ಒಬ್ಬನೇ ಬಂದಿದ್ದರೆ, ತುಸ ವಿನೋದ ಮಾಡಿ

ದ್ದರೂ ನಡೆಯುತ್ತಿತ್ತು; ಆದರೆ ಅವನೊಡನೆ ಒಬ್ಬ ದೊಡ್ಡ ಸರದಾರನೂ ಬಂದಿರಲಿಲ್ಲವೆ? ಆ ಸರದಾರನು ಬಾದಶಹನ ಬಳಿಗೆ ಹೋಗಿ ನಿನ್ನ ತಾಯಿಯ ಬಗ್ಗೆ ದೂರಿದನೆಂದರೆ, ನಾಳೆ ಬರಬಹುದಾದ ಬಾದಶಹನ ದಾಳಿಗೆ ನಾವೆಲ್ಲರೂ ಗುರಿಯಾಗಬೇಕಾದೀತಲ್ಲವೆ?" ಎಂದು ಅನ್ನಲು, ಇನ್ನೊಬ್ಬಳು:—"ಛೀ, ಛೀ! ಹಾಗೆಂದಿಗೂ ಆಗದು. ಈಕೆಯ ತಂದೆಯಾದ ಸೂರಜಖಾನನು ಸಂಭಾವಿತ ಗೃಹಸ್ಥನು! ಅವನು ಆ ಸರದಾರನೊಡನೆ ನಮ್ಮೂರ ಇಸ್ಮಾಯಿಲ್ ಪಿಂಜಾರನಲ್ಲಿ ಇಳಿದುಕೊಂಡಿರುತ್ತಾನೆ" ಎಂದಳು.

ಹಂಸೆಯು ಅವರಾರಿಗೂ ಉತ್ತರ ಕೊಡಲಿಲ್ಲ. ಅವಳು ಸುಮ್ಮನೆ ತನ್ನ ಕೊಡ ತುಂಬಿಕೊಂಡು ಮನೆಯ ದಾರಿ ಹಿಡಿದಳು. ತನ್ನ ತಂದೆಯು ಲೋಣಿಯಿಂದ ಹೊರಟು ಹೋದನೆಂದೇ ಅವಳು ಇದುವರೆಗೆ ತಿಳಿದಿದ್ದಳು; ಆದರೆ ಅವನು ಎಲ್ಲಿ ಇರುವನೆಂಬುದು ಈಗ ಅವಳಿಗೆ ತಿಳಿಯಲು, ತಾಯಿಗೆ ತಿಳಿಸದಂತೆ ಒಮ್ಮೆ ಆತನನ್ನು ಕಂಡು ಬರಬೇಕೆಂದು ಆಕೆಗೆ ಅನಿಸಿತು. ಮನೆಗೆ ತಲುಪಿದ ಕೂಡಲೆ ನೀರಿನ ಕೊಡವನ್ನಿಳಿಸಿ, ಬಟ್ಟೆಗಳನ್ನು ಮಡಿ ಮಾಡಿಕೊಂಡು ಬರುವ ನೆವದಿಂದ ಅವಳು ಮತ್ತೆ ಆ ಬಿಸಿಲಲ್ಲಿಯೇ ಬಾವಿಯ ದಾರಿ ಹಿಡಿದಳು. ಸಾವಿತ್ರೀಬಾಯಿಯು ಅಂದು ಅವಳಿಗೆ ಬೇಡೆನ್ನಲಿಲ್ಲ. ಇಂಥ ಪ್ರಚಂಡವಾದ ಬಿಸಿಲಲ್ಲಿ ಅವಳು ಹಂಸೆಯನ್ನು ಎಂದೂ ಹೊರಗೆ ಹೋಗಗೊಡುತ್ತಿದ್ದಿಲ್ಲ; ಆದರೆ ಇಂದು ಸಾವಿತ್ರಿಯ ತಲೆಯು ಹಲವು ವಿಚಾರಗಳಿಂದ ಭಣಗುಟ್ಟಿ ಹೋಗಿತ್ತು. ಆದರಿಂದ ಅವಳ ಲಕ್ಷ್ಯವು ಹಂಸೆಯ ಕಡೆಗೆ ಇರಲಿಲ್ಲ.

ಹಂಸೆಯು ಮನೆಯಿಂದ ಹೊರಬಿದ್ದವಳೇ ಬಾವಿಯ ದಾರಿಯನ್ನು ಹಿಡಿಯದೆ, ಊರೊಳಗಿನ ಪಿಂಜಾರ ಇಸ್ಮಾಯಿಲನ ಮನೆಯ ದಾರಿ ಹಿಡಿದಳು. ಹಂಸೆಯು ಬಂದಾಗ ಸೂರ್ಯಾಜಿಯು ಜಮಾಲಖಾನನೊಡನೆ ಇಸ್ಮಾಯಿಲನ ಮನೆಯಲ್ಲಿ ಒಂದು ಜಮಖಾನೆಯ ಮೇಲೆ ಕುಳಿತುಕೊಂಡು ಮಾತನಾಡುತ್ತಿದ್ದನು. ಎದುರಿಗೆ ಬಂದು ನಿಂತ ಹಂಸೆಯನ್ನು ಕಂಡು ಸೂರ್ಯಾಜಿಯು ಆಶ್ಚರ್ಯದಿಂದ:—"ಯಾರು, ಹಂಸೆಯೇನು? ನೀನು ಬಂದೇ ಬರುವಿಯೆಂದು ನನಗೆ ಅನಿಸುತ್ತಿದ್ದಿತು. ಖಾನಸಾಹೇಬ, ನಾನು ನಿಮಗೆ ಹೇಳುತ್ತಿದ್ದ ನನ್ನ ಹುಡುಗಿಯು ಇವಳೇ ನೋಡಿರಿ. ಇವಳಿಗಿಂತ ದೊಡ್ಡವನಾದ ಒಬ್ಬ ಮಗನಿದ್ದು, ಅವನು ಧನಸಿಂಗರಾಯನ ದಂಡಿನಲ್ಲಿರುತ್ತಾನೆ."

"ತೋಬಾ-ತೋಬಾ! ಸೂರಜಖಾ, ನಿಮ್ಮ ಮಗನು ಬಾದಶಹನ ವೈರಿಗಳ ದಂಡಿನಲ್ಲಿ ಸೇರಿ ಬಾದಶಹನ ವಿರುದ್ಧವಾಗಿ ಕಾದುವನೇ? ಛೇ-ಛೇ! ಇದು ವಿಹಿತವಲ್ಲ. ನೀವು ಅವನನ್ನು ಬಾದಶಹನ ಕಡೆಗೆ ಕರೆದುಕೊಂಡು ನಡೆಯಿರಿ. ಬಾದಶಹನಿಗೆ ಹೇಳಿ, ನಾನು ಅವನನ್ನು ಕ್ಷಿಪ್ರದಲ್ಲಿಯೇ ನಿಮ್ಮಂತೆ ಸರದಾರನನ್ನಾಗ ಮಾಡುವೆನು.''

"ಖಾನಸಾಹೇಬ, ಅದೆಂದೂ ಆಗದು. ನಾನು ಧರ್ಮಾಂತರ ತಾಳಿದಂತೆ ನನ್ನ ಮಗನೂ ಧರ್ಮಾಂತರ ತಾಳಬಹುದೆಂದು ನೀವು ತಿಳಿದಿದ್ದರೆ, ಅದು ನಿಮ್ಮ ಭ್ರಮೆಯೆಂದೇ ಅನ್ನಬೇಕಾದೀತು. ಈ ಹುಡುಗರ ತಾಯಿಯು ಹೇಗೆ ಇದ್ದಾಳೆ, ಅವಳು ಎಷ್ಟು ಕಟ್ಟುನಿಟ್ಟಿನ ಸ್ವಭಾವದವಳಿರುತ್ತಾಳೆ; ಎಂಬದನ್ನು ನೀವು ಅರಿತೇ ಇರುತ್ತೀರಿ. ಹಂಸಾ, ಇತ್ತ ಬಾ; ನನ್ನ ಬಳಿಗೆ ಬಂದು ಕೂಡ್ರು. ನೀನು ಈಗ ದೊಡ್ಡ ಹೆಂಗಸಾಗಿ ತೋರುತ್ತೀಯವ್ವಾ! ತಂಗೀ, ನಿನ್ನ ಲಗ್ನದ ವಿಚಾರವೇನು? ನಿನ್ನ ಹಡೆದವ್ವನು ಆ ಬಗ್ಗೆ ಏನು ಯೋಚನೆ ಮಾಡಿರುವಳು? ನಿನ್ನ ಲಗ್ನವು ಇನ್ನೂ ನಿಶ್ಚಯವಾಗಿಲ್ಲವೆ? ಹಿಂದೆ ಬಂದಾಗಲೇ ನಾನು ಆಕೆಗೆ ಹೇಳಿದ್ದೆನು. ಆಗ ನೀವೆಲ್ಲರೂ ನನ್ನೊಡನೆ ಬಂದು ಬಿಟ್ಟಿದ್ದರೆ, ಇಷ್ಟರಲ್ಲಿ ನಿನ್ನ ಲಗ್ನ ಮಾಡಿಬಿಡುತ್ತಿದ್ದೆನು. ತಂಗೀ, ಕಣ್ಣಲ್ಲಿ ನೀರು ತರುತ್ತೀಯೇಕೆ? ಆಕೆ ಇಲ್ಲದಿದ್ದರೆ ಇಲ್ಲ; ನೀನಾದರೂ ನನ್ನ ಸಂಗಡ ಬರುತ್ತೀಯೇನು? ಊಂ-ಹುಂ ಅನ್ನುವವಷ್ಟರಲ್ಲಿ ನಿನ್ನ ಲಗ್ನ ಮಾಡಿ ಬಿಡುತ್ತೇನೆ. ತಂಗೀ, ಅಳಬೇಡ. ಸುಮ್ಮನಾಗು; ಹಾಗು ಕಳೆದ ನಾಲ್ಕಾರು ವರ್ಷಗಳಲ್ಲಿ ಏನೇನು ನಡೆಯುತ್ತೆಂಬದನ್ನು ನನಗೆ ತಿಳಿಸು" ಎಂದು ಅಂದು, ಸೂರ್ಯಾಜಿಯು ಹಂಸೆಯನ್ನು ತನ್ನ ಹತ್ತರ ಕೂಡ್ರಿಸಿಕೊಂಡು ಅವಳ ಕಣ್ಣುಗಳನ್ನು ಒರಸಿದನು.

ಹಂಸೆಯು ಎಲ್ಲ ಸಂಗತಿಯನ್ನೂ ಹೇಳಿ, ನಗರದ ಆ ಬುಡುಬುಡಿಕನ ಭವಿಷ್ಯವನ್ನೂ, ನಾಗೋಜಿಯ ನಿಂದ್ಯತಮವಾದ ವರ್ತನವನ್ನೂ, ತಾನು ಆತನಿಗೆ ಅಂದ ಮಾತನ್ನೂ ತನ್ನ ತಂದೆಗೆ ತಿಳಿಸಿದಳು. ಕ್ಷಣಕಾಲದ ಮೇಲೆ ಸೂರ್ಯಾಜಿಯು:-'ಹಂಸಾ, ನೀನೂ ನಿನ್ನ ಹಡೆದವ್ವನಂತೆ ಶೀಘ್ರ ಕೋಪಿಯಾಗಿರುತ್ತೀ. ಹುಚ್ಚೀ, ಖೇಡದ ಆ ದೇಶಮುಖರ ನಾಗೋಜಿಯ ಸಂಬಂಧವನ್ನು ನೀನು ಸಲ್ಲದ ದುರಭಿಮಾನಕ್ಕೊಳಗಾಗಿ ಕೆಡಿಸಿಕೊಂಡೆ. ತಂಗೀ, ಧರ್ಮಾಧರ್ಮದ ವಿಚಾರಗಳು ಕೇವಲ ಮಾತಿನಲ್ಲಿ ಮಾತ್ರ ಉಳಿದಿವೆ.

ಇದು ವರೆಗೆ ಬಾದಶಹನ ಝನಾನಖಾನೆಗೆ ಎಷ್ಟು ಜನ ರಾಜರು ತಾವಾಗಿ ತಮ್ಮ ಮಕ್ಕಳನ್ನು ಕಳಿಸಿಕೊಟ್ಟಿಲ್ಲ?"

"ಅಪ್ಪಾ ಇಂಥ ಅಭದ್ರ ವಚನಗಳನ್ನು ನೀವು ನನ್ನೆದುರಿಗೆ ತೆಗೆಯ ಬೇಡಿರಿ" ಎಂದು ಒಳ್ಳೇ ತ್ವೇಷದಿಂದ ಹಂಸೆಯು ನುಡಿದಳು. ಹಾಗೆ ನುಡಿಯು ವಾಗ ಅವಳ ಮುಖಚರ್ಯೆಯು ಒಳ್ಳೇ ಆರಕ್ತ ವರ್ಣವನ್ನು ಧರಿಸಿತ್ತು. ಸೂರ್ಯಾಜಿಯು ಮಗಳ ಮುಖಭಾವವನ್ನು ಕಂಡು ತೆಪ್ಪಗಾದನು! ಇವ ಳಾದರೂ ಇವಳ ತಾಯಿಯಂತೆಯೇ ಪ್ರಖರಳಾಗಿರುವದರಿಂದ, ಇವಳನ್ನು ಹೆಚ್ಚು ರೇಗಿಗೆಬ್ಬಿಸುವದು ತರವಲ್ಲೆಂದು ತಿಳಿದು, ಮಾತು ಹೊರಳಿಸಿ ಸೂರ್ಯಾ ಜಿಯು:—"ತಂಗೀ, ಹಾಗಾದರೆ ಆ ಭವಿಷ್ಯದಂತೆ ನೀನು ಬಹು ದೊಡ್ಡ ರಾಣಿಯಾಗುವೆ. ನಿನ್ನ ಉದರದಲ್ಲಿ ರಾಜಪುತ್ರನೇ ಜನಿಸುವನು. ಅಂದ ಮೇಲೆ ನಿನ್ನನ್ನು ಯಾವನೊಬ್ಬ ದೊಡ್ಡ ರಾಜನೇ ವರಿಸಬೇಕಾಯಿತಲ್ಲವೆ?" ಎಂದನು.

"ಅಪ್ಪಾ, ಆ ಭವಿಷ್ಯವು ನಿಮಗೂ ಸಟಿಯೆನಿಸುವದೇನು? ನಮ್ಮ ಶ್ರೀ ಶಿವಾಜಿ ಮಹಾರಾಜರು ಮೊದಲು ದೇಶಮುಖರೇ ಆಗಿದ್ದರಲ್ಲವೇ? ಆದರೆ ಅಪ್ಪಾ, ನೀವು ಇದನ್ನೇನು ಮಾಡಿದಿರಿ? ನಮ್ಮ ಧರ್ಮವನ್ನು ತ್ಯಜಿಸಿ...."

"ಸಾಕು, ಹಂಸಾ, ನೀನಿನ್ನು ನನ್ನ ಬಗ್ಗೆ ವಿಚಾರವನ್ನೇ ಮಾಡಬೇಡ. ಆಗತಕ್ಕದ್ದು ಆಗಿ ಹೋಗಿದೆ ಇನ್ನು ಹಳಹಳಿಸಿಯಾದರೂ ಮಾಡುವ ದೇನು? ನಾವು ಇನ್ನೂ ೨೩ ದಿನಗಳ ವರೆಗೆ ಇಲ್ಲಿಯೇ ಇರುತ್ತೇವೆ. ಕೂಡಿ ದಾಗ ಇಲ್ಲಿಗೆ ಬಂದು ಭೆಟ್ಟಿಕೊಟ್ಟು ಹೋಗು. ದೇವರು ನಿನ್ನ ಕಲ್ಯಾಣ ಮಾಡಲಿ!" ಎಂದು ಹರಸಿದನು.

ಹಂಸೆಯು ಅಲ್ಲಿಂದ ಬಾವಿಗೆ ನಡೆದಳು. ಸೂರ್ಯಾಜಿಯ ಬಳಿಯಲ್ಲಿ ಕುಳಿತಿದ್ದ ಜಮಾಲಖಾನನು ಹಂಸೆ-ಸೂರ್ಯಾಜಿಯರ ಭಾಷಣವನ್ನು ಸಂಪೂರ್ಣವಾಗಿ ಕೇಳಿದ್ದನು. ಹಂಸೆಯ ಭವಿಷ್ಯವನ್ನು ಕೇಳಿ ಅವನ ತಲೆ ಯಲ್ಲಿ ಹೊಸದೊಂದು ವಿಚಾರವು ಉದ್ಭವಿಸಿತು. ಹೇಗಾದರೂ ಮಾಡಿ ಈ ಯುವತಿಯನ್ನು ಬಾದಶಹನ ಝನಾನಖಾನೆಗೆ ಒಯ್ದು, ಅಲ್ಲಿ ಬಾದಶಹನ ಯಾವನೊಬ್ಬ ಶಹಾಜಾದನಿಗೆ ಅರ್ಪಿಸಬೇಕು; ಅಂದರೆ ಅದರಿಂದ ಈ ಹುಡಗೆಯ ಭವಿಷ್ಯವು ನಿಜವಾಗುವದಲ್ಲದೆ, ನನ್ನ ಕಾರ್ಯವೂ ಸಫಲವಾಗು ವದು, ಎಂದು ಯೋಚಿಸಿ, ಅವನು ಆ ಬಗ್ಗೆ ಸೂರ್ಯಾಜಿಯನ್ನು ಕೇಳ

ದನು. ಸೂರ್ಯಾಜಿಯು ಖಾನನ ಮಾತಿಗೆ ಎಮರುತ್ತರವನ್ನೇನೂ ಕೊಡ ಲಿಲ್ಲ. ಆದರಿಂದ ಅವನು ಖಾನನ ಆ ವಿಚಾರಕ್ಕೆ "ಮೌನೇನ ಅರ್ಧ ಸಮ್ಮತಂ" ಎಂಬಂತೆ ಒಪ್ಪಿದನೆಂದು ನಮ್ಮ ವಾಚಕರು ತರ್ಕಿಸುವರು. ಅದು ಏನೇ ಇರಲಿ; ಆ ಬಗ್ಗೆ ಹಿಂದಿನಿಂದ ವಿಚಾರಿಸೋಣವಂತೆ.

ಮರುದಿನ ಹಂಸೆಯು ಅಲ್ಲಿಗೆ ಬಂದಾಗ ಇಸ್ಮಾಯಿಲ್‌ನು ತನ್ನ ಹೋರಿ ಯಲ್ಲಿ ನಿಮಗ್ನನಾಗಿದ್ದನು. ಆತನ ಹೆಂಡತಿಯು ಒಳಗೆ ಅಡಿಗೆ ಮಾಡು ತ್ತಿದ್ದಳು ಆದರೂ ಅವಳು ನಡು ನಡುವೆ ಬಾಗಿಲಿಗೆ ಬಂದು. ಹೊರಗೆ ಹಣಿಕೆ ಹಾಕಿ ಹೋಗುತ್ತಿದ್ದಳು. ಇಸ್ಮಾಯಿಲನಾದರೂ ಶೇಕರಿಸಿ ಉಗು ಳುವ ನೆವ ಮಾಡಿ, ಆಗಾಗ್ಗೆ ಹೊರಗೆ ಬಂದು ನಿಂತು ಯಾರನ್ನೋ ಮಾರ್ಗ ನಿರೀಕ್ಷಿಸಿ ಹೋಗುತ್ತಿದ್ದನು. ಹಂಸೆಯು ಸೂರ್ಯಾಜಿಯ ಹತ್ತರ ಕುಳಿತು ಮಾತನಾಡುತ್ತಿದ್ದಳು. ಅಷ್ಟರಲ್ಲಿ ಒಬ್ಬ ಕುದುರೆಯ ಸವಾರನು ಧಾವಿಸುತ್ತ ಆ ಪಿಂಜಾರನ ಮನೆಗೇ ಬಂದನು. ಹತ್ತರ ಬರುತ್ತಲೆ, ಅವನು ಭಾವೂರಾಯ ನೆಂಬದು ಹಂಸೆಗೆ ಗೊತ್ತಾಗಲು, ಅವಳು:—"ಭಾವೂರಾಯಾ, ಇಂಥ ಬಿಸಿ ಲಲ್ಲಿ ಇಲ್ಲಿಗೆ ಇಷ್ಟೇಕೆ ಧಾವಿಸುತ್ತ ಬಂದೆ?" ಎಂದು ಅಂದಳು.

"ಹಂಸಾಬಾಯಿ, ಘಾತವಾಯಿತು! ಸೂರ್ಯಾಜಿರಾವ. ಹಂಸಾಬಾಯಿ ಯೊಡನೆ ಬೇಗನೆ ಓಡಿರಿ. ಈ ನೀಚ ಇಸ್ಮಾಯಿಲನು ತೋರಿಕೆಯಲ್ಲಿ ಬಲು ಸಂಭಾವಿತನಂತೆ ತೋರುತ್ತಿದ್ದರೂ, ಇವನು ಶೇಡದ ಆ ನಾಗೋಜಿಗೆ ಫಿತೂ ರಾಗಿರುತ್ತಾನೆ. ನಾಗೋಜಿಯು ತನ್ನ ೨೦೦ ಜನರೊಡನೆ ಇಲ್ಲಿಗೆ ಆಕಸ್ಮಿಕ ವಾಗಿ ಬಂದು ದಾಳಿಯಿಟ್ಟು, ಹಂಸಾಬಾಯಿಯನ್ನು ಹಿಡಿಸಿಕೊಂಡು ಹೋ- ಗುವ ಬೇತು ಮಾಡಿದ್ದಾನೆ. ಅಗೋ, ಬಂದರು ನೋಡಿರಿ ಅವರು! ಸೂರ್ಯಾಜಿ ರಾವ, ಹೊರಡಿರಿ. ಹಂಸಾಬಾಯಿ, ಇಕೋ, ಈ ನನ್ನ ಕುದುರೆಯನ್ನು ಹತ್ತಿ ಓಡಿಸಿರಿ," ಎಂದು ಹೇಳುತ್ತಲೆ, ಸೂರ್ಯಾಜಿಯೂ ಹಂಸೆಯೂ ಕುದುರೆ ಗಳನ್ನೇರಿ ಪಲಾಯನ ಮಾಡಿದರು.

## ಇಸ್ಮಾಯಿಲನ ಮೂರ್ಖತನ.

ಭಾವೂರಾಯನು ಹಾಗೆ ಹೇಳುತ್ತಿರಲಿಕ್ಕೆ ಎದುರಿಗೆ ಕೆಂಧೂಳವಡಗಿದಂತೆ ತೋರಹತ್ತಿತು. ತುಸ ಹೊತ್ತಿನಲ್ಲಿಯೇ ನೂರಾರು ಕುದುರೆಗಳು ಒಳ್ಳೇ ವೇಗದಿಂದ ಬರುತ್ತಿರುವದು ಕಾಣಿಸತೊಡಗಿತು. ಕ್ಷಣಾರ್ಧದಲ್ಲಿ ಆ ಎಲ್ಲ ಸವಾರರೂ ಭಾವೂರಾಯನು ಇದ್ದ ಇಸ್ಮಾಯಿಲ ಪಿಂಡಾರನ ಮನೆಗೇ ಬಂದರು. ನಾಗೋಜಿರಾಯನು ಅವರೆಲ್ಲರ ಮುಂದೆ ಬಂದು:--"ಇಸ್ಮಾಯಿಲ್, ಎಲ್ಲಿರುವರು ಆ ನಿನ್ನ ಅತಿಥಿಗಳು?" ನಾಯಕ, "ನಿಮ್ಮ ಜನರಿಗೆ ಈ ಮನೆಯನ್ನು ಮುತ್ತಲಿಕ್ಕೆ ಹೇಳಿರಿ; ಅಂದರೆ ಅವರಿಗೆ ಓಡಿಹೋಗಲಿಕ್ಕೆ ಆಸ್ಪದ ವುಳಿಯಲಾರದು," ಎಂದು ತನ್ನ ಜೊತೆಗೆ ಬಂದಿದ್ದ ಆ ಬೇಡರ ಒಡೆಯನಿಗೆ ಆಜ್ಞೆ ಮಾಡಿದನು. ಕೂಡಲೆ ಆ ಎಲ್ಲ ಸವಾರರು ಇಸ್ಮಾಯಿಲನ ಆ ಮನೆಯನ್ನು ಸುತ್ತಗಟ್ಟಿ ನಿಂತುಕೊಂಡರು. ನಾಗೋಜಿರಾಯನ ಸಂಗಡ ಬಂದಿದ್ದ ಬೇಡರು ಭಿಲ್ಲರೊಳಗಿನ ಒಂದು ಪಂಗಡದವರಾಗಿದ್ದರು. ಅವರು ಘಟ್ಟದ ಖಿಂಡಗಳಲ್ಲಿ ಇಲ್ಲವೆ ಗುಡ್ಡಗಳ ದಾರಿಗಳಲ್ಲಿ ನೆಲಿಸಿರುತ್ತಿದ್ದರು; ಹಾಗೂ ದಾರಿಗಳನ್ನು ಸುಲಿದು ಉಪಜೀವಿಸುತ್ತಿದ್ದರು; ಅಲ್ಲಿಪೆ ದರವಡೆ ಮಾಡುವದು ಇಲ್ಲವೆ ಯಾವನೊಬ್ಬನಿಂದ ಹಣ ತಕ್ಕೊಂಡು ಆತನ ವೈರಿಗಳ ಕೊಲೆ ಮಾಡುವದು ಇವೇ ಅವರ ನಿತ್ಯದ ಕರ್ತವ್ಯಗಳಾಗಿದ್ದವು. ಅವರೆಲ್ಲರೂ ಒತ್ತಟ್ಟಿಗೆ ವಾಸಿಸಿರದೆ, ೧೦-೨೦ ಜನರ ಟೋಳಿಗಳನ್ನು ಕಟ್ಟಿಕೊಂಡು ಅಲ್ಲಲ್ಲಿ ನೆಲಿಸಿರುತ್ತಿದ್ದರು; ಹಾಗೂ ಅಂಥ ಯಾವುದೊಂದು ದೊಡ್ಡ ಬೇಟೆಯು ಸಿಕ್ಕ ಕೂಡಲೆ ಅವರು ೩೦೦-೪೦೦ ಜನಗಳ ವರೆಗೆ ಒತ್ತಟ್ಟಿಗೆ ಕಲೆಯುತ್ತಿದ್ದರು. ಅವರ ಆ ಎಲ್ಲ ಕೃಷ್ಣಕಾರಸ್ಥಾನಗಳು ಬಹುಶಃ ರಾತ್ರಿಯ ಕಾರಿರುಳಲ್ಲಿಯೇ ನಡೆಯುತ್ತಿದ್ದವು. ಅವರ ಮುಖ್ಯ ಆಯುಧಗಳೆಂದರೆ ಕೊಡಲಿ, ಕಂದ್ಲಿ, ಭಲ್ಲೆ, ತೀಕ್ಷ್ಣ ಮತ್ತು ಉದ್ದನ್ನ ಖಡ್ಗ; ಹಾಗು ಕವಣೆಗಳು. ಅಂಥ ಆ ಕ್ರೂರ ಜನರ ಬಹು ದೊಡ್ಡ ಗುಂಪು ಅಂದು ಮಧ್ಯಾಹ್ನವೇ ಆ ಊರನ್ನು ಹೊಕ್ಕದ್ದರಿಂದ, ಅಲ್ಲಿಯ ಜನರು ಅಂಜಿ ಭಯಗೊಂಡರು. ಊರ ಹೊರಗಿನ ಬಾವಿಗೆ ನೀರಿಗೆಂದು ಹೋಗಿದ್ದ ಹೆಂಗಸರು ತಮ್ಮ ಕೊಡ-ಬಿಂದಿಗೆಗಳನ್ನು ಅಲ್ಲಿಯೇ ಚೆಲ್ಲಿ ಕೊಟ್ಟು ಓಡಿ ಬಂದು, ಹೇಗಾದರೊಮ್ಮೆ ಮನೆ ಸೇರಿದರು. ಮನೆಯಲ್ಲಿ ತಕ್ಕ

ಮಟ್ಟಿಗೆ ಆಸ್ತಿಯಿದ್ದವರು ತಮ್ಮ ಆಸ್ತಿಯನ್ನೆಲ್ಲ ಗಡಿಗೆ-ಮಡಿಕೆಗಳಲ್ಲಿ ತುಂಬಿ ಹೂಳಿಡಹತ್ತಿದರು; ಮತ್ತು ಎದೆಗಾರರಾದವರು ತಮ್ಮ ಆಯುಧಗಳನ್ನು ಮಸೆಯುತ್ತ ಆ ಬೇಡರ ಆಗಮನವನ್ನು ನಿರೀಕ್ಷಿಸುತ್ತ ಕುಳಿತರು.

"ಇಸ್ಮಾಯಿಲ್, ಎಲ್ಲಿರುವೆ? ಭಾವೂ, ನೀನು ಇಲ್ಲಿಗೆ ಯಾವಾಗ ಬಂದೆ?" ಎಂದು ನಾಗೋಜಿಯು ಒಳ್ಳೇ ದರ್ಪದಿಂದ ಕೇಳಲು,

"ಒಡೆಯರೇ, ಈ ಇಸ್ಮಾಯಿಲನು ನಿಮಗೆ ಮೋಸ ಮಾಡಿರುವನು. ಇಂದು ಮನೆಯಲ್ಲಿ ವಿಶೇಷ ಕೆಲಸವಿರದ್ದರಿಂದ ಯಜಮಾನರನ್ನು ಕೇಳಿ ರಜೆ ಪಡೆಕೊಂಡು, ಹಂಸಾಬಾಯಿಯ ಭೆಟ್ಟಿಗಾಗಿ ನಾನು ಈ ಲೋಣಿಗೆ ಬಂದಿದ್ದೆನು; ಆ ಬಾಪಿಯ ಹತ್ತರ ಬಂದು ವಿಚಾರ ಮಾಡಲು, ಹಂಸಾಬಾಯಿಯ ತಂದೆಯು ಬಂದಿದ್ದು, ಅವನು ಈ ಇಸ್ಮಾಯಿಲ್‌ನ ಮನೆಯಲ್ಲಿ ವಾಸಿಸಿರುವನೆಂದೂ, ಹಂಸಾಬಾಯಿಯು ಆತನನ್ನು ಕಾಣಲಿಕ್ಕೆ ಇಲ್ಲಿಗೆ ಬಂದಿರುವಳೆಂದೂ ತಿಳಿಯಿತು. ಕೂಡಲೆ ನಾನು ನೆಟ್ಟಗೆ ಇಲ್ಲಿಗೆ ಬಂದೆನು. ಆಗ ಈ ಪಿಂಜಾರನು ಒಳ್ಳೇ ಗಡಿಬಿಡಿಯಲ್ಲಿದ್ದನು. 'ಆ ಬೇಡರ ನಾಗೋಜಿಯು ತನ್ನ ೨೦೦ ಜನ ಬೇಡರೊಡನೆ ನಿಮ್ಮ ಮೇಲೆ ಆಕಸ್ಮಿಕ ದಾಳಿಯನ್ನಿಟ್ಟು, ನಿಮ್ಮನ್ನು ಸೆರೆಹಿಡಿದು, ಹಂಸಾಬಾಯಿಯನ್ನು ಓಡಿಸಿಕೊಂಡು ಹೋಗುವವನಿರುತ್ತಾನೆ. ಕಾರಣ ನೀವು ಬೇಗನೆ ಇಲ್ಲಿಂದ ಓಡಿ ಹೋಗಿರಿ.' ಎಂದು ಈತನು ಅವರಿಗೆ ಹೇಳುತ್ತಿದ್ದನು; ಅಲ್ಲದೆ 'ನೀವೂ ಮುಸಲ್ಮಾನರು; ನಾನೂ ಮುಸಲ್ಮಾನನು; ಆದ್ದರಿಂದ ಸಂಕಟ ಕಾಲದಲ್ಲಿ ನಿಮಗೆ ನೆರವಾಗುವದು ನನ್ನ ಕರ್ತವ್ಯವಾಗಿದೆ!' ಹೀಗೆಂದು ಈ ಮುಸುಲನು ಅವರಿಗೆ ಹೇಳುತ್ತಲೆ, ಅವರು ಹಂಸಾಬಾಯಿಯೊಡನೆ ಇಲ್ಲಿಂದ ಪಲಾಯನ ಹೇಳಿಸಿದರು. ನಾನು ಅವರನ್ನು ತಡೆಯುವ ಪ್ರಯತ್ನ ಮಾಡಿದೆನು; ಆದರೆ ಆಗ ಈ ನೀಚನು:-- 'ಇವನು ದೇಶಮುಖರ ಸೇವಕನಿರುತ್ತಾನೆ. ಇವನು ನಿಮ್ಮನ್ನು ಮೋಸಗೊಳಿಸುತ್ತಾನೆ; ಕಾರಣ ಇಲ್ಲಿ ಕ್ಷಣಕಾಲ ಸಹ ನಿಲ್ಲದೆ, ನೀವು ನಿಮ್ಮ ಮಗಳೊಡನೆ ಇಲ್ಲಿಂದ ಓಡಿ ಹೋಗಿರಿ. ನೀವು ಈಕೆಯನ್ನು ಇಲ್ಲಿ ಬಿಟ್ಟು ಹೋದರೆ ನಾಗೋಜಿಯು ಇವಳ ಪಾತಿವ್ರತ್ಯಭಂಗಗೊಳಿಸದೆ ಬಿಡಲಿಕ್ಕಿಲ್ಲ,' ಎಂದು ಅಂದ ಕೂಡಲೆ, ಅವರು ನನ್ನನ್ನು ಬಾಯಿಗೆ ಬಂದಂತೆ ಬಯ್ಯುತ್ತ, ತಮ್ಮ ಕುದುರೆಗಳನ್ನೇರಿ ಇಲ್ಲಿಂದ ಓಡಿಹೋದರು. ಇಷ್ಟೇ ಅಲ್ಲ, ಯೋಗ್ಯ ವೇಳೆಗೆ ತಮಗೆ ಎಚ್ಚರಿಕೆ ಕೊಟ್ಟ ಬಗ್ಗೆ ಅವರು ಈ ಪಿಂಜಾರನಿಗೆ ಇನಾವ

ಕೂಡ ಕೊಟ್ಟು ಹೋದರು."

"ಎಲೆ ಮುಸಲಾ! ಕಡೆಗೆ ನೀನು ನಮ್ಮನ್ನು ಮೋಸಗೊಳಿಸಿದೆಯಲ್ಲವೆ?'' ಎಂದೆನುತ್ತ ನಾಗೋಜಿಯು ತನ್ನ ಕತ್ತಿಯನ್ನು ಹಿರಿದು, ಇಸ್ಮಾಯಿಲನ ಕಡೆಗೆ ಧಾವಿಸಿದನು.

"ಧಣಿಯರೇ, ಹಾಗಲ್ಲ; ನನ್ನ ಮಾತು ಕೇಳಿರಿ......." ಎಂದು ಇಸ್ಮಾಯಿಲನು ಅನ್ನುವಷ್ಟರಲ್ಲಿ ನಾಗೋಜಿಯು ಅವನ ಮೈಮೇಲೆ ಏರಿಹೋಗಿ: - 'ಮೂರ್ಖ, ಮುಸಲಾ, ನಾಯಿ ಮುಚ್ಚು. ನನ್ನನ್ನು ಮೋಸಗೊಳಿಸಿ, ಇನಾಮು ಪಡೆದು, ಮತ್ತೆ ಮಾತಾಡುತ್ತೀಯಾ? ನಾಯಕ. ನೋಡುತ್ತೀರೇನು? ಸುಲಿಯಿರಿ ಇವನನ್ನು. ಹಚ್ಚಿರಿ ಇವನ ಮನೆಗೆ ಬೆಂಕಿಯನ್ನು. ತಡಮಾಡಬೇಡಿರಿ." ಎಂದು ಆರ್ಭಟಿಸಿದನು.

ನಾಗೋಜಿಯು ಅಪ್ಪಣೆಯಾಗುವದೊಂದೇ ತಡ, ಆ ಬೇಡರಿಗೆ ಪರ್ವಣಿ ಕಾಲವೇ ಪ್ರಾಪ್ತವಾದಂತಾಯಿತು. ಅವರೆಲ್ಲರೂ ಕುದುರೆಗಳಿಂದ ಇಳಿದು, ಒಮ್ಮೆಲೆ ಆ ಬಂಡಾರನ ಮನೆಯನ್ನು ನುಗ್ಗಿದರು. ಆ ಬಡವನು ಅತಿ ದೈನ್ಯದಿಂದ ನಾಗೋಜಿಯ ಕಾಲಿಗೆ ಬಿದ್ದು ಹೇಳಿಕೊಳ್ಳಹತ್ತಿದನು; ಆದರೆ ಅವನ ಕಡೆಗೆ ಲಕ್ಷ್ಯಗೊಡುವವರಾರು? ಹಾ ಹಾ! ಅನ್ನುವಷ್ಟರಲ್ಲಿ ಆ ಬೇಡರು ಇಸ್ಮಾಯಿಲನ ಮನೆಯನ್ನು ಹಾಳುಮಾಡಿಬಿಟ್ಟರು. ಅವನ ಹತ್ತಿ, ಅರಳೆ, ಕಾತಿ, ಕೈಗೆಲಸದ ಸಾಮಾನು ಮುಂತಾದವುಗಳನ್ನು ಅವರು ನಾಶಗೊಳಿಸಿದರು. ಸಿದ್ಧವಾದಂಥ ಕೆಲ ಹೊಸ ಮಾಲನ್ನು ಕೈಗೆ ಸಿಕ್ಕವರು ತಮ್ಮ ತಮ್ಮ ಕುದುರೆಗಳ ಮೇಲೆ ಹೇರಿಕೊಂಡರು. ಗಡಿಗೆ-ಮಡಿಕೆಗಳನ್ನು ಒಡೆದು ಬಿಟ್ಟರು. ಆ ಬೇಡರು ಇಷ್ಟೇ ಮಾಡಿ ಸುಮ್ಮನಾಗಲಿಲ್ಲ. ಅವರು ಆತನ ಆ ಮುರುಕ ಮನೆಗೆ ಕೊಳ್ಳಿಯಿಟ್ಟರು! ಆ ಮಧ್ಯಾಹ್ನ ಸಮಯದಲ್ಲಿ ಇಸ್ಮಾಯಿಲನ ಆ ಮನೆಯು ದಗದಗನೆ ಉರಿಯಹತ್ತಿತು. ಬೇಡರು ಮನೆಯನ್ನು ನುಗ್ಗಿದಾಗಲೇ ಇಸ್ಮಾಯಿಲನ ಹೆಂಡತಿಯು ಅವರ ಕಣ್ಣು ತಪ್ಪಿಸಿ ಸಮೀಪದ ಒಂದು ವಿಶಾಲವಾದ ಮರದ ಪೊದರನ್ನಾಶ್ರಯಿಸಿ ಕುಳಿತಿದ್ದಳು. ತನ್ನ ಮನೆಯು ಉರಿಯಹತ್ತಿದ್ದನ್ನು ನೋಡಿ, ಅವಳ ಅಂತರಂಗವೂ ಪ್ರಜ್ವಲಿಸಿತು! ಆದರೆ ಆ ಬಡವೆಯು ಮಾಡುವದೇನು? ಇಸ್ಮಾಯಿಲನೂ ಬಾಗಿಲ ಬಳಿಯಲ್ಲಿ ನಿಂತು ಎದೆ ಎದೆ ಬಡಕೊಂಡು ಆಕ್ರೋಶ ಮಾಡಹತ್ತಿದ್ದನು; ಆದರೆ ಆಗ ಅವನನ್ನು ಕೇಳುವವರಾರು? ನಮ್ಮ ಭಾವೂ

ರಾಯನು ಮಾತ್ರ ಇಸ್ಮಾಯಿಲನ ಮೇಲೆ ಹಾಗೆ ಸುಳ್ಳು ಫಿರ್ಯಾದಿ ಹೇಳಿ, ತನ್ನ ಒಡೆಯನ ಹತ್ತಿರ ಒಳ್ಳೇ ಪ್ರಾಮಾಣಿಕನಂತೆ ನಿಂತುಕೊಂಡಿದ್ದನು!

ಬೇಡರು ತಮ್ಮ ಆ ಅನನ್ವಿತ ಕಾರ್ಯವನ್ನು ತೀರಿಸಿದ ಮೇಲೆ ತಮ್ಮ ತಮ್ಮ ಕುದುರೆಗಳನ್ನು ಹತ್ತಿ ನಡೆದರು. ನಾಗೋಜಿಯೂ ಬೇಡರ ಒಡೆಯನೂ ಅವರ ಮುಂದೆ ಇದ್ದರು. ಭಾವೂರಾಯನೂ ಅವರ ಕೂಡ ಕಾಲು ನಡಿಗೆಯಿಂದ ನಡೆದಿದ್ದನು. ಆಗ ನಾಗೋಜಿಯು ಬೇಡರೊಡೆಯನನ್ನು ಕುರಿತು:—"ನಾಯಕ, ನನ್ನ ಬೇತೆಲ್ಲ ಹನಗೆಟ್ಟು ಹೋಯಿತು. ಆ ಕೈದಿಗಳು ಹಸ್ತಗತರಾಗಲಿಲ್ಲ. ಆ ಹುಡುಗೆಯೂ ಜಾರಿಹೋದಳು. ಆಕೆಯು ಸಿಕ್ಕಿದ್ದರೆ, ನಾನು ಅವಳನ್ನು ನಾನಾ ಬಗೆಯಿಂದ ವಿಡಂಬನೆಗೊಳಿಸಿ, ಆಕೆಯ ಆ ಗರ್ವವನ್ನು ಭಂಗಗೊಳಿಸಿ ಬಿಡುತ್ತಿದ್ದೆನು; ಹಾಗು ಅವಳ ತಂದೆಯನ್ನು ಸೆರೆಹಿಡಿದು ಪನ್ಹಾಳಗಡದ ಮೇಲೆ ತಾರಾಬಾಯಿಯವರ ಮುಂದೆ ನಿಲ್ಲಿಸಿ, ವಿಶಾಲವಾದ ಜಹಗೀರು ಸಂಪಾದಿಸುತ್ತಿದ್ದೆನು; ಆದರೆ ಈ ಉಂಡಮನೆಯ ಗಳ ಎಣಿಸುವ ಇಸ್ಮಾಯಿಲನ ಹರಾಮಖೋರತನದ ಮೂಲಕ ಇಂದು ನನ್ನ ಮನೀಷೆಯು ಈಡೇರಲಿಲ್ಲ" ಎಂದು ಅಂದನು.

"ಆದರೆ ಧಣಿಯರೇ, ತಾವು ಆತನ ಮನೆ ಸುಲಿಸಿ, ಬೆಂಕೀಹಚ್ಚಿಸಿ ಬಿಟ್ಟಿರಿ. ಆತನ ಆ ಕೃತ್ಯಕ್ಕೆ ಇದೇನು ಸಾಮಾನ್ಯ ಶಿಕ್ಷೆಯೆ? ಪಾಪ! ಆ ಬಡವನು ಓಣಿಯ ಭಿಕಾರಿಯಾದನು" ಎಂದು ನಾಯಕನು ಹೇಳಲು.

"ಬೆಂಗಿ ಹಚ್ಚಿಸಿದರೇನಾಯಿತು? ನನ್ನ ಕೆಲಸವು ಕೈಗೂಡಲಿಲ್ಲವಲ್ಲ? ಇರಲಿ, ನಿಮಗೆ ಗೊತ್ತು ಮಾಡಿದಂತೆ ಇಗೋ, ಈ ೫೦ ನಾಣ್ಯಗಳನ್ನು ಕೊಡುತ್ತೇನೆ; ತಕ್ಕೊಳ್ಳಿರಿ. ಪ್ರಸಂಗ ಬಿದ್ದಾಗ ನನ್ನ ಕೆಲಸಕ್ಕೆ ನೆರವಾಗಿರಿ" ಎಂದೆಂದು ನಾಗೋಜಿಯು ಬೇಡರ ನಾಯಕನಿಗೆ ನಾಣ್ಯಗಳನ್ನೊಪ್ಪಿಸಿದನು.

ಕೂಡಲೆ ಅವನು ಬೊಗ್ಗಿ ನಾಗೋಜಿಗೆ ಸಲಾಮು ಮಾಡಿ:—"ದೇಶಮುಖರೇ, ನಾವು ತಮ್ಮ ಸೇವಕರು. ಬೇಕಾದಾಗ ತಿಳಿಸಿರಿ. ಬಂದು ನಿಮ್ಮ ಕೆಲಸ ಪೂರೈಸುವೆವು. ಧಣಿಯರೇ, ಇನ್ನು ನಾವು ಹೊರಡುವೆವು" ಎಂದು ಹೊರಡ ಹತ್ತಲು, ನಾಗೋಜಿಯು ಏನನ್ನೋ ಜ್ಞಾಪಿಸಿಕೊಂಡು:"ನಾಯಕಾ, ತಡೆ; ಸ್ವಲ್ಪ ತಡೆ. ಅಗೋ, ಅಲ್ಲಿ ಕಾಣುವ ಆ ಹಳೇ ವಾಡೆಗೆ ನಡೆ. ಅಲ್ಲಿ ಹಂಸೆಯ ಆ ವೃದ್ಧ ತಾಯಿಯಿರುವಳು. ನೀವು ಅವಳ ಸಮಾಚಾರವನ್ನಷ್ಟು ತಕ್ಕೊಂಡು, ಬಳಿಕ ಹೋಗುವಿರಂತೆ" ಎಂದನು.

ಬಳಿಕ ಅವರೆಲ್ಲರೂ ಹಂಸೆಯ ಮನೆಗೆ ನಡೆದರು. ಸಾವಿತ್ರಿಯು ಊರಲ್ಲಿ ನಡೆದ ಕೋಲಾಹಲವನ್ನೆಲ್ಲ ಕಣ್ಣಿಟ್ಟು ನೋಡಿದ್ದಳು. ತನ್ನ ಮಗಳು ಇಂಥ ಹೊತ್ತಿನಲ್ಲಿ ಬಾವಿಗೆ ಒಗೆಯಲಿಕ್ಕೆ ಹೋಗಬಾರದಾಗಿತ್ತೆಂದೂ, ತಾನು ಅವಳನ್ನು ಹೋಗಗೊಡಬಾರದಾಗಿತ್ತೆಂದೂ ಅಂದುಕೊಂಡು, ಅವಳು ಮನಸ್ಸಿನಲ್ಲಿ ಬಹಳವಾಗಿ ಹಳಹಳಿಸಿದಳು. ಅವಳು ತನ್ನ ಮನೆಯ ಕಟ್ಟೆಯ ಮೇಲೆ ನಿಂತು ಬಾವಿಯ ಕಡೆಗೆ ದಿಟ್ಟಿಸಿ ನೋಡಿದಳು. ಹಂಸೆಯು ಎಲ್ಲಿಯೂ ಕಾಣಲಿಲ್ಲ. ಆ ಬೇಡರಿಗೆ ಅಂಜಿ ಅವಳು ಎಲ್ಲಿಯಾದರೂ ಅಡಗಿಕೊಂಡಿರಬೇಕು; ಇಲ್ಲವೆ ಬೇಡರು ಅವಳನ್ನು ಅಪಹರಿಸಿರಬೇಕು. ಮುಂತಾದ ವಿಕಲ್ಪಗಳು ಅವಳ ಮನಸ್ಸಿನಲ್ಲಿ ಬಂದು ಅವಳು ಗಾಬರಿಯಾದಳು. ಏನಾದರೂ ಬೇಡರ ಸದ್ದು ಅಡಗದ ಹೊರತು ಆಕೆಯ ಪತ್ತೆಯಾಗದೆಂದು ಗ್ರಹಿಸಿ, ಸಾವಿತ್ರಿಯು ಚಡಪಡಿಸುತ್ತ ಕುಳಿತಿದ್ದಳು. ಅಷ್ಟರಲ್ಲಿ ಬೇಡರ ಗುಂಪು ತನ್ನ ಮನೆಯ ಕಡೆಗೆ ಹೊರಳಿದ್ದನ್ನೂ ಅವರೆಲ್ಲರ ಮುಂದೆ ನಾಗೋಜಿಯು ಬರುತ್ತಿರುವದನ್ನೂ ಕಂಡು ಆ ಸಾಧ್ವಿಯು ಮಗಳ ವಿಷಯದ ಆಲೋಚನೆಯನ್ನು ಅಷ್ಟಕ್ಕೇ ಬಿಟ್ಟುಗೊಟ್ಟು, ಮನೆಯ ಬಾಗಿಲನ್ನು ಭದ್ರವಾಗಿ ಇಕ್ಕಿಕೊಂಡು ಕುಳಿತಳು.

ಮನೆಗೆ ಬಂದ ಬಳಿಕ ನಾಗೋಜಿಯು ಸಾವಿತ್ರಿಯನ್ನು ಕುರಿತು ನಾನಾ ಬಗೆಯ ಅವಾಚ್ಯ ಶಬ್ದಗಳಿಂದ ಬೈದು, ಅಂದು, ಹಂಸೆಯನ್ನೂ ಶಾಪಳಿಸಿದನು. ಏನಾದರೂ ಅವಳು ಅವನಿಗೆ ಉತ್ತರ ಕೊಡದೆ ಸುಮ್ಮನೆ ಇದ್ದಳು. ಆಗ ಆತನ ಸಿಟ್ಟು ತಡೆಯುವೆ ಅವನು ಆ ಮನೆಯನ್ನು ಸುಲಿದು ಸುಟ್ಟು ಬಿಡಿರೆಂದು ಬೇಡರ ಒಡೆಯನಿಗೆ ಆಜ್ಞಾಪಿಸಿದನು. ಇನ್ನು ಬೇಡರು ಆ ಕೆಲಸಕ್ಕೆ ಪ್ರವೃತ್ತರಾಗುವವರು.

ಅಷ್ಟರಲ್ಲಿ ಭಾವೂರಾಯನು ಮುಂದೆ ಬಂದು ಒಳ್ಳೇ ದರ್ಪದಿಂದ ಬೇಡರನ್ನು ಕುರಿತು:—"ತಡೆಯಿರಿ; ತುಸ ತಡೆಯಿರಿ" ಎಂದು ಹೇಳಿ, ನಾಗೋಜಿಯನ್ನು ಕುರಿತು:—"ಧಣಿಯರೇ ಈ ಮನೆಯು ಯಾರದೆಂದು ತಿಳಿದಿರುವಿರಿ? ಪದಮಜಿಯು ನಿಮ್ಮ ಜೀವದ ಗೆಳೆಯನಲ್ಲವೆ? ಸಾವಿತ್ರೀಬಾಯಿಯನ್ನು ಎಷ್ಟೋ ಸಾರೆ ನೀವು 'ಅವ್ವಾ, ಅವ್ವಾ' ಎಂದು ಸಂಬೋಧಿಸಿರಲಿಲ್ಲವೆ? ಎಷ್ಟೋ ಸಾರೆ ನೀವು ಅವಳ ಕೈಯಿಂದ ಊಟವನ್ನು ಕೂಡ ಮಾಡಿಲ್ಲವೆ? ಉಂಡ ಮನೆಯ ಗಳ ಎಣಿಸುವ ಕೃತ್ಯವನ್ನು ಈ ಬೇಡರೂ ಹೇಯವೆಂದು ತ್ಯಜಿಸು

ತ್ತಿರಲಿಕ್ಕೆ, ಅಂಥ ಗರ್ಹ್ಯ ಕೆಲಸಕ್ಕೆ ನಿಮ್ಮಂಥ ದೇಶಮುಖರು ಮನಸ್ಸುಮಾಡುವರೇ? ಹಂಸಾಬಾಯಿಯು ನಿಮ್ಮನ್ನು ವರಿಸದಿದ್ದರೆ, ಸೂರ್ಯಾಜಿಯು ನಿಮ್ಮ ಆಕಸ್ಮಿಕ ದಾಳಿಯಿಂದ ಪಾರಾಗಿ ತನ್ನ ಮಗಳನ್ನು ಬೇರೆ ಕಡೆಗೆ ಕರಕೊಂಡು ಹೋದರೆ, ಅದರಲ್ಲಿ ಈ ಸಾವಿತ್ರೀಬಾಯಿಯ ತಪ್ಪೇನು? ಈ ತಮ್ಮ ದುಷ್ಟ ಕೃತ್ಯವು ತಮ್ಮ ಹಿರಿಯರಿಗೆ ತಿಳಿದರೆ ಅವರೇನಂದಾರು? ಎಲ್ಲರೂ ತಮ್ಮನ್ನೂ ತಮ್ಮ ಹಿರಿಯರನ್ನೂ ಮನೆತನವನ್ನೂ ನಿಂದಿಸಲಿಕ್ಕಿಲ್ಲವೆ?'' ಎಂದು ಅನ್ನಲು, ಭಾವೂರಾಯನ ಆ ನುಡಿಗಳು ನಾಗೋಜಿರಾಯನ ಅಂತಃರಣಕ್ಕೆ ನಟ್ಟು, ಅವನಲ್ಲಿ ತುಸ ವಿವೇಕವನ್ನು ಹುಟ್ಟಿಸಿದವು. ಕೂಡಲೆ ಅವನು ಬೇಡರನ್ನು ಕುರಿತು:--“ನಡೆಯಿರಿ. ನಿಮ್ಮ ವಸತಿಗೆ ಹೊರಟು ಹೋಗಿರಿ,” ಎಂದು ಹೇಳಲು, ಬೇಡರೆಲ್ಲರೂ ಅವನಿಗೆ ಸಲಾಂ ಮಾಡಿ, ಹೊರಟು ಹೋದರು.

ವಾಚಕರೇ, ಭಾವುರಾಯನು ಎಂಥ ಸುಜನನೆಂಬದನ್ನು ನಿಮಗೆ ಮತ್ತೆ ಹೇಳಬೇಕಾದುದಿಲ್ಲ; ಹಾಗಾದರೆ ಅವನು ಸುಳ್ಳು ಹೇಳಿ, ಆ ಇಸ್ಮಾಯಿಲನ ಸರ್ವನಾಶಕ್ಕೆ ಕಾರಣನೇಕಾದನೆಂಬ ಬಗ್ಗೆ ನೀವು ಒಳ್ಳೇ ಆಶ್ಚರ್ಯದಿಂದ ಕೇಳಬಹುದು. ಅದು ಅಂಥ ವಿಚಿತ್ರ ಸಂಗತಿಯೇ ಆಗಿದ್ದು, ನಾವು ಅದನ್ನೇ ನಿಮಗೀಗ ತಿಳಿಸುತ್ತೇವೆ, ಕೇಳಿರಿ:

ಸಾವಿತ್ರಿಯು ಇಂಬುಗೊಡದ್ದರಿಂದ ಸೂರ್ಯಾಜಿಯು ಖಾನನೊಡನೆ ಇಸ್ಮಾಯಿಲನ ಮನೆಗೆ ಹೋದನಷ್ಟೇ? ಲೋಣಿಯಲ್ಲಿ ಇಸ್ಮಾಯಿಲನ ಹೊರತು ಬೇರೆ ಮುಸಲ್ಮಾನರ ಮನೆಗಳಿರಲಿಲ್ಲ. ಮರಾಟರ ಪ್ರಖರ ತೇಜಸ್ಸಿನ ಆ ಕಾಲಕ್ಕೆ ಮಹಾರಾಷ್ಟ್ರದಲ್ಲಿ ಮುಸಲ್ಮಾನರ ವಸತಿಯು ತೀರ ಕಡಿಮೆಯಿತ್ತು. ಇದ್ದವರೆಲ್ಲರೂ ಹಿಂದುಗಳಿಗೆ ಸರ್ವ ಪ್ರಕಾರದಿಂದ ಅನುಕೂಲರಾಗಿಯೇ ಇರುತ್ತಿದ್ದರು. ಅದರಂತೆ ಲೋಣಿಯಲ್ಲಿ ಇಸ್ಮಾಯಿಲ ಪಿಂಜಾರನೂ ಇರುತ್ತಿದ್ದನು. ಅವನು ಕುಲಗೆಟ್ಟು ಮುಸಲ್ಮಾನನಾಗಿದ್ದರೂ, ಅಲ್ಲಿಯ ಎಲ್ಲ ಹಿಂದುಗಳಿಗೂ ಅನುಕೂಲನಾಗಿ ನಡೆದು, ತನ್ನ ಕಸಬು ಮಾಡಿ, ತನ್ನ ಹಾಗು ತನ್ನ ಹೆಂಡತಿಯ ಉಪಜೀವನವನ್ನು ಸಾಗಿಸುತ್ತಿದ್ದನು. ಹಳ್ಳಿಯ ವಾಸ. ಅದರಿಂದ ಅವನಿಗೆ ಹೆಚ್ಚಾಗಿ ಪ್ರಾಪ್ತಿಯಾಗುತ್ತಿರಲಿಲ್ಲ. ಆದರೂ ಅವನಲ್ಲಿ ಅತಿಥಿಗಳ ಕಾಟವು ಬಹಳ. ಯಾವನೊಬ್ಬ ಮುಸಲ್ಮಾನನು ಶಿವಾಜಿಯ ಕಡೆಯವನೇ ಆಗಿರಲಿ, ಬಾದಶಹನ ಕಡೆಯವನೇ ಆಗಿರಲಿ ಆತನು ಲೋಣಿಗೆ ಬಂದನೆಂದರೆ, ಅವನು ಆ ಊರ ಬಿಟ್ಟು ಹೋಗುವ

ವರೆಗೆ ಇಸ್ಮಾಯಿಲನಲ್ಲೇ ವಸತಿ ಮಾಡುತ್ತಿದ್ದನು. ಬರುವವರು ಬಹುಶಃ ಅಮಲದಾರರೇ ಆಗಿರುತ್ತಿದ್ದರು. ಅಮಲ್ದಾರರು ತಮ್ಮ ಟ-ಪಾಟಗಳ ಬಗ್ಗೆ ಸ್ವಂತದ ಖರ್ಚನ್ನು ಮಾಡಿಕೊಂಡು ವ್ಯವಹರಿಸುವದು ಈಗಿನ ಈ ೨೦ನೇ ಶತಮಾನದ ಕೇವಲ ಸುಧಾರಣೆಯ ಕಾಲದಲ್ಲಿಯೇ ಅಪವಾದವಾಗಿರಲು, ಆಗಿನ ಆ "ಹಮಾ ಕರೇಸೋ ಕಾಯದಾ" ಯುಗದಲ್ಲಿ ನಡೆಯುವದೆಂತು? ಅದರಿಂದ ಆ ಬಡ ಸಿಂಜಾರನ ಆದಾಯದ ಬಹು ಭಾಗವು ಆ ಖಣಗೇಡಿ ಅಮಲ್ದಾರರ ಪಾಲಿಗೇ ಆಗಿ ಹೋಗುತ್ತಿತ್ತು! ನನ್ನಲ್ಲಿ ನಿಮ್ಮ ವ್ಯವಸ್ಥೆಯಾಗದೆಂದು ಆತನು ಆ ಅಮಲ್ದಾರರಿಗೆ ಹೇಳಲಾರ; ಯಾಕಂದರೆ, ಅದರಿಂದ ತನಗೆ ಅದಕ್ಕೂ ಕಠಿಣ ಪ್ರಸಂಗವುಂಟಾಗುವ ಅಂಜಿಕೆ. ಈ ಎಲ್ಲ ಕಾರಣಗಳಿಂದ ಅವನಿಗೂ ಆತನ ಹೆಂಡತಿಗೂ ಆ ಪ್ರತಿಷ್ಠಿತ ಅತಿಥಿಗಳ ಉಪದ್ರವವು ಸಹಿಸದಂತಾಗಿತ್ತು.

ಆ ಅತಿಥಿಗಳ ಕಾಟದಿಂದ ಹೆಂಡತಿಯೊಡನೆ ಉಪವಾಸ ಬೀಳುವ ಪ್ರಸಂಗ ಬರುತ್ತಿತ್ತೆಂಬುದಿಷ್ಟೇ ಅಲ್ಲ; ಪರಕೀಯ ಮುಸಲ್ಮಾನನಿಗೆ ಆಶ್ರಯ ಕೊಡುವವನೆಂಬ ಸಿನದಿಂದ ಶೋಣಿಯ ಹಾಗು ಸಮೀಪದ ಹಿಂದುಗಳೂ ಆ ಪ್ರಾಂತದ ಹಿಂದು ಅಧಿಕಾರಿಗಳೂ ಇಸ್ಮಾಯಿಲನನ್ನು ಹೆಚ್ಚಾಗಿ ಪೀಡಿಸುತ್ತಿದ್ದರು. ಅವನಿಗೆ ಹೋರೆಯು ಕೂಡ ಸೋಕದಂತೆ ಮಾಡುತ್ತಿದ್ದರು.

ಸೂರ್ಯಾಜಿಯು ಜಮಾಲಖಾನನೊಡನೆ ಹೋಗಿ ಇಸ್ಮಾಯಿಲನ ಮನೆಯಲ್ಲಿ ಇಳಿದ ಕೂಡಲೆ ಅವನಿಗೆ ಬಲು ಸ್ಪರ್ಧೆಯಾಯಿತು. ತನ್ನ ತಿಂಗಳು ಗಟ್ಟಲೆಯ ಪ್ರಾಪ್ತಿಯನ್ನು ವೆಚ್ಚ ಮಾಡಿದರೂ ಆ ಅಮಲದಾರರ ಒಪ್ಪತ್ತಿನ ಗ್ರಾಸವಾಗಲಿಲ್ಲ. ಅಂದಿನ ಮಧ್ಯಾಹ್ನವು ಹೇಗಾದರೂ ಕ್ರಮಿಸಿತು. ಸಂಜೆಗೆ ಸಾಮಾನು ತರಬೇಕಾಗಿತ್ತು. ಹತ್ತಿರ ಒಂದು ದುಡ್ಡು ಕೂಡ ಉಳಿದಿರಲಿಲ್ಲ. ನೆರೆಹೊರೆಯ ಹಿಂದುಗಳಲ್ಲಿ ಕೈಗಡ ತರಬೇಕೆಂದರೆ, 'ಸಿತೂರಾಗಿ ನಮ್ಮ ಸಂಭಾಜಿ ಮಹಾರಾಜರ ಹೆಂಡಿರು-ಮಕ್ಕಳುಗಳನ್ನೂ ಮಹಾರಾಷ್ಟ್ರವನ್ನೂ ಸರ್ವಸ್ವೀ ನಾಶಗೊಳಿಸಿದ ಆ ಹರಾಮಖೋರ ಸೂರ್ಯಾಜಿಗೆ ನೀನು ಆಶ್ರಯಗೊಟ್ಟದ್ದರಿಂದ, ನಾವು ನಿನಗೆ ಕೊಂಚವೂ ನೆರವಾಗಲಾರೆವೆ'ಂದು ಅವರು ಸ್ಪಷ್ಟವಾಗಿ ತಿಳಿಸಿದರು. ಹೀಗೆ ಇಸ್ಮಾಯಿಲನು ಎಲ್ಲ ಬಗೆಯಿಂದಲೂ ಉಪಾಯಗಾಣದಾದನು. ಸಂಜೆಗೆ ಸಾಮಾನು ತಂದ ಹೊರತು ಗತ್ಯಂತರವಿರಲಿಲ್ಲ. ಕಡೆಗೆ ಅವನು ತನ್ನಲ್ಲಿ ಅನುವು-ಆಪತ್ತಿಗೆ

ಉಪಯೋಗ ಬೀಳಬೇಕೆಂದು ಸಂಗ್ರಹಿಸಿಟ್ಟಿದ್ದ ೧ ನಾಣ್ಯವನ್ನು ತಕ್ಕೊಂಡು ಸಮೀಪದ ಪಾವಳದ ಸಂತೆಗೆ ನಡೆದನು

ದಾರಿಯಲ್ಲಿ ಅವನಿಗೆ ನಾಗೋಜಿಯು ಭೆಟ್ಟಿಯಾದನು 'ಎತ್ತ ನಡೆದೆ?' ಎಂದು ನಾಗೋಜಿಯು ಕೇಳಲು, ಇಸ್ಮಾಯಿಲನು ನಿಟ್ಟುಸಿರು ಬಿಡುತ್ತ, ತನ್ನ ಮನೆಗೆ ಬಂದ ಆ ದೊಡ್ಡ ಅತಿಥಿಗಳ ಸಂಗತಿಯನ್ನೂ ಅವರ ಆದರಾತಿಥ್ಯದ ಜೀನಸಿಗಾಗಿ ತಾನು ಪಾವಳದ ಸಂತೆಗೆ ನಡೆದುದನ್ನೂ ಹೇಳಿದನು.

ಸೂರ್ಯಾಜಿಯು ಇಸ್ಮಾಯಿಲನಲ್ಲಿಗೆ ಒಬ್ಬ ಸರದಾರನೊಡನೆ ಬಂದು ಇಳಿದಿದ್ದು, ಅವನ ಭೆಟ್ಟಿಗೆ ಹಂಸೆಯು ಹೋಗಿದ್ದಳೆಂಬದನ್ನು ತಿಳಿದ ಕೂಡಲೆ, ನಾಗೋಜಿಯ ತಲೆಯಲ್ಲಿ ಒಂದು ಹೊಸ ವಿಚಾರವೇ ಅಂಕುರಿಸಿತು. ಸೂರ್ಯಾಜಿಯು ಮೊಗಲರಿಗೆ ಸಿತೂರಾದ ಮರಾಟನು. ಅವನು ಒಬ್ಬ ಮುಸಲ್ಮಾನ ಸರದಾರನೊಡನೆ ತನ್ನ ಊರ ಹತ್ತರ ಬಂದಿದ್ದು, ಅವನನ್ನು ಸೆರೆಹಿಡಿದು ತಾರಾಬಾಯಿಯವರಿಗೆ ಅರ್ಪಿಸಿದರೆ, ಅವರಿಂದ ತನಗೆ ಬಹು ದೊಡ್ಡ ಪದವಿಯು ಸಿಗುವದೆಂದು ಅವನು ಭಾವಿಸಿದನು; ಅಲ್ಲದೆ ಇಸ್ಮಾಯಿಲನ ಮನೆಗೆ ನಾಳೆ ಮಧ್ಯಾಹ್ನಕ್ಕೆ ಮತ್ತೆ ತನ್ನ ತಂದೆಯ ಭೆಟ್ಟಿಗಾಗಿ ಬರುವ ಹಂಸೆಯನ್ನು ಅಪಹರಿಸಿದರೆ, ತನ್ನ ಇಷ್ಟಾರ್ಥವೂ ಕೈಗೂಡುವದೆಂದು ಅವನು ತರ್ಕಿಸಿದನು. ಕೂಡಲೆ ನಾಗೋಜಿಯು ಇಸ್ಮಾಯಿಲನಿಗೆ ಖರ್ಚಿಗೆಂದು ೧-೨ ನಾಣ್ಯಗಳನ್ನು ಕೊಟ್ಟು, ಅವನನ್ನು ಒಡಕೊಂಡನು; ಹಾಗು "ನಾನು ನಾಳೆ ಮಧ್ಯಾಹ್ನ ನನ್ನ ಜನರೊಡನೆ ನಿನ್ನಲ್ಲಿಗೆ ಬರುವೆನು; ಮತ್ತು ಅವರನ್ನೆಲ್ಲ ಕೈದು ಮಾಡುವೆನು. ನಾನು ಬರುವ ವರೆಗೆ ನೀನು ಅವರನ್ನು ಮತ್ತೆಲ್ಲಿಗೂ ಹೋಗಗೊಡದಂತೆ ನೋಡಿಕೊಂಡಿರು. ನನ್ನ ಕೆಲಸವಾದ ಕೂಡಲೆ ನಾನು ನಿನಗೆ ಮತ್ತೆ ೫೦ ನಾಣ್ಯಗಳನ್ನು ಬಹುಮಾನವಾಗಿ ಕೊಡುವೆನು" ಎಂದು ಹೇಳಿ ಕಳಿಸಿದನು.

ಭಾವೂರಾಯನು ನಾಗೋಜಿಯನ್ನು ನೆರಳಿನಂತೆ ಹಿಂಬಾಲಿಸುತ್ತಿದ್ದನಷ್ಟೇ? ಮರೆಗೆ ನಿಂತು ಅವರಿಬ್ಬರ ಭಾಷಣವನ್ನೂ ಕೇಳಿದ್ದನು; ಹಾಗು ಅಂದಿನ ದಿವಸ ಅವನ ಪ್ರಾಣಪಾತ್ರಿಯಾದ ಹಂಸೆಯ ಮರ್ಯಾದೆ ರಕ್ಷಣೆಗಾಗಿ ಆಯತ ಸಮಯಕ್ಕೆ ಬೋಣಿಗೆ ಬಂದು, ಅವರಿಗೆ ಎಚ್ಚರಿಕೆ ಕೊಟ್ಟು, ಅವರನ್ನು ಆ ಆಕಸ್ಮಿಕ ದಾಳಿಯಿಂದ ಪಾರು ಮಾಡಿದ್ದನಲ್ಲವೆ, ಆ ಮೂರ್ಖ ಮುಸಲನ ಮೇಲೆ ತಿರುಗಿ ಬಿದ್ದು, ಅವನ ಸರ್ವನಾಶಕ್ಕೆ ಕಾರಣನಾದನು!

## ಪುನರ್ದರ್ಶನ,

"ಹಂಸಾ, ನೀನು ಕುದುರೆಯನ್ನು ಬಹು ಚೆನ್ನಾಗಿ ಹತ್ತುತ್ತಿರುವೆ. ನೀನು ನಮ್ಮೊಡನೆ ಹೇಗೆ ಬರುವಿಯೋ, ಎಂದು ನೀನು ಕುದುರೆ ಹತ್ತುವಾಗ ನನಗೆ ಆಲೋಚನೆಯುಂಟಾಗಿತ್ತು; ಆದರೆ ಕುದುರೆ ಹತ್ತುವದರಲ್ಲಿ ನೀನು ನಮ್ಮನ್ನೂ ಸೋಲಿಸಿ ಬಿಟ್ಟೆ," ಎಂದು ಸೂರ್ಯಾಜಿಯು ನುಡಿಯಲು,

"ಅಪ್ಪಾ, ಈ ವಿದ್ಯೆಯನ್ನು ನನಗೆ ಅಣ್ಣನೇ ಕಲಿಸಿರುತ್ತಾನೆ." ಎಂದು ಹಂಸೆಯು ಹೇಳಿದಳು

ಲೋಣಿಯಿಂದ ಭಾವೂರಾಯನ ಸೂಚನೆಯ ಮೇರೆಗೆ ಹೊರಟ ಸೂರ್ಯಾಜಿ, ಜಮಾಲಖಾನ ಹಾಗು ಹಂಸೆಯರು ಅಲ್ಲಿಂದ ೮-೧೦ ಸರದಾರ ಗಳ ಮೇಲಿನ ಘೋಡ ನದಿಗೆ ಹಾ ಹಾ ಅನ್ನುವಷ್ಟರಲ್ಲಿ ಬಂದು ತಲುಪಿದರು. ಹೊಳೆಯೊಳಗಿನ ತಗ್ಗು-ದಿನ್ನೆಗಳನ್ನು ಅರಿತು, ಕುದುರೆಗಳನ್ನು ಆಚೇ ದಂಡೆಗೆ ಒಯ್ದು ಬಳಿಕ ಹಂಸೆಯು ಮತ್ತೆ ತನ್ನ ಕುದುರೆಯ ಕಡಿವಾಣವನ್ನು ಸಡಿಲು ಬಿಟ್ಟಳು. ಅದನ್ನು ಕಂಡು ಜಮಾಲಖಾನನು:— "ಸೂರಜಖಾ, ಇಲ್ಲಿ ಸ್ವಲ್ಪ ಹೊತ್ತು ವಿಶ್ರಾಂತಿ ಪಡೆಯಬೇಕೆಂದು ನನಗನಿಸುತ್ತದೆ. ಈ ಸಿನ್ನ ಹುಡುಗಿಯಂತೂ ಕೇವಲ ಬಿಜಲಿಯಾಗಿದ್ದಾಳೆ-ಬಿಜಲಿ! ಇವಳೊಡನೆ ಸಂಜೆಯ ವರೆಗೆ ಹೀಗೆಯೇ ಕುದುರೆಗಳನ್ನು ಓಡಿಸುತ್ತ ಹೋದರೆ, ನಾನು ಸಂಜೆಗೆ ಜೀವದಿಂದ ಉಳಿಯಲಿಕ್ಕಿಲ್ಲವೆಂದೇ ತೋರಹತ್ತಿದೆ" ಎಂದು ಅನ್ನಲು,

"ಖಾನಸಾಹೇಬ, ನಮ್ಮನ್ನು ಆ ವೇಡದ ನಾಗೋಜಿಯ ಹಸ್ತಕರಾದ ಬೇಡರು ಬೆನ್ನಟ್ಟಿರುವರೆಂಬದನ್ನು ಮರೆತೇ ಬಿಟ್ಟಿರೇನು? ಅದಕ್ಕೇನು ಮಾಡಬೇಕು? ಇಂದು ವಿಶ್ರಾಂತಿಯ ಮಾತೆತ್ತಬೇಡಿರಿ," ಎಂದು ಅಂದವನೇ ಸೂರ್ಯಾಜಿಯೂ ಹಂಸೆಯ ಕುದುರೆಯನ್ನನುಸರಿಸಿ ತನ್ನ ಕುದುರೆಯನ್ನು ಬಿಟ್ಟನು. ಆ ಪ್ರವಾಸದಲ್ಲಿ ಯಾವಾಗಲೂ ಹಂಸೆಯ ಕುದುರೆಯೇ ಎಲ್ಲಕ್ಕೂ ಮುಂದೆ ಇರುತ್ತಿತ್ತು. ಜಮಾಲಖಾನನು ಸೂರ್ಯಾಜಿ-ಹಂಸೆಯರ ಹಿಂದಿನಿಂದ ಅನಿವಾರ್ಯಕ್ಕಾಗಿ ನಡೆಯಬೇಕಾಯಿತು. ಸೂರ್ಯಾಜಿಯು ನೆಟ್ಟಗೆ ಅಹಮ್ಮದನಗರದ ದಾರಿಯನ್ನು ಹಿಡಿದಿದ್ದನು. ಅಹಮ್ಮದನಗರದಲ್ಲಿ ಅಂದು ರಾತ್ರಿಯ ಮುಕ್ಕಾಮು ಮಾಡಿ, ಅಲ್ಲಿಯ ದರೋಗನಿಂದ

ಬಾದಶಹನ ಮುಕ್ಕಾಮನ್ನು ತಿಳಿದು, ಮರುದಿನ ತಾವು ಬಾದಶಹನ ಬಳಿಗೆ ಹೋಗಬೇಕೆಂದು ಸೂರ್ಯಾಜಿಯು ಆಲೋಚಿಸಿದ್ದನು. ಮೂರೂಸಂಜೆಗೆ ಅಹಮ್ಮದನಗರದ ಆ ಪ್ರಖ್ಯಾತ ಮಣಕಿಲ್ಲೆಯ ಪ್ರವೇಶದ್ವಾರದ ಬಳಿಗೆ ಅವರೆಲ್ಲರೂ ತಮ್ಮ ತಮ್ಮ ಕುದುರೆಗಳನ್ನು ಒಯ್ದು ನಿಲ್ಲಿಸಿದರು.

ಕೂಡಲೆ ಹಂಸೆಯು ಒಳ್ಳೇ ಉತ್ಸುಕತೆಯಿಂದ ತಂದೆಯನ್ನು ಕುರಿತು:-- "ಅಪ್ಪಾ, ಇದು ಯಾವ ಗಡವು?" ಎಂದು ಪ್ರಶ್ನೆಮಾಡಿದಳು.

"ತಂಗೀ, ಇದು ಅಹಮ್ಮದನಗರದ ಸುಪ್ರಸಿದ್ಧ ಮಣಕಿಲ್ಲೆಯು. ಚಾಂದಬೀಬಿಯು ಈ ನಗರವನ್ನು ಸ್ಥಾಪಿಸಿ, ಇದೇ ಕಿಲ್ಲೆಯಲ್ಲೇ ಅವಳು ರಣಮರ್ದ ಗಂಡಸಿನಂತೆ ಕಾದಿ ಮಡಿದಳು. ಅಗೋ, ಅತ್ತ ಕಾಣುವ ಚಚ್ಚೌಕಾದ ದಿನ್ನೆಯಲ್ಲಿ ಆವಳು ತನ್ನ ಮಹಾಲನ್ನು ಕಟ್ಟಿಸುತ್ತಿದ್ದಳು; ಆದರೆ ಆಕೆಯ ಮರಣದ ಮೂಲಕ ಆ ಕೆಲಸವು ಅರ್ಧಕ್ಕೇ ನಿಂತು ಹೋಯಿತು."

"ಹಾಗಾದರೆ ಈಗ ಈ ಮಣಕಿಲ್ಲೆಯು ನಮ್ಮ ಮರಾಟರ ವಶದಲ್ಲಿರುವದಷ್ಟೇ?" ಎಂಬ ಹಂಸೆಯ ಪ್ರಶ್ನೆಗೆ,

"ಛೇ ಛೇ! ಇದು ಬಾದಶಹನ ವಶದಲ್ಲಿದೆ. ಸದ್ಯಕ್ಕೆ ಮರಾಟರ ವಶದಲ್ಲಿ ಆದಾವ ಪ್ರಸಿದ್ಧ ದುರ್ಗವಿದೆ? ಬಾದಶಹನು ಮರಾಟರ ಎಲ್ಲ ದುರ್ಗಗಳನ್ನೂ ವಶಪಡಿಸಿಕೊಳ್ಳುತ್ತ ನಡೆದಿದ್ದಾನೆಂಬದನ್ನು ನೀನು ನಿನ್ನ ಅಣ್ಣನಿಂದ ಕೇಳಿ ತಿಳಿದಿಲ್ಲವೇ?"

"ಹಾಗಾದರೆ ಅಪ್ಪಾ, ನೀವು ನನ್ನನ್ನು ಮುಸಲರ ಈ ಪಟ್ಟಣಕ್ಕೇಕೆ ಕರೆದೊಯ್ಯುತ್ತಿರುವಿರಿ?"

"ಮತ್ತಿಲ್ಲಿಗೆ ಕರೆದೊಯ್ಯಬೇಕೆನ್ನುತ್ತೀ? ಯಾವನು ನಿನಗೆ ಹತ್ತಲಿಕ್ಕೆ ತನ್ನ ಕುದುರೆಯನ್ನು ಕೊಟ್ಟನೋ ಹಾಗು ಲೋಣಿಯಿಂದ ಓಡಿಹೋಗಲಿಕ್ಕೆ ಸೂಚಿಸಿದನೋ ಆತನೇ-ಆ ಭಾವೂರಾಯನೇ-ನಮಗೆ ಕಟ್ಟುನಿಟ್ಟಾಗಿ ಹೇಳಲಿಲ್ಲವೇ 'ನೀವು ಬೇಗನೆ ಮರಾಟರ ಗಡಿಯನ್ನು ದಾಟಿ, ಮೊಗಲರ ನಾಡನ್ನು ಸೇರಿರೆ'ಂದು? ತಂಗೀ, ನೀನು ಹೀಗೆ ಸಂಶಯಪಡುವುದೇಕೆ? ಅಲ್ಪಾವಧಿಯಲ್ಲೇ ನಾವು ಈ ಮೊಗಲರ ಗಡಿಯನ್ನು ದಾಟಿ ಪುನಃ ಮರಾಟರ ನಾಡನ್ನು ಸೇರೋಣವಂತೆ; ಹಾಗು ಅಲ್ಲಿಯ ಯಾವುದೊಂದು ನಿವಾಂತ ಸ್ಥಳದಲ್ಲಿ ವಾಸಿಸಿ, ನಿನ್ನ ತಾಯಿಯನ್ನೂ ಅಲ್ಲಿಗೆ ಕರೆತರೋಣವಂತೆ"

ಈ ಪ್ರಕಾರದ ಸೂರ್ಯಾಜಿಯ ಸರಳ ಉತ್ತರವನ್ನು ಕೇಳಿದ ಹಂಸೆಗೆ

ತನ್ನ ತಂದೆಯ ನುಡಿಯಲ್ಲಿ ಸಂಶಯವುಂಟಾಗುವದೆಂತು? ಕೂಡಲೆ ಅವಳು ತನ್ನ ಕುದುರೆಯಿಂದಿಳಿದಳು; ಹಾಗು ತಂದೆಯೊಡನೆ ಆ ಉಹಮ್ಮದನಗರದ ಕಿಲ್ಲೆಯ ಬಾಗಿಲ ಕಡೆಗೆ ನಡೆದಳು.

ಬಾಗಿಲ ಹತ್ತರ ಹೋದ ಬಳಿಕ ಸೂರ್ಯಾಜಿಯು ಜಮಾಲಖಾನ ನನ್ನು ಕುರಿತು:—"ಖಾನಸಾಹೇಬ, ನೀವು ತುಸ ಮುಂದೆ ಹೋಗಿ, ದರೋಗನನ್ನು ಕೂಗಿ ಬಾಗಿಲ ತೆರೆಯುವಂತೆ ಹೇಳಿರಿ; ಅಂದರೆ ನಾವು ನಮ್ಮ ಈ ಕುದುರೆಗಳ ಚಾಕರಿಯನ್ನು ಅವನಿಗೆ ವಹಿಸಿ, ವಿಶ್ರಾಂತಿ ಹೊಂದಲಿಕ್ಕೆ ಅನುಕೂಲವಾಗುತ್ತವೆ" ಎಂದು ಅಂದನು..

ಜಮಾಲಖಾನನು ಮುಂದಾಗಿ ಹೋಗಿ ಪ್ರವೇಶದ್ವಾರದ ದಿಡ್ಡಿಯ ಕದವನ್ನು ದೂಡುತ್ತಲೆ ಅದು ತೆರೆಯಿತು. ಅವನು ಒಳಗಿನ ಪಹರೆಯವರಿಗೆ ಬಗೆ ಬಗೆಯಾಗಿ ಹೇಳಿದನು. ಅವರು ದೊಡ್ಡ ಬಾಗಿಲು ತೆರೆಯಲೊಲ್ಲರು; ಹಾಗು ಅವರ ಕುದುರೆಗಳನ್ನು ಒಳಗೆ ಬರಗೊಡಲೊಲ್ಲರು. ಅವರ ಆ ವಾದ-ವಿವಾದವನ್ನು ಕೇಳಿ, ಸ್ವಲ್ಪ ಹೊತ್ತಿನಲ್ಲಿಯೇ ದುರ್ಗದೊಳಗಿನ ಮತ್ತೆ ಕೆಲ ಜನ ಶಿಪಾಯಿಗಳೂ ಅಲ್ಲಿಗೆ ಬಂದರು. ಕಡೆಗೆ ಮುಖ್ಯ ಕಿಲ್ಲೇದಾರನೂ ಅಲ್ಲಿಗೆ ಬಂದನು. ಜಮಾಲಖಾನನು ಅವನಿಗೆ ಹೇಳುತ್ತಾನೆ:—"ನಾವು ಬಾದಶಹನ ಸರದಾರರಿರುತ್ತೇವೆ. ನಾನು ಛೈಜಪುರದ ಸರದಾರನಾಗಿದ್ದು, ನನ್ನೊಡನೆ ಬಂದಿರುವ ಇವರು ಮರಾಟಾಶಾಹಿಯನ್ನು ಮಣ್ಣುಗೂಡಿಸಿದ ಸೂರಜಖಾನರು-ವಾಯಿಯ ದೇಶಮುಖರಾಗಿರುತ್ತಾರೆ. ಅದುದರಿಂದ ನೀವು ನಮ್ಮನ್ನು ದುರ್ಗದಲ್ಲಿ ಕರಕೊಂಡು ನಮ್ಮ ಸರಬರಾಯಿಯನ್ನು ಚೆನ್ನಾಗಿ ನೋಡಿಕೊಳ್ಳುವದು ನಿಮ್ಮ ಕರ್ತವ್ಯವಾಗಿದೆ. ಈ ನಿಮ್ಮ ಶಿಪಾಯಿಗಳ ವರ್ತನವು ಬಾದಶಹನ ಕಿವಿಗೆ ಮುಟ್ಟಿದರೆ, ನಿಮಗೆ ಕಠಿಣವೆನಿಸವೆ ಇರಲಿಕ್ಕಿಲ್ಲ. ಇದಲ್ಲದೆ ನಮ್ಮೊಡನೆ ಶಹಜಾದರ ಹೊಸ ರಖುನಾನ ಖಾನೆಯೂ ಇರುತ್ತದೆ"

"ಖಾನಸಾಹೇಬ, ಅದು ಏನೇ ಇರಲಿ; ನೀವು ಯಾರೇ ಇರಲೊಲ್ಲಿರೇಕೆ? ನಾನಂತೂ ಈಗ ಈ ದುರ್ಗದ ಬಾಗಿಲವನ್ನು ತೆರೆಯಲಾರೆನು. ದುರ್ಗದಲ್ಲಿ ಹೆಚ್ಚಾಗಿ ಸಿಬ್ಬಂದಿಯಿರದ್ದರಿಂದ ನಾನು ನನ್ನ ಕರ್ತವ್ಯವನ್ನು ಪಾಲಿಸಲೇಬೇಕಾಗುತ್ತದೆ. ಇನ್ನು ನೀವು ಇಂದು ಈ ರಾತ್ರಿ ಇಲ್ಲಿಯೇ ವಿಶ್ರಮಿಸುವದರಿಂದ ನಿಮ್ಮ ಸರಬರಾಯಿ ಮಾಡುವದು ನನ್ನ ಕರ್ತವ್ಯ

ವಾಗಿರುವದು; ಆದರೆ ಖಾನಸಾಹೇಬ, ನಿಮಗೆ ತಿಳಿಸಲು ಅತ್ಯಂತ ಖೇದವಾಗುವದೇನೆಂದರೆ, ನಾನೂ ನನ್ನ ಈ ಶಿಪಾಯಿಗಳೂ ಕಳೆದ ಎರಡು ತಿಂಗಳುಗಳಿಂದ ಒಪ್ಪತ್ತೇ ಊಟ ಮಾಡಿ ಜೀವ ಹಿಡಿದಿರುತ್ತೇವೆ; ಅಂದಮೇಲೆ ನಾವು ನಿಮ್ಮ ಸರಬರಾಯಿ ಮಾಡುವದೆಂತು? ಬಾದಶಹನು ಈ ಪ್ರಾಂತಕ್ಕೆ ಬಂದಾಗಿನಿಂದ ದಿನಾಲು ಹತ್ತೆಂಟು ಜನ ದೊಡ್ಡ ದೊಡ್ಡ ಸರದಾರರು ಈ ದುರ್ಗವನ್ನು ನೋಡುವ ನೆವದಿಂದ ಇಲ್ಲಿಗೆ ಅತಿಥಿಗಳಾಗಿ ಬರುತ್ತಿರುವರು. ಮೊದಮೊದಲು ಬಾದಶಹನಿಗೆ ಅಂಜಿ ನಾನು ಆ ಸರದಾರರ ಆತಿಥ್ಯವನ್ನು ಅನಿವಾರ್ಯಕ್ಕಾಗಿ ಮಾಡಿದೆನು; ಹಾಗು ಆ ಖರ್ಚಿನ ವ್ಯವಸ್ಥೆಯಾಗಬೇಕೆಂದು ಬಾದಶಹನಿಗೆ ವಿನಂತಿ ಮಾಡಿಕೊಂಡೆನು; ಆದರೆ ಬಾದಶಹನಿಂದ ಆ ಬಗ್ಗೆ ಏನೊಂದೂ ವ್ಯವಸ್ಥೆಯಾಗದ ಮೂಲಕ ನಾನಾದರೂ ಮಾಡುವದೇನು? ಈ ಪ್ರಾಂತದಲ್ಲಿ ಇನ್ನೂ ಒಂದು ಹನಿ ಕೂಡ ಮಳೆ ಬಿದ್ದಿಲ್ಲ. ಈಗಾಗಲೆ ಬರಗಾಲದ ಲಕ್ಷಣವು ತೋರುತ್ತಿದ್ದು, ಈ ಸಾರೆ ದೊಡ್ಡ ಬರ ಬೀಳುವದೆಂದು ಬಹುಜನರು ತಿಳಿದುಕೊಂಡಿರುತ್ತಾರೆ. ಇಂಥ ಈ ಕಠಿಣ ಪ್ರಸಂಗದಲ್ಲಿ ನಾವು ಮಾಡುವದಾದರೂ ಏನು? ಬಾದಶಹನ ಸರದಾರರೇ ಏಕೆ, ಸ್ವತಃ ಬಾದಶಹನ ಮಕ್ಕಳಾದ ಶಹಜಾದರು ಬಂದರೂ ನಾನು ಈಗ ಈ ದುರ್ಗದ ಬಾಗಿಲನ್ನು ತೆರೆಯಲಾರೆನು.

ಸೂರ್ಯಾಜಿಯು ಆ ಬಾಗಿಲದಿಂದ ತುಸ ಅಂತರದ ಮೇಲೆ ಒಂದು ವೃಕ್ಷದ ಕೆಳಗೆ ಹಂಸೆಯೊಡನೆ ನಿಂತುಕೊಂಡಿದ್ದನು. ಜಮಾಲಖಾನನು ಮೋರೆಯೊಣಗಿಸಿಕೊಂಡು ಬಂದು ಕಿಲ್ಲೇದಾರನು ಹೇಳಿದ ಸಂಗತಿಯನ್ನು ತಿಳಿಸಲು, ಸೂರ್ಯಾಜಿಯು ಯೋಚನೆಗೊಳಗಾದನು. ತುಸ ಹೊತ್ತಿನಲ್ಲಿಯೇ ಅವರೆಲ್ಲರೂ ಮತ್ತೆ ಅಶ್ವಾರೋಹಿಗಳಾಗಿ ಅಹಮ್ಮದನಗರ ಊರ ಕಡೆಗೆ ಹೊರಟರು. ಅಷ್ಟರಲ್ಲಿ ಸೂರ್ಯಾಜಿಯು ಬಂದ ದಾರಿಯ ಕಡೆಗೆ ಹಿಂದಿರುಗಿ ನೋಡಿ ಒಳ್ಳೇ ಗಾಬರಿಯಿಂದ:- "ಖಾನಸಾಹೇಬ, ಅಗೋ ಅತ್ತ ದೂರದಲ್ಲಿ ಕುದುರೆಗಳ ಸಪ್ಪಳವು ಕೇಳಿಸದಂತಾಗುತ್ತಿದ್ದು, ಕೆಂಧೂಳವಡಗಿರುವಂತೆ ತೋರುತ್ತಿದೆ. ಕಾರಣ ಬೇಗನೆ ಊರೊಳಗೆ ಹೋಗಿ, ಯಾವುದೊಂದು ಧರ್ಮಶಾಲೆಯನ್ನಾಶ್ರಯಿಸಿ, ಇಂದಿನ ಊಟ-ಪಾಟಗಳ ವ್ಯವಸ್ಥೆ ಮಾಡಿಕೊಂಡು ಜಾಗ್ರತೆಯಾಗಿರೋಣ ನಡೆಯಿರಿ" ಎಂದು ಅಂದನು.

ನಿಜವಾಗಿ ನೋಡಿದರೆ ಅವರು ಬಂದ ದಾರಿಯಿಂದ ಕುದುರೆಗಳ ಖುರ

ಪುಟಗಳ ಸಪ್ಪಳವೂ ಕೇಳುತ್ತಿರಲಿಲ್ಲ; ಕೆಂಧೂಳವೂ ಕಾಣಿಸುತ್ತಿರಲಿಲ್ಲ. ಆದರೂ ಸೂರ್ಯಾಜಿಯು ಯಾವ ಉದ್ದೇಶದಿಂದ ಆಗ ಹಾಗೆ ನುಡಿದನೋ ತಿಳಿಯಲಿಲ್ಲ.

ಅವರೆಲ್ಲರೂ ತಮ್ಮ ಕುದುರೆಗಳನ್ನು ನಗರದ ಅಗಸೆಯ ಬಾಗಿಲದಿಂದ ಒಳಗೆ ಒಯ್ದು ತುಸ ಮಾರ್ಗ ಕ್ರಮಿಸಲು, ಅವರಿಗೆ ಅಲ್ಲಿಯ ವಿಶಾಲವಾದ ಪೇಟೆಯು ಹತ್ತಿತು. ಪೇಟೆಯ ಬಳಿಯಲ್ಲೇ ಒಂದು ಪ್ರಶಸ್ತವಾದ ಧರ್ಮ ಶಾಲೆಯಿತ್ತು. ಸೂರ್ಯಾಜಿಯು ಆ ಧರ್ಮಶಾಲೆಯಲ್ಲೇ ಉಳಿಯುವದನ್ನು ನಿರ್ಧರಿಸಿ, ಕುದುರೆಯಿಂದಿಳಿದನು; ಹಾಗು ಹಂಸೆಯನ್ನೂ ಇಳಿಸಿ, ಅಲ್ಲಿಯ ಒಂದು ಕೋಣೆಗೆ ಕರೆದೊಯ್ದು ಕೂಡ್ರಿಸಿದನು. ಬಳಿಕ ಅವನು ತಮ್ಮ ಕುದುರೆಗಳನ್ನೆಲ್ಲ ಕಟ್ಟಿ, ಅವುಗಳಿಗೆ ಹುಲ್ಲು-ದಾಣಿಗಳನ್ನೂ ತಮ್ಮ ಊಟಕ್ಕೆ ಹಿಟ್ಟು ಬೇಳೆಗಳನ್ನೂ ನೀರನ್ನೂ ತರಬೇಕೆಂದು ಪೇಟೆಗೆ ನಡೆದನು.

ಆಗ ಹಂಸೆಯು ತಂದೆಯನ್ನು ತಡೆದು:-"ಅಪ್ಪಾ, ನೀವು ಪೇಟೆಯಿಂದ ಹಿಟ್ಟು-ಬೇಳೆಗಳನ್ನೇನೋ ಕೊಂಡುಕೊಂಡು ತರಬಹುದು; ಆದರೆ ಅವನ್ನು ಅಡಲಿಕ್ಕೆ ಸಾಹಿತ್ಯ ಬೇಡವೆ? ಡಬರಿ, ಹಂಚು, ಪರಾತ ಮುಂತಾದವು ಗಳನ್ನೂ ನೀರು ತುಂಬಿ ತರಲಿಕ್ಕೆ ಕೊಡವನ್ನೂ ಎಲ್ಲಿಂದ ತರುವಿರಿ?"

"ತಂಗೀ, ನೀನು ಆ ಬಗ್ಗೆ ಯೋಚಿಸಬೇಡ. ನಾನು ಎಲ್ಲವನ್ನೂ ಜೋಡಣೆ ಮಾಡಿಕೊಂಡು ಬರುತ್ತೇನೆ. ಅದುವರೆಗೆ ನೀನು ಇಲ್ಲಿಯೇ ವಿಶ್ರಮಿಸು" ಎಂದವನೇ ಜಮಾಲಖಾನನೊಡನೆ ಪೇಟೆಗೆ ನಡೆದನು. ದಾರಿಯಲ್ಲಿ ಜಮಾಲಖಾನನು ಅವನನ್ನು ಕುರಿತು:—"ಸೂರಜಖಾ, ನಾನು ನಿಮ್ಮೊಡನೆ ನಾಲ್ಕು ಮಾತುಗಳನ್ನು ಆಡಬೇಕೆಂದಿರುತ್ತೇನೆ; ಆದರೆ ಮುಂಜಾವಿನಿಂದ ನನಗೆ ಸಂಧಿಯೇ ದೊರೆತಿಲ್ಲ. ನಿನ್ನೆ ಹಂಸೆಯ ವಿಷಯ ವಾಗಿ ನಾನು ಕೇಳಿದ ಮಾತಿಗೆ ನೀವು ಸಮ್ಮತಿಸಲಿಕ್ಕೂ ಆ ಪ್ರಸಂಗವು ನಿಜ ವಾಗಿಯೇ ಇಂದು ಪ್ರಾಪ್ತವಾಗಲಿಕ್ಕೂ ಗಂಟೇ ಬಿದ್ದಿದೆ. ಒಳ್ಳೇದು. ಖಾನ ಸಾಹೇಬ, ಇನ್ನು ನಾವು ದಾರಿಯಲ್ಲಿ ಹೆಚ್ಚು ಕಾಲ ಕಳೆಯದೆ, ೧-೨ ದಿನ ಗಳಲ್ಲೇ ನೆಟ್ಟಗೆ ಬೇಗಮಪುರಕ್ಕೆ ಹೋಗೋಣ; ಅಂದರೆ ಹಂಸೆಯನ್ನು ಅಲ್ಲಿಯ ಬಾದಶಹನ ಝನಾನಖಾನೆಗೆ ಮುಟ್ಟಿಸಿ, ನಿರಾತಂಕವಾಗಲಿಕ್ಕೆ ಅನು ಕೂಲವಾಗುವದು'' ಎನ್ನಲು,

"ಖಾನಸಾಹೇಬ, ಈಗ ಆ ಬೇಗಮಪುರದಲ್ಲೇನಿದೆ? ಎಲ್ಲ ಝನಾನೆ

ಯೂ ಬಾದಶಹನೊಡನೆ ಪ್ರವಾಸದಲ್ಲಿವೆ."

"ಆ ಬಗ್ಗೆ ನಿಮಗೆ ಏನೂ ಗೊತ್ತಿಲ್ಲೆಂಬದು ಇದೇ. ಬಾದಶಹನು ತನ್ನ ಎಲ್ಲ ಝನಾನಖಾನೆಯನ್ನು ವಿಶ್ವಾಸುಗನಾದ ತನ್ನ ವಜೀರನ ಸ್ವಾಧೀನ ಪಡಿಸಿ ಬೇಗಮಪುರದಲ್ಲಿಯೇ ಇರ ಹೇಳಿ, ತಾನೊಬ್ಬನೇ ತನ್ನ ಸರದಾರರೊಡನೆ ಮರಾಟರ ಮೇಲೆ ದಾಳಿಯಿಕ್ಕಲಿಕ್ಕೆಂದು ಹೊರಟಿರುತ್ತಾನೆ."

"ಓಹೋ! ಈ ಸಂಗತಿಯನ್ನು ನಾನರಿಯೆನೇ? ಆದರೆ ಬಾದಶಹನ ಝನಾನಖಾನೆಯಲ್ಲಿ ಛತ್ರಪತಿ ಸಂಭಾಜ ಮಹಾರಾಜರ ಹೆಂಡತಿಯಾದ ಏಸೂಬಾಯಿಯವರು ಇರುವರಷ್ಟೆ? ಅವರು ನಮ್ಮ ಹಂಸೆಯನ್ನು ಕೂಡಲೆ ಗುರುತಿಸಬಹುದು; ಯಾಕಂದರೆ ರಾಯಗಡದಲ್ಲಿ ನಮ್ಮ ಹಂಸೆ-ಪದನು ಜಿಯೂ ಬಾಲ ಶಾಹೂರಾಜರೂ ರಾಜವಾಡೆಯಲ್ಲಿ ಕೂಡಿ ಆಡುತ್ತಿದ್ದರು."

"ಸೂರಜಖಾ, ನೀನು ಆ ಬಗ್ಗೆ ಯೋಚಿಸುವ ಕಾರಣವಿಲ್ಲ; ಯಾಕಂದರೆ, ನಾನು ನಿನ್ನ ಹಂಸೆಯನ್ನು ಬಹು ಗುಪ್ತವಾದ ಸ್ಥಳದಲ್ಲಿರಿಸುವ ವ್ಯವಸ್ಥೆ ಮಾಡಿಸುವೆನು; ಹಾಗು ಆಕೆಯನ್ನು ಯಾವ ಶಹಜಾದನಿಗೆಂದು ನಿಶ್ಚಯಿಸಿವೆಯೋ, ಅವನ ಹೊರತು ಇತರರ ಕಣ್ಣಿಗೆ ಆಕೆಯ ರೋಮವು ಕೂಡ ಕಾಣಲಿಕ್ಕಿಲ್ಲ."

"ಹಾಗಾದರೆ ಅಲ್ಲಿ ಆಕೆಯ ಊಟ-ಪಾಟಗಳ ವ್ಯವಸ್ಥೆಯೇನು? ಝನಾನಖಾನೆಯೊಳಗಿನ ಯಾವ ವ್ಯಕ್ತಿಯ ಕೈಯಿಂದಲೂ ಆಕೆಯು ನೀರು-ನಿಡಿಗಳನ್ನು ಮುಟ್ಟಲಾರಳು; ಅಂದ ಮೇಲೆ ಇವರು ತಂದ ಊಟವನ್ನು ಉಣ್ಣುವದಂತೂ ಬೇರೆಯೇ ಉಳಿಯಿತು. ಆ ಸ್ಥಿತಿಯಲ್ಲಿ ಅವಳು ಆತ್ಮಹತ್ಯೆಗೆ ಕೂಡ ಹಿಂದುಮುಂದೆ ನೋಡಲಿಕ್ಕಿಲ್ಲ. ಖಾನಸಾಹೇಬ, ನಿಮ್ಮ ಈ ಬೇತು ವಿಹಿತವಲ್ಲೆಂದು ನನಗನಿಸಹತ್ತಿವೆ; ಇಷ್ಟೇ ಅಲ್ಲ, ತನ್ನ ತಂದೆಯಾದ ನಾನೇ ತನ್ನನ್ನು ಬಾದಶಹನ ಝನಾನಖಾನೆಗೆ ಬೇಕಂತ ಒಯ್ದು ಸೇರಿಸಿದೆನೆಂಬದು ಅವಳಿಗೆ ತಿಳಿದ ಕೂಡಲೆ ಆಕೆಯು ಕ್ಷಣಕಾಲ ಸಹ ಜೀವವನ್ನಿಡಲಿಕ್ಕಿಲ್ಲ. ಅವಳು ಒಳ್ಳೇ ಕಟ್ಟುನಿಟ್ಟಿನ ಸ್ವಭಾವದವಳೆಂಬದನ್ನು ನೀವೂ ಅರಿತಿರುತ್ತೀರಿ."

ಸೂರ್ಯಾಜಿಯ ಈ ನುಡಿಗಳನ್ನು ಕೇಳಿ ಜಮಾಲಖಾನನು ಯೋಚನೆಗೊಳಗಾದನು. ಎಷ್ಟೋ ಹೊತ್ತಿನ ವರೆಗೆ ಯಾರ ಬಾಯಿಂದಲೂ ಪಿಟ್ಟೆಂಬ ಶಬ್ದವು ಹೊರಡಲಿಲ್ಲ. ಹಂಸೆಯಂಥ ಲಾವಣ್ಯ ಯುವತಿಯು ಅನಾಯಾಸವಾಗಿ ತಮ್ಮ ಕೈಸೇರಿರಲು, ಅವಳನ್ನು ಶಹಜಾದನಿಗೆ ಹೇಗಾದರೂ ತಲುಪಿಸಿ,

ಅವನಿಂದ ತನ್ನ ಭಾಗ್ಯೋದಯ ಮಾಡಿಕೊಳ್ಳುವದನ್ನು ಜಮಾಲಖಾನನು ನಿಶ್ಚಯಿಸಿದ್ದನು. ಆದರಿಂದ ತುಸ ಹೊತ್ತಿನಲ್ಲಿಯೇ ಜಮಾಲಖಾನನಿಗೆ ಒಂದು ಹೊಸ ಹಂಚಿಕೆಯು ಸೂಚಿಸಿತು. ಕೂಡಲೆ ಅವನು ಹರ್ಷನಿರ್ಭರದಿಂದ:—"ಸೂರಜಖಾನ, ನನಗೊಳ್ಳೇ ಅಪೂರ್ವವಾದ ಹಂಚಿಕೆಯು ಗೊತ್ತಾಯಿತು. ಆದರಿಂದ ಕೆಲಸವು ವಿಜಯಗೊಂಡಿತೆಂದೇ ತಿಳಿಯಿರಿ. ಈ ಜಮಾಲಖಾನನು ಅಂಥ ಬುದ್ಧಿವಂತನೆಂದೇ, ಬಾದಶಹನು ಈತನನ್ನು ಆಗಾಗ್ಗೆ ಗುಪ್ತ ಮಂತ್ರಣಾಗಾರಕ್ಕೆ ಕರೆಯಿಸುವನು" ಎನ್ನಲು,

"ಖಾನಸಾಹೇಬ, ನೀವು ದರ್ಬಾರಿಗಳು. ನಿಮ್ಮ ತಲೆಯೇ ಅಂತಹ ವಿಚಿತ್ರ ಗತಿಯುಳ್ಳದ್ದು. ಅದಿರಲಿ. ಖಾನಸಾಹೇಬ, ನಿಮಗೆ ಸೂಚಿಸಿದ ಆ ಯುಕ್ತಿಯಾದರೂ ಯಾವದು? ನಿಮ್ಮ ಆ ಯುಕ್ತಿಯಿಂದ ಕೆಲಸ ಸಾಧಿಸದಂತಿದ್ದರೆ, ನಾನು ನನ್ನ ಹಂಸೆಯನ್ನು ಆಕೆಯ ತಾಯಿಯ ಬಳಿಗೆ ಕಳಿಸಿ ಬಿಡುವದೇ ವಿಹಿತವಾಗಿ ತೋರುತ್ತದೆ"

"ಛೀ-ಛೀ! ಇಂಥ ಮುತ್ತಿನಂತಹ ಸಮಯವನ್ನು ನಿರರ್ಥಕಗೊಳಿಸುವರೇ? ಸೂರಜಖಾ, ನೀವು ಅಷ್ಟು ಅಧೀರರಾಗದೆ ನನ್ನ ಆ ಯುಕ್ತಿಯನ್ನಾದರೂ ಕೇಳಿಕೊಳ್ಳಿರಿ. ನಾಳೆ ಸಂಜೆಯೊಳಗಾಗಿ ನಾವು ಇಲ್ಲಿಂದ ಜಾಮಖೇಡಿಗೆ ತಲುಪಬೇಕು. ಅಲ್ಲಿಯ ಧರ್ಮಶಾಲೆಯಲ್ಲಿ ಇಂದಿನಂತೆಯೇ ಕುದುರೆಗಳನ್ನು ಕಟ್ಟಿ ಅಲ್ಲಿ ಹಂಸೆಯನ್ನು ಕೂಡ್ರಿಸಿ ಸಾಮಾನು ಖರೀದಿಗೆಂದು ನಾವು ಪೇಟೆಗೆ ಹೋಗಬೇಕು. ಅಲ್ಲಿಯ ದರೋಗನು ನನಗೆ ಚೆನ್ನಾಗಿ ಪರಿಚಿತನಾಗಿರುತ್ತಾನೆ. ನಾನು ಅವನ ಕೈ ಬೆಚ್ಚಗೆ ಮಾಡಿ ನನ್ನ ಮನಸ್ಸಿನಂತೆ ವ್ಯವಸ್ಥೆ ಮಾಡಿಸುವೆನು. ನಾವು ನಾಳೆ ರಾತ್ರಿ ಅಲ್ಲಿ ಊಟ-ಪಾಟ ತೀರಿಸಿ ವಿಶ್ರಾಂತಿ ಹೊಂದುತ್ತಿರುವಾಗ ನಮ್ಮ ಮೇಲೆ ಆಕಸ್ಮಿಕ ದಾಳಿ ಬೀಳುವಂತೆ ವ್ಯವಸ್ಥೆಯಾಗುವದು. ನಿಜವಾಗಿಯೇ ಪರವಡೆಯು ಬಂದ ಹಾಗೆ ಈಗ ನಾವಿಬ್ಬರೂ ನಟಿಸೋಣ. ಅತ್ತ ಆ ನನ್ನ ಸೇವಕರು ತಾವು ತಂದಿರುವ ಮೇಣೆಯಲ್ಲಿ ಹಂಸೆಯನ್ನು ಕೂಡ್ರಿಸಿಕೊಂಡು ನೆಟ್ಟಗೆ ಬೇಗಮಪುರದೊಳಗಿನ ರಘುನಾಥಖಾನೆಗೆ ಒಯ್ದು ಇವಳನ್ನು ಬಾದಶಹ ಬೇಗಮಳಿಗೆ ಒಪ್ಪಿಸುತ್ತಾರೆ. ಆ ಬಳಿಕ ನಾವು ಹಿಂದಿನಿಂದ ಅಲ್ಲಿಗೆ ಹೋಗೋಣ. ನಾನು ಮೊದಲು ಅಲ್ಲಿಗೆ ಹೋಗಿ ಹಂಸೆಯನ್ನು ಭೆಟ್ಟಿಯಾಗಿ, ನಿನ್ನೆ ರಾತ್ರಿಯ ದಾಳಿಯಲ್ಲಿ ಸೂರಜಖಾನನು ಗಾಯ ಹೊಂದಿರುವದರಿಂದ, ಅವನನ್ನು ಸುರಕ್ಷಿತ ಸ್ಥಳದಲ್ಲಿರಿಸಿ,

ನಾನು ಆ ದರೋಡೆಖೋರರನ್ನು ಬೆನ್ನಟ್ಟಿ ಹೋಗಿದ್ದೆನು; ಅವರು ನಿನ್ನನ್ನು ಈ ಧುನಾನಖಾನೆಗೆ ತಂದಿರುವರೆಂಬದನ್ನು ಕೇಳಿ ನಾನೊಳ್ಳೆ ಗುಪ್ತವಾಗಿ ಇಲ್ಲಿಗೆ ಬಂದು ನಿನಗೆ ಭೆಟ್ಟಿಯಾಗಿರುತ್ತೇನೆ. ನೀನು ಧೈರ್ಯಗೇಡಬೇಡ. ವಿಶ್ವಪ್ರಯತ್ನಬಟ್ಟು ನಾನು ನಿನ್ನನ್ನು ಇಲ್ಲಿಂದ ಬಿಡಿಸಿಕೊಂಡು ನಿನ್ನ ತಂದೆಯ ಬಳಿಗೆ ಒಯ್ದು ತಲುಪಿಸುತ್ತೇನೆ' ಎಂದು ಹೇಳಿ ಅವಳನ್ನು ಸಮಾಧಾನ ಪಡಿಸುವೆನು.

"ಖಾನಸಾಹೇಬ, ನಿಮ್ಮ ಈ ಯುಕ್ತಿಯು ತಕ್ಕದ್ದಾಗಿದೆ. ಈ ನಿಮ್ಮ ಯುಕ್ತಿಯ ಪ್ರಕಾರ ಎಲ್ಲ ಸಂಗತಿಗಳೂ ಸಂಭವಿಸಿದರೆ, ಹಂಸೆಗೆ ನನ್ನ ಬಗ್ಗೆ ಎಳ್ಳಷ್ಟೂ ಸಂಶಯ ಬರಲಿಕ್ಕಿಲ್ಲ. ಅದಿರಲಿ. ಖಾನಸಾಹೇಬ, ಇಗೋ, ಈ ಕಿರಾಣಿ ಅಂಗಡಿಯಲ್ಲಿ ನಮಗೆ ಬೇಕಾದ ಸಾಮಗ್ರಿಗಳನ್ನು ಕೊಂಡು ಕೊಳ್ಳೋಣ."

ನಂತರ ಅವರು ತಮಗೆ ಬೇಕಾದ ಸಾಮಾನುಗಳನ್ನೂ ಕುದುರೆಗಳಿಗೆ ಹುಲ್ಲು-ದಾಣಗಳನ್ನೂ ಕೊಂಡುಕೊಂಡು ಧರ್ಮಶಾಲೆಗೆ ಹಿಂದಿರುಗಿದರು. ಅವರು ಧರ್ಮಶಾಲೆಗೆ ಬಂದಾಗ ಹಂಸೆಯು ಯಾವನೊಬ್ಬ ಅಪರಿಚಿತನೊಡನೆ ಮಾತನಾಡುತ್ತ ಕುಳಿತಿದ್ದಳು. ಹಂಸೆಯು ಸೂರ್ಯಾಜಿಯನ್ನು ದೃಷ್ಟಿಸುತ್ತಲೆ:— "ಅಪ್ಪಾ, ಇವನೇ ನೋಡು ನಗರದ ಆ ಬುಡುಬುಡಿಕಪ್ಪನು. ಈತನೇ ಅಂದು ನನ್ನ ವಿಷಯವಾಗಿ ಆ ವಿಚಿತ್ರ ಭವಿಷ್ಯವನ್ನು ವರ್ಣಿಸಿದನು. ಒಳಗೆ ಕುಳಿತು ಕುಳಿತು ಬೇಸತ್ತಿದ್ದ ನಾನು ಹೊರಗೆ ಬಂದು ನೋಡುವಷ್ಟರಲ್ಲಿ ಇವನು ಈ ದಾರಿಯ ಹಿಡಿದು ನಡೆದಿದ್ದನು. ಕೂಡಲೆ ನಾವು ಪರಸ್ಪರರನ್ನು ಗುರುತಿಸಿದೆವು. ನಾವು ಇಲ್ಲಿಗೆ ಏಕೆ ಬಂದೆವೆಂಬದನ್ನು ಇವನಿಗೆ ತಿಳಿಸಲು, ಇವನು 'ನಾನು ವರ್ಣಿಸಿದ ಭವಿಷ್ಯದಂತೆ ಕೆಲಸವಾಗಹತ್ತಿತೆನ್ನಬೇಕು; ಸಂಕಟಪರಂಪರೆಗೆ ಪ್ರಾರಂಭವಾಯಿತೆನ್ನಬೇಕು; ಆದರೆ ತಂಗೀ, ನೀನು ಕೊಂಚವೂ ಅಂಜಬೇಡ ಸಂಕಟಕ್ಕೆ ಅಂಜಿ ಆತ್ಮಘಾತಕ್ಕೆ ಮಾತ್ರ ಎಂದಿಗೂ ತೊಡಗಬೇಡ. ತಂಗೀ, ನಿನ್ನ ಹೊಟ್ಟೆಯಲ್ಲಿ ಹುಟ್ಟಬಹುದಾದ ರಾಜಪುತ್ರನ ಘಾತಕ್ಕೆ ಪ್ರವೃತ್ತಳಾಗಬೇಡ' ಎಂದು ಇವನು ಹೇಳುತ್ತಿರುವನು" ಎಂದು ಅಂದಳು

ಆ ಬುಡುಬುಡಿಕಪ್ಪನ ಪುನರ್ದರ್ಶನದಿಂದ ಹಂಸೆಗೆ ಒಂದು ಪ್ರಕಾರದ ಅಸ್ಫುಟವಾದ ಸಮಾಧಾನವೆನಿಸಿತು.

## ಕೊಲ್ಲಿರಿ, ಈ ಹರಾಮಖೋರನನ್ನು!

"ಆಹುದು; ಈ ಬುಡುಬುಡಿಕಪ್ಪನ ಭವಿಷ್ಯದಂತೆ ನಿನಗೆ ಈಗ ಸಂಕಟ ಪ್ರಾಪ್ತವಾಗಿರುವದು. ಅದಿರಲಿ. ಬುಡಬುಡಿಕಪ್ಪಾ, ನೀನು ನಮ್ಮದೊಂದು ಕೆಲಸ ಮಾಡಬೇಕಾಗಿರುವದಲ್ಲ. ಹೇಗಾದರೂ ಮಾಡಿ ನೀನು ನಮಗೆ ಸಾಲುವಷ್ಟು ನೀರು ತಂದು ಕೊಡಬೇಕು, ನೀರು" ಎಂದು ಸೂರ್ಯಾಜಿಯು ಅನ್ನಲು,

ಹಂಸೆಯು ನಡುವೇ ಬಾಯಿಹಾಕಿ:--"ಅಹುದಪ್ಪಾ ಆಹುದು. ನಿರಡಿಕೆಯಿಂದ ನಾನು ತೀರ ಹೈರಾಣಾಗಿದ್ದೇನೆ. ಒಂದು ಕೊಡ ನೀರು ಕುಡಿದರೂ ನನಗ ತೃಪ್ತಿಯಾಗುವದೋ ಇಲ್ಲವೋ ಹೇಳಲಾರೆ."

ಹಂಸೆಯು ನುಡಿ ಕೇಳಿ ಬುಡುಬುಡಿಕಪ್ಪನು ಬಾಯ ಮೇಲೆ ಕೈಯಿಡುತ್ತ:—"ಒಂದು ಕೊಡ ನೀರೇ? ಅಯ್ಯೋ ದೇವರೆ! ಈ ನಗರದ ರಾಜ್ಯದಲ್ಲಿ ನೀರೆಲ್ಲಿದೆ-ನೀರು? ಈ ಪ್ರಾಂತದಲ್ಲಿ ಅನ್ನ-ನೀರುಗಳ ದುಷ್ಕಾಲವು ಕಾಲತ್ರಯದಲ್ಲೂ ಇದ್ದದ್ದೇ. ದುಡ್ಡು ಕೊಟ್ಟರೂ ಇಲ್ಲಿ ನೀರು ಸಿಗುವಂತಿಲ್ಲ."

"ಏನಾದರೂ ಮಾಡಿ ನಮಗೆ ಒಂದು ಕೊಡ ನೀರು ಬೇಗನೆ ತಂದು ಕೊಡು; ಅಂದರೆ ಆ ಬಗ್ಗೆ ನಿನಗೆ ಒಂದು ನಾಣ್ಯವನ್ನು ಕೊಡುತ್ತೇನೆ."

ಸೂರ್ಯಾಜಿಯ ಈ ಅಭಿವಚನವನ್ನು ಕೇಳಿ ಆ ಕಂಗಾಲ ಬುಡುಬುಡಿಕನ ಬಾಯಿಗೆ ನೀರೊಡೆಯಿತು. ಕೂಡಲೆ ಅವನು ಧಾವಿಸುತ್ತ ಹೋಗಿ ತನ್ನ ಮನೆಯಿಂದ ಒಂದು ಕೊಡ ನೀರು ತಂದು ಕೊಟ್ಟನು. ಬಳಿಕ ಹಂಸೆಯು ಕೈಕಾಲು ಮೋರೆ ತೊಳೆದು ತನಗೆ ಸಾಕಾಗುವಷ್ಟು ನೀರು ಕುಡಿದಳು. ಇತ್ತ ಆ ಬುಡುಬುಡಿಕಪ್ಪನು ಅಷ್ಟರಲ್ಲಿ ಒಲೆಯ ಗುಂಡುಗಳನ್ನು ಹೂಡಿ ಬೆಂಕಿಯ ಹೊತ್ತಿಸಿ ಕೊಟ್ಟನು. ಬಳಿಕ ಹಂಸೆಯು ರೊಟ್ಟಿ-ಬೇಳೆಗಳನ್ನು ಬೇಯಿಸಿದಳು. ಹೊರಗೆ ಸೂರ್ಯಾಜಿ-ಜಮಾಲಖಾನರು ಕುದುರೆಗಳಿಗೆ ದಾಣಿ ನೀರು ಕೊಡುವ ಕೆಲಸಕ್ಕೆ ತೊಡಗಿದರು. ಆ ಬುಡುಬುಡಿಕಪ್ಪನು ಅಲ್ಲಿಯೇ ಬಳಿಯಲ್ಲಿ ಕುಳಿತಿದ್ದನು. ಆಗ ಆತನು ಹಂಸೆಯನ್ನು ಕುರಿತು:—"ಹಂಸಾಬಾಯಿಾ, ನೀವು ಮರಾಟಿಗರಾಗಿ ತೋರುತ್ತೀರಿ. ನಿಮ್ಮ ಸಂಗಡ ಇರುವ ಈ ಇಬ್ಬರು ಖಾನರು ಮುಸಲ್ಮಾನರು. ಹೀಗಿದ್ದು ನೀವು ಇವರಲ್ಲಿಯ ಒಬ್ಬನಿಗೆ 'ಅಪ್ಪಾ ಅಪ್ಪಾ' ಎಂದು ಸಂಬೋಧಿಸುತ್ತಿರುವಿರಲ್ಲ!

ಅಂದಮೇಲೆ ಅವನು ನಿಮಗೆ ಏನಾಗಬೇಕು?" ಎಂಬ ವಿಚಿತ್ರ ಪ್ರಶ್ನೆಗೈದನು.

ಬುಡುಬುಡಿಕಪ್ಪನ ಆ ಪ್ರಶ್ನೆಗೆ ಹಂಸೆಯು ಏನೆಂದು ಉತ್ತರ ಕೊಡುವಳು? ಆದರೂ ಅವಳು ಸುಮ್ಮನೆ ಕೂಡ್ರುವಂತಿದ್ದಿಲ್ಲ. ಆಗ ಅವಳು ಮೌನವನ್ನು ಧರಿಸಿದ್ದರೆ ಹಂಸೆಯ ವಿಷಯವಾಗಿ ಆ ಬುಡುಬುಡಿಕಪ್ಪನಲ್ಲಿ ಬೇರೊಂದು ಭಾವನೆಯುಂಟಾಗಬಹುದಾಗಿತ್ತು. ಆದರಿಂದ ಕೂಡಲೆ ಅವಳು: "ಹಾಗಲ್ಲಪ್ಪ, ಅವರು ನಮ್ಮೂರ ದೊಡ್ಡ ಸರದಾರರು; ಬಹು ಸುಸ್ವಭಾವದವರು. ನಮ್ಮ ಅವರ ಬಹು ಪುರಾತನದ ಋಣಾನುಬಂಧುತ್ವವಿರುವದು. ನಮ್ಮ ಓಣಿಯೊಳಗಿನ ಎಲ್ಲ ಹುಡುಗರೂ ಅವರಿಗೆ ಅಪ್ಪಾ, ಅಪ್ಪಾ, ಎಂದು ಸಂಬೋಧಿಸುತ್ತಿರುವದರಿಂದ ನಾನೂ ಹಾಗೆ ಸಂಬೋಧಿಸುವೆನು. ಈ ದಿನ ಅವರು ನನ್ನ ಹತ್ತರಿದ್ದರೆಂತಲೇ ನಾನು ಆ ಸಂಕಟದಿಂದ ಪಾರಾದೆನು" ಎಂದಳು.

ಅಡಿಗೆ ಮಾಡಿದ ಬಳಿಕ ಹಂಸೆಯು ತನಗೆ ಸಾಕಾಗುವಷ್ಟು ಅನ್ನವನ್ನು ಬೇರೆ ಇಟ್ಟುಕೊಂಡು, ಉಳಿದುದನ್ನು ಸೂರ್ಯಾಜಿಗೆ ಕೊಟ್ಟಳು. ಬಳಿಕ ಅವರು ಊಟ ಮಾಡಿ ವಿಶ್ರಮಿಸಿದರು. ಅಂದು ರಾತ್ರಿ ಸೂರ್ಯಾಜಿ-ಜಮಾಲಖಾನರು ಹೊರಗಿನ ಪಡಸಾಲೆಯಲ್ಲಿ ಆಗಾಗ್ಗೆ ಏನೇನೋ ಗುಣುಗುಟ್ಟುತ್ತಿದ್ದರು. ಹಂಸೆಗೆ ಆ ಧ್ವನಿಯು ಕೇಳಿಸುತ್ತಿದ್ದರೂ ಅವರ ಮಾತು ಕೇಳಿಸುತ್ತಿದ್ದಿಲ್ಲ. ಮೇಲಾಗಿ ಅವಳಿಗೆ ಅಂದು ಆ ಬುಡುಬುಡಿಕಪ್ಪನು ಪುನಃ ಭೆಟ್ಟಿಯಾಗಿ ಆ ಭವಿಷ್ಯದ ಬಗ್ಗೆ ಮತ್ತೆ ಹೇಳಿದ್ದರಿಂದ, ಅವಳು ಅದರ ವಿಚಾರದಲ್ಲಿಯೇ ತಲ್ಲೀನಳಾಗಿದ್ದಳು.

ಮರುದಿನ ಬೆಳಗಾಗುತ್ತಲೆ ಆ ಮೂವರೂ ನಗರದಿಂದ ಹೊರಟರು. ನಗರದಿಂದ ಆಚೆಗೆ ಆಗ ಮೊಗಲರ ನಾಡೇ ಆಗಿದ್ದದರಿಂದ ಅವರನ್ನು ದಾರಿಯಲ್ಲಿ ಯಾರೂ ತರುಬಲಿಲ್ಲ; ಆದರೂ ಆ ಮುಸಲ್ಮಾನ ಸರದಾರರೊಡನೆ ಆ ಹಿಂದೂ ನವಯುವತಿಯು ನಡೆದುದನ್ನು ನೋಡಿ, ಬಹು ಜನರಿಗೆ ವಿಚಿತ್ರವೆನಿಸದೆ ಇರಲಿಲ್ಲ. ಅವರು ಅಂದು ಸಂಜೆಗೆ ಚಾಮುಪೇಡಿಗೆ ಹೋಗಿ ಅಲ್ಲಿಯ ಧರ್ಮಶಾಲೆಯಲ್ಲಿ ಇಳಕೊಂಡರು. ಕೂಡಲೆ ಜಮಾಲಖಾನನು ಸೂರ್ಯಾಜಿಗೆ ಸಂಜ್ಞೆಮಾಡಿ ಎತ್ತೋ ಹೋಗಿಬಿಟ್ಟನು. ಹಂಸೆಯ ಅಡುಗೆಯು ಸಿದ್ಧವಾದರೂ ಅವನು ಬರಲಿಲ್ಲ. ಹೊರಗೆ ಚನ್ನಾಗಿ ಕತ್ತಲುಗವಿದ ನಂತರ ಜಮಾಲಖಾನನು ಬಂದು, ಸೂರ್ಯಾಜಿಯನ್ನು ಕುರಿತು ಸಾಂಕೇತಿಕ ಶಬ್ದಗಳಿಂದ: "ಎಲ್ಲ ವ್ಯವಸ್ಥೆಯನ್ನು ಸರಿಯಾಗಿ ಮಾಡಿ ಬಂದೆನು"

ಎಂದು ಹೇಳಿದನು. ಊಟವಾದ ಮೇಲೆ ಹಂಸೆಗೆ ಒಳಗಿನ ಕೋಣೆಯಲ್ಲಿ ಮಲಗ ಹೇಳಿ ಅವರಿಬ್ಬರೂ ಹೊರಗೆ ಆಡ್ಡಾದರು. ಕಳೆದ ಎರಡು ದಿನಗಳಲ್ಲಿ ಒಂದೇಸವನೆ ಪ್ರವಾಸ ಮಾಡಿದ್ದರಿಂದ, ಹಾಸಿಗೆಗೆ ಮೈಯೊಡ್ಡುತ್ತಲೇ ಹಂಸೆಗೆ ಗಾಢವಾದ ನಿದ್ದೆ ಹತ್ತಿತು

ಮಧ್ಯರಾತ್ರಿಯು ಮೀರಿದ ಬಳಿಕ ಒಮ್ಮಿಂದೊಮ್ಮೆಲೆ ದೊಡ್ಡ ಗಲಭೆ ಯುಂಟಾಯಿತು. ಹಂಸೆಯು ಆಗ ಗಾಬರಿಯಿಂದ ಎದ್ದು ಕುಳಿತಳು. ಹೊರಗೆ ನಿಬಿಡವಾದ ಅಂಧಕಾರವಿದ್ದುದರಿಂದ ಆ ಅಪರಿಚಿತವಾದ ಸ್ಥಳದಲ್ಲಿ ಆಕೆಗೆ ಏನೂ ಗೋಚರವಾಗದಾಯಿತು ಅಷ್ಟರಲ್ಲಿ ಸೂರ್ಯಾಜಿಯು "ಖಾನಸಾಹೇಬ, ಕೋಣೆಯ ಬಾಗಿಲವನ್ನು ಕಾಯಿರಿ. ಈ ದರವಡೆ ಖೋರರನ್ನು ಒಳಗೆ ಹೋಗಗೊಡಬೇಡಿರಿ. ನಾನು ಇಲ್ಲಿ ಈ ಹರಾಮ ಖೋರರ ಸಮಾಚಾರಕ್ಕೆ ಹತ್ತಿರುತ್ತೇನೆ" ನುಡಿದ ಶಬ್ದಗಳು ಹಂಸೆಗೆ ಕೇಳಿಸಿ ದವು. ತಂದೆಯು ಬಾಯ ಆ ಅಸ್ಪಷ್ಟ ನುಡಿಗಳನ್ನು ಕೇಳಿ, ಹಂಸೆಗೆ ವಸ್ತು ಸ್ಥಿತಿಯು ಗೊತ್ತಾಯಿತು. ತಾವು ದರವಡೆಖೋರರ ಜಾಲದಲ್ಲಿ ಸಿಲುಕಿರುವೆ ವೆಂಬದನ್ನು ತಿಳಿದು, ಅವಳು ಭಯಭೀತಳಾದಳು. ಒಂದು ಬಾಗಿಲದ ಹೊರತು ಅಲ್ಲಿಂದ ಹೊರಬೀಳಲಿಕ್ಕೆ ಬೇರೆ ಮಾರ್ಗವೇ ಇರಲಿಲ್ಲ. ಬಾಗಿಲ ತೆರೆದು ಹೊರಗೆ ಬರಬೇಕೆಂದರೆ, 'ಕಡಿಯಿರಿ-ಬಡಿಯಿರಿ-ಕೊಲ್ಲಿರಿ' ಎಂಬ ಕರ್ಣಕಠೋರ ಶಬ್ದಗಳು ಕೇಳಿಸುತ್ತಿದ್ದವು. ಇಷ್ಟರಲ್ಲಿ ಒಳಗಿನಿಂದ ಇಕ್ಕಿದ್ದ ಅವಳ ಕೋಣೆಯ ಬಾಗಿಲವನ್ನು ಯಾರೋ ಒದ್ದು ಮುರಿದರು; ಹಾಗು ನಾಲ್ಕಾರು ಜನ ಸಶಸ್ತ್ರ ಜನರು ಒಮ್ಮೆಲೆ ಒಳಹೊಕ್ಕರು. ಅದನ್ನು ನೋಡಿ ಹಂಸೆಯು ಅತೀವ ಗಾಬರಿಯಿಂದ ಗಕ್ಕನೆ ನೆಲಕ್ಕೆ ಕುಸಿ ಕುಳಿತಳು; ಮತ್ತು 'ಅಪ್ಪಾ, ಅಪ್ಪಾ' ಎಂದು ಅಂದವಳೇ ಮೂರ್ಛೆ ತಾಳಿದಳು.

ಜಮಾಲಖಾನನ ಬೇತು ಚನ್ನಾಗಿ ಫಲಿಸಿತು. ದರವಡೆಖೋರರು ತಮ್ಮನ್ನು ನಿಜವಾಗಿಯೇ ದರವಡೆಖೋರರು ಮುತ್ತಿದ್ದು, ಹೊರಗೆ ತನ್ನ ತಂದೆಯೂ ಜಮಾಲಖಾನನೂ ಅವರನ್ನು ಬೊಗ್ಗು ಬಡಿಯುತ್ತಿರುವರೆಂದು ಹಂಸೆಯ ತಿಳುವಳಿಕೆಯಾಗಿತ್ತು; ಆದರೆ ಹೊರಗೆ ನಡೆದುದೆಲ್ಲವೂ ನಾಟಕವಾಗಿತ್ತೆಂಬದು ಆ ಸರಳ ಸ್ವಭಾವದ ಅಬಲೆಗೇನು ಗೊತ್ತು? ದರವಡೆಖೋರರು ಕೋಣೆಯ ಬಾಗಿಲು ಮುರಿದು ಒಳಹೊಕ್ಕ ಕೂಡಲೆ ಹಂಸೆಯು ಬವಳಿ ಬಂದು ಬಿದ್ದಳು! ಆಕೆಯು ನೆಲಕ್ಕೆ ಅಪ್ಪಳಿಸುವಷ್ಟರಲ್ಲಿ ಒಬ್ಬ ದರವಡೆಖೋರನು ಅವಳನ್ನು

ನಡುವೆ ಹಿಡಿದನು. ಬಳಿಕ ಅವರು ಲಗುಬಗೆಯಿಂದ ಅವಳನ್ನೆತ್ತಿಕೊಂಡು ಹೊರಗೆ ತಂದರು; ಹಾಗು ಅವರಲ್ಲಿಯ ಒಬ್ಬ ಟೊಣಪನು ತನ್ನ ಕುದುರೆಯನ್ನು ಹತ್ತಿ ಆವಳ ಮೃತವತ್ ಶರೀರವನ್ನು ತನ್ನ ತೊಡೆಯ ಮೇಲೆ ತಕ್ಕೊಂಡನು. ಅಷ್ಟರಲ್ಲಿ ಅವನ ಸಂಗಡಿಗರೂ ತಮ್ಮ ತಮ್ಮ ಕುದುರೆಗಳನ್ನು ಹತ್ತಿದರು; ಹಾಗು ಅಲ್ಲಿಂದ ನಡೆದರು ಅವರು ಸಂಖ್ಯೆಯಿಂದ ೧೦ ಜನರಿಗಿಂತ ಹೆಚ್ಚಾಗಿರಲಿಲ್ಲ. ಆಗ ಜಮಾಲಖಾನನು ಅವರ ಕರ್ತವ್ಯದ ಬಗ್ಗೆ ೫೦ ನಾಣ್ಯಗಳನ್ನು ಅವರಿಗೆ ಕೊಟ್ಟನು.

ಆ ಪುಂಡರು ತಮ್ಮ ಕುದುರೆಗಳನ್ನು ಭರದಿಂದ ಓಡಿಸುತ್ತಿದ್ದರು. ಬೆಳಗು ಮುಂಜಾನೆಯ ತಂಪುಗಾಳಿಯಿಂದಲೂ ಕುದುರೆಯ ವೇಗದಿಂದಲೂ ಮೆಲ್ಲಮೆಲ್ಲನೆ ಹಂಸೆಯು ಮೂರ್ಛೆಯು ತಿಳಿಯಹತ್ತಿತು. ಆಕೆಯ ಶರೀರದ ಚಲನವಲನವನ್ನರಿತು ಆಕೆಯನ್ನು ತಕ್ಕೊಂಡು ನಡೆದಿದ್ದ ಆ ಹರಾಮಖೋರನು ಅವಳನ್ನು ಗಟ್ಟಿಯಾಗಿ ಹಿಡಕೊಂಡನು. ಹಂಸೆಯು ಅವನಿಂದ ಬಿಡಿಸಿಕೊಳ್ಳಲಿಕ್ಕೆ ಪ್ರಯತ್ನಿಸಿದಳು; ಆದರೆ ಸಾಧ್ಯವಾಗಲಿಲ್ಲ. ಅದರಿಂದ ಅವಳು ಒದರಿ-ಚೀರಲಿಕ್ಕೆ ಪ್ರಾರಂಭಿಸಿದಳು. ತನ್ನಿಂದ ಬಿಡಿಸಿಕೊಳ್ಳಲಿಕ್ಕೆ ಇವಳು ಶಕ್ತಳಲ್ಲೆಂಬದನ್ನು ತಿಳಿದ ಆ ನೀಚನು ಅವಳ ಒದರಾಟ-ರಂಬಾಟಕ್ಕೆ ಬೆದರಲಿಲ್ಲ; ಇಷ್ಟೇ ಅಲ್ಲ, ಉಳಿದ ಆತನ ಸಂಗಡಿಗರು ಆವಳು ಚೀರಿದಂತೆ ಚೀರಿ, ಅವಳಿಗೆ ಅಣಕಿಸಹತ್ತಿದರು. ಅವರೆಲ್ಲರ ಆ ಚೀರಾಟದಿಂದ ಆ ಕಾಡು ಪ್ರದೇಶವೆಲ್ಲ ನಿನಾದಮಯವಾಗಿ ಬಿಡುತ್ತಿತ್ತು; ಆದರೆ ಆ ನಿರ್ಜನವಾದ ಅರಣ್ಯದಲ್ಲಿ ಆ ರಾತ್ರಿಯ ಕಾಲದಲ್ಲಿ ಹಂಸೆಯ ಸಹಾಯಕ್ಕೆ ಆದಾವ ಮನುಷ್ಯಪ್ರಾಣಿಯು ಬರುವನು?

ಒದರಿ-ಒದರಿ ಶ್ರಮಗೊಂಡ ಬಳಿಕ ಆ ಅಸಹಾಯಳು ತನ್ನಷ್ಟಕ್ಕೆ ತಾನೇ ಸುಮ್ಮನಾದಳು. ಆ ಪುಂಡರು ಜಾಮುಖೇಡದಿಂದ ಒಂದು ಪ್ರಹರದ ವರೆಗೆ ದಾರೀ ನಡೆದ ಬಳಿಕ ವಿಶ್ರಾಂತಿಗಾಗಿ ತಮ್ಮ ಕುದುರೆಗಳನ್ನು ತರುಬಿದರು. ಹಂಸೆಯನ್ನು ಕುದುರೆಯಿಂದ ಇಳಿಸಿದ ಬಳಿಕ ಆ ದರವಡೆಖೋರರ ನಾಯಕನು ಆಕೆಗೆ:—"ನೀನು ಇಲ್ಲಿಂದ ಓಡಿಹೋಗಲಿಕ್ಕೆ ಅಥವಾ ಒದರಾಡಿ-ಚೀರಾಡಿ ಗದ್ದಲ ಮಾಡಲಿಕ್ಕೆ ಎಷ್ಟು ಪ್ರಯತ್ನಿಸಿದರೂ ನೀನು ನಮ್ಮಿಂದ ಮುಕ್ತಳಾಗಲಾರೆ. ನೀನು ನಮ್ಮೊಡನೆ ಸುಮ್ಮನೆ ಬಂದರೆ ವಿಹಿತವೇ; ಇಲ್ಲದಿದ್ದರೆ ನಾವು ನಿನ್ನ ಕೈಕಾಲು ಕಟ್ಟಿ, ಬಾಯಲ್ಲಿ ಅರಿವೆ ತುರುಕಿ

ನಿನ್ನನ್ನು ತಕ್ಕೊಂಡು ಹೋಗುತ್ತೇವೆ. ನಾವು ನಿನಗೆ ಕೊಂಚವೂ ತೊಂದರೆ ಕೊಡದಂತೆ ಒಯ್ಯಲಿಕ್ಕೆ ಆಜ್ಞಪ್ತರಾಗಿರುವದೇನೋ ನಿಜ; ಆದರೆ ನಿನ್ನ ಈ ಅಪಸ್ಮಾರತನದ ಕೃತ್ಯವೇ ನಿನಗೆ ಮೂಲವಾದೀತು. ನಾವು ನಿನ್ನನ್ನು ಅಂತಿಂಥಲ್ಲಿ ಒಯ್ಯುವದಿಲ್ಲ. ನಿನ್ನನ್ನು ನಾವು ಬಾದಶಾಹೀ ಝನಾನಖಾನೆಗೆ ಒಯ್ದು ಬಿಡುವುದರಿಂದ, ನೀನು ಆಜನ್ಮ ಪರಿಯಂತ ನಮ್ಮ ಉಪಕಾರ ಸ್ಮರಿಸುತ್ತಿರಬೇಕಾದೀತು” ಎಂದು ಹೇಳಿದನು.

ಹಂಸೆಯು ಕಿವಿಗಳು ಅವರ ಭಾಷಣಗಳನ್ನೆಲ್ಲ ಕೇಳುತ್ತಿದ್ದರೂ, ಅವಳು ಬಾಯಿಂದ ಪಿಟ್ಟೆಂದುಸುರಲಿಲ್ಲ; ಒತ್ತಟ್ಟಿಗಿನ ಒಂದು ಕಲ್ಲಮೇಲೆ ಕುಳಿತು ವಿಚಾರಮಗ್ನಳಾಗಿ ಬಿಟ್ಟಿದ್ದಳು. ತನ್ನ ಒದರಾಟದಿಂದ ಏನೂ ಪ್ರಯೋಜನವಾಗವೆಂದೂ ಪ್ರಸ್ತುತ ಸಂಕಟಕ್ಕೆ ತಾನು ಎದುರಾಗಿ ನಿಂತು ಮುಂದೆ ಬರುವ ಸಂಕಟಗಳಿಗೆ ಧೈರ್ಯದಿಂದ ಸಿದ್ಧಳಾಗಬೇಕೆಂದೂ ಅವಳು ತಿಳಿದುಕೊಂಡಳು. ದರವಡೆಖೋರರ ನಾಯಕನು ಹೇಳಿದಂತೆ ಅವಳಿಗೆ ಆ ಜನರಿಂದ ಯಾವ ತೊಂದರೆಯೂ ಉಂಟಾಗುವ ಸಂಭವವಿರಲಿಲ್ಲ; ಯಾಕಂದರೆ, ಅವರು ಹೊರಡುವಾಗ ಜಮಾಲಖಾನನು ಬೇಕಂತ ಹೇಳಿದ್ದೇನಂದರೆ:— “ಈಗ ನೀವು ಯಾವ ಹುಡುಗೆಯನ್ನು ಬಾದಶಹನ ಝನಾನಖಾನೆಗೆ ತಲುಪಿಸಬೇಕಾಗಿದೆಯೋ, ಇವಳನ್ನು ಬಾದಶಹ ಬೇಗಮಳು ಈ ಮೊದಲೇ ಗುರುತಿಸಿರುತ್ತಾಳೆ; ಹಾಗೆ, ಇವಳನ್ನು ಶಹಜಾದನ ಝನಾನಖಾನೆಗೆ ಕಳಿಸಿಕೊಡಬೇಕೆಂದು ಅವಳೇ ನನಗೆ ಆಜ್ಞೆ ಮಾಡಿರುತ್ತಾಳೆ. ಆದ್ದರಿಂದ ನೀವು ಇವಳಿಗೆ ದಾರಿಯಲ್ಲಿ ಯತ್ಕಿಂಚಿತ್ತೂ ತೊಂದರೆ-ಅವಮಾನಗೊಳಿಸಲಾಗದು. ನೀವು ಇವಳನ್ನು ಸುರಕ್ಷಿತವಾಗಿ ಒಯ್ದು ಅಲ್ಲಿಗೆ ತಲುಪಿಸಿದರೆ, ನಿಮಗೆ ಗಾ ನಾಣ್ಯಗಳು ಇನಾಮೆಂದು ಹೆಚ್ಚು ಸಿಗಬಹುದು. ನೀವು ಈಕೆಗೆ ದಾರಿಯಲ್ಲಿ ಯಾವ ಪ್ರಕಾರದಿಂದಲಾದರೂ ತೊಂದರೆಕೊಟ್ಟಿರೆಂಬದು ತಿಳಿದು ಬಂದರೆ, ಶಹಜಾದನು ನಿಮ್ಮನ್ನು ತುಂಡರಿಸಿ ಚೆಲ್ಲಿಸದೆ ಬಿಡಲಿಕ್ಕಿಲ್ಲವೆಂಬದನ್ನು ನೆನಪಿಟ್ಟುಕೊಳ್ಳಿರಿ.” ಅದರಿಂದ ಆ ಸ್ವಾರರಾರೂ ಅವಳಿಗೆ ತಿಳಿದೇ ಆಗಲಿ,-ತಿಳಿಯದೇ ಆಗಲಿ ಯಾವ ಬಗೆಯಿಂದಲೂ ತೊಂದರೆ ಕೊಡಲಿಲ್ಲ. ಹಂಸೆಯು ಆ ಹಾಸುಗಲ್ಲ ಮೇಲೆ ಎಷ್ಟೋ ಹೊತ್ತಿನ ವರೆಗೆ ಏಕಾಗ್ರಚಿತ್ತದಿಂದ ಸ್ತಬ್ಧಳಾಗಿ ಕುಳಿತಿದ್ದಳು.

ಬೆಳಗು ಹರಿಯ ಬಂತು. ಕೂಡಲೆ ಆ ಸ್ವಾರರೆಲ್ಲರೂ ಎದ್ದರು. ಅವರು

ಇನ್ನು ಮೇಲೆ ನಡೆಯಬೇಕಾಗಿದ್ದ ದಾರಿಯು ಕಟ್ಟಡವಿಯೊಳಗಿನದಿತ್ತು. ಆ ಇಕ್ಕಟ್ಟಿನ ಮಾರ್ಗವು ಚನ್ನಾಗಿ ಪರಿಚಿತವಾಗಿದ್ದರೂ ತಮ್ಮ ಕುದುರೆಗಳು ಹಿಂಸ್ರ ಶ್ವಾಪದಗಳ ಭಯದಿಂದ ರಾತ್ರಿಯ ಕಾಲದಲ್ಲಿ ದಾರಿತಪ್ಪಿ ಹೋಗಬಹುದೆಂದು ತಿಳಿದು, ಅವರು ಆ ಸ್ಥಳದಲ್ಲಿ ಬೆಳಗು ಹರಿಯುವ ವರೆಗೆ ಕುಳಿತುಕೊಂಡಿದ್ದರು. ಅವರು ಹೋಗಬೇಕಾಗಿದ್ದ ಸ್ಥಳವು ಇನ್ನು ಬಹಳ ದೂರದಲ್ಲಿರಲಿಲ್ಲ. ಕೂಡುತ್ತ ಏಳುತ್ತ ಸಂಜೆಯ ವರೆಗೆ ಹೋದರೂ ತಾವು ಆ ಗಂತವ್ಯಸ್ಥಳಕ್ಕೆ ಸಹಜವಾಗಿ ತಲುಪುವೆವೆಂದು ಅವರಿಗೆ ಖಾತ್ರಿಯಿದ್ದಿತು. ಅದರಿಂದ ಅವರು ಕುಳಿತ ಸ್ಥಳದಿಂದ ಎದ್ದು ಸಾವಕಾಶವಾಗಿ ನಡೆದಿದ್ದರು.

ಆ ದರವಡೆಖೋರರ ಟೋಳಿಯು ಅಡವಿಯ ಒಂದು ಭಾಗವನ್ನು ದಾಟಿ ಮತ್ತೊಂದು ಕಟ್ಟಡವಿಯನ್ನು ಸೇರಿತು. ಅಷ್ಟರಲ್ಲಿ ಎದುರಿನಿಂದ ಬರುತ್ತಿರುವ ಕೆಲ ಸವಾರರು ಅವರಿಗೆ ಕಾಣಿಸಿದರು. ಆ ನಾಡೆಲ್ಲ ಬಾದಶಹನವೇ ಆದ್ದರಿಂದ, ಎದುರಿನಿಂದ ಬರುವವರು ತಮ್ಮ ಶತ್ರುಗಳಾಗಿರದೆ, ಮಿತ್ರರೇ ಆಗಿರಬೇಕೆಂಬ ತಿಳುವಳಿಕೆಯಿಂದ ಅವರು ಮುಂದೆ ನಡೆದಿದ್ದರು; ಆದರೆ ಆ ಅಡವಿಯೊಳಗಿನ ಒಂದು ಇಕ್ಕಟ್ಟಾದ ಮಾರ್ಗದ ಬಳಿಗೆ ಹೋದ ಕೂಡಲೆ ಅವರಿಗೆ ತಮ್ಮ ತಪ್ಪು ತಿಳಿಯಬಂತು. ಕ್ಷಣಾರ್ಧದಲ್ಲಿಯೇ ನೂರು-ನೂರೈವತ್ತು ಜನ ಮರಾಟಿಗರ ದಂಡಾಳುಗಳು ಅವರನ್ನು ಸುತ್ತುಗಟ್ಟಿದರು; ಹಾಗು "ಕೊಲ್ಲಿರಿ, ಈ ಹರಾಮಖೋರರನ್ನು! ಆದರೆ ಆ ಸ್ತ್ರೀಯ ಕೂದಲಿಗೂ ಧಕ್ಕೆ ಹತ್ತದಂತೆ ನೋಡಿಕೊಳ್ಳಿರಿ." ಎಂಬ ಅಪ್ಪಣೆಯ ಶಬ್ದವು ಕೇಳಿಸಹತ್ತಿತು.

ಕಣ್ಣು ಮುಚ್ಚಿ ಕಣ್ಣು ತೆರೆಯುವಷ್ಟರಲ್ಲಿ ಮರಾಟರ ಸೈನಿಕರು ಆ ಹತ್ತು ಜನ ಪುಂಡರನ್ನು ನುಚ್ಚುನುರಿಯಾಗಿ ಮಾಡಿದರು. ಹಂಸೆಯನ್ನು ಕೂಡ್ರಿಸಿಕೊಂಡು ನಡೆದಿದ್ದವನ ಗೊಡವೆಗೆ ಇದುವರೆಗೆ ಅವರಾರೂ ಹೋಗಿರಲಿಲ್ಲ. ಅದರಿಂದ ಅವನು ಸದುವು ನೋಡಿ ಹಂಸೆಯನ್ನು ಓಡಿಸಿಕೊಂಡು ಹೋಗುವ ಪ್ರಯತ್ನಕ್ಕೆ ತೊಡಗಿದ್ದನು; ಆದರೆ ಮರಾಟರ ಮುಖ್ಯಸ್ಥನ ಕಣ್ಣು ತಪ್ಪಿಸಲಿಕ್ಕೆ ಆತನು ಸಮರ್ಥನಾಗಲಿಲ್ಲ. ಮರಾಟರ ಮುಖ್ಯಸ್ಥನು ತನ್ನ ನಿಡಿದಾದ ಭಲ್ಲೆಯಿಂದ ಆತನ ಕುದುರೆಯ ಎದೆಗೆ ಭರದಿಂದ ತಿವಿದನು; ಕೂಡಲೆ ಆ ಕುದುರೆಯು ಒಮ್ಮೆಲೆ ಘುಟಿದು ನೆಲಕ್ಕೆ ಬೀಳಲು, ಆ ಪುಂಡನು ಆ ಕುದುರೆಯ ಹೊಟ್ಟೆಯ ಕೆಳಗೆ ಸಿಕ್ಕನು; ಆದರೆ ಆತನ ಮುಂದೆ ಕುಳಿತಿದ್ದ ಹಂಸೆಯು ಮಾತ್ರ ಕುದುರೆಯ ವೇಗದಿಂದ ದೂರ ಸಿಡಿದು ಬಿದ್ದಳು!

ಆದರೂ ಆ ಹುಲ್ಲು ನೆಲದಲ್ಲಿ ಅವಳಿಗೆ ಪೆಟ್ಟೇನೂ ಹತ್ತಲಿಲ್ಲ; ಆದರೆ ಆ ಆಕಸ್ಮಿಕ ಭೀಕರ ಪ್ರಸಂಗದಿಂದ ಅವಳಿಗೆ ಮತ್ತೆ ಮೂರ್ಛೆ ಬಾರದೆ ಇರಲಿಲ್ಲ.

ಹಂಸೆಯು ದೂರ ಸಿಡಿದು ಬಿದ್ದು ಮೂರ್ಛೆಗೊಂಡದ್ದನ್ನು ಕಂಡ ಆ ಮರಾಟರ ಮುಖ್ಯಸ್ಥನು ತನ್ನ ಜನರನ್ನು ಕುರಿತು:—"ಆ ಸ್ತ್ರೀಯಳಿಗೆ ಧಕ್ಕೆಯಾಗಿದೆಯೇ? ನೋಡಿರಿ." ಎಂದು ಆಜ್ಞೆ ಮಾಡಿದನು.

ಸಂಗಡಿಗರು ಆಕೆಯನ್ನು ಎತ್ತಿಕೊಂಡು ಬಂದು ಮುಖ್ಯಸ್ಥನ ಎದುರಿಗೆ ಮಲಗಿಸಿ:—"ಇಲ್ಲ. ಮಹಾರಾಜ, ಇವಳಿಗೆ ಏನೂ ಧಕ್ಕೆ ಹತ್ತಿರುವದಿಲ್ಲ" ಎಂದು ಅಂದರು.

ವಾಚಕರೇ, ನಮ್ಮ ಹಂಸೆಯನ್ನು ಆಗ ಆ ಪುಂಡರಿಂದ ಬಿಡುಗಡೆ ಮಾಡಿದವರಾರೆಂಬದನ್ನು ಬಲ್ಲಿರಾ? ಆ ನಗರದ ಬುಡುಬುಡಿಕಪ್ಪನ ಭವಿಷ್ಯದಂತೆ ಹಂಸೆಗೆ ಪ್ರಾಪ್ತವಾಗಬೇಕಾಗಿದ್ದ ಸಂಕಟಪರಂಪರೆಯು ಅಂದಿಗೆ ಮುಗಿಯಿತೇ? ಆಕೆಯನ್ನು ಬಂಧಮುಕ್ತಗೊಳಿಸಿದವರು ಮರಾಟರಿದ್ದದ್ದರಿಂದ, ಅವಳು ಇನ್ನು ನಿರ್ಭೀತಳಾದಳೇ? ಆಕೆಯ ಭವಿತವ್ಯದಲ್ಲಿ ಮತ್ತೇನಿದೆಯೋ ಆದಾರು ಹೇಳಬಲ್ಲರು!

ವಾಚಕರೇ, ಹಂಸೆಯನ್ನು ಆ ಪುಂಡರಿಂದ ಬಿಡುಗಡೆ ಮಾಡಿದ ಆ ಮಹನೀಯನು ಅಂತಿಂಥವನಲ್ಲ. ಆತನು ಖಂಡೇರಾವ ದಾಭಾಡೆ ಎಂಬ ಶಿವಛತ್ರಪತಿಯ ಸ್ವಂತದ ತಾಲಿಮೆಯಲ್ಲಿ ತಯಾರಾದ ಸರದಾರನಾಗಿದ್ದನು. ಅವನು ಮೂರ್ಛಿತಳಾದ ಹಂಸೆಯನ್ನು ಒಂದು ಡೋಲಿಯಲ್ಲಿ ಮಲಗಿಸಿಕೊಂಡು ತನ್ನ ಸೈನ್ಯದೊಡನೆ ಅಲ್ಲಿಂದ ಹೊರಟು, ಮುಂದೆ ಕೆಲ ದಿನಗಳಲ್ಲಿ ತನ್ನ ಊರಿಗೆ ತಲುಪಿದನು. ಅವನು ಊರಿಗೆ ಬಂದು ಹಂಸೆಯನ್ನು ತನ್ನ ವಾಡೆಯೊಳಗಿನ ದಿವಾಣಖಾನೆಯಲ್ಲಿ ಮಲಗಿಸಿ, ಆಕೆಯ ವಿಷಯವಾಗಿ ತನಗೆ ಉಪಲಬ್ಧವಿದ್ದಷ್ಟು ಸಂಗತಿಯನ್ನು ತನ್ನ ಹೆಂಡತಿಗೆ ತಿಳಿಸಿದನು; ಹಾಗು ಆಕೆಯ ಶುಶ್ರೂಷೆಯನ್ನು ಚೆನ್ನಾಗಿ ಮಾಡುವಂತೆ ಹೇಳಿ ಹೊರಗೆ ಬಂದನು. ಇಷ್ಟರಲ್ಲಿ,

"ರಾಮ ರಾಮ, ನಾಯಿಕ" ಎಂದು ಅಂದು, ಬಹು ದೂರದ ಪ್ರವಾಸದಿಂದ ಬಂದ ಒಬ್ಬ ಸವಾರನು ಅವನಿಗೆ ನಮಸ್ಕರಿಸಿದನು.

ಕೂಡಲೆ ಖಂಡೇರಾಯನು ಅವನಿಗೆ ಪ್ರತಿಯಾಗಿ ರಾಮ ರಾಮ ಮಾಡಿ:—"ಜಾನಬಾ, ಎಲ್ಲಿಂದ ಬಂದೆ?" ಎಂದು ಕೇಳಲು,

"ನೀವು ಈಗಲೆ ಬರಬೇಕೆಂಬ ಪಂತರ ವರದಿಯನ್ನು ನಿಮಗೆ ಮುಟ್ಟಿಸಲಿಕ್ಕೆಂದು ಪ್ರತಾಪಗಡದಿಂದ ಬಂದೆನು." ಎಂದು ಜನೋಬನು ಅಂದನು.

"ಎಲ ಇವನ! ನಾನು ಈಗ ತಾನೇ ಮೋಹಿಮೆಯ ಮೇಲಿಂದ ಬಂದಿರುವೆನು. ಇದುವರೆಗೆ ನಾನು ಎಲ್ಲಿ ಇದ್ದೆನು, ಏನು ಮಾಡುತ್ತಿದ್ದೆನು? ಮುಂತಾದದ್ದಾವುದೂ ಇಲ್ಲಿಯವರಾರಿಗೂ ಗೊತ್ತಿರುವದಿಲ್ಲ. ಹೀಗಿದ್ದು ನಾನು ಇಲ್ಲಿಗೆ ಬರುವ ವೇಳೆಗೆ ಸರಿಯಾಗಿ ಪಂತರು ನಿನ್ನನ್ನು ಇಲ್ಲಿಗೆ ಏನೆಂದು ಕಳಿಸಿದರು? ನಾನು ಇಲ್ಲಿಗೆ ಇಂದೇ ಒರುವನೆಂಬ ಸುದ್ದಿಯು ಅವರಿಗೆ ಹತ್ತಿತಾದರೂ ಹೇಗೆ? ಆದಿರಲಿ. ಜಾನಬಾ, ಪ್ರತಾಪಗಡದಲ್ಲಿ ಸದ್ಯಕ್ಕೇನು ನಡೆದಿದೆ? ಇಷ್ಟು ಅವಸರದಿಂದ ಪಂತರು ನನ್ನನ್ನೇಕೆ ಕರೆಕಳುಹಿರುವರು? ನೀನು ಸಾಮಾನ್ಯ ದೂತನಂತೆ ತೋರುತ್ತಿದ್ದರೂ, ನೀನು ರಾಮಚಂದ್ರ ಪಂತರ ಹೃದ್ಗತವನ್ನೂ ಕಾರ್ಯ-ಕಲಾಪಗಳನ್ನೂ ಚೆನ್ನಾಗಿ ಅರಿತಿರುವೆ. ಆದುದರಿಂದ ಅಲ್ಲಿಯ ಸಂಗತಿಯನ್ನಷ್ಟು ತಿಳಿಸು. ಅದನ್ನು ಕೇಳಿಕೊಂಡು ಈ ದಿನ ರಾತ್ರಿ ಇಲ್ಲಿ ಇದ್ದು. ಹೋಗುವದಾದರೆ ನಾಳೆ ಬೆಳಿಗ್ಗೆ ಹೊರಡೋಣ; ಅಥವಾ ಅಂಥ ಜರೂರಿಯ ಕೆಲಸವೇ ಇದ್ದರೆ, ಇದುವರೆಗೆ ದಣಿದು ಬಂದ ನನ್ನ ಕರಿಯ ಕುದುರೆಯ ಜೀನನ್ನು ಕೂಡ ಇಳಿಸದೆ, ಸ್ವರಾಜ್ಯ ಸೇವೆವಾಗಿ ಈಗಿಂದೀಗಲೇ ಹೊರಡೋಣ."

"ಹೇಳುವದೇನು? ಬಾದಶಹನು ಪರಳಿ-ಸಾತಾರೆ ಗಡಗಳನ್ನು ಈ ಮೊದಲೇ ತಕ್ಕೊಂಡಿರುವನು. ಪನ್ಹಾಳ-ರಾಂಗಣೆ ಗಡಗಳು ಇಂದೇ ಅವನ ಹಸ್ತಗತವಾದವು........!"

ಖಂಡೇರಾಯನು ಜನೋಬನನ್ನು ಮುಂದೆ ಮಾತಾಡಗೊಡದೆ:— "ಹಾಗಾದರೆ ಸದ್ಯಕ್ಕೆ ಆಯಿಾಸಾಹೇಬರು ಎಲ್ಲಿರುತ್ತಾರೆ? ರಾಂಗಣೆ-ವಿಶಾಲಗಡಗಳ ಮೇಲೆಯೇ ಅವರಿರುತ್ತಿದ್ದರಷ್ಟೆ?" ಎಂದು ಪ್ರಶ್ನೆ ಮಾಡಿದನು

"ಆದರೆ ಪಂತರು ಘೋರಣವನ್ನರಿತು ಅವರನ್ನು ಈ ಮೊದಲೇ ಪ್ರತಾಪಗಡಕ್ಕೆ ಕರೆದೊಯ್ದಿದ್ದಾರೆ. ರಾಂಗಣೆಯೊಳಗಿನ ಪಂತಪ್ರತಿನಿಧಿಯು ಬಾದಶಹನ ಕೂಡ ೨ ತಿಂಗಳಗಟ್ಲೆ ಹೋರಾಡಿದನು; ಆದರೂ ಕಡೆಗೆ ರಾಂಗಣೆಯು ನಮ್ಮ ಕೈ ಬಿಟ್ಟಿತು!"

ಈಗ ಬರುವೆನೆಂದು ಹೇಳಿ ಖಂಡೇರಾಯನು ವಾಡೆಯನ್ನು ಸೇರಿದನು.

———

## ದಾಭಾಡೆಯವರ ವಾಡೆಯಲ್ಲಿ.

ರಾಜಾರಾಮ ಮಹಾರಾಜರ ನಿಧನದ ನಂತರ ಸ್ವರಾಜ್ಯದಲ್ಲಿ ಒಳ್ಳೇ ಕಠಿಣ ಸ್ಥಿತಿಯು ಪ್ರಾಪ್ತವಾಗಿತ್ತು. ಸ್ವರಾಜ್ಯದ ನಿಜವಾದ ಮಾಲಕನಾದ ಶ್ರೀ ಶಾಹೂ ಛತ್ರಪತಿಯು ಮೊಗಲರ ಸೆರೆಯೊಳಾಗಿದ್ದನು. ಇಂಥ ಸ್ಥಿತಿಯಲ್ಲಿ ರಾಮಚಂದ್ರಪಂತನು ಸ್ವಲ್ಪವೂ ಧೈರ್ಯಗೆಡದೆ ತನ್ನ ಮುತ್ಸದ್ದಿಗಿರಿಯ ಬಲದಿಂದ ಸ್ವರಾಜ್ಯದ ಕಾರಭಾರವನ್ನು ಸುಸೂತ್ರ ನಡಿಸುವ ಜಬಾಬುದಾರಿಯನ್ನು ಹೊತ್ತಿದ್ದನು. ಉಳಿದ ಎಲ್ಲ ಸರದಾರರು ಪಂತನಿಗೆ ಸಹಾಯ ಮಾಡಲಿಕ್ಕೆ ಒಪ್ಪಿದ್ದರು. ದಾಭಾಡೆಯ ಖಂಡೇರಾಯನಾದರೂ ಪಂತನ ಪ್ರಭಾವಳಿಯೊಳಗಿನ ಪ್ರಮುಖ ಸರದಾರನಾಗಿದ್ದನು. ಅಂತೇ ಪಂತನು ಅವನನ್ನು ಅಷ್ಟು ಅವಸರದಿಂದ ಕರೆಕಳುಹಿದ್ದನು.

ಖಂಡೇರಾಯನು ವಾಡೆಯೊಳಗೆ ತನ್ನ ಅಂಗವಸ್ತ್ರವಾಗಿದ್ದ ಭವಾನಿಯ ಮಹಾಲಿಗೆ ಹೋದನು. ಆಗಿನ ಕಾಲದಲ್ಲಿ ಪುರುಷರು ಉಪಪತ್ನಿಗಳನ್ನಿಟ್ಟು ಕೊಳ್ಳುವದೊಂದು ದೊಡ್ಡಿಸ್ತಿಕೆಯ ಲಕ್ಷಣವಾಗಿತ್ತು. ಅದರಿಂದ ಪ್ರತಿಯೊಬ್ಬ ಸೆಟ್ಟಿ-ಸಾವುಕಾರರೂ ಸರದಾರರೂ ತಮ್ಮ ತಮ್ಮ ಯೋಗ್ಯತೆಗೆ ತಕ್ಕಂತಹ ಉಪಪತ್ನಿಯರನ್ನು ಸಾಕಿಯೇ ಸಾಕುತ್ತಿದ್ದರು. ಆ ದೋಷವು ಮರಾಟರಲ್ಲಿಯೇ ಅತ್ಯಲ್ಪವಾಗಿತ್ತು. ಮುಸಲ್ಮಾನ ಬಾದಶಹರ ಹಾಗು ಅವರ ಸರದಾರರ ಉಪಪತ್ನಿಯರು ಅಸಂಖ್ಯಾಕರಿರುತ್ತಿದ್ದರು. ಭವಾನಿಯ ಮಹಾಲು ವಾಡೆಯಲ್ಲೇ ಒತ್ತಟ್ಟಿಗಿದ್ದಿತು. ಅದರಿಂದ ಭವಾನಿಗೂ ಖಂಡೇರಾಯನ ಹೆಂಡತಿಯಾದ ಉಮಾಬಾಯಿಗೂ ಅಷ್ಟೊಂದು ಆಂತರಂಗಿಕ ಸಖ್ಯವಿರದಿದ್ದರೂ, ಬಹಿರಂಗದಲ್ಲಾದರೂ ದ್ವೇಷವಿರಲಿಲ್ಲ. ಪೂರ್ವಕಾಲದ ನಮ್ಮ ಆರ್ಯ ಲಲನೆಯರು ಬಹು ಸಹನ ಶೀಲ ಸ್ವಭಾವದವರು. ಈಗಿನ ಈ ಇಪ್ಪತ್ತನೆಯ ಶತಮಾನದ ಹೆಂಗಸರಂತೆ ತಮ್ಮ ಗಂಡನು ಎಲ್ಲಿಯಾದರೂ ತುಸ ಅಡ್ಡದಾರಿಗೆ ಬಿದ್ದರೆ ಸಾಕು; ತಾವೂ ಹಾಗೇಕೆ ನಡೆಯಬಾರದೆಂದು ಗಂಡಸರ ಮುಂಗೈ ಹಿಡಿದು ಕೇಳುವ ಉತಾವಳಿ ಸ್ವಭಾವದವರಾಗಿರಲಿಲ್ಲ. ಭವಾನಿಯು ಶಿವಾಜಿಯ ಕಾಲದ ಒಬ್ಬ ಶಿಲೇದಾರನ ನೆವಮಾತ್ರದ ಲಗ್ನದ ಹೆಂಡತಿಯು. ಬಾಲ್ಯ ಕಾಲದಲ್ಲಿಯೇ ಆಕೆಯ ಗಂಡನು ವೈರಿಗಳಿಂದ ಹತನಾದನು; ಹಾಗು ಆಕೆಯನ್ನು ವೈರಿಗಳು ಅಪಹರಿಸಿದರು. ಮುಂದೆ ಆ

ಸಂಗತಿಯು ಆಕಸ್ಮಿಕವಾಗಿ ಖಂಡೇರಾಯನ ನಜರಿಗೆ ಬರಲು, ಅವನು ಅವ ಳನ್ನು ಅವರಿಂದ ಮುಕ್ತಗೊಳಿಸಿದನು. ಆಕೆಯು ಪುನರ್ವಿವಾಹ ಮಾಡಿ ಕೊಳ್ಳದೆ ಖಂಡೇರಾಯನಲ್ಲಿಯೇ ಉಪಪತ್ನಿಯಾಗಿ ಇರಹತ್ತಿದಳು. ಭವಾ ನಿಯು ರೂಪಸುಂದರಿಯಾಗಿದ್ದಂತೆ ಗುಣಸುಂದರಿಯೂ ಆಗಿದ್ದಳು. ಆಕೆಯು ಯಾವಾಗಲೂ ಆ ಮಹಾಲಿನಲ್ಲಿಯೇ ವಾಸಿಸುತ್ತಿದ್ದಳು. ವಾಡೆಯ ಹೊರಗೆ ಕ್ವಚಿತ್ತಾಗಿಯೇ ಹೋಗುತ್ತಿದ್ದಳು; ಆದರೆ ಇತ್ತೀಚೆಗೆ ಕೆಲ ದಿನಗಳಿಂದ ಮಾತ್ರ ಆಕೆಯು ಆಗಾಗ್ಗೆ ವಾಡೆಯ ಹೊರಗೆ ಹೋಗಹತ್ತಿದ್ದಳು. ಅದ ರಿಂದ ಖಂಡೇರಾಯನು ಅಂದು ಆಕಸ್ಮಿಕವಾಗಿ ಅವಳ ಮಹಾಲಿಗೆ ಹೋದಾಗ ಅವಳು ಅಲ್ಲಿ ಇರಲಿಲ್ಲ. ಭವಾನಿಯು ಆಗ ತನ್ನ ಹೊಸ ಕ್ರಮದಂತೆ ಎಲ್ಲಿಯೋ ಹೊರಗೆ ಹೋಗಿದ್ದಳು.

ಅದನ್ನು ಕಂಡು ಖಂಡೇರಾಯನಿಗೆ ಸಿಟ್ಟು ಬರುವದು ಸ್ವಾಭಾವಿಕವೇ. ಅವನು ಸಿಟ್ಟಿನಿಂದ ಕಾಲು ಅಪ್ಪಳಿಸುತ್ತ ಆ ಮಹಾಲಿನಿಂದ ಹೊರಬಿದ್ದು, ತನ್ನ ಹೆಂಡತಿಯಾದ ಉಮಾಬಾಯಿಯ ಕಡೆಗೆ ಬಂದನು. ಭವಾನಿಯು ಮಹಾಲಿನಲ್ಲಿರದ್ದರಿಂದ ತನ್ನ ಪತಿಯು ಹೀಗೆ ಸಿಟ್ಟಾಗಿರುವನೆಂಬದನ್ನು ಅವಳು ಕೂಡಲೆ ತಿಳಿದಳು. ಆದರೂ ಅವಳು ಆ ಬಗ್ಗೆ ಅವನೆದುರಿಗೆ ತಾನಾಗಿ ಯಾವ ಮಾತನ್ನೂ ಎತ್ತಲಿಲ್ಲ. ಕೆಲ ಹೊತ್ತಿನ ಮೇಲೆ ಖಂಡೇ ರಾಯನೇ ಭವಾನಿಯ ಬಗ್ಗೆ ಹೆಂಡತಿಯನ್ನು ಕುರಿತು ವಿಚಾರಿಸಲು, "ಈ ಸಂಗತಿಯನ್ನು ನನ್ನ ಬಾಯಿಂದ ಕೇಳಿದರೆ ವಿಶ್ವಾಸವುಂಟಾಗಲಿಕ್ಕಿಲ್ಲ; ಆದರೂ ನನ್ನ ಕರ್ತವ್ಯವನ್ನು ನಾನು ಮಾಡುತ್ತೇನೆ" ಎಂದು ಉಮಾ ಬಾಯಿಯು ಉಪಕ್ರಮಿಸಿ: "ಭವಾನಿಯು ಇತ್ತೀಚೆಗೆ ಆಗಾಗ್ಗೆ ವಾಡೆಯ ಹೊರಗೆ ಹೋಗುತ್ತಿರುತ್ತಾಳೆ; ಹಾಗು ಅವಳ ಭೆಟ್ಟಿಗೆಂದು ಕೆಲ ಜನ ಗಂಡ ಸರೂ ಮೇಲಿಂದ ಮೇಲೆ ಅವಳ ಮಹಾಲಿಗೆ ಬರುತ್ತಿರುತ್ತಾರೆ. ಅದರಿಂದ ನಿಮ್ಮ ಭವಾನಿಯು ಈಗ ಮೊದಲಿನ ಭವಾನಿಯಾಗಿರದೆ, ನಗರ ಭವಾನಿ ಯಾಗಿರುತ್ತಾಳೆಂದು ಜನರಾಡಿಕೊಳ್ಳಹತ್ತಿರುತ್ತಾರೆ" ಎಂದು ಒಳ್ಳೇ ಗುಟ್ಟಿನ ಮಾತನ್ನು ತಿಳಿಸಿದಳು.

ಆ ನುಡಿಗಳನ್ನು ಕೇಳಿಯಂತೂ ಖಂಡೇರಾಯನ ಸಿಟ್ಟು ಅಸಿವಾರ ವಾಯಿತು. ಆತನು ರಾಜಕಾರಣದಲ್ಲಿ ಒಳ್ಳೇ ವಿಚಾರವಂತನೂ, ಶೂರನೂ ಸಾಹಸಿಯೂ ಎಂದು ಪ್ರಸಿದ್ಧನಾದುದರಿಂದ ಅವನಿಗೆ "ಸೇನಾ ಖಾಸ ಖೇಲ"

ಎಂಬ ಅತ್ಯುಚ್ಚ ಪದವಿಯು ಪ್ರಾಪ್ತವಾಗಿತ್ತು; ಆದರೆ ಸ್ತ್ರೀವ್ಯಾಮೋಹದಿಂದ ವ್ಯಾಪ್ತನಾದ ಮನುಷ್ಯನು ಯಾವನಿದ್ದರೇನು? ಅವನಿಂದ ಅವಿಚಾರವಾಗ ತಕ್ಕದ್ದೇ ಎಂಬುದು ಸಿದ್ಧಾಂತ ವಾಕ್ಯವಾದುದರಿಂದ ಖಂಡೇರಾಯನಾದರೂ ಅದಕ್ಕೆ ಅಪವಾದವಾಗಿ ನಡೆಯುವದು ಹೇಗೆ? ಕೂಡಲೆ ಆತನು ಆರ್ಭಟಿಸುತ್ತ:--"ಭವಾನಿಯು ಹಗಲೆಲ್ಲ ಹೋಗುವದೆಲ್ಲಿಗೆ? ಹಾಗು ಆಕೆಯ ಕಡೆಗೆ ಬರುವವನಾದರೂ ಯಾರು?" ಎಂದು ಕೇಳಲು, "ನನಗೆ ಆ ಸಂಗತಿಯು ತಿಳಿಯದು; ಬಾಳಾಜಿಪಂತನೆಂಬವನಾವನೋ ಬರುತ್ತಿರುವನಂತೆ" ಎಂದಂದು ಉಮಾಬಾಯಿಯು ಸುಮ್ಮನಾದಳು.

ಬಳಿಕ ಖಂಡೇರಾಯನು ಒಳಗೆ ನಿಲ್ಲದೆ ಚಾವಡಿಗೆ ಬಂದನು. ಅಲ್ಲಿ ಆತನಿಗೆ ಗುಪ್ತ ಹೇರರ ನಾಯಕನಾದ ಪಿಲಾಜಿ ನಾಯಕನ ಭೆಟ್ಟಿಯಾಯಿತು. ಈ ಪಿಲಾಜಿ ಗಾಯಕವಾಡನೇ ಬಡೋದೆಯ ಗಾಯಕವಾಡರ ಮೂಲ ಪುರುಷನು. "ಪಿಲಾಜೀ, ಏನು ಮಾಡುತ್ತಿರುವೆ?" ಎಂಬ ಖಂಡೇರಾಯನ ಪ್ರಶ್ನೆಗೆ "ಧಣಿಯರೇ, ತಾವು ಇಷ್ಟರಲ್ಲಿ ಗಡಕ್ಕೆ ಹೊರಡತಕ್ಕವರು. ತಮ್ಮ ಕೂಡ ಯಾವ ಯಾವ ಸರಂಜಾಮು ಬೇಕೆಂಬದನ್ನು ತಿಳಿದು, ಸನ್ನದ್ಧಗೊಳಿಸಬೇಕೆಂದು ಬಂದಿರುತ್ತೇನೆ" ಎಂದನು.

"ಈಗ ನಾನೊಬ್ಬನೇ ಹೊರಡುವೆನು. ಸಂಗಡ ಗಡದಿಂದ ಬಂದಿರುವ ಜಾನಬಾಸಿರುವನು. ಬೇರೆಯವರ ಕಾರಣವಿಲ್ಲ; ಆದರೆ ಪಿಲಾಜಿ, ನಾನು ನಿನಗೊಂದು ಮಹತ್ವದ ಕಾಮಗಾರಿಯನ್ನೊಪ್ಪಿಸುವೆನು. ನೀನು ಅದನ್ನು ಪೂರೈಸಲೇ ಬೇಕು."

"ಒಡೆಯರ ಅಪ್ಪಣೆಯಾದರೆ ಸಾಕು; ಈ ಸೇವಕನಿಂದ ಅದು ನೀಗುವದೋ-ಇಲ್ಲವೋ ಎಂಬ ಬಗ್ಗೆ ಒಡೆಯರಿಗೇ ಗೊತ್ತಿದೆ."

ಕ್ಷಣಕಾಲ ಯೋಚಿಸಿ ಖಂಡೇರಾಯನು:--"ಪಿಲಾಜೀ, ಬಾಳಾಜಿಪಂತನೆಂಬುವನಾವನೋ ಮನುಷ್ಯನು ಈ ತಳೇಗಾವದಲ್ಲಿರುತ್ತಾನೆ. ನನ್ನ ಭವಾನಿಯು ಆತನ ಕಡೆಗೆ ಹೋಗಿಬರುತ್ತಿರುವಳೆಂದು ತಿಳಿದಿದೆ. ನಾನು ಈ ಕೂಡಲೆ ಅವರಿಬ್ಬರಿಗೂ ದೇಹಾಂತ ಶಾಸನವನ್ನು ವಿಧಿಸತಕ್ಕವನೇ! ಆದರೆ ಸಂತರ ಅತ್ಯವಶ್ಯದ ಕರೆ ಬಂದಿದೆಯಾದುದರಿಂದ ನೀನು ಈಗಿಂದೀಗಲೆ ಆ ಬಾಳಾಜಿಯ ಶೋಧ ಮಾಡಿ, ಅವನನ್ನು ಸೆರೆ ಹಿಡಿ; ಪ್ರಸಂಗ ಬಿದ್ದರೆ ಅವನನ್ನು ತುಂಡರಿಸಿ ಚೆಲ್ಲು......!" ಎಂದೆನ್ನುವಷ್ಟರಲ್ಲಿ ಪಿಲಾಜಿಯು ಆತನನ್ನು

ಮುಂದೆ ಮಾತಾಡಗೊಡದೆ:--"ಧಣಿಯರೇ, ಆ ಬಾಳಾಜಿಪಂತನಾರೆಂಬದನ್ನು ತಾವು ಗುರುತಿಸಲಿಲ್ಲೆಂಬಂತೆ ತೋರುತ್ತಿವೆ ಅವನು ಧನಾಜಿ ಸೇನಾಪತಿಗಳ ಪ್ರಾಂತ ವಸೂಲಿಯ ಸುಭೇದಾರನಾಗಿರುತ್ತಾನೆ."

"ಸುಭೇದಾರನಿರಲಿ-ಸರ ಸುಭೇದಾರನಿರಲಿ; ಎರಡನೆಯವರ ಪಾತ್ರಗಳನ್ನು ಅಪಹರಿಸುವ ಆತನು ನೀಚನೇ ಆಗಿರಬೇಕು. ನಾನು ಗಡದಿಂದ ಬಂದ ಮೇಲೆ ಅವರಿಬ್ಬರ ಸಮಾಚಾರ ತಕ್ಕೊಳ್ಳುತ್ತೇನೆ. ನಾನು ಮರಳಿ ಬರುವ ವರೆಗೆ ಭವಾನಿಯನ್ನು ಈ ವಾಡೆಯಿಂದ ಹೊರಗೆ ಹೋಗಗೊಡಬೇಡ. ಇಷ್ಟೇ ಅಲ್ಲ; ಪಿಲಾಜಿ, ನಾವು ಕರೆತಂದಿರುವ ಆ ಹುಡುಗೆಯನ್ನು ಅವಳಿಗೆ ತುಸ ಹುಷಾರಿಯೆನಿಸಿದೊಡನೆಯೇ ಅವಳ ಮನೆಗೆ ಮುಟ್ಟಿಸಿ ಬಿಡು: ಆದರೆ ಎಲ್ಲಕ್ಕೂ ಮೊದಲು ಆ ನೀಚ ಬಾಳಾಜಿಯ ಬಂದೋಬಸ್ತ ಮಾಡಲಿಕ್ಕೆ ಮನಸರಿ ಮಾಡಬೇಡ, ಕಂಡೆಯಾ?''

ಉಮಾಬಾಯಿಯು ಒಳಗೆ ಮರೆಯಲ್ಲಿ ನಿಂತು ಆ ಸಂಭಾಷಣವನ್ನು ಕೇಳುತ್ತಿದ್ದಳು. ಭವಾನಿಯ ಉಚ್ಚಾಟನೆಗೆ ತಾನು ಕಾರಣಳಾಗದೆ, ಆಕೆಯ ಪಾಪವೇ ಅವಳನ್ನು ಕೊಲ್ಲಹತ್ತಿದೆಯೆಂಬದನ್ನು ಕೇಳಿ, ಅವಳಿಗೆ ಒಂದು ಪ್ರಕಾರದ ಸಮಾಧಾನವಾಯಿತು. ತನ್ನ ಸವತಿಯ ನಾಶವು ಈ ಬಗೆಯ ಅಕಲ್ಪಿತ ರೀತಿಯಿಂದ ಆಗುತ್ತಿರುವದನ್ನು ಕಂಡು ಆದಾವ ಸ್ತ್ರೀಯಳಿಗೆ ಆನಂದವಾಗಲಿಕ್ಕಿಲ್ಲ?

ಗೊತ್ತಾದ ಮೇರೆಗೆ ಖಂಡೇರಾಯನು ಪಂತನ ಕಡೆಗೆ ಹೊರಟು ಹೋದನು. ತನಗೊಪ್ಪಿಸಿದ ಕಾರ್ಯದ ಬಗ್ಗೆ ಪಿಲಾಜಿಯು ಯೋಚಿಸ ಹತ್ತಿದನು. ಎಷ್ಟು ಆಲೋಚಿಸಿದರೂ ಬಾಳಾಜಿಪಂತನಂತಹ ಧನಾಜಿಯ ಸೇವಕನನ್ನು ಒಮ್ಮೆಲೆ ಅವಮಾನಗೊಳಿಸುವದು ಅವನಿಗೆ ಯುಕ್ತಿಸಮ್ಮತವಾಗದಾಯಿತು. ಆಗ ಅವನು ಆ ಸೂಕ್ಷ್ಮವಿಚಾರವನ್ನು ಉಮಾಬಾಯಿಗೆ ತಿಳಿಸಿದನು. ಅವಳಿಗೂ ಪಿಲಾಜಿಯ ಅಂಬೋಣವು ನಿಜವೆನಿಸಿತು ಕಡೆಗೆ ಪಿಲಾಜಿಯು ಆ ಬಗ್ಗೆ ಭೀಮರಾಯನೆಂಬ ಹೆಸರಿನ ಖಂಡೇರಾಯನ ಖಾಸಗೀ ಕಾರಭಾರಿಯ ಯೋಚನೆ ಕೇಳಬೇಕೆಂದು ಆತನ ಕಡೆಗೆ ನಡೆದನು; ಹಾಗು ಆತನಿಗೆ ನಡೆದ ಸಂಗತಿಯನ್ನೆಲ್ಲ ತಿಳಿಸಿ, ಈ ಬಗ್ಗೆ ನಿಮ್ಮ ಅಭಿಪ್ರಾಯವೇನೆಂದು ಕೇಳಿದನು

"ಪಿಲಾಜೀ, ಧಣಿಯರ ಹುಕುಮಿನಂತೆ ಒಮ್ಮೆಲೆ ನಡೆಯದೆ, ನೀನು

ನನ್ನ ಕಡೆಗೆ ಬಂದದ್ದು ವಿಹಿತವೇ ಆಯಿತು. ಪಿಲಾಜೀ, ಈ ಬಾಳಾಜಿಪಂತ ಭಟ್ಟನು ಸಾಮಾನ್ಯನಲ್ಲ. ಈತನ ಅಣ್ಣನಾದ ಜಾನೋಜಿಯು ದಂಡರಾಜ ಪುರದ ದೇಶಮುಖನಾಗಿದ್ದು, ಈತನು ಚಿಪಳೂಣದಲ್ಲಿ ಜಕಾತಿ ವಸೂಲಿಯ ಅಮಲ್‌ದಾರನಾಗಿದ್ದನು. ಆಗ ಆಂಗ್ರೆ ಹಾಗು ಸಿದ್ದೀ ಇವರಲ್ಲಿ ಕಡು ವೈರ ವಿದ್ದು, ಸಿದಿ ಯನ್ನು ಬೊಗ್ಗು ಬಡೆಯುವದೇ ಆಂಗ್ರೇನ ಪ್ರಾಮುಖ್ಯ ಕೆಲಸ ವಾಗಿತ್ತು. ಆಂಗ್ರೆಯು ಬೇರೆ ಬೇರೆ ಕಡೆಯ ಸಿದ್ದಿಯ ನೌಕರರನ್ನು ಫಿತೂರ ಮಾಡಿಕೊಳ್ಳುವ ಉದ್ಯೋಗಕ್ಕೆ ಹತ್ತಿದ್ದನು. ಬಾಳಾಜಿಯು ತನ್ನ ವಿರುದ್ಧ ಆಂಗ್ರೇನೊಡನೆ ಏನೋ ಕಾರಸ್ಥಾನ ನಡಿಸಿರುವನೆಂಬ ಸಂಶಯು ಬರಲು, ಈತನಿಗೆ ಒಳ್ಳೇ ಅಂಜಿಕೆಯುಂಟಾಗಬೇಕೆಂದು ಸಿದ್ದಿಯು ಈತನ ಅಣ್ಣನನ್ನು ತಟ್ಟಿನ ಚೀಲದಲ್ಲಿ ಹಾಕಿ ಬಾಯಿ ಕಟ್ಟಿಸಿ, ಸಮುದ್ರದಲ್ಲಿ ಮುಳುಗಿಸಿ ಕೊಲ್ಲಿಸಿ ದನು! ಆಗ ಬಾಳಾಜಿಯು ಅಂಜಿಕೆಯಿಂದ ದೇಶಾಂತರಕ್ಕೆ ಹೋಗಬೇಕೆಂದು ನಿಶ್ಚಯಿಸಿದನು. ಆತನು ತನ್ನ ಹೆಂಡಿರು-ಮಕ್ಕಳೊಡನೆ ಶ್ರೀವ ರ್ಧನವನ್ನು ಬಿಟ್ಟು, ಬಾಣಕೋಟದ ಒತ್ತಿನ ದಕ್ಷಿಣತೀರದಲ್ಲಿ ವೇಳಾಸ ಎಂಬ ಊರಲ್ಲಿ ವಾಸಿಸುತ್ತಿದ್ದ "ಭಾನು" ಎಂಬ ಉಪನಾಮದ ತನ್ನ ಪರಮ ಸ್ನೇಹಿತನ ಮನೆಗೆ ಬಂದನು. ಬಳಿಕ ಬಾಳಾಜಿಯೊಡನೆ ಆ ಮೂರು ಮಂದಿ ಭಾನು ಬಂಧುಗಳೂ ಕೊಂಕಣವನ್ನು ಬಿಟ್ಟು ದೇಶಕ್ಕೆ ಹೊರಟರು. ಹೊರಡು ವಾಗ 'ನನಗೆ ಸಿಕ್ಕ ರೊಟ್ಟಿಯಲ್ಲಿ ನಿಮಗೂ ಗಿರ್ದ ರೊಟ್ಟಿ ಕೊಡುವೆನೆ'ಂದು ಬಾಳಾಜಿಪಂತಭಟ್ಟನು ಆ ಭಾನು ಬಂಧುಗಳಿಗೆ ಅಭಿವಚನವನ್ನಿತ್ತನು. ಹೀಗೆ ಭಾನು ಹಾಗು ಬಾಳಾಜಿಪಂತರು ನೆಟ್ಟಗೆ ಸಾತಾರೆಗೆ ಹೋದರು; ಮತ್ತು ಈತನು ಒಳ್ಳೇ ಜಾಣನೆಂದು ಧನಾಜಿರಾಯರು ಈತನನ್ನು ತಮ್ಮ ಕಡೆಗೆ ಇಟ್ಟುಕೊಂಡಿರುತ್ತಾರೆ. ಇವನು ಧನಾಜಿರಾಯರ ವಸೂಲಿಗಾಗಿ ಇತ್ತ ಬಂದಿರುತ್ತಾನೆ. ಇವನ ಗುರುಗಳಾದ ಸುಪ್ರಸಿದ್ಧ ಶ್ರೀ ಬ್ರಹ್ಮೇಂದ್ರ ಸ್ವಾಮಿ ಗಳು ಕೊಂಕಣದಿಂದ ಚಿಂಚವಡದ ಗಣಪತಿಯ ದರ್ಶನಕ್ಕೆ ಬರತಕ್ಕವರಿರು ತ್ತಾರೆಂಬದು ಇವನಿಗೆ ತಿಳಿಯಲು, ಇವನು ತನ್ನ ಹೆಂಡತಿ-ಮಕ್ಕಳನ್ನು ಚಿಂಚವಡಕ್ಕೆ ಕರೆಯಿಸಿಕೊಂಡಿದ್ದನು; ಆದರೆ ನಿಶ್ಚಿತ ಮಿತಿಗೆ ಸ್ವಾಮಿಗಳು ಚಿಂಚವಡಕ್ಕೆ ಬಾರದ್ದರಿಂದ, ಇವನು ತನ್ನ ಕುಟುಂಬವನ್ನು ಮರಳಿ ತನ್ನ ವಸತಿಯ ಗ್ರಾಮವಾದ ಸಾಸವಡದ ನೆರೆಯ ಗರಾಡಕ್ಕೆ ಕಳಿಸದೆ, ಆಕೆಗೆ ದಿನ ತುಂಬಿದುದರಿಂದ ಬಾಣಂತಿತನಕ್ಕಾಗಿ ನನ್ನಲ್ಲಿಗೇ ಕರತಂದಿರುತ್ತಾನೆ. ಬಾಳಾಜಿ

ಪಂತನು ಅಂಥ ಕಚ್ಚೆ ಹರಕನಾಗಿರುವದಿಲ್ಲ. ನನಗೆ ಆತನ ಗುರುತು ಬಹು ದಿವಸಗಳಿಂದಲೂ ಇರುತ್ತದೆ. ಅವನು ತನ್ನ ಹೆಂಡತಿಯ ಬಾಣಂತಿತನಕ್ಕಾಗಿಯೇ ಇಲ್ಲಿ ವಾಸಿಸಬೇಕಾಗಿ ಬಂದುದರಿಂದ, ಅವನಿಗೆ ಇಲ್ಲಿ ವಿಶೇಷ ಕೆಲಸವಿರಲಿಲ್ಲ. ಸುಮ್ಮನೆ ಕಾಲಹರಣಕ್ಕಾಗಿ ಆತನು ನನ್ನೊಡನೆ ಒಂದೆರಡು ಸಾರೆ ಈ ವಾಡೆಗೆ ಬಂದಿದ್ದನು; ಹಾಗು ನನ್ನ ಮುಖಾಂತರವೇ ಆತನಿಗೆ ಭವಾನಿಯ ಗುರುತಾಯಿತು. ಆದರಿಂದ ಕೆಲಸವಿಲ್ಲದಾಗ ಆತನು ಆಕೆಯ ಕಡೆಗೆ ಹರಟೆ ಹೊಡೆಯಲಿಕ್ಕೆಂದು ಆಗಾಗ್ಗೆ ಬರುತ್ತಿರಬಹುದು. ಆತನ ಹೆಂಡಿರು-ಮಕ್ಕಳು ಈ ಊರಿಗೆ ಬಂದಿರುವದನ್ನು ತಿಳಿದು, ಒಂದು ದಿನ ಭವಾನಿಯು ಅವನನ್ನುದ್ದೇಶಿಸಿ: "ಪಂತರೇ, ನಾನು ನಿಮ್ಮ ಹೆಂಡಿರು-ಮಕ್ಕಳನ್ನು ನೋಡ ಬಯಸುತ್ತೇನೆ; ಅವರನ್ನು ನನಗೆ ಭೆಟ್ಟಿ ಮಾಡಿಸುವಿರಾ?" ಎಂದು ಕೇಳಿಕೊಳ್ಳಲು, ಆತನು ಅದಕ್ಕೆ ಸಂತೋಷದಿಂದ ಒಪ್ಪಿಕೊಂಡನು; ಅಂದಿನಿಂದ ಅವಳು ನಮ್ಮ ಮನೆಗೆ ಆಗಾಗ್ಗೆ ಬಂದು, ಅವನ ಹೆಂಡಿರು-ಮಕ್ಕಳಿಗೆ ಭೆಟ್ಟಿಯಾಗುತ್ತಿರುತ್ತಾಳೆ. ಇಂದು ನಮ್ಮ ಮನೆಯಲ್ಲಿ ಬಾಳಾಜಿಪಂತನ ಹುಡುಗೆಯನ್ನು ತೊಟ್ಟಿಲಕ್ಕೆ ಹಾಕುವ ಸಮಾರಂಭವು ನಡೆದಿತ್ತಾದ್ದರಿಂದ, ಅಲ್ಲಿಂದ ಮರಳಿ ಬರಲಿಕ್ಕೆ ಆಕೆಗೆ ತುಸ ತಡವಾಗಿರಬಹುದು." ಎಂದು ಭೀಮರಾಯನು ಪಿಲಾಜಿಯೊಡನೆ ಮಾತನಾಡುತ್ತಿರಲಿಕ್ಕೆ ಭವಾನಿಯು ಹೊರಗಿನಿಂದ ಬಂದು ತನ್ನ ಮಹಾಲಿನ ಕಡೆಗೆ ನಡೆದಳು. ಆಗ ಉಮಾಬಾಯಿಯೂ ಅಲ್ಲಿಯೇ ನಿಂತಿದ್ದಳು. ಒಬ್ಬರೂ ಮಾತನಾಡಲಿಲ್ಲ. ಪರಸ್ಪರರು ಪರಸ್ಪರರನ್ನು ಒಳ್ಳೇ ಆಶ್ಚರ್ಯತೆಯಿಂದಲೇ ನೋಡುತ್ತ ತಮ್ಮ ತಮ್ಮ ಮಹಾಲಿಗೆ ಹೊರಟು ಹೋದರು.

ಪಿಲಾಜಿಯು ಕೆಲ ಕಾಲ ಆಲೋಚಿಸಿ:—"ಕಾರಭಾರಿಗಳೇ, ನೀವು ಹೇಳಿದ್ದೆಲ್ಲವೂ ನಿಜ; ಆದರೆ ಧಣಿಯರ ಹುಕುಮಿನ ಪಾಡೇನು? ಅದರಂತೆ ವರ್ತಿಸದಿದ್ದರೆ, ಅವರು ಸುಮ್ಮನಿರುವರೇ?"

ಭೀಮರಾವ:—"ಪಿಲಾಜೀ, ಯೋಚಿಸಬೇಡ. ಖಂಡೇರಾಯರು ಬರುವಷ್ಟರಲ್ಲಿ ಬಾಳಾಜಿಯು ಚಿಂಚವಡಕ್ಕೆ ಹೊರಟೇ ಹೋಗುವನು. ಆ ಮೇಲೆ ನಾನು ಅವರಿಗೆ ತಿಳಿಸತಕ್ಕದ್ದನ್ನು ತಿಳಿಸುವೆನು. ನೀನು ಸ್ವಸ್ಥವಾಗಿರು, ಅಂದರಾಯಿತು."

ಅಷ್ಟರಲ್ಲಿ ಪಿಳಾಜಿಗೆ ಒಳಗಿನಿಂದ ಕರೆ ಬಂದಿತು. ದಾಸಿಯೊಡನೆ

ಆತನು ಉಮಾಬಾಯಿಯ ಕಡೆಗೆ ಹೋದನು. ಅವಳು ಅವನನ್ನು ದೀರ್ಘವಾದ ಮೂರ್ಛೆಯಿಂದ ಎಚ್ಚೆತ್ತು ತಾನೆಲ್ಲಿರುವೆನೆಂದು ಕೇಳುತ್ತಿದ್ದ ಹಂಸೆಯ ಎದುರಿಗೆ ಒಯ್ದು ನಿಲ್ಲಿಸಿದಳು. ಉಮಾಬಾಯಿಯು ಆಕೆಯ ಹತ್ತರ ಕುಳಿತು ಪ್ರೇಮಭರದಿಂದ:--"ತಂಗೀ, ನೀನು ಯಾರು? ಯಾವ ಊರವಳು? ನಿನ್ನ ಹೆಸರೇನು? ಮುಂತಾದುದನ್ನು ತಿಳಿಸು. ನೀನು ನಿರಾತಂಕವಾದ ಸ್ಥಳದಲ್ಲಿರುವೆ. ತಳೆಗಾವದ ದಾಭಾಡೆಯವರ ಆಶ್ರಯದಲ್ಲಿರುವೆ. ನೀನು ಕೊಂಚವೂ ಅಂಜಬೇಡ. ಚನ್ನಾಗಿ ಚೇತರಿಸಿಕೊಂಡು ನನ್ನ ಪ್ರಶ್ನೆಗಳಿಗೆ ಉತ್ತರ ಕೊಡು," ಎಂದು ಅನ್ನಲು,

"ನಾನು ನಮ್ಮ ಮನೆಯಿಂದ ಆಕಸ್ಮಿಕನಾಗಿ ಇಲ್ಲದಂತಾದದ್ದನ್ನು ತಿಳಿದು, ಮನೆಯಲ್ಲಿ ನನ್ನ ಹಡೆದವ್ವನು ಬಹು ದುಃಖ ಪದುತ್ತಿರಬಹುದು. ನನ್ನನ್ನು ಮುಸಲ್ಮಾನ ದರವಡೆಖೋರರು ಓಡಿಸಿಕೊಂಡು ನಡೆದಿದ್ದರು. ಇಷ್ಟರಲ್ಲಿ ನಾಲ್ಕೂ ಕಡೆಯಿಂದ ಎಷ್ಟೋ ಜನ ಸ್ವಾರರು ಧಾವಿಸಿ ಬಂದು, ನನ್ನನ್ನು ಹತ್ತಿಸಿಕೊಂಡು ನಡೆದಿದ್ದ ದರವಡೆಖೋರರ ಆ ಕುದುರೆಯನ್ನು ತಮ್ಮ ಭಲ್ಲೆಯಿಂದ ಇರಿದು ಕೊಂದರು. ಆ ಕುದುರೆಯು ದೊಪ್ಪನೆ ನೆಲಕ್ಕೆ ಬಿದ್ದೊಡನೆ, ನಾನು ನೆಲಕ್ಕೆ ಬಿದ್ದೆನು. ಇಷ್ಟೇ ನನಗೆ ಗೊತ್ತು. ಉಳಿದ ವಿಷಯವಾವುದನ್ನೂ ನಾನರಿಯೆನು.''

"ಆದರೆ ನೀನು ಯಾರು, ಎಲ್ಲಿಯವಳು, ಎಂಬ ಮುಖ್ಯ ವಿಷಯವೇ ನಮಗೆ ತಿಳಿಯಲಿಲ್ಲವಲ್ಲ?'' ಎಂದು ಪಿಲಾಜಿಯು ಪ್ರಶ್ನೆ ಮಾಡಲು, ಹಂಸೆಯು ಉಮಾಬಾಯಿಯನ್ನು ದಿಟ್ಟಿಸಿ ನೋಡಿ:—''ಅಕ್ಕೀ, ನಿಮಗೆ ಇನ್ನೂ ನನ್ನ ಗುರುತು ಹತ್ತಲಿಲ್ಲವೆ? ಗುರುತು ಹತ್ತುವ ಬಗೆಯಾದರೂ ಹೇಗೆ? ನಾನು ಆಗ ತೀರ ಚಿಕ್ಕವಳಿದ್ದೆನು. ನೀವು ರಾಯಗಡದೊಳಗಿನ ನಮ್ಮ ಮನೆಗೆ ಆಗಾಗ್ಗೆ ಬರುತ್ತಿದ್ದಿರಿ. ನಮ್ಮ ಅವ್ವನು ನಿಮ್ಮನ್ನು ಹಗಲೆಲ್ಲ ನೆನಿಸುತ್ತಿರುತ್ತಾಳೆ.''

ಆಗ ಉಮಾಬಾಯಿಯು ಅಧೀರತೆಯಿಂದ: —'ತಂಗೀ, ಅದೆಲ್ಲ ನಿಜ; ಆದರೆ ನೀನು ಯಾರ ಮಗಳು, ನಿನ್ನ ಹೆಸರೇನು, ಹೇಳಬಾರದೆ?''

"ನನಗೆ ಹಂಸೆಯೆಂದು ಕರೆಯುತ್ತಿರುತ್ತಾರೆ''

"ಏನಂದಿ? ನೀನು ಸಾವಿತ್ರೀಬಾಯಿಯ ಮಗಳೇ? ರಾಯಗಡದ ಸುಭೇದಾರನಾಗಿದ್ದ ಸೂರ್ಯಾಜಿ ಪಿಸಾಳರ ಮಗಳಲ್ಲವೆ?'' ಎಂದೆನ್ನುತ್ತ ಉಮಾ

ಬಾಯಿಯು ಹಂಸೆಯನ್ನು ಆಶ್ಚರ್ಯಚಕಿತ ನೇತ್ರಗಳಿಂದ ನೋಡಿ:—
"ತಂಗೀ, ನಿನ್ನ ತಂದೆಯು ... .. ..."

ಉಮಾಬಾಯಿಯ ಮುಖದಿಂದ ಮುಂದಿನ ಶಬ್ದಗಳು ಹೊರಡಲಿಲ್ಲ. ಆಗ ಹಂಸೆಯ ದುಃಖವು ಒತ್ತರಿಸಿ ಬಂದರೂ, ಅವಳು ಧೈರ್ಯದಿಂದ:— "ಅಕ್ಕಾ, ನಮ್ಮ ಹಿರಿಯರು ಧರ್ಮಾಂತರ ಹೊಂದಿದರೂ ನಮ್ಮ ತಾಯಿಯು ಹೊಂದಿಲ್ಲ. ನಮ್ಮ ಹಿರಿಯರು ಧರ್ಮಾಂತರ ಹೊಂದುತ್ತಲೆ ಅವರನ್ನು ತ್ಯಜಿಸಿ, ನನ್ನ ತಾಯಿಯು ಕಳೆದ ೧೨-೧೩ ವರ್ಷಗಳನ್ನು ಎಂಥ ಕಷ್ಟದಲ್ಲಿ ಕಳೆದಳೆಂಬುದು ಆಕೆಗೊಬ್ಬಳಿಗೇ ಗೊತ್ತು! ದೇವರಿಗೊಂದು ಗೊತ್ತು!!" ಎಂದೆಂದು ಕಣ್ಣೀರು ಹಾಕ ಹತ್ತಿದಳು.

ಹಂಸೆಯ ಆ ನುಡಿಯನ್ನು ಕೇಳಿ ಉಮಾಬಾಯಿಯ ಅಂತಃಕರಣವು ದ್ರವಿಸಿತು. ಕೂಡಲೆ ಅವಳು ಹಂಸೆಯನ್ನು ಬಿಗಿದಪ್ಪಿ:- "ತಂಗೀ, ಅಳ ಬೇಡ. ದುಃಖ-ಕಷ್ಟಗಳು ಯಾರನ್ನೂ ಬಿಟ್ಟಿಲ್ಲ. ಅದಿರಲಿ. ತಂಗೀ, ನಿನ್ನ ತಾಯಿಯು ಈಗ ಎಲ್ಲಿರುತ್ತಾಳೆ? ಅದನ್ನು ತಿಳಿಸು. ಅಂದರೆ ಆಕೆಗೆ ನಿನ್ನ ಸುರಕ್ಷಿತೆಯನ್ನು ತಿಳಿಸಲಿಕ್ಕೆ ನೆಟ್ಟಗಾದೀತು. ಆಕೆಯು ನಿನ್ನ ಬಗ್ಗೆ ಬಹು ಚಡಪಡಿಸುತ್ತಿರಬಹುದು."

"ನಾವು ಖೇಡದ ಬಳಿಯ ಲೋಣಿಯಲ್ಲಿರುತ್ತಿದ್ದೆವು" ಹೀಗೆಂದು ನುಡಿದ ಹಂಸೆಗೆ ಅತಿ ಶ್ರಮವಾದುದರಿಂದ ಮತ್ತೆ ಗ್ಲಾನಿ ಬರಲು, ಆಕೆಯು ಕಣ್ಣುಮುಚ್ಚಿ ಬಿದ್ದುಕೊಂಡಳು.

ಪಿಲಾಜಿಯು ತನ್ನ ಯಾವದೋ ಕೆಲಸಕ್ಕಾಗಿ ಖೇಡದ ದೇಶಮುಖರ ಮನೆಗೆ ಹೋಗುವವನಿದ್ದನು. ಹಾಗೆಯೇ ಮುಂದೆ ಲೋಣಿಯ ವರೆಗೆ ಹೋಗಿ ಸಾವಿತ್ರೀಬಾಯಿಗೆ ಹಂಸೆಯ ಕ್ಷೇಮ ಸಮಾಚಾರವನ್ನು ತಿಳಿಸಿ ಬರ ಬೇಕೆಂದು ಉಮಾಬಾಯಿಯೂ ಭೀಮರಾಯನೂ ಆತನಿಗೆ ಹೇಳಿದರು. ಮರುದಿನವೇ ಪಿಲಾಜಿಯ ಕುದುರೆಯು ಲೋಣಿಯ ಕಡೆಗೆ ಭರದಿಂದ ನಾಗಿತು.

## ಹಂಸೆಯ ಅಂತರ್ಧಾನ.

"ಕಕ್ಕೀ, ನೀವು ಹೀಗೆ ಸುಮ್ಮನೇಕಿರುವಿರಿ? ಕಳೆದ ೨-೩ ದಿನಗಳಿಂದ ನೀವು ನನ್ನೊಡನೆ ಹೀಗೇಕೆ ವರ್ತಿಸುತ್ತಿರುವಿರಿ?" ಎಂದು ದೀನವಾಣಿಯಿಂದ ಹಂಸೆಯು ಉಮಾಬಾಯಿಯನ್ನು ಕೇಳಿದಳು. "ಹಾಗೇನಿಲ್ಲ-ಹಾಗೇನಿಲ್ಲ" ಎಂದೆನ್ನುತ್ತ ದಾಸಿಯರಿಗೆ ಯಾವದೋ ಕೆಲಸ ಹೇಳುವ ನೆವ ಮಾಡಿಕೊಂಡು ಉಮಾಬಾಯಿಯು ಹಂಸೆಯ ಬಳಿಯಿಂದ ಹೊರಟು ಹೋದಳು. ಹಂಸೆಗೆ ಉಮಾಬಾಯಿಯ ಆ ವರ್ತನದ ಮರ್ಮವು ತಿಳಿಯಲಿಲ್ಲೆಂತಲ್ಲ; ಆಕೆಯು ಆ ದಾಭಾಡೆಯವರ ವಾಡೆಗೆ ಬಂದು ೫-೬ ದಿನಗಳಾಗಿದ್ದುವು. ಮೊದಲಿನ ೨-೩ ದಿನ ಅಂದರೆ, ಪಿಲಾಜಿಯು ಶೋಧಕ್ಕೆ ಹೋಗಿ ಬರುವ ವರೆಗೆ ಉಮಾಬಾಯಿಯು ಹಂಸೆಯ ಹಾಸಿಗೆಯ ಹತ್ತರ ಆಗಾಗ್ಗೆ ಬಂದು, ಬಹಳ ಹೊತ್ತಿನ ವರೆಗೆ ಕುಳಿತು, ಆಕೆಯೊಡನೆ ಒಳ್ಳೇ ಸಲಿಗೆಯಿಂದ ಮಾತನಾಡಿ ಆಕೆಗೆ ಧೈರ್ಯ ಕೊಡುತ್ತಿದ್ದಳು. ಆದರಿಂದ ಹಂಸೆಗೂ ಒಳ್ಳೇ ವಿರಾಮವೆನಿಸಿ, ಉಮಾಬಾಯಿಯ ವಿಷಯಕ್ಕೆ ಆದರವೆನಿಸುತ್ತಿತ್ತು; ಆದರೆ ಕಳೆದ ೨-೩ ದಿನಗಳಿಂದ ಉಮಾಬಾಯಿಯ ವರ್ತನದಲ್ಲಿ ಭೂಮ್ಯಾಕಾಶದಷ್ಟು ಹೆಚ್ಚು ಕಡಿಮೆಯಾಗಿತ್ತು. ಈಗಲೂ ಅವಳು ಹಂಸೆಯ ಹಾಸಿಗೆಯ ಹತ್ತರ ಔಪಚಾರಕ್ಕಾಗಿ ಬರುತ್ತಿದ್ದು, ಔಪಚಾರಿಕದ ಒಂದೆರಡು ಶಬ್ದಗಳನ್ನುಚ್ಚರಿಸಿ ಹೊರಟು ಹೋಗುತ್ತಿದ್ದಳು. ತಮ್ಮ ಒಡತಿಯೇ ಹಂಸೆಯೊಡನೆ ಅಷ್ಟು ಅನಾದರದಿಂದ ನಡೆಯಹತ್ತಿದ ಬಳಿಕ, ದಾಸ-ದಾಸಿಯರ ಪಾಡೇನು? ಮೊದಲೇ ದರವಡೆಗಾರರ ಹಾವಳಿಯಿಂದ ಹೈರಾಣಾಗಿದ್ದ ಹಂಸೆಯ ದೇಹವು ಈಗಿನ ಮಾನಸಿಕ ಅಸ್ವಸ್ಥತೆಯಿಂದ ಮತ್ತಿಷ್ಟು ಹೈರಾಣಾಗಲು, ಅವಳು ಹಾಸಿಗೆಯಿಂದ ಎದ್ದಿರಲಿಲ್ಲ. ಆಕೆಯು ಮನಸ್ಸಿನಲ್ಲಿಯೇ ಖತಿಗೊಂಡು ಆಲೋಚಿಸಹತ್ತಿದಳು. ಶೋಧದಿಂದ ಬಂದ ಪಿಲಾಜಿಯು ತನ್ನ ವಿಷಯವಾಗಿ ಏನಾದರೂ ಅಭದ್ರ ಸುದ್ದಿ ತಂದಿರಬಹುದೆಂದೂ, ಅದರಿಂದಲೇ ಉಮಾಬಾಯಿಯವರು ತನ್ನ ಬಗ್ಗೆ ತಿರಸ್ಕಾರ ತಾಳಿರಬಹುದೆಂದೂ ಆಕೆಗೆ ಹೊಳೆಯಿತು. ಕೂಡಲೆ ಅವಳು "ನಾನು ಇನ್ನು ಈ ವಾಡೆಯಲ್ಲೇಕಿರಬೇಕು? ಇದುವರೆಗೆ ನನಗೆ ಆಶ್ರಯಕೊಟ್ಟು, ನನ್ನನ್ನು ಪರಿಪರಿಯಿಂದ ಉಪಚರಿಸಿದ

ಬಗ್ಗೆ ಉಮಾಬಾಯಿಯವರ ಆಭಾರ ಮನ್ನಿಸಿ, ಈ ವಾಡೆಯಿಂದ ತಟ್ಟನೆ ಹೊರಟು ಹೋಗಬೇಕೆ”ಂದು ನಿಶ್ಚಯಿಸಿದನು.

ಖಂಡೇರಾಯನಿಗೆ ಸಂತತಿಯಿರಲಿಲ್ಲ. ಖಂಡೇರಾಯನ ಅಣ್ಣನ ಮಗಳೊಬ್ಬಳು ಉಪವರಳಾಗಿದ್ದಳು. ಆಕೆಯನ್ನು ಪೇಡದ ದೇಶಮುಖನಾದ ನಾಗೋಜೀರಾಯನಿಗೆ ಕೊಡಬೇಕೆಂದು ಉಮಾಬಾಯಿಯು ಆಲೋಚಿಸಿದ್ದಳು; ಮತ್ತು ಇಷ್ಟರಲ್ಲಿ ಆ ಬಗ್ಗೆ ಪೇಡದವರೊಡನೆ ಮಾತು-ಕಥೆಗಳೂ ನಡೆದಿದ್ದವು. ತಮ್ಮ ಮಗನು ಈಗಲೆ ಲಗ್ನಮಾಡುವದಿಲ್ಲೆನ್ನುತ್ತಾನೆಂದು ವರ ಪಕ್ಷದವರು ಒಂದೆರಡು ಸಾರೆ ದಾಕ್ಷಿಣ್ಯದಿಂದ ತಿಳಿಸಿದ್ದರು; ಆದರೂ ಸಮೀಪದ ಸ್ಥಳ; ಒಳ್ಳೇ ಮಗ; ಮನೆತನಸ್ಥರು. ಅಂದಮೇಲೆ ತಮ್ಮ ಕನ್ಯೆಯನ್ನು ಅಲ್ಲಿಗೇ ಕೊಟ್ಟು ಲಗ್ನ ಮಾಡುವದು ಹಿತವೆಂದು ನಿಶ್ಚಯಿಸಿ, ಉಮಾಬಾಯಿಯು ಶಿಲಾಜಿಯನ್ನು ಮತ್ತೆ ಪೇಡಕ್ಕೆ ಕಳಿಸಿದ್ದಳು; ಹಾಗು ಹುಡುಗನು ಈಗಲೆ ಲಗ್ನವನ್ನೇಕೆ ಮಾಡಿಕೊಳ್ಳುವದಿಲ್ಲೆಂಬವರ ಸೂಕ್ಷ್ಮ ಕಾರಣವನ್ನೂ ತಿಳಕೊಂಡು ಬರಬೇಕೆಂದು ತಿಳಿಸಿದ್ದಳು. ಶಿಲಾಜಿಯು ಪೇಡಕ್ಕೆ ಹೋಗಿ ವಿಚಾರಿಸುತ್ತಿರಲಿಕ್ಕೆ ನಾಗೋಜಿಗೂ ಲೋಣಿಯ ಸಾವಿತ್ರಿಬಾಯಿಯ ಮಗಳಾದ ಹಂಸೆಗೂ ಕೆಟ್ಟ ಪ್ರಕಾರದ ಸಂಬಂಧವಿದೆಯೆಂಬದನ್ನು ತಿಳಿದು, ಅದನ್ನು ಉಮಾಬಾಯಿಗೆ ತಿಳಿಸಿದ್ದನು. ಶಿಲಾಜಿಯು ಲೋಣಿಗೆ ಹೋದಾಗ ಸಾವಿತ್ರಿಬಾಯಿಯೂ ಆ ಊರನ್ನು ಬಿಟ್ಟು ಹೊರಟು ಹೋಗಿದ್ದಳು. ಅಂದ ಮೇಲೆ ಹಂಸೆಯ ದುಃಖಕ್ಕೆ ಎಣೆಯುಂಟೆ?

ಅಂದು ಮಧ್ಯಾಹ್ನ ನಡೆದ ಸಂಗತಿಯಾದರೂ ಏನೆಂಬದನ್ನು ತಿಳಿಯುವ ಸಲುವಾಗಿ ಹಂಸೆಯು ಒಬ್ಬ ದಾಸಿಯನ್ನು ಕುರಿತು:—“ಉಮಾಬಾಯಿಯವರು ಹೀಗೇಕೆ ಮಾಡುತ್ತಿರುವರು? ನನ್ನಿಂದ ಆದ ಅಪರಾಧವಾದರೂ ಏನು? ನಾನು ಇಲ್ಲಿ ಇರುವದಾದರೂ ಹೇಗೆ?” ಎಂದು ಕೇಳಲು,

ಆ ದಾಸಿಯು ಒಳ್ಳೇ ಸಿಟ್ಟಿನಿಂದ:—“ಹೋಗು; ಕೂಡಲೆ ಇಲ್ಲಿಂದ ಹೊರಟು ಹೋಗು. ನೀನು ಇಂಥ ಪ್ರಸಿದ್ಧ ಊರ ......ಗಿತ್ತಿಯೆಂಬದು ಮೊದಲೇ ಗೊತ್ತಾಗಿದ್ದರೆ, ನಮ್ಮ ಧಣಿಯರು ನಿನಗೆಂದೂ ಆಶ್ರಯ ಕೊಡುತ್ತಿರಲಿಲ್ಲ; ಹಾಗು ನಿನ್ನನ್ನು ಆ ದರವಡೆಖೋರರಿಂದ ಬಿಡಿಸುವ ಶ್ರಮವನ್ನೂ ವಹಿಸುತ್ತಿರಲಿಲ್ಲ” ಎಂದಂದಳು.

“ದಾಸೀ, ನೀನು ಅನ್ನುವದಾದರೂ ಏನು?” ಎಂದು ಹಂಸೆಯು ಕನಿ

ತರವಂದ ಪ್ರಶ್ನೆಮಾಡುವಷ್ಟರಲ್ಲಿ ಉಮಾಬಾಯಿಯೇ ಅಲ್ಲಿಗೆ ಬಂದಳು. ಕೂಡಲೆ ಅವಳು ತನ್ನ ದಾಸಿಯನ್ನು ಕುರಿತು:—“ಇವಳೊಡನೆ ಯಾಕೆ ಹರಟುತ್ತ ಕುಳಿತಿರುವೆ? ಇಡು, ಇವಳೆದುರಿಗೆ ಊಟದ ಆ ತಾಟನ್ನು; ಹಾಗ ಹೊರಡು ಇಲ್ಲಿಂದ ನಿನ್ನ ಬೇರೆ ಕೆಲಸಕ್ಕೆ” ಎಂದು ಗದ್ದರಿಸಿದಳು.

ಆಗ ಹಂಸೆಯು ಉಮಾಬಾಯಿಯ ಪಾದಗಳನ್ನು ಹಿಡಿದು:—“ಕಕ್ಕೀ, ನಾನು ನಿನ್ನ ಮಗಳಂತಿರುವೆನು. ನನ್ನ ಅಪರಾಧವೇನೆಂಬದನ್ನಾದರೂ ತಿಳಿಸಿರಿ ...... ....” ಎಂಬೆನ್ನುವಷ್ಟರಲ್ಲಿಯೇ ಉಮಾಬಾಯಿಯು ದೂರ ಸರಿದು:—“ನಿನ್ನನ್ನು ಮಗಳೆಂದೆನಿಸಿಕೊಳ್ಳಲಿಕ್ಕೆ ನನಗೆ ನಾಚಿಗೆ ಬರುವದಿಲ್ಲವೆ? ಕುಲಗೇಡಿಯ ಮಗಳಿಗೆ ತಕ್ಕಂತೆಯೇ ನೀನಿರುವೆ! ಮನೆತನಸ್ಥ ತರುಣರ ಶೀಲಭ್ರಷ್ಟಮಾಡಲಿಕ್ಕೆ ನೀನೂ ನಿನ್ನ ತಾಯಿಯೂ ಒಳ್ಳೇ ಪ್ರವೀಣರಾಗಿರುತ್ತೀರಿ ಬಿಡು. ಪುಟ್ಟಾಪೂರಾ ಮಾಡಿ, ಮುಟ್ಟು ಮತ್ತೆ ಒಳ್ಳೇ ಜಾಣತನವನ್ನು ತೋರಿಸುವಿಯಾ? ಖೇಡದ ದೇಶಮುಖರ ನಾಗೋಜಿರಾಯನು ನಿನ್ನ ಗುರುತಿನವನಲ್ಲವೆ? ಅವನು ನಿನಗೇನಾಗಬೇಕು? ನಿನ್ನ ತಾಯಿಯ ಸಹಾಯದಿಂದ ನೀನು ಆತನ ಶೀಲಭ್ರಷ್ಟತೆಗೆ ಕಾರಣಳಾಗಲಿಲ್ಲವೆ? ಹೇಳು, ಈಗೇಕೆ ಸುಮ್ಮನಾದೆ? ನೀವಿಬ್ಬರೂ ತಾಯಿ-ಮಕ್ಕಳು ಕೂಡಿ ಒಳ್ಳೇ ಚಲೋ ಉದ್ಯೋಗ ನಡಿಸಿರುವಿರಲ್ಲ! ಮನೆತನಸ್ಥರ ಮರ್ಯಾದೆಗೇಡು ಮಾಡುವವರು ನೀವು .......!”

ಹಂಸೆಯು ನಡುವೆ ಏನೋ ಹೇಳಬೇಕೆಂದಳು; ಆದರೆ ಉಮಾಬಾಯಿಯು ಆಕೆಯನ್ನು ಪಿಟ್ಟೆಂದುಸುರುಗೊಡದೆ, ಕೆಂಪಡರಿದ ಕಣ್ಣುಗಳಿಂದ ಅವಳ ಕಡೆಗೆ ನೋಡುತ್ತ:—“ಸುಮ್ಮನಿರು; ಹೆಚ್ಚು ಮಾತನಾಡಬೇಡ. ಇನ್ನು ನಿನ್ನನ್ನು ಎಲ್ಲಿಗೆ ಕಳಿಸಬೇಕೆಂದನ್ನು ಹೇಳು. ಗಡಕ್ಕೆ ಹೊರಡುವಾಗ, ನಿನಗೆ ತುಸ ಹುಷಾರಿಯೆನಿಸಿದ ಕೂಡಲೆ ನಿನ್ನನ್ನು ನಿನ್ನ ಮನೆಗೆ ಕಳಿಸಿಬಿಡಿರೆಂದು ಅವರು ಹೇಳಿ ಹೋಗಿರುತ್ತಾರೆ. ಪಿಲಾಜಿಯು ಲೋಣಿಯಲ್ಲಿ ನಿನ್ನ ತಾಯಿಯ ಶೋಧ ಮಾಡಿದನು; ಮಗಳಂತೆಯೇ ತಾಯಿಯು! ಅಂದಮೇಲೆ ಅವಳಾದರೂ ಅಲ್ಲಿ ಏತಕ್ಕೆ ಇರುತ್ತಾಳೆ?”

“ನಮ್ಮ ಅವ್ವನು ಲೋಣಿಯಲ್ಲಿಲ್ಲವೆ? ಹಾಗಾದರೆ ಅವಳು ಹೋದದ್ದಾದರೂ ಎಲ್ಲಿಗೆ?” ಎಂದು ಹಂಸೆಯು ಹಣೆ ಹಣೆ ಬಡಕೊಂಡು ತನ್ನಷ್ಟಕ್ಕೆ ತಾನೇ ಅಂದುಕೊಂಡಳು. ಆ ನುಡಿಯನ್ನು ಕೇಳಿ ಸಮೀಪದಲ್ಲಿಯೇ

ಇದ್ದ ಪಿಲಾಜಿಯು:--"ಖೇಡದ ಜಹಗೀರಿಯಲ್ಲಿ ಬಾವತರಪನು ಬೇಹು ಒಡುತ್ತಿರುವದರಿಂದ, ಖೇಡದ ಸುತ್ತುಮುತ್ತಲಿನ ಎಷ್ಟೋ ಜನರು ತಮ್ಮ ಮನೆ-ಮಾರುಗಳನ್ನು ತೊರೆದು ದೇಶಾಂತರಕ್ಕೆ ಹೊರಟಿರುವರು. ನಿನ್ನ ತಾಯಿಯು ಬಹು ದುಃಖ-ಕಷ್ಟದಿಂದ ವಿಹ್ವಲಳಾಗಿ, ನಿನ್ನ ಶೋಧಕ್ಕಾಗಿ ಲೋಣಿಯಿಂದ ಎಲ್ಲಿಗಾದರೂ ಹೊರಟು ಹೋಗಿರಬಹುದಾಗಿದೆ. ಖೇಡದ ದೇಶಮುಖರ ಭಾವೂರಾಯನು ಎಲ್ಲ ನಿಜ ಸಂಗತಿಯನ್ನು ನನಗೆ ತಿಳಿಸಿರುವನು; ಹಾಗು ನಾಗೋಜಿಯ ನೀಚತನದ ಅನುಭವವೂ ನನಗೆ ಬಂದಿದೆ. ಆದ್ದರಿಂದ ನಮ್ಮ ಬಾಯಿಸಾಹೇಬರು ಅನ್ನುವಂತೆ ನೀವು ಆ ತರದ ನೀಚವರ್ತನದವರಲ್ಲೆಂಬದನ್ನು ನಾನು ಎದೆ ತಟ್ಟಿ ಹೇಳಬಲ್ಲೆನು."

ಪಿಲಾಜಿಯ ಆ ನುಡಿಯನ್ನು ಕೇಳಿ ಉಮಾಬಾಯಿಯು ಕ್ರೋಧಸಂತಪ್ತಳಾಗಿ:--"ಪಿಲಾಜೀ........"

ಪಿಲಾಜಿಯು ಅವಳನ್ನು ಮಾತನಾಡಗೊಡದೆ:--"ಬಾಯಿಸಾಹೇಬ, ಖೇಡದಲ್ಲಿ ಕೇಳಿದ ಅರ್ಧಮರ್ಧ ಸುದ್ದಿಯನ್ನು ನಿಮಗೆ ನಾನು ಮೊದಲು ತಿಳಿಸಿದ್ದೇನೋ ನಿಜ; ಆದರೆ ನಿನ್ನೆ ನನಗೆ ಆ ಭಾವೂರಾಯನು ಭೆಟ್ಟಿಯಾಗಿದ್ದನು. ಅವನಂತಹ ಸಂಭಾವಿತ ಹಾಗು ಇಮಾನೀ ಸೇವಕನನ್ನು ನಾನೆಲ್ಲಿಯೂ ನೋಡಿಲ್ಲ. ಅವನಿಗೆ ನಾಗೋಜಿಯ ಬಗ್ಗೆ ಕೇಳಲು, ಈ ಹಂಸಾಬಾಯಿಯು ತನಗೆ ವಶಳಾಗಲಿಲ್ಲೆಂಬದಕ್ಕಾಗಿ ಆ ನೀಚನು ಈಕೆಯನ್ನು ಅಪಹರಿಸಿ ವಿಡಂಬನೆಗೊಳಿಸುವವನಿದ್ದನಂತೆ. ಈಕೆಯು ವರ್ಷದ ಮೇಲೆ ನೂರಿನ್ನೂರು ವರಹದ ಚಾಕರಿಯನ್ನಿಟ್ಟನು; ಆದರೆ ಕರ್ಮ-ಧರ್ಮ ಸಂಯೋಗದಿಂದ ಇವಳು ಅವನಿಂದ ಪಾರಾದಳು. ಇಷ್ಟೇ ಅಲ್ಲ, ನಿನ್ನೆಯ ದಿನ ಆತನು ಭಾವೂರಾಯನ ಮುಖಾಂತರ ಹೇಳಿ ಕಳಿಸಿರುವದೇನಂದರೆ:--"ನಾನು ದಾಭಾಡೆಯವರ ಮಗಳನ್ನು ಮದುವೆಯಾಗಬೇಕಾದರೆ, ಅವರು ಹಂಸೆಯನ್ನು ಮೊದಲು ತನ್ನ ಸ್ವಾಧೀನ ಪಡಿಸಬೇಕು; ಅವಳು ನನ್ನನ್ನು ಅವಮಾನಗೊಳಿಸಿರುವದರಿಂದ, ನಾನು ಆ ಬಗ್ಗೆ ಸೇಡು ತೀರಿಸಿಕೊಂಡ ಮೇಲೆಯೇ ಲಗ್ನದ ವಿಚಾರವು."

ಆ ಸಂಗತಿಯನ್ನು ಕೇಳಿ ಎಲ್ಲರೂ ಸ್ತಬ್ಧರಾದರು. ಆಗ ಹಂಸೆಯು ಪಿಲಾಜಿಯನ್ನುದ್ದೇಶಿಸಿ ಆತುರದಿಂದ:--"ನಮ್ಮ ತಾಯಿಯ ಬಗ್ಗೆ ಭಾವೂರಾಯನನ್ನು ಕೇಳಿದಿರೇನು?"

"ಕೇಳಿದೆನು; ಅವನೂ ಶೋಧ ಮಾಡಿದನಂತೆ; ಎಲ್ಲಿಯೂ ಪತ್ತೆಹತ್ತಲಿಲ್ಲವಂತೆ' ಭಾಪ್ರೂರಾಯನು ಇನ್ನೂ ನಮ್ಮ ಮನೆಯಲ್ಲೇ ಇರುತ್ತಾನೆ. ಬೇಕಾದರೆ ಆತನ ಭೆಟ್ಟಿ ಮಾಡಿಸುತ್ತೇನೆ"

ಇಷ್ಟರಲ್ಲಿ ಬೇದವ ದೇಶಪಾಂಡೆಯ ಕಡೆಯಿಂದಾರೋ ಹೊರಗೆ ಬಂದಿರುತ್ತಾರೆಂದು ಕೆಲಸದವನು ಬಾಗಿಲ ನಗರೆಯವನು ವರದಿ ಕೊಟ್ಟನು. ಹಂಸೆಯ ವಿಷಯದ ತನ್ನ ಅಭಿಪ್ರಾಯ ಕೇಳಿ ಈ ಮೊದಲೇ ನಿರಸನವಾದ್ದರಿಂದ, ಸರಳ ಸ್ವಭಾವದ ಉಮಾಬಾಯಿಯು ಹಂಸೆಯ ವಿಷಯವಾಗಿ ಮತ್ತೆ ಸಹಾನುಭೂತಿಯುಳ್ಳವಳಾದಳು. ಕೂಡಲೆ ಆವಳು ಸಾವಿತ್ರೀಬಾಯಿಯು ಕೋಪದ ನಾಟಕವನ್ನು ಆಡುತ್ತಿರಬಹುದೆಂದು ಭಾವಿಸಿ, ಆತನನ್ನು ಒಳಗೆ ಕರೆಸಿದಳು.

ಭಾಪ್ರೂರಾಯನು ಒಳಗೆ ಬಂದನು. ಆಗ ಹಂಸಾಬಾಯಿಯು ಹಾಸಿಗೆಯ ಮಗ್ಗಲಲ್ಲಿ ಆ ಮಾದಿಯು ಮಲಗಿಕೊಂಡು ಕುಳಿತು, ಅವಳನ್ನು ಉಪಚರಿಸುತ್ತಿರುವದನ್ನು ಕಂಡು ಅವನು ಸಮಾಧಾನ ಪಟ್ಟನು. ಹಾಗು ಕೆಲ ಕ್ಷಣಗಳ ವರೆಗೆ ಆಲೋಚಿಸಿ, ನಾಗೂರಾವರಿಂದ ಬಂದ ಪತ್ರವನ್ನು ಉಮಾಬಾಯಿಗೆ ತಲುಪಿಸಿದನು. ಆ ಪತ್ರವನ್ನು ಉಮಾಬಾಯಿಯು ಈ ಮೊದಲೇ ಅವರಿಗೆ ತಿಳಿಸಿದಂತೆ 'ಸಾವಿತ್ರಿ ಬಾಯಿಯು ಕೋಪಿಸುತ್ತಾಳೆ. ಆಕೆಯನ್ನು ಕೂಡಲೆ ಭಾಪ್ರೂರಾಯನೊಡನೆ ಕಳಿಸಿರಿ" ಎಂಬ ಸಂಗತಿಯೇ ಇತ್ತು. ಅದನ್ನು ಕೇಳಿ ಹಂಸಾಬಾಯಿಯು ತಲ್ಲಣಿಸಿದಳು. "ನಾನು ಅಲ್ಲಿಗೆಂದೂ ಹೋಗಲಿಕ್ಕಿಲ್ಲ. ಇಂಥ ನೀಚ ಸಂಗತಿಯನ್ನು ಸಹಿಸಲಿಕ್ಕೆ ನಾನೇನೂ ಹುಚ್ಚಳಲ್ಲ" ಎಂದೆನ್ನಲು,

"ಬಂದು ಬೇಕೆ ನೀವು ಬೇಗ ಬರುತ್ತೀರೆಂದು ಹೊರಟಿದ್ದರೂ, ನಾನು ನಿಮ್ಮನ್ನು ಕರೆದೊಯ್ಯುತ್ತಿರಲಿಲ್ಲ! ಎಂದು ಅಂದು, ಭಾಪ್ರೂರಾಯನು ಉಮಾಬಾಯಿಯನ್ನು ಪ್ರಶ್ನಿಸಿದನು:-- 'ಬಾಯಿಸಾಹೇಬ, ನಾನು ನನ್ನ ಒಡೆಯನ ವಿರುದ್ಧ ಮಾತನಾಡುತ್ತಿರುವದನ್ನು ಕೇಳಿ, ನೀವು ನನ್ನ ವಿಷಯವಾಗಿ ಸಂದೇಹಪಡಬಹುದು: ಆದರೆ ಈ ಹಂಸಾಬಾಯಿಯು ನನ್ನ ಪ್ರಾಣದಾತ್ರಿಯಾಗಿರುತ್ತಾಳೆ. ಇವಳ ಉಪಕಾರದಿಂದಲೇ ನನ್ನ ಜೀವವುಳಿದಿರುತ್ತದೆ ಹೀಗಿರಲು, ನನ್ನ ಒಡೆಯನಂತಹ ಹೀನವರ್ತನದಿಂದ ಇವರಿಗೆ ನಾನು ಉಪಟಳವಾಗಗೊಡುವ ಸಂಭವವುಂಟೇ? ಹಂಸಾಬಾಯಿಯವರು ಪವಿತ್ರರಾಗಿರ

ತ್ತಾರೆ; ಪರಿಶುದ್ಧರಾಗಿರುತ್ತಾರೆ; ಮತ್ತು ಕುಲವಂತರೂ ಶೀಲವಂತರೂ ಆಗಿರುತ್ತಾರೆ. ಹೀಗಿದ್ದರೂ ಹರಿಶ್ಚಂದ್ರನಂತಹ ಸತ್ಯವಂತರಿಗೂ ಒಮ್ಮೊಮ್ಮೆ ಬಹು ತೊಂದರೆಯುತ್ಪನ್ನವಾಗುವಂತೆ, ಇವರಿಗೂ ಕಠಿಣಕಾಲವೊದಗಿದೆ. ನಾಗೋಜಿರಾಯನಿಗೆ ನನ್ನ ಬಗ್ಗೆ ಇನ್ನೂ ಸಂಶಯ ಬಂದಿಲ್ಲ. ಅಂತೆಯೇ ಆತನು ನನ್ನೊಡನೆ ತನ್ನ ಈ ಜೀವಾಳದ ಸಂದೇಶವನ್ನು ಕಳಿಸಿರುತ್ತಾನೆ. ಹಂಸಾಬಾಯಿಯವರನ್ನು ನೀವು ನನ್ನೊಡನೆ ಕಳಿಸಿದರಂತೂ ವಿಹಿತವೇ. ಇಲ್ಲದಿದ್ದರೆ ಆತನು ಇವರನ್ನಿಟ್ಟಿರುವ ಮಹಾಲಿನ ಮೇಲೆ ದರವಡೆಯನ್ನಿಕ್ಕಿ, ಇವರನ್ನು ಅಪಹರಿಸುವ ಬೇತನ್ನಿಟ್ಟಿರುತ್ತಾನೆ."

"ಅವನು ಇವಳನ್ನು ಮತ್ತೆ ಅಪಹರಿಸಲೆತ್ನಿಸುವ ಕಾರಣವೇನು?" ಎಂದು ಉಮಾಬಾಯಿಯು ಕೇಳಲು, "ನಾಗೋಜಿಯು ತನ್ನ ನೀಚತನಕ್ಕನುಗುಣವಾಗಿ ಇವಳನ್ನು ಬಾದಶಹನ ಪ್ರೀತಿಯ ಒಬ್ಬ ಅಮೀರನಿಗೆ ಅರ್ಪಿಸಿ, ಆತನ ಮುಖಾಂತರ ಬಾದಶಹನಿಂದ ದೊಡ್ಡ ಜಹಗೀರು ಪಡೆಯಬೇಕೆಂದಿರುತ್ತಾನೆ."

"ಫಲಾನಸ್ಸ! ನಮ್ಮ ಛಾಪೀ ಅಳಿಯಾ! ನಮ್ಮ ಅಳಿಯದೇವರು ಒಳ್ಳೇ ಪ್ರತಾಪಶಾಲಿಗಳಿದ್ದಂತೆ ಕಾಣುತ್ತಾರಲ್ಲ! ಒಳ್ಳೇದು. ಬರಲಿ ಅವರು ನಮ್ಮ ನಾಡಿಗೆ. ನಾವು ಅವರನ್ನು ಚೆನ್ನಾಗಿ ಸ್ವಾಗತ ಮಾಡುತ್ತೇವೆ! ಶಿಲಾಜೀ, ಕೇಳಿದೆಯಾ ಈ ಸಂಗತಿಯನ್ನು? ನಾಗೋಜಿಯನ್ನೂ ಆತನ ಸಂಗಡಿಗರಾದ ಎಲ್ಲ ಪಠಾಣರನ್ನೂ ನಮ್ಮ ಆ ದುರ್ಗಂಧಮಯ ನೆಲಮನೆಗೆ ಕಾಣಿಸಬೇಕು! ಅಂದರೆ ಗಡವಿಂದ ಬಂದ ಬಳಿಕ ಅವರಿಂದ ನಿನಗೆ ಚೆನ್ನಾಗಿ ಇನಾಮು ಕೊಡಿಸುವೆನು."

† † † † †

ಯಾವ ಕಾಲದ ಕಥಾನಕವನ್ನು ನಾವು ಬರೆಯತೊಡಗಿರುವೆವೋ ಆಗ, ಅಂದರೆ ಇ. ಸ. ೧೭೦೨ ರಿಂದ ೧೭೦೪ ರ ವರೆಗೆ ದಕ್ಷಿಣ ಹಿಂದುಸ್ತಾನದಲ್ಲಿ ಮಳೆಯೇ ಬಿದ್ದಿರಲಿಲ್ಲ; ಹಾಗು ಎಲ್ಲ ಕಡೆಗೂ ಪ್ಲೇಗಿನ ಹಾವಳಿಯೆದ್ದಿತ್ತು. ಬರಗಾಲದಿಂದಲೂ ಪ್ಲೇಗು ರೋಗದಿಂದಲೂ ಆ ೩ ವರ್ಷಗಳಲ್ಲಿ ೨೦ ಲಕ್ಷಗಳ ವರೆಗೆ ಜನರು ಸತ್ತಿದ್ದರು! ಇದೇ ಕಾಲಕ್ಕೆ ಔರಂಗಜೇಬನು ಮರಾಟರನ್ನು ಗೆಲ್ಲುವ ಉದ್ಯೋಗಕ್ಕೆ ಹತ್ತಿದ್ದನು. ಅವನ ದಂಡಿನಲ್ಲಿಯ ಒಂದು ಲಕ್ಷ ಸೈನಿಕರೂ, ಆನೆ, ಕುದುರೆ, ಒಂಟೆ, ಎತ್ತು ಮುಂತಾದ ೩ ಲಕ್ಷ ಪಶು

ಗಳೂ ಸತ್ತಿದ್ದವು. ದುಷ್ಕಾಳದಿಂದ ಔರಂಗಜೇಬನ ಸೈನಿಕರೆಲ್ಲ ಹೌಹಾರಿ ಹೋಗಿದ್ದರು. ಹಿಡಿ ಹೊನ್ನು ಕೊಟ್ಟರೂ ತಕ್ಕಷ್ಟು ಧಾನ್ಯ-ದವಸುಗಳು ಸಿಗುತ್ತಿರಲಿಲ್ಲ. ಬಾದಶಹನ ಛಾವಣಿಯೊಳಗಿನ ದೊಡ್ಡ ದೊಡ್ಡ ಸರದಾರರು ಕೂಡ ಉಪವಾಸದಿಂದಿರುವ ಪ್ರಸಂಗ ಬಂದಿತ್ತು. ಮರ್ಯಾದೆವಂತರಾದ ಅಮೀರ-ಉಮರಾವರ ಹೆಂಗಸರಿಗೆ ಒಂದು ಉದ್ದನ್ನ ಅರಿವೆಯ ಹೊರತು ಬೇರೆ ವಸ್ತ್ರಪ್ರಾವರಣಗಳಿರಲಿಲ್ಲ. ಅವರ ಮಕ್ಕಳು-ಮರಿಗಳೂ ಹೊಟ್ಟೆಗಾಗಿ ಬಿಕ್ಕೆ ಬೇಡುವ ಪ್ರಸಂಗವೊದಗಿತ್ತು. ಸೈನಿಕರು ತಮ್ಮ ಹೊಟ್ಟೆಯ ಪಾಡಿಗಾಗಿ ತಮ್ಮ ಚಿಕ್ಕ ಚಿಕ್ಕ ಮಕ್ಕಳನ್ನು ಮಾರಲುಪಕ್ರಮಿಸಿದರು; ಒಬ್ಬೊಬ್ಬ ಹುಡುಗನನ್ನು ೮ ೧೦ ಆಣೆಗೆ ಕೂಡ ಮಾರುತ್ತಿದ್ದರು; ಆದರೆ ಕೊಳ್ಳುವವರೇ ವಿರಳ! ಹೀಗಿದ್ದರೂ ಔರಂಗಜೇಬನಂತಹ ಕಲ್ಲೆದೆಯ ಬಾದಶಹನಿಗೆ ಆ ಸ್ಥಿತಿಯಿಂದ ಕೊಂಚವೂ ಕನಿಕರ ಹುಟ್ಟಲಿಲ್ಲ. "ಹೀಗೆ ಪ್ರಜಾಹನನವಾದರೇ, ತೈಮೂರಲಿಂಗನಂತೆ ಕೀರ್ತಿಶಾಲಿಯಾಗುವದು" ಎಂದೆನ್ನುತ್ತ ಆತನು ತನ್ನ ದಾಳಿಯ ಕ್ರಮವನ್ನು ಎಡಬಿಡದೆ ನಡಿಸಿದ್ದನು!

"ಅಮೀರರೇ, ನೀವೇ ಭಾಗ್ಯವಂತರು" ಎಂದೆಂದು ಜಮಾಲಖಾನನು ಸೂರ್ಯಾಜಿಯ ಕಡೆಗೆ ಕಣ್ಣು ಸಂಜ್ಞೆ ಮಾಡುತ್ತ:--"ಆ ಹೆಂಗೆಯು ಅಪ್ಸರೆಯಂತಿರುವಳು. ಅಂಥ ಆ ತ್ರಿಲೋಕ ಸುಂದರಿಯನ್ನು ನೀವು ನಾಳಿನ ದಿವಸ ನಾಗೋಜಿ ದೇಶಮುಖನ ಮುಖಾಂತರ ಪಡೆಯುತಕ್ಕವರೆಂದ ಬಳಿಕ ನಿಮ್ಮ ಪುಣ್ಯಕ್ಕೆ ಎಣೆಯೇ ಇಲ್ಲ; ಆದರೆ ಆ ದೇಶಮುಖರ ಪೋರನು ಆ ಬಿಜಲಿಯನ್ನು ಆ ದಾಭಾಡೆಯವರ ಅತ್ಯಂತ ಭದ್ರವಾದ ವಾಡೆಯಿಂದ ಕರೆತರುವದೆಂತು?" ಈ ಬಗೆಯಾಗಿ ಬಾದಶಹನ ಛಾವಣಿಯೊಳಗಿನ ಒಂದು ತಂಬುವಿನಲ್ಲಿ ಸಂಭಾಷಣ ನಡೆದಿತ್ತು.

"ನಾನು ಅವನ ಸಹಾಯಕ್ಕೆ ನನ್ನ ಕೇವಲ ವಿಶ್ವಾಸದ ೨೫ ಜನ ಪಠಾಣರನ್ನು ಕಳಿಸತಕ್ಕವನಿರುತ್ತೇನೆ. ನಾಳೇ ಮಧ್ಯರಾತ್ರಿಯಲ್ಲಿ ಅವನು ದಾಭಾಡೆಯವರ ವಾಡೆಯನ್ನು ಮುತ್ತಿ, ಅವಳನ್ನು ಸೆಳಕೊಂಡು ಬರುವನು. ಅವನ ಹಾಗು ನಿಮ್ಮ ಹೇಳಿಕೆಯ ಮೇರೆಗೆ ಆಕೆಯು ನಿಜವಾಗಿಯೂ ಅಪ್ಸರೆಯಂತಿದ್ದರೆ, ಬಾದಶಹನಿಗೆ ಹೇಳಿ, ಅವನು ಬೇಡುವ ಜಹಗೀರನ್ನು ಆ ನಾಗೋಜಿಗೆ ಕೊಡಿಸುವೆನು" ಎಂದು ಆ ಅಮೀರನು ಬಹಳ ಆಧ್ಯತೆಯಿಂದ ನುಡಿದನು.

ಕೆಲಹೊತ್ತಿನ ಮೇಲೆ ಜಮಾಲಖಾನನು ಅಲ್ಲಿಂದೆದ್ದನು. ಸೂರ್ಯಾ ಜಿಯೂ ಅವನೊಡನೆ ಹೊರಟನು. ಅವರಿಬ್ಬರೂ ತಮ್ಮ ರಾಹುಟಿಗೆ ತಲು ಪಿದ ಬಳಿಕ, ಜಮಾಲಖಾನನು:—"ಸೂರಜಖಾ, ಇಂದು ಮತ್ತೆ ನಮಗೆ ನಿನ್ನ ಮಗಳಾದ ಹಂಸೆಯ ಸಂಗತಿಯು ತಿಳಿದಂತಾಯಿತು: ಇನ್ನು ನಾವು ಈ ಅಮೀರನಿಗೂ ನಾಗೋಜಿಗೂ ಮಂಕು ಬೂದಿಯ ಹಚ್ಚಿ, ಅವಳನ್ನು ಎಬ್ಬಿಸಬೇಕು; ಹಾಗು ನಮ್ಮ ಮೊದಲಿನ ಬೇತಿನಂತೆ ಶಹಜಾದರಿಗೆ ಅವಳ ನ್ನರ್ಪಿಸಿ, ನಮ್ಮ ಕಾರ್ಯ ಸಾಧಿಸಿಕೊಳ್ಳಬೇಕು" ಎಂದನು

"ಖಾನಸಾಹೇಬ, ಆ ನಮ್ಮ ಕೃತಿಯಿಂದ ಈ ಅಮೀರ ಸಾಹೇಬರು ಸಿಟ್ಟಾಗಲಿಕ್ಕಿಲ್ಲವೆ? "

"ಇವರ ಸಿಟ್ಟನ್ನು ಕೇಳುವವರಾರು? ಹಂಸೆಯು ನಿಮ್ಮ ಮಗಳೆಂಬದು ಇವರಿಗೆ ತಿಳಿದ ಕೂಡಲೆ ಇವರ ಕೈಕಾಲುಗಳೇ ತಣ್ಣಗಾಗುವವು!"

ಮರುದಿನ ಮಧ್ಯರಾತ್ರಿಯಲ್ಲಿ ನಾಗೋಜಿಯು ತನ್ನ ಜನರೊಡನೆ ಆ ದಾಭಾಡೆಯವರ ವಾಡೆಯನ್ನು ಮುತ್ತಿದನು. ಒಳಗಿನವರಿಗೆ ಭಾವೂ ರಾಯನ ಮುಖಾಂತರ ಆ ಸುದ್ದಿಯು ಈ ಮೊದಲೇ ತಿಳಿದುದರಿಂದ, ಅವರು ಅಲ್ಲಿ ಒಳ್ಳೇ ಸಾವಧಾನದಿಂದ ಆತನ ದಾರಿಯನ್ನೇ ಕಾಯುತ್ತಿದ್ದರು. ಅಷ್ಟ ರಲ್ಲಿ ಖಂಡೇರಾಯನೂ ಗಡದಿಂದ ಹಿಂದಿರುಗಿದ್ದನು. ಪಿಲಾಜಿಯು ಅವನಿಗೆ ಆ ಎಲ್ಲ ಸಂಗತಿಯನ್ನು ತಿಳಿಸಿದನು. ಬೇಕಂತಲೇ ಅವರು ಅತ್ತ ದುರ್ಲಕ್ಷ್ಯ ಮಾಡಿದಂತೆ ನಟಿಸಲು, ನಾಗೋಜಿಯ ಕಡೆಯವರು ಮೆಲ್ಲ ಮೆಲ್ಲನೆ ಒಳಗೆ ನುಗ್ಗಹತ್ತಿದ್ದರು. ಕೂಡಲೆ ಖಂಡೇರಾಯನು ಬಾಗಿಲವನ್ನಿಕ್ಕಿಸಿ, ಅವರೆಲ್ಲ ರನ್ನೂ ಚೆನ್ನಾಗಿ ಥಳಿಸಿ, ನೆಲಮನೆಯಲ್ಲಿ ಸೆರೆಹಿಡಿದನು; ಆದರೆ ನಾಗೋ ಯು ಮಾತ್ರ ಎತ್ತೊ ನುಸುಳಿ ಬಿಟ್ಟನು!

ವಾಡೆಯೊಳಗಿನವರಿಗೆ ತನ್ನ ಸಲುವಾಗಿ ಕಡು ವಿಪತ್ತೊದಗುವವೆಂದು ತಿಳಿದು, ಹಂಸೆಯು ಈ ಮೊದಲೇ ಆ ವಾಡೆಯೊಳಗಿಂದ ಹೇಗೋ-ಎತ್ತ ಕಡೆಗೋ ಹೋಗಿಬಿಟ್ಟಿದ್ದಳು! ನಾಗೋಜಿ ಕಡೆಯವರ ಬಂದೋಬಸ್ತನ್ನು ಚೆನ್ನಾಗಿ ಮಾಡಿದ ಬಳಿಕ, ಖಂಡೇರಾಯನು ಅವಳನ್ನು ಬಹು ಪರಿಯಿಂದ ಶೋಧಿಸಿದನು; ಆದರೆ ಆಕೆಯ ಪತ್ತೆಯೇ ಹತ್ತಲಿಲ್ಲ!

## ಕಟುಕರ ಕೈಯೊಳಗಿನ ಗೋವು!

"ಕರೆತನ್ನಿರಿ, ಬೇಗನೆ ಆ ಸಹಾಯಕರನ್ನು!" ಎಂದು ಖಂಡೇರಾಯನು ಮರುದಿನ ಬೆಳಿಗ್ಗೆ ಗರ್ಜಿಸಲು, ಪಹರೆಯವರು ಮೊದಲಿನ ರಾತ್ರಿಯಲ್ಲಿ ವಾಡೆಯ ಸೆರೆಮನೆಯಲ್ಲಿ ಸೆರೆಹಿಡಿದಿದ್ದ ಜನರನ್ನು ತಂದು, ಅವನ ಎದುರಿಗೆ ನಿಲ್ಲಿಸಿದರು. ಖಂಡೇರಾಯನ ಆಗಿನ ಆ ಉಗ್ರ ಮೂರ್ತಿಯನ್ನು ಕಂಡು, ನಾಗೋಜಿಯ ಸಂಗಡ ಬಂದಿದ್ದ ಬಾದಶಹನ ಸರದಾರನ ಸೇವಕರಾದ ಆ ಉಗ್ರ ಪಠಾಣರು ನಡುಗಿದರು. ಅವರು ಅವನಿಗೆ ಬೊಗ್ಗಿ ಬೊಗ್ಗಿ ಸಲಾಮು ಮಾಡುತ್ತ ಜೀವದಾನ ಮಾಡಬೇಕೆಂದು ಯಾಚಿಸಹತ್ತಿದರು. ಆಗ ಖಂಡೇರಾಯನು ಅವರನ್ನು ಕುರಿತು:- "ನೀಚರೇ, ನೀವು ಆ ಹರಾಮಖೋರನಿಗೆ ಸಹಾಯವನ್ನೇಕೆ ಮಾಡಬಂದಿರಿ? ಆ ಹೇಡಿಯು ನಿಮ್ಮನ್ನು ಮುಂದೆ ಕಳಿಸಿ, ತಾನು ಎತ್ತೋ ಓಡಿಹೋಗಿರುತ್ತಾನೆ. ಇರಲಿ. ಇನ್ನು ಮುಂದೆ ನೀವು ಇಂಥ ನೀಚರಿಗೆ ಸಹಾಯ ಮಾಡಲಿಕ್ಕಿಲ್ಲೆಂದು ನಿಮ್ಮ ಅಲ್ಲಾನನ್ನು ಸ್ಮರಿಸಿ ಹೇಳಿದರೆ ಮಾತ್ರ ನಾನು ನಿಮಗೆ ಜೀವದಾನವನ್ನು ಕೊಡುವೆನು; ಆದರೆ ನಿಮಗೆ ಅಲ್ಪಸ್ವಲ್ಪವಾದರೂ ಬೇರೆ ತರದ ಶಿಕ್ಷೆಯನ್ನು ವಿಧಿಸದೆ ಹಾಗೆಯೇ ಬಿಡಲಾರೆನು, ಎಂದು ಅಭಿವಚನವನ್ನೀಯಲು, ಆ ಪಠಾಣರ ನಾಯಕನು ಕೈಜೋಡಿಸಿ: "ಸರದಾರರೇ, ನಾವು ಬಡವರು. ಹೊಟ್ಟೆಯ ಪಾಡಿಗಾಗಿ ನಮ್ಮ ಧಣಿಯರಲ್ಲಿ ಚಾಕರಿಗಿದ್ದೆವು. ಚಾಕರನು ಒಡೆಯನ ಎಂಥ ಚಾಕರಿಯನ್ನಾದರೂ ಮಾಡಲೇಬೇಕಲ್ಲವೆ? ನಮ್ಮ ಒಡೆಯನು ನಾಗೋಜಿಯ ಸಹಾಯಕ್ಕೆಂದು ನಮ್ಮನ್ನು ಕಳಿಸಿದ್ದರಿಂದ, ನಾವು ಬಂದೆವು; ಆದರೆ ಈ ಬಗೆಯ ನೀಚ ಕೆಲಸವಿರಬಹುದೆಂಬವನ್ನು ನಾವರಿಯೆವು. ಆದುದರಿಂದ ಸರದಾರರು ನಮ್ಮ ಬಡವರ ಈ ಅಪರಾಧವನ್ನು ಕ್ಷಮಿಸಿ, ನಮ್ಮನ್ನು ಬಿಟ್ಟು ಬಿಡಬೇಕೆಂದು ಪ್ರಾರ್ಥಿಸುವೆವು."

"ಹಾಗಾದರೆ ಪಠಾಣರೇ, ನಾನು ನಿಮ್ಮೆಲ್ಲರಿಗೊಂದು ಕೆಲಸವನ್ನು ಹೇಳುವೆನು. ನೀವು ಮನಮುಟ್ಟಿ ಶೋಧ ಮಾಡಿ, ಆ ಹುಡುಗಿಯನ್ನು ಹುಡುಕಿ ತಂದು ಕೊಟ್ಟರೆ ಮಾತ್ರ ನಾನು ನಿಮ್ಮನ್ನು ಬಿಟ್ಟು ಬಿಡುವೆನು. ಒಂದು ವೇಳೆ ನೀವು ಮೋಸ ಮಾಡಿದಿರೆಂಬುದು ತಿಳಿದು ಬಂದರೆ, ನಿಮ್ಮನ್ನು ಇದ್ದಲ್ಲಿಂದ ಹುಡುಕಿಸಿ ಕೊಲ್ಲಿಸುವೆನು. ಎಚ್ಚರಿಕೆ!" ಎಂದು ಅನ್ನಲು, ಅವ

ರೆಲ್ಲರೂ ಖಂಡೇರಾಯನ ಆ ಮಾತಿಗೆ ಒಪ್ಪಿಕೊಂಡು, ಹಂಸೆಯ ಶೋಧಕ್ಕಾಗಿ ನಾಲ್ಕೂ ಕಡೆಗೆ ನಡೆದರು.

ಹಂಸೆಯು ಅಂದು ಆ ದಾಭಾಡೆಯವರ ವಾಡೆಯೊಳಗಿನವರ ಕಣ್ಣು ತಪ್ಪಿಸಿ ವಾಡೆಯಿಂದ ಹೊರಬಿದ್ದಾಗ, ಹೊರಗೆ ಹೆಚ್ಚಾಗಿ ಕತ್ತಲು ಕವಿದಿತ್ತು. ತಳೇಗಾವದಿಂದ ಖೇಡಕ್ಕೆ ಹೋಗುವ ರಾಜಮಾರ್ಗದ ಬಗ್ಗೆ ಆಕೆಗೆ ಮಾಹಿತಿಯಿತ್ತು. ಅದರಿಂದ ಅವಳು ಆ ಮಾರ್ಗಕ್ಕೆ ಹತ್ತಬೇಕೆಂದು ಹೊರಟಳು. ತಾನು ಆ ಮಾರ್ಗವನ್ನು ಹಿಡಿದು ನಡೆದರೆ, ನಾಗೋಜಿಯೂ ಆತನ ಸಹಾಯಕರೂ ತನಗೆ ದಾರಿಯಲ್ಲಿ ಎದುರಾಗುವರೆಂದು ಆಕೆಗೆ ಅನಿಸುತ್ತಿತ್ತು. ತಾನಾಗಿ ಅವರ ಮುಂದೆ ಹೋಗಿ ನಿಲ್ಲುವನೆಂದರೆ, ಆ ಸಂಕಟವನ್ನು ತಾನಾಗಿಯೇ ತನ್ನ ಮೇಲೆ ಎಳಕೊಂಡಂತಾಗುವದೆಂಬ ವಿಷಯವು ಆಕೆಗೆ ಗೊತ್ತಿದ್ದಿಲ್ಲವೆಂತಲ್ಲ; ಆದರೆ ತನ್ನ ಸಲುವಾಗಿ ದಾಭಾಡೆಯವರ ವಾಡೆಯಲ್ಲಿ ನಿಷ್ಕಾರಣವಾಗಿ ಪ್ರಾಣಹಾನಿಯಾಗಬಾರದೆಂದು ಬಗೆದು, ತನ್ನಷ್ಟಕ್ಕೆ ತಾನೇ ಆ ವಿಪತ್ತಿಗೆ ಗುರಿಯಾಗಬೇಕೆಂದು ಅವಳು ಹಾಗೆ ಗುಪ್ತವಾಗಿ ನಡೆದಿದ್ದಳು. ನಾಗೋಜಿಯು ತನ್ನ ಮೇಲೆ ಎಂಥ ಕಠಿಣ ಪ್ರಸಂಗ ತಂದರೂ, ತಾನು ಅದರೊಳಗಿಂದ ಸಹಜವಾಗಿ ಪಾರಾದೇನೆಂಬ ಆತ್ಮವಿಶ್ವಾಸವು ಅವಳಿಗುಂಟಾಗಿತ್ತು. ವಾಡೆಯಿಂದ ಹೊರಬಿದ್ದ ಅವಳು ನೆಟ್ಟಗೆ ಆ ರಾಜಮಾರ್ಗವನ್ನು ಹಿಡಿಯಲಿಲ್ಲ. ಬೇಕಂತ ಅಡ್ಡದಾರಿಯನ್ನು ಹಿಡಿದು, ಉತ್ತರದಿಂದ ನಡೆಯಲುಪಕ್ರಮಿಸಿದಳು; ಯಾಕಂದರೆ, ತಾನು ವಾಡೆಯಲ್ಲಿಲ್ಲವೆಂಬದು ತಿಳಿದ ಕೂಡಲೆ, ತನ್ನನ್ನು ಹುಡುಕುವದಕ್ಕಾಗಿ ದೂತರು ಎಲ್ಲ ಕಡೆಗೂ ಹೊರಡುವರೆಂದು ಅವಳಿಗೆ ಅನಿಸುತ್ತಿತ್ತು. ಆದ್ದರಿಂದಲೇ ಅವಳು ಆ ಅಪರಾತ್ರಿಯಲ್ಲಿ ಖೇಡದ ನಿಟ್ಟನ್ನು ಹಿಡಿದು, ಅಡ್ಡದಾರಿಯಿಂದಲೇ ಒಂದು ಹರದಾರಿಯ ವರೆಗೆ ನಡೆದಳು. ಅಷ್ಟರಲ್ಲಿ ಅವಳಿಗೊಂದು ನೀರಿಲ್ಲದ ಹಳ್ಳವು ಹತ್ತಿತು. ನೀರು ದೊರೆತರೆ ತುಸ ಕುಡಿಯಬೇಕೆಂಬ ಇಚ್ಛೆಯಿಂದ ಅವಳು ಆ ಹಳ್ಳದ ದಂಡೆಯ ಹಿಡಿದು ತುಸ ದೂರದ ವರೆಗೆ ಸಾಗಿದಳು. ಅವಳು ಎಡವುತ್ತ, ಮುಗ್ಗರಿಸುತ್ತ ಮೆಲ್ಲಮೆಲ್ಲನೆ ಸಾಗಿರಲು, ಆ ಹಳ್ಳವು ಇಂದ್ರಾಯಣೀ ಹೊಳೆಗೆ ಕೂಡುವ ಸಂಗಮ ಸ್ಥಳದಲ್ಲಿ ಯಾರೋ ಇಬ್ಬರು ಮನುಷ್ಯರು ಮಾತಾಡುತ್ತಿರುವಂತೆ ಅವಳಿಗೆ ಭಾಸವಾಯಿತು. ಆದ್ದರಿಂದ ಅವಳು ನಿಂತಲ್ಲಿಯೇ ನಿಂತುಬಿಟ್ಟಳು. ಕಾರ್ಗತ್ತಲೆಯಾದ್ದರಿಂದ ಮನುಷ್ಯರ ಆಕೃ

ತಿಯು ಅವಳಿಗೆ ಕಾಣಿಸಲಿಲ್ಲ; ಆದರೆ ಆ ಮನುಷ್ಯರು ಇವಳಿಗೆ ಸಮೀಪಿಸಿದಂತೆ ಅವರ ಸಂಭಾಷಣೆಯಿಂದ ಅವರಿಬ್ಬರೂ ಔರಂಗಜೇಬ ಬಾದಶಹನ ದಂಡಿನೊಳಗಿನ ಪೆಂಡಾರಿಗಳೆಂಬುದು ಅವಳಿಗೆ ತಿಳಿಯಿತು.

"ಏನೇ ಇರಲಿ. ನಮಗೀಗ ಇದೊಂದು ಚೀಲ ಧಾನ್ಯ ಸಿಕ್ಕಂತಾಯಿತಷ್ಟೆ. ಇನ್ನು ೧೫-೨೦ ದಿನಗಳ ವರೆಗಂತೂ ಉಪವಾಸ ಬೀಳುವ ಅಂಜಿಕೆ ತಪ್ಪಿತು. ಈಗಲೇ ಯಾರಾದರೂ ರೊಟ್ಟಿ ಸುಟ್ಟು ಕೊಡುವವರು ಗಂಟು ಬಿದ್ದರೆ, ನಾನು ಕುಳಿತಲ್ಲಿಯೇ ೧೦-೧೨ ರೊಟ್ಟಿಗಳನ್ನು ತಿಂದು ಬಿಟ್ಟೇನು. ಯಾರ! ಇಷ್ಟು ಭಯಂಕರವಾಗಿ ನನ್ನ ಹೊಟ್ಟೆ ಹಸಿದಿದೆ ನೋಡು!" ಎಂದು ಅವರಲ್ಲಿಯ ಒಬ್ಬನು ನುಡಿಯಲು,

"ಮತ್ತೆ ನನ್ನ ಹೊಟ್ಟೆ ಹಸದಿಲ್ಲವೆಂದು ತಿಳಿದಿರುವೆಯಾ? ಆದರೆ ಇನ್ನು ಬೀಡದ ಠಾಣೆಗೆ ತಲುಪುವ ಹೊರತು ನಮಗೆ ರೊಟ್ಟಿ ಮಾಡಿ ಕೊಡುವವರಾರು? ನನಗೆ ಈ ಚೀಲದ ಬಗ್ಗೆ ಬಹಳ ಅಂಜಿಕೆಯುಂಟಾಗ ಹತ್ತಿದೆ; ಯಾಕಂದರೆ, ಠಾಣೆಗೆ ತಲುಪಿದೊಡನೆಯೆ ಇದನ್ನು ನೋಡಿ ಅಲ್ಲಿಯವರೆಲ್ಲರೂ ಬಿಟ್ಟಿಗಳು ಹಸರಿಗೆ ಮುತ್ತುವಂತೆ, ನಮ್ಮನ್ನು ಮುತ್ತಬಹುದಲ್ಲವೆ?" ಎಂದು ಇನ್ನೊಬ್ಬನು ಅಂದನು.

"ಯಾವ ಲವಂಡೀ ಮಗನ ಕೂಸ್ತುತ್ತಿದೆ, ನಮ್ಮ ಈ ಚೀಲಕ್ಕೆ ಕೈಹಚ್ಚಲಿಕ್ಕೆ? ಯಾವನಾದರೂ ಅತಿಪ್ರಸಂಗ ಮಾಡಬಂದರೆ, ಅವನ ರುಂಡವನ್ನು ಈ ನನ್ನ ಖಡ್ಗವು ಧರೆಗಿಳಿಸದೆ ಬಿಡದು!"

ಆ ಇಬ್ಬರು ಪಠಾಣರು ಬಾದಶಹನ ದಂಡಾಳುಗಳು. ಭಯಂಕರವಾದ ಬರಗಾಲದ ಮೂಲಕ ದೇಶದಲ್ಲೆಲ್ಲ ಕಾಳು-ಕಡಿಗಳ ಬಗ್ಗೆ ಹಾ ಹಾ ಕಾರವೆದ್ದಿರಲು, ದಂಡಾಳುಗಳಲ್ಲಿ ೪ ೪, ೮-೮ ಜನರ ಟೋಳಿಗಳು ಸುತ್ತು ಮುತ್ತಲಿನ ಹಳ್ಳಿಪಳ್ಳಿಗಳಲ್ಲಿ ಹೊಕ್ಕು ಲೂಟಿ-ಸುಲಿಗೆಗಳನ್ನು ಮಾಡುತ್ತಿದ್ದರು. ಅದರಂತೆಯೇ ಮೇಲೆ ವಿವರಿಸಿದ ಇಬ್ಬರು ಪಠಾಣರು ಲೂಟಿಗೆ ಹೊರಡಲು, ಅವರಿಗೆ ಒಂದು ಹಳ್ಳಿಯೊಳಗಿನ ಒಂದು ಮುದುಕೆಯ ಗುಡಿಸಿಲಲ್ಲಿದ್ದ ಒಂದು ತುಂಬಿದ ಕಾಳಿನ ಚೀಲವು ಕಂಡಿತು. ಆ ಮುದುಕೆಯು ಅದನ್ನು ಇವರಿಗೆ ಸಹಜವಾಗಿ ಕೊಡುವದುಂಟೆ? ಆದರಿಂದ ಇವರು ಅವಳನ್ನು ತುಂಡರಿಸಿ ಚೆಲ್ಲಿ, ಆ ಚೀಲವನ್ನು ಹೊತ್ತುಕೊಂಡು ನಡೆದಿದ್ದರು. ಪಠಾಣರು ತೀರ ಹತ್ತರ ಬಂದರೆಂದು ಗೊತ್ತಾಗಲು, ಅವನ ಕಣ್ಣು ತಪ್ಪಿಸುವದಕ್ಕೆಂದು

ಹಂಸೆಯು ಆ ಹಳ್ಳದ ಒಂದು ಬಂಡೆಗಲ್ಲಿಗೆ ಮರೆಯಾಗಬೇಕೆಂದಳು; ಆದರೆ ಆಕೆಯ ದುರ್ದೈವವು ಅಲ್ಲಿಯೂ ಅವಳ ಬೆನ್ನಹತ್ತಿ ಬಂದಿದ್ದರಿಂದ, ಅದು ಸಾಧಿಸುವ ಬಗೆಯುಂಟೆ? ಆಕೆಯು ಆ ಕಲ್ಲಿನ ಮರೆಗೆ ಹೋಗಬೇಕೆಂದು ತನ್ನ ಹೆಜ್ಜೆ ಕಿತ್ತಿಡುವಷ್ಟರಲ್ಲಿ ಆಕೆಯ ಕಾಲು ಜಾರಿತು. ಬೀಳುವ ಭರದಲ್ಲಿ ಅವಳು ಆ ಕಲ್ಲಿನ ಒಂದು ಎತ್ತರವಾದ ಮೂಲೆಯನ್ನು ಹಿಡಿಯಬೇಕೆಂದು ತನ್ನ ಕೈಯನ್ನು ಒತ್ತರದಿಂದ ಮೇಲಕ್ಕೆತ್ತಲು, ಆಕೆಯ ಕೈಯ ಬಳೆಗಳ "ಸಳಲ್" ಎಂಬ ಸಪ್ಪಳವು ಆ ಪಠಾಣರ ಕಿವಿಗೆ ಬಿದ್ದಿತು. ಕೂಡಲೆ ಅವರಲ್ಲಿಯ ಒಬ್ಬನು:—"ಶೇಖರಲ್ಲಿ, ಈ ಹಳ್ಳದಲ್ಲಿ ಯಾವಳೊಬ್ಬ ಹೆಂಗಸಿರುವಂತೆ ತೋರುತ್ತದೆ" ಎನ್ನಲು,

"ಹಾಜೀಖಾನ, ನನಗೂ ಹಾಗೆಯೇ ಭಾಸವಾಗುತ್ತದೆ; ಆದರೆ ಮೂರ್ಖಾ, ಅದು ಕೇವಲ ಭಾಸವೇ ಆಗಿರಬೇಕು. ನಮ್ಮ ಧಾನ್ಯದ ಚೀಲದ ಪಾಳತಿಗಾಗಿ ಯಾರಾದರೂ ನಮ್ಮ ಹಿಂದಿನಿಂದ ಬರುತ್ತಿರುವರೆಂದು ಕಲ್ಪಿಸಿದರೂ, ಯಾವ ಹೆಂಗಸೂ ನಮ್ಮಂಥ ಬೋಣಿಸ ಪಠಾಣರ ಅನುಸರಣ ಮಾಡಿ ಬರಲಾರಳು. ರಾತ್ರಿಯ ಹೊತ್ತು; ನಿದ್ರೆ-ನೀರಡಿಕೆಗಳಿಲ್ಲ; ಮೇಲಾಗಿ ಬಳೆಯ ಸಪ್ಪಳವನ್ನು ಕೇಳದೆ ಎಷ್ಟೋ ದಿನಗಳಾಗಿರುತ್ತವೆ. ಅಂದಮೇಲೆ ಈ ತರದ ಭಾಸವು ನಮಗಾಗದಿದ್ದರೆ ಇನ್ನಾರಿಗಾಗಬೇಕೋ ಹೇಳಯಾ?" ಎಂದಂದು ನಕ್ಕನು.

"ಶೇಖರಲ್ಲಿ, ಇದು ಭಾಸವಲ್ಲ. ಯಾವಳೊಬ್ಬ ಹೆಂಗಸು ಇಲ್ಲಿಗೆ ಸಮೀಪದಲ್ಲಿಯೇ ಇರಲಿಕ್ಕೆ ಬೇಕು."

"ಯಾರ, ಹಾಜೀಖಾನ. ನಿನಗೆ ಭ್ರಮೆಯಾಗಿರುವದೇ ನಿಜ. ಈ ಇಂಥ ಅಪರಾತ್ರಿಯಲ್ಲಿ, ಈ ನಿರ್ಜನ ಪ್ರದೇಶದಲ್ಲಿ ಯಾವಳೊಬ್ಬ ಹೆಂಗಸು ಯಾತಕ್ಕೆ ಬರುವಳು? ನಮ್ಮಲ್ಲಿಯ ಯಾರೊಬ್ಬರ ಕಾಲ್ಬುರಿಯ-ಜಡಾವಿನ ಮೊಳೆಯು ಕಲ್ಲಿಗೆ ತಾಕಿ ಅದರಿಂದ ಹಾಗೆ 'ಸಳಲ್' ಎಂಬ ಧ್ವನಿಯುಂಟಾಗಿದೆಯಷ್ಟೆ" ಎಂದು ಹೇಳಿ, ಶೇಖರಲ್ಲಿಯು ಶಂಕಾನಿವಾರಣವನ್ನು ಮಾಡಿದರೂ, ಹಾಜೀಖಾನನ ಸಮಾಧಾನವಾಗಲಿಲ್ಲ. ಹಂಸೆಯು ಅವರಿಗೆ ತೀರ ಸಮೀಪದಲ್ಲಿದ್ದುದರಿಂದ ಅವರ ಸಂಭಾಷಣವು ಅವಳಿಗೆ ಸ್ಪಷ್ಟವಾಗಿ ಕೇಳಿಸುತ್ತಿದ್ದು, ಈ ಪಠಾಣ ಸ್ವಾರರು ತನ್ನನ್ನು ಶೋಧಿಸದೆ ಬಿಡರೆಂದು ಆಕೆಗೆ ಅನಿಸುತ್ತಿತ್ತು. ಶೇಖರಲ್ಲಿಯು ತಲೆಯ ಮೇಲೆ ಆಗ ಆ ಧಾನ್ಯದ ಚೀಲವಿದ್ದದರಿಂದ ಅವನು

ಆ ಹಳ್ಳದ ದಂಡೆಯ ಮೇಲೆಯೇ ನಿಂತನು; ಆದರೆ ಹಾಜೀಖಾನನು ಮಾತ್ರ ಕೆಳಗಿಳಿದು ಬಂದು, ಅತ್ತಿತ್ತ ಸೂಕ್ಷ್ಮ ದೃಷ್ಟಿಯಿಂದ ನಿರೀಕ್ಷಿಸತೊಡಗಿದನು. ಅವನು ಮೆಲ್ಲನೆ ಕೈಯಾಡಿಸುತ್ತ ಆ ಬಂಡೆಗಲ್ಲಿನ ಹಿಂದೆ ಕಪ್ಪು-ಕಪ್ಪಾಗಿ ಕಾಣುವ ಯಾವುದೊಂದು ವಸ್ತುವನ್ನು ನೋಡಲಿಕ್ಕೆಂದು ಅದರ ಮೇಲೆ ಕೈಯಿಟ್ಟನು. ಆತನ ಇಲ್ಲದ ಸಂಶಯಗ್ರಸ್ತ ಸ್ವಭಾವಕ್ಕಾಗಿ, ಹೊಟ್ಟೆಯೊಳಗೆ ಡೊಂಬರಾಡುತ್ತಿದ್ದ ಶೇರಅಲ್ಲಿಯು ಅವನನ್ನು ಇನ್ನು ಚೆನ್ನಾಗಿ ಸಿಟ್ಟು ಮಾಡತಕ್ಕವನು; ಅಷ್ಟರಲ್ಲಿ ಹಾಜೀಖಾನನ ಕೈಯು ಹಂಸೆಯ ತಲೆಗೆ ತಾಕಲು, ಅವಳು ಒಮ್ಮೆಲೆ ಚಿಟ್ಟನೆ ಚೀರಿದಳು! ಆದರೂ ಆ ಕಠಿಣ ಹೃದಯದ ಪಠಾಣನು ಕೊಂಚವೂ ಅಂಜದೆ, ಶೇರಅಲ್ಲಿಯನ್ನು ಕುರಿತು:—"ಯಾಕೋ ಶೇರಅಲ್ಲೀ, ಇಲ್ಲಿ ಯಾವ ಹೆಂಗಸೂ ಇಲ್ಲೆನ್ನುತ್ತಿದ್ದೆಯಲ್ಲವೆ? ಎಲೆ, ನನ್ನ ತರ್ಕವು ಎಂದೂ ಸುಳ್ಳಾಗದು. ನಾನು ಈ ಮತ್ತ ಪಠಾಣ ಜಾತಿಯಲ್ಲಿ ಹುಟ್ಟತಕ್ಕವನೇ ಅಲ್ಲ; ಹಾಗು ಈ ಹುಂಬತನದ ಶಿಪಾಯಿಗಿರಿಗೆ ಯೋಗ್ಯನೂ ಅಲ್ಲ. ನಾನು ಯಾವುದೊಂದು ಉಚ್ಚ ಜಾತಿಯಲ್ಲಿ ಹುಟ್ಟಿ, ಯಾವನೊಬ್ಬ ಪ್ರಸಿದ್ಧ ಮುತ್ಸದ್ದಿಯಾಗತಕ್ಕವನೇ; ಆದರೆ ಜರ್ರಾಮೇ ಚುಕ್ಯಾ" ಎಂಪಂದನು.

ಆದೇ ಕಾಲಕ್ಕೆ ಆ ಹಳ್ಳದ ಬದಿಯ ರಾಜಮಾರ್ಗದಲ್ಲಿ ಇಬ್ಬರು ಕುದುರೆಯ ಸ್ವಾರರು ಭರದಿಂದ ಸಾಗಿದ್ದರು. ಅದಕ್ಕಾಗಿ ಶೇರಅಲ್ಲಿಯು ಹಾಜೀಖಾನನಿಗೆ:—"ಯಾರ, ಸಮೀಪದಲ್ಲಿ ಕುದುರೆಯ ಸ್ವಾರರು ನಡೆದಿರುತ್ತಾರೆ. ಆದ್ದರಿಂದ ನೀನೀಗ ಒದರಾಡಬೇಡ. ತುಸ ತಡೆ" ಎಂದನು.

ಹತ್ತರದಿಂದಲೇ ಸ್ವಾರರು ನಡೆದಿರುವರೆಂಬದನ್ನು ಕೇಳಿ, ಹಂಸೆಯು ಕುಳಿತ ಸ್ಥಳದಿಂದೆದ್ದು, ಆ ದಿಕ್ಕಿನ ಕಡೆಗೆ ಭರದಿಂದ ಓಡಲುದ್ಯುಕ್ತಳಾದಳು. ಆಗ ತಾನು ಬಂಡೆಗಲ್ಲಿನ ಹಳ್ಳದಲ್ಲಿರುವೆನೆಂಬ ಅರಿವು ಕೂಡ ಅವಳಿಗುಳಿಯಲಿಲ್ಲ. ಅದರಿಂದ ಅವಳು ನಾಲ್ಕಾರು ಹೆಜ್ಜೆ ಓಡುವಷ್ಟರಲ್ಲಿ ಒಂದು ಕಲ್ಲನ್ನೆಡವಿ ದೊಪ್ಪನೆ ಬಿದ್ದುಬಿಟ್ಟಳು. ಆ ಕೂಡಲೆ ಹಾಜೀಖಾನನು ತನ್ನ ಅವಾಚ್ಯ ಬೈಗಳಿಂದ ಅವಳ ಕುಲಕೋಟಿಯನ್ನುದ್ಧರಿಸುತ್ತ ಅವಳ ಬಳಿಗೆ ಓಡಿ ಹೋಗಿ:"ಲವಂಡೀ, ಓಡಿಹೋಗಬೇಕೆನ್ನುತ್ತೀಯೇನು? ನಿನ್ನ ಈ ಮಿಂಡರು ನಿನ್ನ ಪಕ್ಕದಲ್ಲೇ ಇರುವರು. ಇನ್ನು ನೀನು ನಮ್ಮ ಕೈಯೊಳಗಿಂದ ಪಾರಾಗುವದೆಂತು? ಗದ್ದಲ ಮಾಡವೆ, ಸುಮ್ಮನೆ ನನ್ನೊಡನೆ ಹೊರಟು ಬಾ"

ಎಂದು ಗಸ್ತರಿಸಿದನು. ಕೂಡಲೆ ಹಂಸೆಯು ಬಿದ್ದ ಸ್ಥಳದಿಂದಲೇ:—
"ನಾಗೋಜಿ-ನಾಗೋಜಿ, ಭಾವುರಾವ-ಭಾವುರಾವ" ಎಂದು ಮೂರು ಮೂರು ಸಾರೆ ಕೂಗಿದಳು. ಆ ರಾಜಮಾರ್ಗದಲ್ಲಿ ಆಗ ಕುದುರೆಯನ್ನಾರೋಹಿಸಿ ನಡೆದಿದ್ದವರು ಖೇಡದ ನಾಗೋಜಿಯೂ, ಆತನ ಸೇವಕನಾದ ಭಾವೂರಾಯನೂ ಎಂದು ಆಕೆಯ ತಿಳುವಳಿಕೆಯಾಗಿತ್ತು. ಅವರು ಯಾರೇ ಇರಲಿ, ಭರದಿಂದ ಸಾಗಿದ್ದರಿಂದ ಕುದುರೆಗಳ ಖುರಪುಟಗಳ ಬಹು ದೊಡ್ಡ ಸಪ್ಪಳದಲ್ಲಿ ಕೋಮಲ ಕಂಠದ ಹಾಗು ಗಾಬರಿಯಿಂದುಚ್ಚರಿಸಿದ ಹಂಸೆಯ ಶಬ್ದಗಳು ಅವರಿಗೆ ಕೇಳುವ ಬಗೆ ಹೇಗೆ? ಅದರಿಂದ ಆ ಸವಾರರು ಇದಾವುದನ್ನೂ ಅರಿಯದೆ, ಕ್ಷಣಾರ್ಧದಲ್ಲಿ ಹೊರಟು ಹೋದರು. ಸ್ವಾರರು ಹೋದ ಬಳಿಕ ಶೇಅರಲ್ಲಿಯು ತನ್ನ ಗೆಳೆಯನಿಗೆ ಅನ್ನುತ್ತಾನೆ:—"ಹಾಜೀಖಾನ, ಈಗ ಈ ಹೆಂಗಸನ್ನು ಹಿಡಕೊಂಡು ಮಾಡುವದೇನು? ಇವಳಿಂದ ನಮಗೆ ಸ್ವಲ್ಪಾದರೂ ಉಪಯೋಗವಿದೆಯೇ? ಸುಮ್ಮನೆ ಈ ಕಾಟವನ್ನೊಂದನ್ನು ಹತ್ತರಿರಿಸಿಕೊಂಡಂತಾಗುವದು. ಈ ಅಪರಾತ್ರಿಯಲ್ಲಿ ಇವಳೇನು ನಮಗೆ ರೊಟ್ಟಿ-ಗಿಟ್ಟಿ ಸುಟ್ಟುಕೊಡುವಳೇ? ಹಾಗಾಗಿದ್ದರೆ ಒಂದು ಕೆಲಸವಾದರೂ ಆದಂತಾಗುತ್ತಿತ್ತು. ನಮ್ಮ ಛಾವಣಿಯು ಇನ್ನೂ ಬಹು ದೂರವಿದೆ. ಅಲ್ಲಿಗೆ ಮುಟ್ಟಲಿಕ್ಕೆ ನಸಕು ಹರಿದೀತು. ಮೇಲಾಗಿ ಈ ಕಾಳಿನ ಚೀಲದ ಒಜ್ಜೆ ಬೇರೆ. ನನ್ನ ಗೋಣು ನೊಯ್ಯುತ್ತಿದ್ದು, ಹೊಟ್ಟೆಯೂ ಬಹಳ ಹಸಿದಿದೆ."

"ಶೇಅರಲ್ಲಿ, ಕೊಡು ಆ ಒಜ್ಜೆಯ ಚೀಲವನ್ನು ಈ ಹೆಂಗಸಿನ ತಲೆಯ ಮೇಲೆ" ಎಂದೆಂದು ಹಾಜೀಖಾನನು ಶೇಅರಲ್ಲಿಯ ತಲೆಯ ಮೇಲಿನ ಆ ಭಾರವಾದ ಚೀಲವನ್ನು ತಂದು, ಹಂಸೆಯ ತಲೆಯಮೇಲಿಟ್ಟನು. ಬಿದ್ದು ಗಾಯಪಟ್ಟದ್ದರಿಂದಲೂ ಹಾಗೂ ಆ ಪಠಾಣರ ಆಕಸ್ಮಿಕ ಮುತ್ತಿಗೆಯಿಂದಲೂ ಮೊದಲೇ ಗಾಬರಿಗೊಂಡ ಹಂಸೆಯು, ಆ ಚೀಲದ ಭಾರದಿಂದ ಮತ್ತಿಷ್ಟು ಅಂಜಿ, ದಿಙ್ಮೂಢಳಾದಳು. ಅವಳು ಆ ಚೀಲವನ್ನು ಹೊರಲಾರದೆ ಒಮ್ಮಿಲೆ ನೆಲಕ್ಕೆ ಕುಸಿಕುಳಿತಳು!

ಅದನ್ನು ಕಂಡು "ಈ ಹೆಂಗಸು ಮುದಿಕೆಯಾಗಿರಬೇಕು; ಈ ದೊಡ ಚೀಲವನ್ನು ಹೊರುವಷ್ಟು ಶಕ್ತಿಯು ಇವಳಿಗೆಲ್ಲಿದೆ?" ಎಂದು ಶೇಅರಲ್ಲಿಯು ಅಂದನು. ತಮಗೆ ದೊರೆತ ಈ ಹೆಂಗಸು ತರುಣಿಯೋ, ಮುದುಕಳೋ; ಸುರೂಪಿಯೋ-ಕುರೂಪಿಯೋ? ಎಂಬದಾವದೂ ಆ ಕಾರ್ಗತ್ತಲೆಯಲ್ಲಿ ಅವ

ರಿಗೆ ಇದು ವರೆಗೂ ಕಾಣಿಸಿರಲಿಲ್ಲ. ಅದರಿಂದ ನೇತ್ರದಲ್ಲಿಯೂ ಹಂಸೆಗೆ ಬಗೆ ಬಗೆಯಾಗಿ ಬೈಯುತ್ತ ಆ ಚೀಲವನ್ನು ಎತ್ತಿ ಹೊತ್ತುಕೊಂಡು:—"ಹಾಜೀ ಖಾನ, ಇನ್ನು ನಾವು ಛಾವಣಿಯ ವರೆಗೆ ಹೋಗಿ ಅಲ್ಲಿ ರೊಟ್ಟಿಮಾಡಿಕೊಂಡು ತಿನ್ನುವವಕ್ಕಿಂತ, ಇಲ್ಲಿಗೆ ಸಮೀಪದಲ್ಲಿರುವ ಆ ಮುದುಕಿಯ ಚಪ್ಪರಕ್ಕೆ ಹೋಗಿ, ಈ ಹೆಂಗಸಿನ ಕಡೆಯಿಂದ ಅಲ್ಲಿ ರೊಟ್ಟಿ ಮಾಡಿಸಿಕೊಂಡು ತಿಂದು, ತುಸ ವಿಶ್ರಾಂತಿ ಹೊಂದೋಣ. ಬಳಿಕ ಬೆಳಗಾದ ಮೇಲೆ ಇವಳೊಡನೆ ಛಾವಣಿಗೆ ಹೋಗೋಣ" ಎನ್ನಲು, ಹಾಜೀಖಾನನು ಅದಕ್ಕೆ ಸಮ್ಮತಿಸಿದನು. ಕೂಡಲೆ ಅವರಿಬ್ಬರೂ ಮನಸೋಕ್ತನಾಗಿ ಬೈಯುತ್ತ ಅವಳನ್ನು ತಮ್ಮ ಮುಂದೆ ಮುಂದೆ ಸಾಗಿದರು. ಅವಳಿಗೆ ಆ ಅವಸ್ಥೆಯಲ್ಲಿ ಎಷ್ಟೇನು ನೋವಾಗಿದೆಯೆಂಬ ಬಗ್ಗೆ ಆ ಪಾಷಾಣ ಹೃದಯದ ಉಂಡರೇತಕ್ಕೆ ವಿಚಾರಿಸುವರು? ಕಟುಕರು ಗೋವನ್ನು ಸಾಗಿಸುವಂತೆ, ಆ ಪಠಾಣರು ಹಂಸೆಯನ್ನು ಸಾಗಿಸಿಕೊಂಡು ನಡೆದಿದ್ದರು!

ಅವರೆಲ್ಲರೂ ತುಸ ದೂರ ನಡೆದು ಹೋದ ಮೇಲೆ ಒಂದು ಮುರುಕ ಚಪ್ಪರವು ಕಂಡಿತು. ಆ ಗುಡಿಸಿಲಿನಲ್ಲಿಯೇ ಒಬ್ಬ ಮುದುಕಿಯಿರುತ್ತಿದ್ದು, ಅವಳನ್ನು ಕೊಂದೇ ಆ ಪಠಾಣರು ಆ ದಾರಿಯನ್ನು ಸಾಗಿಸಿದ್ದರು. ಗುಡಿಸಿಲಿಗೆ ಬಂದ ಕೂಡಲೆ, ಹಾಜೀಖಾನನು ಮಾರ್ಗದಲ್ಲಿ ಬಿದ್ದಿದ್ದ ಆ ಮುದುಕಿಯ ಹೆಣವನ್ನು ಎಳೆದು, ಚಪ್ಪರದ ಹಿಂಬದಿಗೆ ಒಗೆದನು. ನಂತರ ಅವನು ಹಂಸೆಯನ್ನು ಕುರಿತು:—"ನೀನು ನಮಗೆ ಈಗಲೆ ರೊಟ್ಟಿ ಸುಟ್ಟು ಕೊಡಬೇಕು; ಅಂದರೆ ನಾವು ನಿನಗಾವ ಬಗೆಯಿಂದಲೂ ತೊಂದರೆ ಕೊಡುವದಿಲ್ಲ" ಎಂದು ಹೇಳಿದನು; ಹಾಗು ತನ್ನ ಬಳಿಯಲ್ಲಿರುವ ಚಕಮಕಿಯಿಂದ ಬೆಂಕಿ ಹೊತ್ತಿಸಿ, ಅದೇ ಚಪ್ಪರದ ಹುಲ್ಲಿನ ಸಿವುಡುಗಳನ್ನು ಹಿರಿದು ಹಚ್ಚಿ ಬೆಂಕೀ ಮಾಡಿ ಕೊಟ್ಟನು. ಬೆಂಕಿಯ ಬೆಳಕು ಇನ್ನು ತನ್ನ ಮೋರೆಯ ಮೇಲೆ ಬೀಳುವದೆಂದು ತಿಳಿದ ಕೂಡಲೆ, ಹಂಸೆಯು ತಿರುಗಿ ಕುಳಿತಳು. ಆಗ ಚಪ್ಪರದೊಳಗಿನ ಅವ್ಯವಸ್ಥೆಯೆಲ್ಲ ಆಕೆಗೆ ಕಾಣಿಸಿತು. ಆಕೆಯು ಅದನ್ನೇ ನೋಡುತ್ತ ಕುಳ್ಳಿರತಕ್ಕವಳು; ಆದರೆ ಆ ಘಾತಕರು ಅವಳನ್ನು ಸುಮ್ಮನೆ ಕೂಡಗೊಡುವರೇ? ಆ ಮನೆಯೊಳಗಿನ ಗಡಿಗೆ-ಮಡಿಕೆಗಳನ್ನು ಹುಡುಕಿ ಒಂದಿಷ್ಟು ಜೋಳದ ಹಿಟ್ಟನ್ನೂ, ಒಂದು ಮುಗ್ಗಿನ ಪರಾತವನ್ನೂ, ಹಂಚನ್ನೂ, ಒಂದು ನೀರಿನ ಗಡಿಗೆಯನ್ನೂ ಆಕೆಯ ಮುಂದೆ ತಂದಿಟ್ಟರು; ಹಾಗು ಮೂರು

ಕಲ್ಲುಗಳನ್ನು ಹೂಡಿ, ಒಲೆಗೆ ಬೆಂಕಿ ಹಾಕಿ, ಬೇಗನೆ ರೋಟ್ಟೀ ಸುಡೆಂದು ಅವಸರಪಡಿಸುತ್ತಿದರು.

ಹಂಸೆಯು ಬಹು ತೃಷ್ಣಳಾಗಿದ್ದರೂ ಅವಳು ಹಿಂದು ಜಾತಿಯಲ್ಲಿ ಹುಟ್ಟಿದವಳು. ಹಸಿದವರನ್ನು ಕಂಡರೆ ಹಿಂದುಗಳಲ್ಲಿ ಉಂಟಾಗುವಷ್ಟು ಕನಿಕರವು ಮುಸಲ್ಮಾನರಲ್ಲೂ ಉಂಟಾಗುತ್ತಿರಲಿಕ್ಕಿಲ್ಲ. ಹಸಿದವರನ್ನು ಕಂಡ ಹಿಂದುವು ತಾನು ಎಂಥ ವಿಪತ್ತಿನಲ್ಲಿಯೇ ಇರಲಿ, ಆಗ ಅವನು ತನ್ನನ್ನು ಸಂಪೂರ್ಣವಾಗಿ ಮರೆತು, ಹಸಿದವರ ಹಸಿವೆಯನ್ನು ಹಿಂಗಿಸಲಿಕ್ಕೆ ಒಮ್ಮೆಲೆ ತತ್ಪರನಾಗುತ್ತಾನೆ. ಇದರಂತೆ ಹಂಸೆಯಾದರೂ ಆ ಪಠಾಣರ ನೀಚತನದ ಕಡೆಗೆ ಲಕ್ಷ್ಯಗೊಡದೆ ಹಾಗು ತನ್ನ ದೇಹದ ಶ್ರಮದ ಕಡೆಗೆ ನೋಡದೆ, ಬೇಗ-ಬೇಗನೆ ರೊಟ್ಟೀ ಸುಡಲಾರಂಭಿಸಿದಳು. ಅಷ್ಟರಲ್ಲಿ ಶೇರಅಲ್ಲಿಯು ಆ ಮುದುಕ ಚಪ್ಪರದೊಳಗಿನ ಬೇರೊಂದು ಗಡಿಗೆಯಿಂದ ಕೆಲ ಉರುಳೀಗಡ್ಡೆಗಳನ್ನೂ, ಹಸೀ ಮೆಣಸಿನಕಾಯಿಗಳನ್ನೂ ಹುಡುಕಿ ತೆಗೆದು, ಇಬ್ಬರೂ ಕುಳಿತು ಹಂಸೆಯು ಸುಟ್ಟುಕೊಡುತ್ತಿದ್ದ ಬಿಸಿ ಬಿಸಿ ರೊಟ್ಟಿಗಳನ್ನು ನುಂಗಿ ನೀರುಕುಡಿದರು. ಊಟವಾದ ಬಳಿಕ ಆ ಪಠಾಣರ ಲಕ್ಷ್ಯವು ಹಂಸೆಯ ದೇಹ ಸ್ಥಿತಿಯ ಕಡೆಗೆ ಹೊರಳಿತು. ಅವಳು ನವಯುವತಿಯೆಂಬದೂ, ರೂಪವತಿಯೆಂಬದೂ ಕಂಡು ಬರಲು, ಹಾಜೀಖಾನನು ಹಂಸೆಯ ಹತ್ತರ ಹೋಗಿ ಅವಳನ್ನು ತನ್ನ ಬಳಿಗೆ ಎಳೆಯಬೇಕೆಂದು ಹವಣಿಸುತ್ತಿರುವಷ್ಟರಲ್ಲಿ, ಶೇರಅಲ್ಲಿಯು ಅವನನ್ನು ತಡೆದು:—"ಹಾಜೀಖಾನ, ತಡೆ; ಇಷ್ಟು ಅವಸರಪಡಬೇಡ ಈಕೆಯು ನಮ್ಮಿಬ್ಬರಿಗೂ ದೊರೆತಿರುವಳು" ಎಂದೆಂದು, ತಾನೂ ಹಂಸೆಯ ಹತ್ತರ ಹೋಗಹತ್ತಿದನು.

ಆಗ ಹಾಜೀಖಾನನು ಶೇರಅಲ್ಲಿಯನ್ನು ಮುಂದಕ್ಕೆ ಒರಗೊಡದೆ:—"ಮೂರ್ಖಾ, ನಾನೇ ಇವಳನ್ನು ಗೊತ್ತುಹಚ್ಚಿದವನು. ಇಲ್ಲದಿದ್ದರೆ ನೀನು ಎತ್ತೋ ಬಣ ಬಣ ತಿರುಗುತ್ತ ನಡೆದಿದ್ದೆ" ಎನ್ನಲು,

"ಎಲೇ ಹಾಜೀ, ಸರಿ ಹಿಂದಕ್ಕೆ" ಎಂದೆಂದು ಶೇರಅಲ್ಲಿಯು ಹಾಜೀಖಾನನ್ನು ದೂಡಲು, ಅವರಿಬ್ಬರಲ್ಲಿ ಹಂಸೆಯ ಬಗ್ಗೆ ಕಡು ದ್ವೇಷವುಂಟಾಯಿತು. ಕೂಡಲೆ ಶೇರಅಲ್ಲಿಯು ಹಾಜೀಖಾನನಿಗೆ ತನ್ನ ಬಳಿಯಲ್ಲಿದ್ದ ಕಠಾರಿಯಿಂದ ಇರಿದನು. ಹಾಜಿಯು ತನ್ನ ಹದನಾದ ಕಲ್ಲುಗಳಿಂದ ಶೇರಅಲ್ಲಿಯ ಗಂಟಲವನ್ನೇ ಕಡಿದನು! ಕೂಡಲೆ ಅವರಿಬ್ಬರೂ ಮರಣಹೊಂದಿದರು!

## ಬೇಗಮ್ ಸಾಬಕಾ ಫರ್ಮಾನ.

"ಅಪ್ಪಾ, ಅಪ್ಪಾ"

"ಯಾರು, ಹಂಸೆಯೇನು? ತಂಗೀ, ನೀನು ಇಲ್ಲಿ ಅಪರಾತ್ರಿಯಲ್ಲೇಕೆ? ಎಂದಂದು ಸೂರ್ಯಾಜಿಯು ತನ್ನ ಕುದುರೆಯಿಂದಿಳಿದು, ಹಂಸೆಯು ಎದುರಿ ಬಂದು ನಿಂತನು. ಆ ದುಷ್ಟ ಪಠಾಣರು ತಮ್ಮ ದುಷ್ಕೃತ್ಯಕ್ಕೆ ತಾವೇ ಕಾದಾ ಮರಣ ಹೊಂದಲು, ಹಂಸೆಯು ಭ್ರಮಿಷ್ಟಳಾದಂತಾಗಿ ಚಪ್ಪರದ ಹೊರ ಬಂದು ನಿಂತುಕೊಂಡಿದ್ದಳು. ಇಷ್ಟರಲ್ಲಿ ಎತ್ತ ಕಡೆಯಿಂದಲೋ ಇಬ್ಬ ಕುದುರೆಯ ಸವಾರರು ಅಲ್ಲಿಗೆ ಬಂದರು. ಅವರಲ್ಲಿಯ ಒಬ್ಬನ ದನಿಯ ಗುರುತು ಹಂಸೆಗೆ ಹತ್ತಲು, ಅವಳು ಮೇಲೆ ಹೇಳಿದಂತೆ "ಅಪ್ಪಾ-ಅಪ್ಪಾ" ಎಂದು ಅವನನ್ನು ಕೂಗುತ್ತಲೆ, ಸೂರ್ಯಾಜಿಯು ತನ್ನ ಕುದುರೆಯಿಂದಿಳಿ ಅವಳೆದುರಿಗೆ ಹೋಗಿ ನಿಂತನು.

ಈ ಕಾದಂಬರಿಯಲ್ಲಿ ಈ ಮೊದಲು ವಿವರಿಸಿದಂತೆ ಜಮಾಲಖಾನ ಸೂರಜಖಾನರು ಹಂಸೆಯನ್ನು ನಾಗೋಜಿಯ ಕೈಯೊಳಗಿಂದ ಮುಕ್ತ ಬಿಡಿಸಿ, ಬಾದಶಹನ ಝುನಾನಖಾನೆಗೆ ತಲುಪಿಸಬೇಕೆಂದು ಬೇತು ಮಾಡಿದ ರಷ್ಟೇ? ಅದರಂತೆ ಅವರು ಆ ಮಧ್ಯರಾತ್ರಿಯಲ್ಲಿ ಖೇಡದ ಛಾವಣಿಯಿಂ ಸ್ವಾರರಾಗಿ ತಳೇಗಾವಿಗೆ ನಡೆದಿದ್ದರು. ತಳೇಗಾವಿಗೆ ಹೋಗಿ, ಅಲ್ಲಿ ಗುಪ್ತ ವಾಗಿ ವಿಚಾರಿಸಲು, ಹಂಸೆಯು ಅಲ್ಲಿಂದ ಎತ್ತೋ ಓಡಿ ಹೋಗಿರುವಳೆಂದೂ ನಾಗೋಜಿಯ ಕಡೆಯ ಪಠಾಣರನ್ನು ಖಂಡೇರಾಯನು ಸೆರೆಹಿಡಿದಿರು ನೆಂದೂ, ನಾಗೋಜಿಯು ಎತ್ತೋ ಮಾಯವಾದನೆಂದೂ ಅವರಿಗೆ ತಿಳಿಯಿತು ಕೂಡಲೆ ಅವರು ಹಿಂದಿರುಗಿ ರಾಜಮಾರ್ಗದಿಂದ ಬರುತ್ತಿರುಲು, ರಾ ಮಾರ್ಗದಿಂದ ಸ್ವಲ್ಪ ಅಂತರದಲ್ಲಿ ಅಂಥ ಆ ಮಧ್ಯ ರಾತ್ರಿಯಲ್ಲಿ ಬೆಂಕಿ ಹತ್ತಿ ತ್ತಿರುವದೂ, ಅದರ ಬಳಿಯಲ್ಲಿ ಒಬ್ಬಿಬ್ಬರು ಆವೇಶದಿಂದ ಒದರಾಡುತ್ತಿ ರುವದೂ ಅವರಿಗೆ ಗೋಚರವಾಯಿತು. ಕೂಡಲೆ ಜಮಾಲಖಾನನ ಸೂರ್ಯಾಜಿಯೊಡನೆ ಅಲ್ಲಿಗೆ ಬಂದು ನೋಡುತ್ತಿರಲಿಕ್ಕೆ, ಅಲ್ಲಿ ಇಬ್ಬ ತರುಣ ಪಠಾಣರು ಸತ್ತು ಬಿದ್ದಿದ್ದು, ಒಬ್ಬ ತರುಣಿಯು ಸಚಿಂತ ಮುಖ ಯಿಂದ ಆ ಚಪ್ಪರದ ಬಾಗಿಲ ಬಳಿಯಲ್ಲಿ ನಿಂತುಕೊಂಡಿರುವದು ಕಂಡಿತು

ಬಳಿಕ ಹಂಸೆಯು:—"ನನ್ನನ್ನು ಈ ಮೊದಲು ಜಾಮುಖೇಡದಿಂದ ಮುಸಲ್ಮಾನ ದರವಡೆಗಾರರು ಸಾಗಿಸಿಕೊಂಡು ನಡೆದಿರಲು, ತಳೇಗಾಂವದ ಖಂಡೇರಾವ ದಾಭಾಡೆಯು ಅವರಿಂದ ನನ್ನನ್ನು ಬಿಡಿಸಿ ತನ್ನ ಮನೆಗೆ ಕರೆದೊಯ್ದು ಸಂರಕ್ಷಿಸುತ್ತಿರುವಾಗ ಇಂದು ನಾಗೋಜಿಯು ಆ ವಾಡೆಗೆ ತನ್ನ ನೀಚ ಸಂಗಡಿಗರೊಡನೆ ಮುತ್ತಿಗೆ ಹಾಕಿ, ನನ್ನನ್ನು ಮತ್ತೆ ಓಡಿಸಿಕೊಂಡು ಹೋಗತಕ್ಕವನಿದ್ದನು; ಆದರೆ ನನ್ನ ಸಲುವಾಗಿ ದಾಭಾಡೆಯವರಿಗೆ ಉಪಟಳವಾಗಬಾರದೆಂದು, ನಾನೇ ಅಲ್ಲಿಂದ ಹೊರಟು, ಒಬ್ಬಳೇ ಖೇಡದ ಕಡೆಗೆ ಸಾಗಿರಲು ಆ ಹಳ್ಳದಲ್ಲಿ ನನಗೆ ಈ ಇಬ್ಬರು ಮುಸಲರು ಗಂಟುಬಿದ್ದರು. ಇನ್ನು ಇವರು ನನ್ನ ಪಾವಿತ್ರ್ಯವನ್ನು ನಾಶಪಡಿಸತಕ್ಕವರೇ; ಆದರೆ ಅಷ್ಟರಲ್ಲಿ ಇವರು ನನ್ನ ಅಪಹರಣದ ಸಲುವಾಗಿ ತಮ್ಮ ತಮ್ಮೊಳಗೆ ಬಡಿದಾಡಿ ಸತ್ತಿರುವರು" ಮುಂತಾದ ಸಂಗತಿಗಳನ್ನು ತನ್ನ ತಂದೆಗೆ ತಿಳಿಸಿದಳಲ್ಲದೆ, "ನೀವು ಅಂದು ಆ ಜಾಮುಖೇಡದ ದರವಡೆಗಾರರಿಂದ ಹೆಚ್ಚಾಗಿ ಪೆಟ್ಟು ತಿಂದಂತೆ ಕಾಣುತ್ತದೆ. ಈಗ ನಿಮ್ಮ ದೇಹಸ್ಥಿತಿಯು ಹೇಗಿದೆ?" ಎಂದು ವಿಚಾರಿಸಿದಳು.

ಹೀಗೆ ಆ ತಂದೆ-ಮಗಳು ಮಾತಿನ ಭರದಲ್ಲಿರಲು, ಈ ತರುಣಿಯು ಅಲ್ಲಾನ ದಯೆಯಿಂದಲೇ ಇಂದು ಮತ್ತೆ ನಮ್ಮ ಕೈವಶವಾದಳೆಂದು ಜಮಾಲಖಾನನು ಮನದಲ್ಲಿ ಒರಿಪಿರಿ ಹಿಗ್ಗುತ್ತಿದ್ದನು. ಹಂಸೆಯ ಕರುಣಾಜನ್ಯ ಕಥೆಯನ್ನು ಕೇಳಿ ಸೂರ್ಯಾಜಿಗೆ ಕೆಲಹೊತ್ತಿನ ವರೆಗೆ ತನ್ನ ಈ ಮೊದಲಿನ ದುಷ್ಕೃತಿಯ ಬಗ್ಗೆ ಪಶ್ಚಾತ್ತಾಪವೂ ಹೇಯವೂ ಅನಿಸಿದರೂ, ಕ್ಷಣಾರ್ಧದಲ್ಲೇ ಈ ಮೊದಲು ಜಮಾಲಖಾನನು ಅವನಲ್ಲಿ ತುಂಬಿದ ಸ್ವಾರ್ಥದ ವಿಚಾರವು ಮತ್ತೆ ತಲೆಯೆತ್ತಿತು. ಆದರಿಂದ ಇನ್ನು ಆ ನಮ್ಮ ಬೇತಿಗೆ ಅನುಕೂಲಾಯಿತೆಂದು ಬಗೆದು, ಅವನು ಹಂಸೆ ಹಾಗು ಜಮಾಲಖಾನರೊಡನೆ ಅಲ್ಲಿಯೇ ಕೆಲ ಗಳಿಗೆಗಳ ವರೆಗೆ ವಿಶ್ರಾಂತಿಪಡೆದನು.

ನಸಕು ಹರಿಯುತ್ತಿರಲು, ಜಮಾಲಖಾನನು ಸೂರ್ಯಾಜಿಯನ್ನು ಕುರಿತು:—"ಸೂರಜಖಾ, ಇನ್ನು ಇಲ್ಲಿ ಬಹಳ ಹೊತ್ತು ನಿಲ್ಲುವದು ತರವಲ್ಲ. ಬಾದಶಹನ ಛಾವಣಿಯು ಇಲ್ಲಿಗೆ ಸಮೀಪದಲ್ಲಿದ್ದು, ದಂಡಿನ ಶಿಪಾಯಿಗಳು ಹೇಗಿರುತ್ತಾರೆಂಬ ಬಗ್ಗೆ ನಿಮ್ಮ ಹಂಸೆಗೆ ಬಂದ ಅನುಭವವು ಇನ್ನೂ ಹಸಿಹಸಿಯಾಗಿದೆ. ಆದುದರಿಂದ ನೀವು ಇವಳನ್ನು ಬೇಗನೆ ಚಲೋ ಸುರಕ್ಷಿತ ಸ್ಥಳಕ್ಕೆ ಮುಟ್ಟಿಸುವದುತ್ತಮವು. ಅಂದರೆ ನಮಗೆ ಮುಂದಿನ ಉದ್ಯೋಗಕ್ಕೇ

ಅನುಕೂಲವಾಗುವದು" ಎನ್ನಲು,

"ಅಚ್ಛಾ-ಅಚ್ಛಾ" ಎಂದೆನ್ನುತ್ತ, ಸೂರ್ಯಾಜಿಯು ಹಂಸೆಯನ್ನು ಕುರಿತು:—"ಹಂಸಾ, ಖಾನಸಾಹೇಬರ ಅಂಬೋಣದ ಬಗ್ಗೆ ನಿನ್ನ ವಿಚಾರ ವೇನು?" ಎಂದು ಬೇಕಂತಲೇ ಪ್ರಶ್ನೆ ಮಾಡಿದನು.

"ಅಪ್ಪಾ, ನನ್ನ ವಿಚಾರವು ಮತ್ತೇನಿರಬೇಕು? ನೀವು ಇದುವರೆಗೆ ನನ್ನ ಸಲುವಾಗಿ ಬಹು ಕಷ್ಟಪಟ್ಟು ನನ್ನನ್ನು ಹೇಗೆ ಶೋಧಿಸಿದರೋ, ಅದರಂತೆ ಯೇ ಲೋಣಿಯಿಂದ ಮಾಯವಾಗಿದ್ದ ಅವ್ವನನ್ನೂ ಶೋಧಿಸಿ, ನನ್ನನ್ನು ಆಕೆಗೊಪ್ಪಿಸಿ ಬಿಡಿರಿ. ಅಂದರಾಯಿತು." ಎಂದು ಹಂಸೆಯು ಸರಳ ರೀತಿ ಯಿಂದ ಉತ್ತರ ಕೊಟ್ಟಳು. ತನ್ನ ತಂದೆಯು ತನ್ನನ್ನು ಶೋಧಿಸುವ ಬಗ್ಗೆ ಇದು ವರೆಗೆ ಬಹು ಕಷ್ಟಪಟ್ಟನೆಂದು ಆ ಸರಳ ಸ್ವಭಾವದ ತರುಣಿಗೆ ಅನಿಸುತ್ತಿತ್ತು.

"ಹಂಸಾ, ಆಕೆಯ ಶೋಧ ಹಚ್ಚುವದೂ ಅಷ್ಟೇ ಕಠಿಣವಾಗಿದೆ; ಆದರೆ ಅದುವರೆಗೆ ನಿನ್ನನ್ನಿರಿಸುವದೆಲ್ಲಿ? ಲೋಣಿಯಲ್ಲಿಟ್ಟರೆ, ಈ ಮೊದಲೇ ಎರಡು ಸಾರೆ ಆ ನಾಗೋಜಿಯು ನಿನಗೆ ತೊಂದರೆ ಕೊಟ್ಟಿರಲು ಹಾಗು ಲೋಣಿಯ ಬಳಿಯಲ್ಲಿ ಬಾದಶಹನ ಛಾವಣಿಯಿರಲು, ನಿನ್ನೊಬ್ಬಳನ್ನೇ ಆ ಮುರುಕು ಮನೆಯಲ್ಲಿರಿಸುವದೆಂತು?" ಎಂಬಂದು ಸೂರ್ಯಾಜಿಯು ಒಳ್ಳೇ ವಿಚಾರ ಮಗ್ನನಾದಂತೆ ನಟಿಸಲು,

"ಸೂರಜಖಾ, ನಾವು ಈ ಮೊದಲು ಯೋಚಿಸಿದ್ದೇ ವಿಹಿತವಿದೆ ನಾವು ಇವಳನ್ನು ಮೊದಲು ಒಂದು ಸುರಕ್ಷಿತ ಸ್ಥಳದಲ್ಲಿರಿಸೋಣ. ನಿಮ್ಮ ಹೆಂಡತಿಯ ಶೋಧ ಹತ್ತಿದ ಬಳಿಕ ಇವಳನ್ನು ಆಕೆಯ ಸ್ವಾಧೀನಪಡಿ ಸೋಣ. ಇದೇ ಅನುಕೂಲವಾದ ವ್ಯವಸ್ಥೆಯು." ಎಂದು ಜಮಾಲಖಾನನು ನಡುವೇ ಸೂಚಿಸಿದನು.

ಹಂಸೆಗೆ ತನ್ನ ತಂದೆಯ ಹಾಗು ಜಮಾಲಖಾನನ ಆಲೋಚನೆಯು ಸಮ್ಮತವಾಯಿತು. ಆದರಿಂದ ಅವಳು:-"ಅಪ್ಪಾ, ಇನ್ನು ನಿಮಗೆ ಸರಿದೋರಿ ದಂತೆ ಮಾಡಿರಿ; ಆದರೆ ಅವ್ವನನ್ನು ಮಾತ್ರ ತೀವ್ರ ಶೋಧಿಸಿರಿ. ನಾನು ಬಹು ದುರ್ದೈವಿಯು!" ಎಂದೆನ್ನಲು,

"ತುಚ್ಛ ಹುಡಿಗೀ! ಹಾಗೆಂದೂ ಅಂದುಕೊಳ್ಳಬೇಡ. ಸಂಕಟಗಳಿಗೆ ಅಂಜಿ, ಕೈಕಾಲುಗಟ್ಟಿರೆ ನಡೆಯುವದೇ? ಈ ಸಂಕಟಗಳು ನಿನ್ನ ದುರ್ದೈವ

ಕ್ಕಾಗಿ ಬರದೆ, ಸುದೈವಕ್ಕಾಗಿ ಬರುತ್ತಿರಬೇಕು; ಯಾಕಂದರೆ, ಯಾವನು ನಿನ್ನ ಭವಿಷ್ಯವನ್ನು ಹೇಳಿರುವನೋ, ಆ ಬುಡುಬುಡಿಕಪ್ಪನು ನಮಗೆ ತಂಜಾ ನಗರದಲ್ಲಿ ಭೆಟ್ಟಿಯಾಗಿದ್ದಿಲ್ಲವೆ? ಅವನು ಇದೇ ಸಂಗತಿಯನ್ನು ತಿಳಿಸಿ, ಸಂಕಟ ಬಂದಾಗ ಹತಾಶಳಾಗದಂತೆಯೂ, ಆತ್ಮಘಾತ ಮಾಡಿಕೊಳ್ಳದಂತೆಯೂ ನಿನಗೆ ತಿಳಿಸಲಿಕ್ಕೆ ನನ್ನನ್ನು ಬಜಾಯಿಸಿರುವನು. ಹಾಗೆ ನೀನು ಅವಿಚಾರಕ್ಕೆ ಮನಸ್ಸು ಮಾಡಿದೆಯೆಂದರೆ, ನೀನು ನಿನ್ನ ಆತ್ಮಘಾತಕ್ಕೆ ಕಾರಣಳಾಗುವದಲ್ಲದೆ, ನಿನ್ನ ಉದರದಲ್ಲಿ ಜನಿಸಬೇಕಾಗಿದ್ದ ರಾಜಕುಮಾರನ ಹತ್ಯೆಗೂ ಕಾರಣಳಾಗಬೇಕಾದೀತೆಂಬದನ್ನು ಲಕ್ಷ್ಯದಲ್ಲಿಡು." ಎಂದು ಸೂರ್ಯಾಜಿಯು ಹಂಸೆಯನ್ನು ಕುರಿತು ನುಡಿಯುತ್ತಿರಲು, ಬೆಳಗಾಯಿತು. ಅಷ್ಟರಲ್ಲಿ ೧೦-೧೫ ಜನ ಪಠಾಣ ಸ್ವಾರರು ಭರದಿಂದ ಅಲ್ಲಿಗೆ ಬಂದರು. ಅವರನ್ನು ಕಂಡು ಹಂಸೆಯೂ, ಸೂರ್ಯಾಜಿ-ಜಮಾಲಖಾನರೂ ಅಂಜಿದರು ನಾಗೋಜಿಯೇ ತನ್ನ ಸಂಗಡಿಗರೊಡನೆ ಹಂಸೆಯನ್ನು ಅಪಹರಿಸುವ ಸಲುವಾಗಿ ಬಂದಿರುವನೆಂದು ಅವರೆಲ್ಲರ ತಿಳುವಳಿಕೆಯಾಗಲು, ಸೂರ್ಯಾಜಿಯು ತನ್ನ ಖಡ್ಗವನ್ನು ಹಿರಿದು ಮುಂದೆ ಬಂದು, ಆ ಜನರನ್ನು ಕುರಿತು: - "ಖಬರ್‌ದಾರ್, ಮುಂದೆ ಬಂದಿರೆಂದರೆ." ಎಂದು ಗದ್ದರಿಸಿದನು. ಆ ಕೂಡಲೆ ಆ ಆಗಂತುಕರ ಮುಖ್ಯಸ್ಥನು ಕುದುರೆಯಿಂದಿಳಿದು, ನಮ್ರತೆಯಿಂದ ಸೂರ್ಯಾಜಿಯನ್ನು ಕುರಿತು:—"ಖಾನಸಾಹೇಬ, ನಾವು ಮುತ್ತಿಗೆ ಹಾಕಿ ನಿಮ್ಮನ್ನು ಸುಲಿಯಲಿಕ್ಕೆ ಬಂದವರಲ್ಲ. ನಿನ್ನೆ ರಾತ್ರಿ ತಳೇಗಾಂವದ ದಾಭಾಡೆಯವರ ವಾಡೆಯಿಂದ ಒಬ್ಬ ಹಿಂದು ಯುವತಿಯು ಮಾಯವಾಗಿರುತ್ತಾಳೆ. ಖಂಡೇರಾಯನ ಆಜ್ಞೆಯ ಮೇರೆಗೆ ಆಕೆಯ ಶೋಧಕ್ಕಾಗಿ ಹೊರಟಿರುತ್ತೇವೆ. ಇಲ್ಲಿ ಸುಳುವು ಹತ್ತಿದ್ದರಿಂದ, ಆಕೆಯು ಇಲ್ಲಿಗೇನಾದರೂ ಬಂದಿರುವಳೇನೆಂದು ನೋಡಬಂದಿರುವೆವು'' ಎಂದನು.

ಆಗ ಹಂಸೆಯು ತಾನೇ ಮುಂದರಿದು:—"ಸೇವಕರೇ, ನಾನೇ ಆ ಹಂಸೆಯು. ನನ್ನ ತಂದೆಯವರೊಡನೆ ಸುರಕ್ಷಿತವಾಗಿರುವೆನೆಂದು, ಉಮಾಬಾಯಿಯವರಿಗೂ ಖಂಡೇರಾಯರಿಗೂ ತಿಳಿಸಿರೆ"ಂದು ಹೇಳಿ, ಅವರನ್ನು ಕಳಿಸಿಕೊಟ್ಟಳು.

ಆ ಪಠಾಣರು ತಳೇಗಾಂವಿಗೆ ತಿರುಗಲು, ಸೂರ್ಯಾಜಿಯು ಅವರಿಗೆ ಎಲ್ಲ ಸಂಗತಿಯನ್ನು ತಿಳಿಸಿ, ಹಂಸೆಗಾಗಿ ಅವರ ಬಳಿಯಲ್ಲಿಯ ಒಂದು ಕುದುರೆ

ಣವನ್ನು ಕೊಂಡುಕೊಂಡನು; ಹಾಗು ಹಂಸೆಯೊಡನೆ ಆ ಇಬ್ಬರೂ ಖಾನರೂ ಅಶ್ವಾರೋಹಿಗಳಾಗಿ ಅಲ್ಲಿಂದ ಹೊರಟರು.

ಔರಂಗಜೇಬ ಬಾದಶಹನ ದಂಡಿನ ಛಾವಣಿಯು ಪುಣೆಯ ಬಳಿಯ ಕೋಡದ ಹತ್ತರ ಬಿಟ್ಟಿದ್ದರೂ, ಆತನ ಝನಾನಖಾನೆಯು ಬ್ರಹ್ಮಪುರಿಯಲ್ಲೇ ಇತ್ತು. ಬಹ್ಮಪುರಿಯು ವಿಜಾಪುರ ಜಿಲ್ಹೆಯೊಳಗೆ ಭೀಮಾನದಿ-ಡೋಣೀ ನದಿಗಳ ಮಧ್ಯದಲ್ಲಿತ್ತು. ತಮ್ಮ ಕುದುರೆಗಳನ್ನು ಭರದಿಂದ ಸಾಗಿಸುತ್ತ, ನಡುನಡುವೆ ಸ್ವಲ್ಪ-ಸ್ವಲ್ಪ ವಿಶ್ರಮಿಸುತ್ತ ಸೂರ್ಯಾಜಿ ಮುಂತಾದವರು ಮೂರನೇ ದಿನ ಸಂಜೆಗೆ ಸೊಲ್ಲಾಪುರ ಜಿಲ್ಲೆಯೊಳಗಿನ ಸಿದ್ಧಾಪುರವೆಂಬ ಭೀಮಾನದೀ ತೀರದ ಗ್ರಾಮಕ್ಕೆ ತಲುಪಿದರು. ಆಗ ಸೂರ್ಯಾಜಿಯು ಹಂಸೆಯನ್ನು ಕುರಿತು:—"ತಂಗೀ ಈಗ ನಾವು ಬಾದಶಹನು ನೆಲಿಸಿರುವ ಆತನ ಖಾಸ ಪಟ್ಟಣದ ಬಳಿಗೆ ಬಂದೆವು. ಈ ಬ್ರಹ್ಮಪುರಿಯಲ್ಲಿ ದೊಡ್ಡ ದೊಡ್ಡ ಸರದಾರರೂ, ಅಮೀರ-ಉಮರಾವರೂ ಇರುತ್ತಾರೆ. ನಾನೂ ಇದು ವರೆಗೆ ಇಲ್ಲಿಯೇ ಇರುತ್ತಿದ್ದೆನು. ನಾನು ಮುಂದೆ ಹೋಗಿ, ನನ್ನ ಯೋಗ್ಯತೆಗೆ ಸರಿಯಾದ ಮೇಣೆ ಮುಂತಾದ ನನ್ನ ಸರಂಜಾಮವನ್ನು ಕಳಿಸುತ್ತೇನೆ. ಮೇಣೆ ಬರುತ್ತಲೇ ನೀನು ಅದರಲ್ಲಿ ಕೂಡ್ರು. ಜಮಾಲಖಾನರು ನಿನ್ನೊಡನೆ ಸ್ವಾರರಾಗಿ ಬರುವರು. ಯಾರಾದರೂ ವಿಚಾರಿಸಿದರೆ, ಖಾನ ಸಾಹೇಬರೇ ಯೋಗ್ಯ ಉತ್ತರವನ್ನು ಕೊಡುವರು' ಎಂದು ಹೇಳಿ ಹೊರಟು ಹೋದನು.

ಹೊತ್ತು ಮುಳುಗಿ ಕತ್ತಲೆಯಾದರೂ ಮೇಣೆ ಬರಲಿಲ್ಲ. ಅದರಿಂದ ಜಮಾಲಖಾನನು ಹಂಸೆಯನ್ನು ಕುರಿತು:- -"ಖಾನಸಾಹೇಬರಿಂದ ಇನ್ನೂ ಮೇಣೆಯು ಏಕೆ ಬರಲಿಲ್ಲೆಂಬದನ್ನು ವಿಚಾರಿಸಿ, ಬೇಗನೆ ಅದನ್ನು ತಕ್ಕೊಂಡು ಬರುತ್ತೇನೆ"ಂದು ಹೇಳಿ. ಹಂಸೆಯು ಉತ್ತರದ ದಾರಿ ಕೂಡ ನೋಡದೆ, ತನ್ನ ಕುದುರೆಯನ್ನು ಭರದಿಂದ ಬಿಟ್ಟನು. ಅವನು ಹೊರಟು ಹೋದ ನಂತರ ಅಲ್ಪಾವಕಾಶದಲ್ಲಿಯೇ ೪ ೮ ಜನ ಬೋಯಿಗಳು ಒಂದು ಮೇಣೆಯನ್ನು ಹೊತ್ತುಕೊಂಡು ಅಲ್ಲಿಗೆ ಬಂದರು. ಸೂರಜಖಾನರು ನಮ್ಮನ್ನು ಕಳಿಸಿದ್ದು, ನಿಮ್ಮನ್ನು ಬೇಗನೆ ಕರೆತರಲಿಕ್ಕೆ ತಿಳಿಸಿರುತ್ತಾರೆಂದು ಅವರು ಹಂಸೆಗೆ ಹೇಳಿದರು. "ಜಮಾಲಖಾನರು ಅತ್ತ ಕಡೆಗೇ ಹೋಗಿರುವರು. ಅವರು ಬಂದ ಕೂಡಲೆ ಹೊರಡೋಣ" ಎಂದು ಹಂಸೆಯು ಅನ್ನಲು,

"ಅವರ ದಾರಿ ಕಾಯುವ ಕಾರಣವಿಲ್ಲ; ಯಾಕಂದರೆ, ಅವರು ನಮಗೆ ದಾರಿಯಲ್ಲಿ ಭೆಟ್ಟಿಯಾಗುವರು. 'ನಾನು ಮತ್ತೆ ಏತಕ್ಕೆ ಬರಲಿ? ಆಕೆಯನ್ನು ಕರೆತನ್ನಿರೆಂದರಾಯಿತು' ಎಂದು ಹೇಳಿರುತ್ತಾರೆ."

ಹಂಸೆಯು ಸಿಟ್ಟಿಲ್ಲದೆ ಆ ಮೇಣೆಯನ್ನು ಹತ್ತಿದಳು. ಬೋಯಿಗಳು ಮೇಣೆಯ ಪಡದೆಗಳನ್ನು ಇಳಿಬಿಟ್ಟರು; ಹಾಗು ಅವರು ಆ ಮೇಣೆಯನ್ನು ಹೊತ್ತುಕೊಂಡು ಭರದಿಂದ ನಡೆದರು. ಅಂದು ಮೇಣೆಯಲ್ಲಿ ಕಾಲಿಟ್ಟಾಗಿನಿಂದ ಹಂಸೆಗೆ ಹೇಗೆ ಹೇಗೋ ಅನಿಸಹತ್ತಿತ್ತು. ಬಾಲ್ಯದಲ್ಲಿ ರಾಯಗಡದಲ್ಲಿರುವಾಗ ಅವಳು ಎಷ್ಟೋ ಸಾರೆ ಮೇಣೆಯನ್ನು ಹತ್ತಿದ್ದಳು; ಆದರೆ ಇಂದಿನಂತೆ ಅವಳ ಮನಃಸ್ಥಿತಿಯು ಎಂದೂ ಆಗಿರಲಿಲ್ಲ. ಎಷ್ಟೋ ವೇಳೆ ಯಾವದೂ ಮೇಣೆಯು ನಿಲ್ಲಲಿಲ್ಲ. ಬೋಯಿಗಳನ್ನು ತಡೆದು ತನ್ನ ತಂದೆಯ ಬಿಡಾರವು ಇನ್ನೆಷ್ಟು ದೂರಿದೆಯೆಂದು ಕೇಳುವ ಇಚ್ಛೆಯು ಹಂಸೆಯಲ್ಲಿ ಆಗಾಗ್ಗೆ ಹುಟ್ಟುತ್ತಿತ್ತು; ಆದರೆ ಮೇಣೆಯನ್ನು ನಿಲ್ಲಿಸಿರೆಂದು ಅವಳಿಂದ ಅನ್ನುವದಾಗಲೊಲ್ಲದು. ಎಷ್ಟೋ ಮಾರ್ಗವನ್ನು ಕ್ರಮಿಸಿ ಹೋದ ಬಳಿಕ ಹತ್ತಿಪ್ಪತ್ತು ಜನ ಸ್ವಾರರು ಬಂದು: "ಖಡಾ ರಹೋ!" ಎಂದು ಗದ್ದರಿಸಿ, ಆ ಮೇಣೆಯನ್ನು ತರುಬಿದರು. ಕೂಡಲೆ ಬೋಯಿಗಳು ಮೇಣೆಯನ್ನಿಳಿಸಿ ನಿಂತುಕೊಂಡರು. ಮುಂದೆ ಒಂದೆರಡು ನಿಮಿಷಗಳಲ್ಲೇ "ಬೇಗವತ್ ನಾಬಕಾ ನವಾಬನ ಸ್ತ್ರೀ, [illegible] ಖುಸಾನಖಾನೇಮೋ ಮೇಣಾ ಲೇ ಚಲೋ!" ಎಂದು ಒತ್ತಾಯಿಸಲಾಗಲು, ಬೋಯಿಗಳು ಮತ್ತೆ ಮೇಣೆಯನ್ನು ಹೊತ್ತುಕೊಂಡು ಮಾರ್ಗಕ್ರಮಿಸಹತ್ತಿದರು.

ಈಗ ತನ್ನ ಮೇಣೆಯು ಒಳ್ಳೇ ವೇಗದಿಂದ ಸಾಗಿದ್ದು, ಅದರ ಎಡಬಲಗಳಲ್ಲಿ ಕೆಲವು ಸ್ವಾರರು ನಡೆಯುವಂತೆ ಹಂಸೆಗೆ ಭಾಸವಾಗಹತ್ತಿತ್ತು; ಆದರೆ ಈ ಸ್ವಾರರು ತನ್ನನ್ನು ಎಲ್ಲಿಗೆ ಒಯ್ಯುತ್ತಿರುವರೆಂಬದು ಮಾತ್ರ ಅವಳಿಗೆ ಹೊಳೆಯದಾಯಿತು. ತಾನು ಬೋಯಿಗಳಿಗೆ ಹೇಳಿ, ಮೇಣೆಯನ್ನು ತರುಬಿ, ಇಳಿದು ಬಿಡಬೇಕೆಂದು ಅವಳಿಗೆ ಅನಿಸಿತು; ಆದರೆ ಸಂಗಡ ಹಲವು ಜನ ಸ್ವಾರರ ಪಹರೆಯಿರುತ್ತಿರುವದರಿಂದ, ತನ್ನ ಬೇತು ಸಾಧಿಸಲಾರದೆಂದು ಅವಳು ತೆಪ್ಪಗೆ ಕುಳಿತಿದ್ದಳು. ಆ ಮೇಣೆಯು ಎಷ್ಟೋ ಒಡ್ಡಮುರಿಯ ದಾರಿಗಳನ್ನು ದಾಟಿದ ಬಳಿಕ ಅದನ್ನು ಒತ್ತಟ್ಟಿಗೆ ಕೆಳಗಿಟ್ಟರು; ಹಾಗು ಪಡದೆಗಳನ್ನು ಏರಿಸಿದರು. ಕೂಡಲೆ ಹಂಸೆಯು ಹೊರಗೆ ಬಂದು ನೋಡು

ತ್ತಾಳಿ, ಮೇಣೆಯನ್ನು ಹೊತ್ತವರು ಗಂಡಸರು-ಬೋಯಿಗಳು-ಆಗಿರದೆ, ತಾರ್ತರ ದೇಶದ ಹೆಂಗಸರಾಗಿದ್ದರು. ಅಲ್ಲಿ ಒಳ್ಳೆ ಉಜ್ವಲ ಪ್ರಕಾಶವಿತ್ತು. ಅದೊಂದು ಉತ್ತಮ ರೀತಿಯಿಂದ ಶೃಂಗರಿಸಲ್ಪಟ್ಟ ದಿವಾಣಖಾನೆಯಾಗಿತ್ತು. ಆ ದಿವಾಣಖಾನೆಯ ಎಲ್ಲ ಕಿಟಕಿಗಳಿಗೂ ಜಾಳಿಗೆಯ ಅರಿವೆಯ ಪರದೆಗಳಿದ್ದವು. ಬಾಗಿಲಲ್ಲಿ ಹಿರಿದ ಕತ್ತಿಗಳನ್ನು ಹಿಡಿದಿದ್ದ ತಾರ್ತರಿಯನ್ನರು ಪಹರೆ ಮಾಡುತ್ತಿದ್ದರು. ನೆಲಕ್ಕೆ ಸುಂದರವಾದ ರತ್ನಗಂಬಳಿಯನ್ನು ಹಾಸಿದ್ದರು. ಆ ದಿವಾಣಖಾನೆಯ ಮಧ್ಯದಲ್ಲಿ ಸಂಗಮರವರಿ ಕಲ್ಲಿನಿಂದ ಒಂದು ಸುಂದರವಾದ ಪೀಠವನ್ನು ಕಲ್ಪಿಸಿದ್ದರು. ಅದರ ಸುತ್ತಲೂ ಕೆತ್ತು, ಸುಸರಿಯ ಕೆಲಸ ಮಾಡಿದ ಬೆಳ್ಳಿಯ ಪಾತ್ರೆಗಳನ್ನಿರಿಸಿದ್ದರು. ಅವುಗಳಲ್ಲಿ ಚಿತ್ರ-ವಿಚಿತ್ರ ಬಣ್ಣದ ಸೌಗಂಧಿಕ ಪುಷ್ಪಗಳನ್ನು ತುಂಬಿದ್ದರು. ಹಂಸೆಯು ಆ ಸುಖಾಲನ್ನು ನಿರೀಕ್ಷಿಸಿ ತನ್ನ ತಂದೆಯು ಎಲ್ಲಿರುವನೆಂಬುದನ್ನು ನೋಡಹತ್ತಿದಳು. ಅವನು ಅಲ್ಲೆಲ್ಲಿಯೂ ಕಾಣದಾಗಲು, "ನನ್ನ ತಂದೆಯೆಲ್ಲಿ? ನಾನು ಎಲ್ಲಿರುವೆನು?" ಎಂದು ಪ್ರಶ್ನೆ ಮಾಡಿದಳು. ಕೂಡಲೆ ಒಬ್ಬ ತಾರ್ತರಿಯು ತನ್ನ ಮೂಗಿನ ಮೇಲೆ ಬೊಟ್ಟಿಟ್ಟು "ಸುಮ್ಮನಿರೆ"ಂದು ಹಂಸೆಗೆ ತಿಳಿಸಿದಳು. ಆಗಲಂತೂ ಹಂಸೆಯು ಮತ್ತಿಷ್ಟು ಗೊಂದಲದಲ್ಲಿ ಬಿದ್ದಳು. ಕ್ಷಣಾರ್ಧದಲ್ಲಿ ಆ ಮೇಣೆಯು ಅಲ್ಲಿಂದ ಸಾಗಿಸಲ್ಪಟ್ಟಿತು. ಹಂಸೆಯೊಬ್ಬಳೇ ಆ ವಿಶಾಲವಾದ ದಿವಾಣಖಾನೆಯಲ್ಲುಳಿದಳು!

ಮುಂದೆ ಕೆಲ ಹೊತ್ತಿನ ಮೇಲೆ ಒಬ್ಬ ವೃದ್ಧ ಸ್ತ್ರೀಯು ಅಲ್ಲಿಗೆ ಬಂದಳು. ಪಹರೆಯ ಮೇಲಿನ ತಾರ್ತರಿಯರು ದೊಡ್ಡ ದೊಡ್ಡ ಸಲಾಮು ಮಾಡಿ, ಅವಳನ್ನು ಸನ್ಮಾನಿಸಿದರು. ಆ ವೃದ್ಧಳು ತುಸ ಹೆಚ್ಚು-ಕಡಿಮೆ ೬೦ ವಯಸ್ಸಿನವಳಾಗಿದ್ದಳು. ಇಷ್ಟು ಮುದುಕಿಯಾಗಿದ್ದರೂ, ಅವಳ ಮೈಮೇಲಿನ ವಸ್ತ್ರಾಭರಣಗಳು ಬಹು ಬೆಲೆಯುಳ್ಳವಾಗಿದ್ದವು. ಅವಳು ಒಳಗೆ ಬಂದವಳೇ ಹಂಸೆಯನ್ನು ದಿಟ್ಟಿಸಿ ನೋಡಿ, "ಇವಳು ಒಳ್ಳೆ ಸುಂದರಳಿರುವಳೆಂಬ ಬಗ್ಗೆ ಸಂಶಯವೇ ಇಲ್ಲ." ಎಂದು ತನ್ನಷ್ಟಕ್ಕೆ ತಾನೇ ಅಂದುಕೊಂಡಳು

ಬಳಿಕ ಅವಳು ಕಣ್ಣು ಸನ್ನೆ ಮಾಡಲು, ತಾರ್ತರಿಯು ಹೊರಗೆ ನಿಂತಿದ್ದ ಜಮಾಲಖಾನನನ್ನು ಒಳಗೆ ಬರಗೊಟ್ಟಳು. ಆಗ ಆ ಬೇಗಮಳು ಖಾನನನ್ನು ಕುರಿತು:-"ಖಾನಸಾಹೇಬ, ನೀವಂದಂತೆ ಇವಳು ಸುಂದರಿಯಿರುವದು ನಿಜವು. ಇವಳು ನನ್ನ ಅಕಬರನಿಗೇ ತಕ್ಕವಳು. ಅವನು ಸದ್ಯಕ್ಕೆ ಇರಾಣಕ್ಕೆ ಓಡಿ

ಹೋಗಿಸುವನಷ್ಟೆ? ನಾನು ಅವನನ್ನು ಕರೆಯಿಸುವ ಯೋಜನೆ ನಡೆಸಿರುತ್ತೇನೆ.

“ಬೇಗಮ್ ಸಾಹೇಬ, ಹಾಗಾದರೆ ಈ ಸುಂದರಿಯು ಬೇರೆ ಯಾರೊಬ್ಬರ ಕಣ್ಣಿಗೂ ಬೀಳದಂತೆ ವ್ಯವಸ್ಥೆಯಾಗಬೇಕು” ಎಂದು ಜಮಾಲಖಾನನು ನುಡಿಯಲು,

“ಇನ್ನು ಆ ಬಗ್ಗೆ ಯೋಚನೆ ಬೇಡ. ನಮ್ಮ ಅಕಬರನ ಹೊರತು ಮತ್ತಾವ ಶಹಜಾದನ ಕಣ್ಣಿಗೂ ಬೀಳಗೊಡದಂತೆ ನಾನು ಇವಳನ್ನು ನನ್ನ ಖಾಸ ವ್ಯವಸ್ಥೆಯಲ್ಲಿರಿಸುತ್ತೇನೆ; ಹಾಗು ನಿಮ್ಮ ವಾಂಛಿತದಂತೆ ಬಾದಶಹನಿಗೆ ಹೇಳಿ ನಿಮ್ಮ ಕೆಲಸವನ್ನು ಮಾಡಿಕೊಡುತ್ತೇನೆ.”

ಹಂಸೆಯನ್ನು ನೋಡ ಬಂದ ಆ ಬೇಗಮೆಯು ಔರಂಗಜೇಬ ಬಾದಶಹನ ಹಿರೇ ಮಗಳಾಗಿದ್ದು, ಅವಳಿಗೆ “ಝಿನತ್ ಉನ್ನೀಸಾ ಉರ್ಫ ಬಾದಶಹ ಬೇಗಮ್” ಎಂಬ ಅಭಿಧಾನವಿತ್ತು. ಅರವತ್ತರ ಮನೆಗೆ ಬಂದಿದ್ದರೂ ಅವಳಿನ್ನೂ ಲಗ್ನವಾಗಿದ್ದಿಲ್ಲ. ಅವಳು ಅವಿವಾಹಿತಳೇ-ಕುಮಾರಿಯೇ-ಆಗಿದ್ದಳು. ಬಾದಶಹನ ಝನಾನಖಾನೆಯಲ್ಲಿ ಆಕೆಯೇ ಸರ್ವ ತಂತ್ರ ಸ್ವತಂತ್ರಳಾದ ಸರ್ವಾಧಿಕಾರಿಣಿಯಾಗಿದ್ದಳು.

ಬಳಿಕ ಜಮಾಲಖಾನನು ಅನ್ನುತ್ತಾನೆ:--“ಬೇಗಮ್ ಸಾಹೇಬ, ಈ ಹುಡುಗಿಯು ಬಹು ಕಟ್ಟುನಿಟ್ಟಿನ ಸ್ವಭಾವದವಳಾಗಿರುತ್ತಾಳೆ. ಇವಳ ತಂದೆಯು ಕುಲಗೆಟ್ಟು ಮುಸಲ್ಮಾನನಾದನೆಂದು, ಇವಳೂ ಇವಳ ತಾಯಿಯೂ ಅವನನ್ನು ತಮ್ಮ ಮನೆಯಲ್ಲಿ ಕೂಡ ಬರಗೊಡುವದಿಲ್ಲ. ಇವಳ ಊಟ-ಉಡಿಗೆಯ ವ್ಯವಸ್ಥೆಯು ತಮ್ಮ ವಿಶ್ವಾಸದ ಮರಾಟರಿಂದಲೇ ಆಗಬೇಕು.”

“ಖಾನಸಾಹೇಬ, ನೀವು ಆ ಬಗ್ಗೆ ಕೊಂಚವೂ ಚಿಂತಿಸಬೇಡಿರಿ”

---

## ಝೇಬುನ್ನಿಸೆಯ ಹಟ

ಆ ಝನಾನಖಾನೆಯಲ್ಲಿ ಹಂಸೆಯ ಗತಿಯೇನಾಯಿತೆಂಬದನ್ನು ತಿಳಿಸುವ ಮೊದಲು, ‘ಬಾದಶಹ ಬೇಗಮ್’ ಅಂದರೆ ಯಾರು? ಅರವತ್ತರ ಮನೆಗೆ ಬಂದಿದ್ದರೂ ಅವಳು ಕುಮಾರಿಯಾಗಿ ಏಕೆ ಉಳಿದ್ದಳು? ಮುಂತಾದ್ದನ್ನು ತಿಳಿಸುವಾಗ, ಔರಂಗಜೇಬನ ಕುಟುಂಬವನ್ನೇ ವರ್ಣಿಸಬೇಕಾಗುವದರಿಂದ, ಅದನ್ನೇ ಇಲ್ಲ ಸಂಕ್ಷಿಪ್ತವಾಗಿ ಬರೆಯುವೆವು. ಔರಂಗಜೇಬನಿಗೆ ಒಟ್ಟಿಗೆ ನಾಲ್ಕು ಜನ

ಹೆಂಡಂದಿರಿದ್ದರು. ಮೊದಲನೇ ಹೆಂಡತಿಯ ಹೆಸರು ದಿಲ್‌ರಾಸ ಬಾನೂ. ಈಕೆಗೇ ಬೇಗಮ್ ಎಂಬ ಸಂಜ್ಞಾ ಇದ್ದಿತು. ಇವಳು ಬಾಣಂತಿ ಬೇನೆಯಿಂದ ೧೬೫೭ ರಲ್ಲಿ ಔರಂಗಾಬಾದದಲ್ಲಿ ತೀರಿಕೊಂಡಳು. ಇವಳಿಗೆ ೧ ಝೇಬುನ್ನಿಸ್ಸಾ, ೨ ಝಿನತ್ತುನ್ನಿಸಾ ಉರ್ಫ ಪಾದಶಹಾ ಬೇಗಮ, ೩ ಝುಬ್ದತ್ತುನ್ನಿಸಾ, ೪ ಮಹಮ್ಮದ ಅಜ್ಜಮ್, ೫ ಮಹಮ್ಮದ ಅಕಬರ ಎಂಬ ಐದು ಜನ ಮಕ್ಕಳಾಗಿದ್ದರು. ೧ ಝೇಬುನ್ನಿಸಯು ಕಡೆತನಕ ಅವಿವಾಹಿತ (ಕುಮಾರಿಕೆಯೇ) ಳೇ ಆಗಿದ್ದಳು. ಈಕೆಯು ಸ್ವಭಾವದಿಂದ ಕವಿಯಾಗಿದ್ದಳು. ಈಕೆಯು ೧೭೦೨ ರಲ್ಲಿ ದಿಲ್ಲಿಯಲ್ಲಿ ತೀರಿಕೊಂಡಳು. ೨ ಝಿನತ್ತುನ್ನಿಸಯೂ ಅವಿವಾಹಿತಳೇ. ಇವಳು ೧೭೨೧ ರಲ್ಲಿ ತೀರಿಕೊಂಡಳು. ೩ ಝುಬ್ದತ್ತುನ್ನಿಸೆಯು ವಿವಾಹಿತಳು. ಇವಳು ೧೭೦೭ ರಲ್ಲಿ ತೀರಿಕೊಂಡಳು. ೪ ಮಹಮ್ಮದ ಅಜ್ಜಮನೂ ೧೭೦೭ ರಲ್ಲೇ ತೀರಿಕೊಂಡನು. ಇವನಿಗೆ ಬೇದರಬಕ್ತ, ವಲ್ಲೀಜಾ ಮತ್ತು ಅಲಿತೇಹಾರ ಎಂಬ ಮೂರು ಜನ ಮಕ್ಕಳಿದ್ದರು. ೫ ಮಹಮ್ಮದ ಅಕಬರನು ಇರಾಣಕ್ಕೆ ಓಡಿಹೋದಾಗ ಅಲ್ಲಿಯೇ ೧೭೦೪ ರಲ್ಲಿ ತೀರಿಕೊಂಡನು. ಎರಡನೇ ಹೆಂಡತಿಯಾದ ರಹಮತುನ್ನಿಸಾ ಉರ್ಫ ನಬಾಬಬಾಯಿಯು ಕಾಶ್ಮೀರದ ರಾಜಪೂತರ ಮಗಳು. ಈಕೆಯು ದಿಲ್ಲಿಯಲ್ಲಿ ೧೬೯೧ ರಲ್ಲಿ ಮಡಿದಳು. ಇವಳಿಗೆ ೬ ಮಹಮ್ಮದ ಸುಲ್ತಾನ, ೭ ಮಹಮ್ಮದ ಮುಅಜ್ಜಮ ಉರ್ಫ ಶಹಾ ಆಲಮ, ೮ ಬದ್ರುನ್ನಿಸಾ ಎಂಬ ಮೂರು ಜನ ಮಕ್ಕಳಾದರು. ೬ ಮಹಮ್ಮದ ಸುಲ್ತಾನನು ಸೆರೆಮನೆಯಲ್ಲೇ ೧೬೭೭ ರಲ್ಲಿ ತೀರಿಕೊಂಡನು. ೭ ಶಹಾ ಆಲಮನು ಮುಂದೆ ಬಹಾದ್ದೂರ ಶಹನೆಂದು ಬಾದಶಹನಾಗಿ ೧೭೧೨ರಲ್ಲಿ ಗತಿಸಿದನು. ಇವನಿಗೆ ಮೋಇಝು, ಅಜೀಮ, ಖುಜಿಸಾ ಮತ್ತು ನಸೀ ಎಂಬ ನಾಲ್ಕು ಜನ ಮಕ್ಕಳಿದ್ದರು. ೮ ಬದ್ರುನ್ನಿಸಯೂ ಅವಿವಾಹಿತಳೇ ಆಗಿದ್ದು, ೧೬೭೦ ರಲ್ಲಿ ತೀರಿಕೊಂಡಳು. ಮೂರನೇ ಹೆಂಡತಿಯಾದ ಔರಂಗಾಬಾದೀಮಹಲ ಎಂಬವಳು ೧೬೮೮ರಲ್ಲಿ ವಿಜಾಪುರದಲ್ಲಿ ಪ್ಲೇಗು ಬೇನೆಗೆ ಆಹುತಿಯಾದಳು. ಇವಳಿಗೆ ೯ ಮಿಹರುನ್ನಿಸಾ ಎಂಬೊಬ್ಬಳೇ ಮಗಳಿದ್ದಳು. ಇವಳು ವಿವಾಹಿತೆ. ೧೭೦೬ ರಲ್ಲಿ ತೀರಿಕೊಂಡಳು. ನಾಲ್ಕನೇ ಹೆಂಡತಿಯಾದ ಉದೇಪುರಿಯು ಕ್ರೈಸ್ತ ಧರ್ಮದವಳು. ಇವಳಿಗೆ ೧೦ ಕಾಮಬಕ್ಷನೆಂಬ ಒಬ್ಬನೇ ಮಗನಿದ್ದನು. ಈತನು ೧೭೦೯ ರಲ್ಲಿ ಮಡಿದನು. ಹೀಗಿರೆ ಈತನ ತಾಯಿಯೂ ಜಗಲ್ಲ

ಸೆರೆಯ ಅಮಲಿನಲ್ಲಿಯೇ ಇರುತ್ತಿದ್ದರು. ಝನಾನಖಾನೆಯಲ್ಲಿ ರಾಜಕನ್ಯೆಯರ ಮಹಾತ್ಮ್ಯೆಯೇ ಹೆಚ್ಚು. ಅವರ ಲಗ್ನಗಳಾಗುವದೇ ದುಸ್ತರವಾಗಿತ್ತು. ರಜಪೂತ ರಾಣಿಯರ ಹೊಟ್ಟೆಯ ಹೆಣ್ಣುಮಕ್ಕಳ ಲಗ್ನಗಳು ರಜಪೂತ ರಾಜಪುತ್ರರೊಡನೆ ಒಮ್ಮೊಮ್ಮೆ ಆಗುತ್ತಿದ್ದವು; ಆದರೆ ಉಳಿದ ಹುಡುಗೆಯರಿಗೆ ತಕ್ಕ ವರಗಳು ಸಿಗದ್ದರಿಂದ, ಅವರು ಆಜನ್ಮ ಕುಮಾರಿಯರೇ ಆಗಿದ್ದರು. ಔರಂಗಜೇಬನ ೫ ಜನ ಹೆಣ್ಣು ಮಕ್ಕಳಲ್ಲಿ ಮೂವರು ಹುಡುಗೆಯರು ಕಡೆತನಕ ಅವಿವಾಹಿತರೇ ಆಗಿದ್ದರು. ಅದರಿಂದ ಝನಾನಖಾನೆಯಲ್ಲಿ ಹಗಲೆಲ್ಲ ಅನಾಚಾರಗಳೂ ಗೊಂದಲಗಳೂ ಉಂಟಾಗುತ್ತಿದ್ದವು. ಶಹಾಜಹಾನ ಪಾದಶಹನ ಹೆಣ್ಣುಮಕ್ಕಳ (ಅಂದರೆ ಔರಂಗಜೇಬನ ಅಕ್ಕ-ತಂಗಿಯರ) ಅನಾಚಾರದ ಸಂಗತಿಯಂತೂ ಜಗಜ್ಜಾಹೀರಾಗಿದೆ!

ಹಿಂದೆ ಹೇಳಿದಂತೆ ಜಮಾಲಖಾನನು ಪಾದಶಹಾ ಬೇಗಮಳ ಬಳಿಯಿಂದ ಹೊರಟು ಹೋಗಲು, ಬೇಗಮಳು ತನ್ನ ಏಸೂ ಎಂಬ ಹೆಸರಿನ ಒಬ್ಬ ಮರಾಟಾ ಜಾತಿಯ ದಾಸಿಯನ್ನು ಹಂಸೆಯ ಊಟ-ಉಡಿಗೆ ಹಾಗು ಸಹಚರ್ಯಕ್ಕಾಗಿ ನಿಯಮಿಸಿದಳು. "ಏಸೂ, ನೀನು ಈಕೆಗೆ ಯಾವ ಕೊರತೆಯೂ ಆಗದಂತೆ ನೋಡಿಕೊಳ್ಳತಕ್ಕದ್ದು. ಈಕೆಯನ್ನು ನಮ್ಮ ಅಕಬರನಿಗೆಂದು ಮೀಸಲಾಗಿ ಇರಿಸಬೇಕಾಗಿದೆ. ಈ ಹುಡುಗೆಯು ಇಲ್ಲಿರುವಳೆಂಬ ಸುದ್ದಿಯು ಅನ್ಯರಾರಿಗೂ ಹತ್ತಕೂಡದು. ಈ ಡೇರೆಯ ಸುತ್ತಲೂ ಸದಾ ನಗ್ನಖಡ್ಗಧಾರಿಣಿಯರಾದ ತಾರ್ತರಿಯರ ಪಹರೆಯಿರುವದು. ನೀನೊಬ್ಬಳೇ ಇಲ್ಲಿಂದ ಹೊರ-ಒಳಗೆ ಅಡ್ಡಾಡಬಹುದು. ಅದೂ ನನ್ನ ಅಂಕಿತದ ಈ ಉಂಗುರವನ್ನು ಪಹರೆಯವರಿಗೆ ತೋರಿಸಿದರೆ ಮಾತ್ರ ಅವರು ನಿನ್ನನ್ನು ಅಡ್ಡಾಡಗೊಡುವರು. ಕಾರಣ ಏಸೂ, ನೀನು ಈ ಉಂಗುರವನ್ನು ನಿನ್ನಲ್ಲಿ ಒಳ್ಳೇ ಜೋಕೆಯಿಂದಿಟ್ಟುಕೊಂಡಿರು. ಈಕೆಗೇನಾದರೂ ಬೇಕಾದರೆ, ನೀನು ನನಗೆ ಆಗಾಗ್ಗ ತಿಳಿಸು. ನನ್ನ ಹೊರತು ಅನ್ಯರಾರ ಮುಂದೆಯೂ ನೀನು ಈ ಹುಡುಗೆಯ ಸುದ್ದಿಯನ್ನೆತ್ತಕೂಡದು. ಹಾಗೆ ನೀನು ಮಾಡಿದ್ದಾದರೆ, ನಿನ್ನ ಗತಿಯು ನಿನನಾಗುವದು. ಜೋಕೆ!" ಎಂದು ಬೇಗಮಳು ಅವಳಿಗೆ ಕಟ್ಟಪ್ಪಣೆ ಮಾಡಿದಳು.

ಕೆಲಹೊತ್ತಿನ ವರೆಗೆ ಹಂಸೆಯೊಬ್ಬಳೇ ಆ ಭವ್ಯವಾದ ಡೇರೆಯಲ್ಲಿ ಕುಳಿತು, ನಾನಾಬಗೆಯ ವಿಚಾರಗಳಲ್ಲಿ ಮಗ್ನಳಾಗಿರಲು, ಏಸಿಯು ತನ್ನಗೆ

ಬಂದು ಅವಳ ಮುಖಮಾರ್ಜನ, ಸ್ನಾನ-ಪಾನ, ಹೇಳಲು-ಬೈತಲ, ಊಟ-ಉಡಿಗೆಗಳ ವ್ಯವಸ್ಥೆ ಮಾಡಹತ್ತಿದಳು. ಈಕೆಯಲ್ಲಿ ವಿಶ್ವಾಸವಿಡಬೇಕೋ-ಬಾರದೋ? ಎಂಬ ಬಗ್ಗೆ ಮೊದಮೊದಲು ಹಂಸೆಗೆ ದಿಗಿಲು ಬಿದ್ದಿತು; ಆದರೂ ಅನಿವಾರ್ಯಹಕ್ಕಾಗಿ ಅವಳು ಏಸಿಯೊಡನೆ ಮಾತು-ಕಥೆಯಾಡಿ, ತನ್ನ ಜೀವಕ್ಕೆ ತುಸ ಆರಾಮವನ್ನುಂಟುಮಾಡಿಕೊಳ್ಳಹತ್ತಿದಳು. ಕೆಲ ದಿನ ಗಳಲ್ಲಿಯೇ ಏಸೂಬಾಯಿಯು ಹಂಸೆಯ ಜೀವದ ಗೆಳತಿಯಾದಳು. ಅವ ರಿಬ್ಬರಿಗೆ ತಮ್ಮ ಊಟ-ಪಾಟಗಳ ವ್ಯವಸ್ಥೆಯು ಹೊರತು ಬೇರೆ ಕೆಲಸ ವೇನೂ ಇರಲಿಲ್ಲ. ಅದರಿಂದ ಅವರು ಒಬ್ಬರೊಬ್ಬರಿಗೆ ತಮ್ಮ ಹಿತಗುಜ ಗಳನ್ನು ಗೌಪ್ಯರೀತಿಯಿಂದ ತಿಳಿಸಲಾರಂಭಿಸಿದರು. ಹಂಸೆಯ ಸ್ಥಿತಿಯನ್ನು ಕೇಳಿ, ಏಸೂಬಾಯಿಗೆ ಕೆಲದಿನಗಳಲ್ಲಿಯೇ ಆಕೆಯ ವಿಷಯವಾಗಿ ಕನಿಕರ ಹುಟ್ಟಿತು.

"ಅಲ್ಲಾ ಹೋ ಅಕಬರ!

ಲಾ ಇಲಾಹ್ ಉಲ್ಲಾಲ್ಲಾಹ್! ಮಹಮ್ಮದುರ್ರಸುಲುಲ್ಲಾಹ್!"

ಎಂದು ಉತ್ತರ ರಾತ್ರಿಯ ಕೊನೆಗೆ ಮೋಅಜ್ಜನು (ಪ್ರಾರ್ಥನೆಗೆ ಕರೆಯು ವವನು) ಅಜಾನ ಮಾಡಲಿಕ್ಕೆ (ಕೂಗಿಕೊಳ್ಳಲಿಕ್ಕೆ) ಪ್ರಾರಂಭಿಸಿದನು. ಅದು ಪ್ರಶಾಂತ ಸಮಯವಾದ್ದರಿಂದ, ಆ ಪ್ರಾರ್ಥನೆಯ ಕೂಗು ಬಾದಶಹನ ದಂಡಿನ ಛಾವಣಿಯೊಳಗಿನ ಈ ತುದಿಯಿಂದ ಆ ತುದಿಯ ವರೆಗೆ ಎಲ್ಲರಿಗೂ ಸಹಜವಾಗಿ ಕೇಳಿಸುತ್ತಿತ್ತು. "ಪರಮೇಶ್ವರನು ದೊಡ್ಡವನಿದ್ದಾನೆ! ಅವನು ಒಬ್ಬನೇ ಇರುತ್ತಾನೆ! ಮತ್ತು ಆತನ ಪ್ರೇಷಿತನು ಮಹಮ್ಮದನಿರುತ್ತಾನೆ. ಆತನ ಪ್ರಾರ್ಥನೆ ಮಾಡುವ ಸಲುವಾಗಿ ಎಲ್ಲರೂ ಬನ್ನಿರಿ'' ಎಂಬ ಕೂಗನ್ನು ಕೇಳಿದೊಡನೆ, ಔರಂಗಜೇಬ ಬಾದಶಹನು ತನ್ನ ಶಯ್ಯಾಶಾಮಿಯಾನ(ಮಲ ಗುವ ಡೇರೆ) ದೊಳಗಿಂದ ಹೊರಬೀಳುವನು. ಬಾದಶಹನು ಇನ್ನು ಪ್ರಾರ್ಥ ನೆಗೆ ಹೋಗುವನೆಂಬದನ್ನು ತಿಳಿದ ಎಲ್ಲ ಪಹರೆಯವರು ಆಗ ಒಳ್ಳೇ ಎಚ್ಚರ ದಿಂದ ಪಹರೆ ಮಾಡಲುದ್ಯುಕ್ತರಾಗುವರು. ಬಾದಶಹನು ಅವರಾರ ಕಡೆಗೂ ಕಣ್ಣೆತ್ತಿ ಕೂಡ ನೋಡದಂತೆ, ತನ್ನ ಜೀರ್ಣ-ಶೀರ್ಣದೇಹವನ್ನು ಊರ ಗೋಲಿನ ಆಧಾರದಿಂದ ಸಾಗಿಸುತ್ತ ಪ್ರಾರ್ಥನೆಗೆ ಹೋಗುವನು. ಆ ಪ್ರಾತಃ ಕಾಲದ ನಮಾಜಿಗೆ ಎಲ್ಲ ಅಮೀರ-ಉಮರಾವರೂ, ಸರದಾರ-ಶಹಜಾದರೂ ಬರಲೇಬೇಕೆಂಬ ಕಟ್ಟಪ್ಪಣೆ ಇದ್ದಿತು. ಬಾದಶಹನು ಡೇರೆಯನ್ನು ಪ್ರವೇಶಿ

ಸಿದ ಕೂಡಲೆ ಅವರೆಲ್ಲರೂ ವಜೂ (ಕೈಕಾಲು-ಮೋರೆ ತೊಳಕೊಂಡು) ಮಾಡಿ, ತಮ್ಮ ತಮ್ಮ ಸ್ಥಾನಗಳಿಗೆ ಬಂದು ಮೊಣಕಾಲೂರಿ ನಿಲ್ಲುತ್ತಿದ್ದರು. ಬಳಿಕ ಸ್ವತಃ ಬಾದಶಹನು ಪೇಜ ಇಮಾಮ(ಎಲ್ಲರ ಮುಂದೆ ನಿಂತು ನಮಾಜು ಮಾಡಿಸುವವ)ನಾಗಿ, ರಕಾತ (ಕುರಾಣ) ವನ್ನನ್ನಲಿಕ್ಕೆ ಪ್ರಾರಂಭಿಸುತ್ತಿದ್ದನು. ಸರ್ವಸಾಧಾರಣವಾಗಿ ಮೂರು ಸಾರೆ ರಕಾತವನ್ನಂದ ಬಳಿಕ, ವಜೀಫಾ (ಕಡೆಯ ಪ್ರಾರ್ಥನೆ) ಪ್ರಾರಂಭವಾಗುತ್ತಿತ್ತು. ಹೀಗೆ ಔರಂಗಜೇಬನು ದಿನಕ್ಕೆ ಐದು ಸಾರೆ ತನ್ನ ವಜೀರ, ಅಮೀರ, ಉಮರಾವರೊಡನೆ ತಪ್ಪದೆ ನಮಾಜು ಮಾಡುತ್ತಿದ್ದನು. ನಮಾಜಿನ ಕಾಲಕ್ಕೆ ಬಾದಶಹನು ಛಾವಣಿಯಲ್ಲಿರಲಿ, ಅರಮನೆಯಲ್ಲಿರಲಿ ಅಥವಾ ದುಸ್ತರವಾದ ರಣರಂಗದಲ್ಲಿರಲಿ. ಆತನ ನಮಾಜು ಎಂದೂ ತಪ್ಪತಕ್ಕದ್ದಲ್ಲ; ಆದರೆ ಇತ್ತೀಚೆಗೆ ಮಾತ್ರ ಆ ಪ್ರಾರ್ಥನೆಯ ಡೇರೆಯು ಹಾಳು ಹಾಳು ಸುರಿಯಹತ್ತಿತ್ತು. ಒಂದೇ ಸಮನೆ ಇಪ್ಪತ್ತು ವರ್ಷಗಟ್ಟಲೆಯ ಮಹಾಯುದ್ಧವು ನಡೆದುದರಿಂದ, ಎಲ್ಲ ಸರದಾರರೂ ಅಮೀರ-ಉಮರಾವರೂ, ದಂಡಿನ ಶಿಪಾಯಿಗಳೂ ಬೇಸತ್ತು ಬೇಜಾರುಗೊಂಡಿದ್ದರು. ಅದರಿಂದ ಬಾದಶಹನ ಹುಕುಮು ಅಷ್ಟೊಂದು ಸರಿಯಾಗಿ ಪಾಲಿಸಲ್ಪಡುತ್ತಿರಲಿಲ್ಲ; ಆದರೂ ಯುದ್ಧವಿಷಯಕವಾಗಿ ತನಗೆಷ್ಟು ಪ್ರೇಮವಿದೆಯೆಂಬದನ್ನೂ, ಪೈಗಂಬರರ ವಿಷಯವಾಗಿ ತಾನೆಷ್ಟು ನಿಷ್ಠಾವಂತನಿರುವೆನೆಂಬದನ್ನೂ ಆ ಬಾದಶಹನು ತನ್ನ ಕೃತಿಯಿಂದ ವಿಶದಪಡಿಸುತ್ತಿದ್ದನು. ಬಾದಶಹನ ಆ ಕಾಲದ ಸ್ಥಿತಿಯನ್ನು ಸುಪ್ರಸಿದ್ಧ ಇತಿಹಾಸಕಾರನಾದ ಮನೂಚಿಯು ಬಹು ಚನ್ನಾಗಿ ಬರೆದಿಟ್ಟಿರುತ್ತಾನೆ:—

"ಔರಂಗಜೇಬ ಬಾದಶಹನ ಮನಸ್ಸಿನಲ್ಲಿ ಯಾವಾಗಲೂ ಯುದ್ಧದ ವಿಷಯವೇ ವಿಷಯವು. ಆತನು ಪಲ್ಲಕ್ಕಿಯೊಳಗೆ ಕುಳಿತು ಹೋಗುತ್ತಿರುವಾಗ ತನ್ನ ಕತ್ತಿಯನ್ನು ಆಗಾಗ್ಗೆ ಒರೆಯಿಂದ ಹಿರಿಹಿರಿದು ಒರಸುವನು; ಅತ್ತಿತ್ತ ಸುಮ್ಮನೆ ಕೈನೀಡುವನು; ಮತ್ತೆ ಅದನ್ನು ಸುಮ್ಮನೆ ಒರೆಗಾಣಿಸುವನು. ಆ ಎಲ್ಲ ಲಕ್ಷಣಗಳಿಂದ ತಾನು ಇನ್ನೂ ಯುದ್ಧಕ್ಕೆ ತತ್ಪರನಾಗಿರುವನೆಂದು ವ್ಯಕ್ತಗೊಳಿಸುತ್ತಿದ್ದನು. ವೃದ್ಧಾಪ್ಯದ ಮೂಲಕ ಆತನಿಗೆ ಹೆಚ್ಚಾಗಿ ದಣುವಾಗಿದೆ. ಗೋಣು ಬೊಗ್ಗಿ ಹೋಗಿದೆ. ಆತನ ಅಚ್ಚ ಬಿಳೀ ಗಡ್ಡವು ಶುಭ್ರ ಚಾಮರದಂತೆ ಹೃದಯಪ್ರದೇಶವನ್ನಲಂಕರಿಸಿದೆ. ಆತನ ಕೈಕೆಳಗಿನ ಅಮುಲ್ದಾರರು ಅವನ ಬಳಿಯಲ್ಲಿರುವ ವರೆಗೆ ಆತನ ಆಜ್ಞೆಯನ್ನು ಪಾಲಿಸು

ವಂತೆ ನಟಿಸುತ್ತಿದ್ದರೇ ಹೊರತು, ಕಣ್ಣಾರೆಯಾದ ಕೂಡಲೆ ಅವನ ನಿಂದೆಯಲ್ಲಿ ಮಗ್ನರಾಗಿ ಬಿಡುತ್ತಿದ್ದರು. ಅವರು ತನ್ನ ಇಚ್ಛಿತದಂತೆ ನಡೆಯುವದಿಲ್ಲೆಂತಲೇ ಆತನು ಸ್ವತಃ ಸಮರಾಂಗಣಕ್ಕೆ ತೆರಳುತ್ತಿದ್ದನು! ಆತನು ಯಾವಾಗಲೂ ಈಶ ಚಿಂತನದಲ್ಲಿಯೇ ಇರುತ್ತಿರುವಂತೆ ನಟಿಸುತ್ತಿದ್ದನು. ರಮುಜಾನದ ಉಪವಾಸದಲ್ಲಿ ಇಡಿ ೨೪ ತಾಸುಗಳ ವರೆಗೆ ನೆಲದ ಮೇಲೆ ಬಿದ್ದುಕೊಂಡು, ಒಂದೇಸವನೆ ಭಜನವನ್ನನ್ನುತ್ತಿದ್ದನು. ಆಗ ರಾಣಿ ಉದೇಪುರಿಯು ಅವನ ಬಳಿಗೆ ಹೋಗಿ ಅವನನ್ನೆಬ್ಬಿಸಲು, ಆತನು ಸಿಟ್ಟಿನ ಆವಿರ್ಭಾವವನ್ನು ತಂದು: 'ನನ್ನ ಪರಮಾನಂದದಲ್ಲಿ ನನಗೇಕೆ ವ್ಯತ್ಯಯವನ್ನುಂಟು ಮಾಡುತ್ತಿರುವೆ? ನನಗಿನ್ನು ಈ ಲೋಕದ ಸೌಖ್ಯವು ಓಕರಿಕೆಯಿಟ್ಟಿದೆ!' ಎಂದಂದು ಆ ಬಾದಶಹನು ತನ್ನ ಮಿತಿಮೀರಿದ ಭಕ್ತತನವನ್ನು ತೋರಿ, ಭೋಳೇ ಭಾವಿಕರಿಂದ, ಒಳ್ಳೇ ಸತ್ಪುರುಷನೆಂದೆನಿಸಿಕೊಳ್ಳುತ್ತಿದ್ದನು."

ಬಾದಶಹನು ಎಷ್ಟೋ ಕಪಟವನ್ನಾಚರಿಸಿದರೂ, ವಸ್ತುಸ್ಥಿತಿಯು ಮುಚ್ಚುಮರೆಯಾಗುವಂತಿರಲಿಲ್ಲ. ರಾಜಾರಾಮ ಮಹಾರಾಜರ ನಿಧನ ಕಾಲದಿಂದಲೇ ಆತನ ಆಯುಷ್ಯದೊಳಗಿನ ಕಡು ದುಃಖದ ಭಾಗಕ್ಕೆ ಪ್ರಾರಂಭವಾಗಿತ್ತು. ತನ್ನ ಕೈಕೆಳಗಿನ ಜನರು ತನ್ನ ಹುಕುಮುಗಳನ್ನು ಮಾನ್ಯ ಮಾಡುವದಿಲ್ಲೆಂಬದನ್ನು ತಿಳಿದೂ ತಿಳಿದ ಆ ೮೫ ವಯಸ್ಸಿನ ಮುಪ್ಪಿನ ಮುದುಕನು, ಮರಾಟರ ದುರ್ಗಗಳನ್ನು ವಶಪಡಿಸಿಕೊಳ್ಳಲಿಕ್ಕೆ ತಾನು ಸ್ವತಃ ಸಮರಾಂಗಣಕ್ಕೆ ಹೊರಟಿದ್ದನೆಂದ ಬಳಿಕ, ಆತನ ಕಾಟಕಾವಸ್ಥೆಯನ್ನೇನು ವರ್ಣಿಸುವದಿದೆ? ದೇಶದಲ್ಲಿ ಮಹಾ ಬರಗಾಲ. ಖಂಡಣೆಯ ವಸೂಲು ನಿಂತು ಬಿಟ್ಟಿದೆ. ದಂಡಿನ ಸಂಬಳಗಳಂತೂ ಹೆಚ್ಚಾಗಿ ಬಾಕಿ ಉಳಿದಿವೆ. ಯಾರ ಕಡೆಯಿಂದಲೂ ಹಣಬರಲೊಲ್ಲದು. ಖರ್ಚಿನ ಬಾಬಂತೂ ನಿಲ್ಲುವಂತಿರಲಿಲ್ಲ. ಅದರಿಂದ ಆ ವೃದ್ಧ ಬಾದಶಹನು ಬಹು ಪೇಚಿಗೆ ಬಿದ್ದಿದ್ದನು! ದಂಡು ಸಾಗಿಸುವಾಗ ಮಹಾ ಮಹಾ ನದಿಗಳು ಹೊರಸೂಸಿ ಹರಿಯುತ್ತಲಿವೆ. ದಾರಿಯು ಕೆಸರಿನಿಂದ ವ್ಯಾಪ್ತವಾಗಿದೆ. ಒಜ್ಜೆ ಹೊರುವ ಬಿಟ್ಟಿಯ ಜನರು ಓಡಿಹೋಗಿರುತ್ತಾರೆ ಕುದುರೆ, ಒಂಟೆ, ಹೇಸರಗತ್ತೆ ಮುಂತಾದ ಪಶುಗಳು ಹಸಿವೆ ನೀರಡಿಕೆಗಳಿಂದ ಬಳಲಿ, ಪಟಪಟನೆ ಸಾಯುತ್ತಲಿವೆ. ದುಷ್ಕಾಲದಿಂದ ಅಧಿಕಾರಿಗಳೆಲ್ಲ ತ್ರಸ್ತಗೊಂಡಿದ್ದಾರೆ. ದಂಡಾಳುಗಳ ಸಂಬಳವು ಕಾಲಕಾಲಕ್ಕೆ ಸಲ್ಲದ್ದರಿಂದ ದಂಡಿನಲ್ಲಿ ಸಣ್ಣಪುಟ್ಟ ಬಂಡುಗಳು ತಲೆಯೆತ್ತಹತ್ತಿವೆ. ಇಂಥ

ಸಂಕಟಪರಂಪರೆಗಳಲ್ಲಿ ಆ ದಿನಹೋದ ಬಾದಶಹನು ಸಿಕ್ಕಿದ್ದರೂ, ಅವನು ಅವಸಾನಗೆಟ್ಟಿರಲಿಲ್ಲ. ಬಂಗಾಲದ ಸುಭೇದಾರನಾದ ಮುರ್ಶಿದಕುಲೀಖಾನನೊಬ್ಬನೇ ಬಾದಶಹನ ಕೇವಲ ಇಮಾನಿಯ ನೌಕರನುಳಿದಿದ್ದು, ಅವನು ಆಗಾಗ್ಗೆ ಕಳಿಸುತ್ತಿದ್ದ ಹಣದಿಂದಲೇ ಬಾದಶಹನ ಊಟವಾಟಗಳು ನಡೆದಿದ್ದವು. ಇರಲಿ.

ಒಂದು ದಿನ ಪ್ರಾರ್ಥನೆಯ ಕೂಗು ಕೇಳಿದ ಕೂಡಲೆ ಬಾದಶಹನು ತನ್ನ ಊರುಗೋಲನ್ನು ಊರುತ್ತ ಪ್ರಾರ್ಥನೆಯ ಡೇರೆಯ ಕಡೆಗೆ ಸಾವಕಾಶವಾಗಿ ನಡೆದಿದ್ದನು ಡೇರೆಯನ್ನು ಪ್ರವೇಶಿಸಿದೊಡನೆಯೇ ಸೇವಕನು ನೀರು ತುಂಬಿದ ಬಂಗಾರದ ಸೊಂಡಿಲ ಗಿಂಡಿಯನ್ನು ತಂದುಕೊಟ್ಟನು. ಕೂಡಲೆ ಬಾದಶಹನು ತನ್ನ ಕೈಕಾಲು-ಮೋರೆಗಳನ್ನು ತೊಳಕೊಂಡನು. ಒಳಮುಗ್ಗಲು ಚಚ್ಚೌಕಾದ ಸಣ್ಣ ಚಾಪೆಯು ಹಾಸಲ್ಪಟ್ಟಿತ್ತು ಅವನು ಅದರ ಮೇಲೆ ಹೋಗಿ ಕುಳಿತ ನಂತರ ಸೇವಕನು ಆ ಡೇರೆಯ ಬಾಗಿಲವನ್ನು ತೆರೆದನು. ಎಷ್ಟೋ ಹೊತ್ತಿನ ಮೇಲೆ ಆತನ ಅಸಂಖ್ಯ ಉಮೀರ-ಉಮರಾವರಲ್ಲಿ ಇಬ್ಬರೇ ಇಬ್ಬರು-ವಜೀರ ಅಸದಖಾನ ಹಾಗು ಆತನ ಪರಾಕ್ರಮಿ ಪುತ್ರನಾದ ಝುಲ್ಫೀಕಾರಖಾನ ಇವರಿಬ್ಬರೇ-ಡೇರೆಯನ್ನು ಪ್ರವೇಶಿಸಿದರು; ಮತ್ತು ವಜೂ ಮಾಡಿ ಬಾದಶಹನೆದುರಿಗೆ ಮೊಣಕಾಲೂರಿ ನಿಂತುಕೊಂಡರು. ಪರದೆಯ ಮರೆಯಲ್ಲಿ ಝುನಾನಖಾನೆಯ ಹೆಂಗಸರು ಬಂದು ಕುಳಿತ ಒಕ್ಕೆ ಸ್ವತಃ ಬಾದಶಹನು ಪೇಶಇಮಾಮನಾಗಿ ರಕಾತವನ್ನನ್ನತ್ತಿನನು. ಶಾಂತರೀತಿಯಿಂದ ರಕಾತವನ್ನಂದ ಬಳಿಕ, ವಜೀಫಾ ಆಗಲು, ಬಾದಶಹನು ತನ್ನ ಸ್ಥಳದಿಂದ ಎದ್ದನು. ಅಷ್ಟರಲ್ಲಿ ಪರದೆಯನ್ನು ಬದಿಗೆ ಸರಿಸಿ, ಬಾದಶಹನ ಹಿರಿಮಗಳಾದ ಝೀಬುನ್ನಿಸೆಯು ಬಂದು, ನೆಟ್ಟಗೆ ತಂದೆಯ ಎದುರಿಗೆ ಹೋಗಿ ನಿಂತುಕೊಂಡಳು. ಆಗ ಪ್ರೇಮಭರದಿಂದ ಅವಳ ಹೆಗಲ ಮೇಲೆ ಕೈಯಿಡುತ್ತ, ಮಮತೆಯ ದನಿಯಿಂದ ಔರಂಗಜೇಬನು:— 'ತಂಗೀ, ನಿನಗಿಂದು ಸೊಗಸೆನಿಸುತ್ತದೊ?"

"ಅಹುದು. ಅಪ್ಪಾ, ನನಗಿಂದು ಸೊಗಸೆನಿಸುತ್ತದೆ; ಆದರೆ ಅಪ್ಪಾ, ಇಂದು ನಿನ್ನೊಡನೆ ವಜೀಫಾ ಮಾಡುತ್ತಿರಲು, ನನಗೆ ನನ್ನ ಭವಿತವ್ಯವು ಗೋಚರವಾಯಿತು. ಇಂದು ಮುಹಮ್ಮದ ಪೈಗಂಬರರು ನನಗೆ ದರ್ಶನ ಕೊಟ್ಟು, ನನ್ನನ್ನು ಕೃತಾರ್ಥಳನ್ನಾಗ ಮಾಡಿದರು."

"ಅಹಹ! ತಂಗೀ, ನೀನು ಬಹು ಭಾಗ್ಯಶಾಲಿನಿಯು."

"ಅಪ್ಪಾ, ನಾನು ಭಾಗ್ಯವಂತಳೇನೋ ನಿಜ! ಯಾಕಂದರೆ 'ನಿನ್ನ ಇಹಲೋಕದ ಯಾತ್ರೆಯು ಮುಗಿಯುತ್ತ ಬಂದಿದೆ; ನೀನು ನಿನ್ನ ಮುಂದಿನ ವ್ಯವಸ್ಥೆಗೆ ಪ್ರಾರಂಭಿಸು' ಎಂದು ಪೈಗಂಬರರು ಇಂದು ನನಗೆ ಸೂಚಿಸಿರುತ್ತಾರೆ. ಅಪ್ಪಾ ಪೈಗಂಬರರ ಪ್ರತ್ಯಕ್ಷ ದರ್ಶನದ ಸಲುವಾಗಿ ನಾನು ಬಹು ಆತುರಳಾಗಿದ್ದೇನೆ. ಆದ್ದರಿಂದ ಇದು ವರೆಗೆ ನಾನು ಬಿನ್ನವಿಸಿದಂತೆ ಮಾಡುತ್ತೇವೆಂದು ವಚನ ಕೊಟ್ಟು, ನನಗೆ ಆಗ್ರಾಕ್ಕೆ ಹೊರಡುವ ಅಪ್ಪಣೆಯನ್ನೀಯಿರಿ. ನಮ್ಮ ಮನೆತನದ ಹಿರಿಯರ ದೇಹಗಳೆಲ್ಲ ಎಲ್ಲಿಯ ಮಣ್ಣಲ್ಲಿ ಕೂಡಿಬಿಟ್ಟಿರುವವೋ, ಆ ಪವಿತ್ರವಾದ ಆಗ್ರಾದಲ್ಲಿ ನನ್ನ ದೇಹವೂ ಗೋರಿಗೊಳ್ಳಬೇಕೆಂದು ನನ್ನ ಅಂತಿಮ ಇಚ್ಛೆಯಾಗಿರುತ್ತದೆ."

"ತಂಗೀ, ನಿನ್ನ ಇಚ್ಛೆಯ ವಿರುದ್ಧವಾಗಿ ನಡೆದರೆ, ನಾನು ಪೈಗಂಬರರಲ್ಲಿ ಮಹದಪರಾಧಿಯಾದೇನು! ಹೋಗು, ನಿನ್ನ ಇಚ್ಛೆಯ ಮೇರೆಗೆ ನೀನು ಆಗ್ರಾಕ್ಕೆ ಹೊರಡುವ ಸಿದ್ಧತೆಗೆ ತೊಡಗು. ನಿನ್ನ ಸಾಕುಮಗನಾದ ಶಾಹೂರಾಜನನ್ನು ಬಂಧಮುಕ್ತ ಮಾಡುವ ಬಗ್ಗೆ ನಾನೀಗ ವಜೀರ ಅಸದಖಾನರ ಕೂಡ ವಿಚಾರ ಮಾಡುವೆನು. ಹೋಗು ನೀನು ಶಾಂತಚಿತ್ತದಿಂದ ಹೊರಟು ಹೋಗು. ನಿನ್ನ ಈ ಅಂತಿಮ ಇಚ್ಛೆಯನ್ನು ನಾನೆಂದಿಗೂ ತುಚ್ಛೀಕರಿಸಲಾರೆನು."

ತಾನು ಹೀಗೆಂದು ಅಭಿವಚನ ಕೊಡಲು, ಝೀಬುನ್ನಿಸೆಯು ಶಾಂತಚಿತ್ತದಿಂದ ಒಳಗೆ ಹೊರಟು ಹೋದುದನ್ನು ಕಂಡು, ಬಾದಶಹನು ಕ್ಷಣ ಕಾಲದ ವರೆಗೆ ವಿಚಾರಮಗ್ನನಾದನು. ಇಂದಿಗೆ ೧೬-೧೭ ವರ್ಷಗಟ್ಲೆ ಸೆರೆಯಲ್ಲಿಟ್ಟಿದ್ದ ಶಾಹೂರಾಜನನ್ನು ಬಾದಶಹನು ಬಂಧಮುಕ್ತಗೊಳಿಸಿ, ಅವನನ್ನು ಮಹಾರಾಷ್ಟ್ರಕ್ಕೆ ಪಟ್ಟಗಟ್ಟಬೇಕೆಂದು ಝೀಬುನ್ನಿಸೆಯು ಎಷ್ಟೋ ದಿನಗಳಿಂದ ತಂದೆಯ ಬಳಿಯಲ್ಲಿ ಹಟ ಹಿಡಿದಿದ್ದಳು. ಬಾದಶಹನು ಇದು ವರೆಗೆ ಅವಳಿಗೆ ಏನೇನೋ ಹೇಳಿ, ಅವಳನ್ನು ಸಮಾಧಾನ ಪಡಿಸಿದ್ದನು; ಆದರೆ ಇಂದು ಮಹಮ್ಮದ ಪೈಗಂಬರರು ಅವಳಿಗೆ ದರ್ಶನವಿತ್ತು, ಅವಳ ಭವಿತವ್ಯವನ್ನು ಅವಳಿಗೆ ತಿಳಿಸಿದರೆಂಬದನ್ನು ಕೇಳಿ, ಈಕೆಯ ಈ ಅಂತಿಮ ಬಯಕೆಯನ್ನು ಅನಾದರ ಮಾಡಬಾರದೆಂದೇ ಬಾದಶಹನಿಗೆ ಅನಿಸಿತು; ಅಂತೇ ಅವನು ಆಗ ಆ ಬಗ್ಗೆ ತನ್ನ ವಜೀರನೊಡನೆ ವಿಚಾರಮಾಡುತ್ತ ಕುಳಿತನು.

"ಮಹಾರಾಜಾ, ನಾನು ಅಪ್ಪನಿಗೆ ಎಲ್ಲವನ್ನೂ ತಿಳಿಸಿರುತ್ತೇನೆ. ಅವನು ನಿನ್ನ ಬಿಡುಗಡೆಯನ್ನು ಬೇಗನೆ ಮಾಡುವನು; ಆದಕಾರಣ ನೀನು ನನಗಿನ್ನು ಅಪ್ಪಣೆ ಕೊಡು. ನಿನ್ನ ಬಿಡುಗಡೆಯು ಕ್ಷಿಪ್ರದಲ್ಲೇ ಆಗುವದು. ಕೊಂಚವೂ ಯೋಚಿಸಬೇಡ"

"ಛೇ-ಛೇ," ಬೇಗಮುಸಾಹೇಬ, ನಾನು ಅದನ್ನೆಲ್ಲ ಕೇಳತಕ್ಕವನಲ್ಲ. ನೀವು ನನ್ನನ್ನು ನಿಮ್ಮೊಡನೆ ಆಗ್ರಾಕ್ಕೆ ಕರೆದೊಯ್ಯಿರಿ. ನಿಮ್ಮ ಹೊರ್ತು ಇಲ್ಲಿ ನನ್ನ ರಕ್ಷಣಕರ್ತರಾರಿರುವರು?"

"ಶಾಹೂ, ನಾನು ನಿನ್ನ ಸಂರಕ್ಷಣೆಯ ಸಕಲ ವ್ಯವಸ್ಥೆಯನ್ನೂ ಮಾಡಿರುತ್ತೇನೆ. ಖುದ್ದ ಬಾದಶಹನಿಂದ ನಿನ್ನ ಬಿಡುಗಡೆಯ ಬಗ್ಗೆ ನಾನು ವಚನ ತಕ್ಕೊಂಡಿರುತ್ತೇನೆ; ಬಾಳಾ, ನನ್ನೀ ಮಾತಿನಲ್ಲಿ ನಿನಗೆ ವಿಶ್ವಾಸ ವಿಲ್ಲವೆ?"

ಝೇಬುನ್ನಿಸೆಯು ಆ ಘಟವನ್ನು ಆ ಪರಮ ವಂಚಕನಾದ ಔರಂಗಜೇಬ ಬಾದಶಹನು ನಡಿಸಿದನೇನು? ಇಲ್ಲ. ಕಡೆಗೂ ಅವನಿಂದದಾಗಲಿಲ್ಲೆಂಬದು ಇತಿಹಾಸವನ್ನರಿತ ವಾಚಕರಿಗೆ ಬೇರೆ ತಿಳಿಸುವ ಕಾರಣವಿಲ್ಲ.

## ಶಹಾಜಿ ಪಾಟೀಲನ ಸುಸ್ವಭಾವ

ಕಾಲದ ಗತಿಯನ್ನು ತಡೆಯುವವರಾರು? ದಿನದ ಹಿಂದೆ ದಿನಗಳು ಗತಿಸುತ್ತಿರುವವು. ಕಾಲವು ಪ್ರತಿಯೊಂದು ಪದಾರ್ಥದ ಪರಿಣಾಮ ಮಾಡುವದರಲ್ಲಿ ತೊಡಗಿ ಬಿಟ್ಟಿದೆ. ಅದು ಕಲ್ಪವೆಂಬ ಅತ್ಯಂತ ಶ್ರೇಷ್ಠ ಹೆಸರಿನಿಂದ ಪ್ರಸಿದ್ಧವಾಗಿರುವಂತೆ, ಕ್ಷಣ, ಅರಕ್ಷಣ ಮುಂತಾದ ಸಾಮಾನ್ಯ ನಾಮಧ್ಯೇಯಗಳಿಂದಲೂ ಅದರ ಕಲ್ಪನೆಯುಂಟಾಗುತ್ತದೆ; ಆದರೆ ಕಾಲನ ರೂಪವನ್ನು ಮಾತ್ರ ಯಾರೂ ಎಂದೂ ಕಾಣಲಾರರು. ಈ ಸೃಷ್ಟಿರೂಪವಾದ ಕಾನನದಲ್ಲಿ ಸದಾ ಬೇಟೆಯಾಡುವ ಅವನೊಬ್ಬ ಬಲಾಢ್ಯ ವ್ಯಾಧನೇ ಆಗಿರುತ್ತಾನೆ. ನಮ್ಮ ಪ್ರಸ್ತುತದ ಕಥೆಯಾದರೂ ಅಂಥ ಆ ಮಹಾಕಾಲನ ಉದರದಲ್ಲಿ ಜೀರ್ಣವಾಗಿರುತ್ತದೆ. ಆದ್ದರಿಂದ ಈ ಕಥೆಯನ್ನು ಒಳ್ಳೇ ಪರಿಶ್ರಮದಿಂದ ಸಂಶೋಧಿಸಿ, ಚೆನ್ನಾಗಿ ಬಣ್ಣಿಸಿ, ನಮ್ಮ ವಾಚಕರ ಮುಂದಿಡಬೇಕಾಗಿರುತ್ತದೆ.

ಸಾವಿತ್ರೀಬಾಯಿಯು ತನ್ನ ಮಗಳ ಶೋಧಕ್ಕೆಂದು ಲೋಣಿಯಿಂದ

ಹೊರಟು ಕೆಲ ದಾರಿ ಕ್ರಮಿಸಿದ ಬಳಿಕ, ಎಲ್ಲಿಗೆ ಹೋಗಬೇಕು? ಏನು ಮಾಡಬೇಕು? ಎಂಬುದಾವುದನ್ನೂ ತಿಳಿಯದೆ, ಅವಳು ಅಂದು ಸಂಜೆಗೆ ಒಂದು ಹಳ್ಳಿಯ ಸಮೀಪಕ್ಕೆ ಬಂದಳು. ಊರು ಇನ್ನು ಸ್ವಲ್ಪೇ ದೂರದಲ್ಲಿತ್ತು. ಅಷ್ಟರಲ್ಲಿ ಅವಳ ಕಾಲಲ್ಲಿ ಒಂದು ದೊಡ್ಡ ಮುಳ್ಳು ನೆಟ್ಟಿತು. ಅದರ ವ್ಯಥೆಯಿಂದ ಅವಳು ಕುಗ್ಗುತ್ತ ಮುಗ್ಗುತ್ತ ನಾಪಕಾಶವಾಗಿ ಸಾಗಿರಲು, ಒಂದು ಕಡೆಗೆ ಎಡವಿ ಬಿದ್ದುದರಿಂದ, ಅವಳ ಮೊಣಕಾಲೇ ಒಡೆಯಿತು! ಮೊದಲೇ ಚಿಂತೆಯಿಂದ ಬೆಂದು ಬೆಂಡಾಗಿದ್ದ ಸಾವಿತ್ರೀಬಾಯಿಯು, ಆ ಘನವಾದ ಪೆಟ್ಟಿನಿಂದ ಬವಳಿ ಬಂದು ಬಿದ್ದಳು! ಮಧ್ಯರಾತ್ರಿಯಾದರೂ ಅವಳು ದೇಹಭಾನ ಹೊಂದಲಿಲ್ಲ. ಕತ್ತಲೆಯ ದಿನಗಳಾದ್ದರಿಂದ ಆ ಊರವರಿಗೆ ಅವಳ ಇರವೇ ತಿಳಿಯಲಿಲ್ಲ. ಬೆಳಗಾಗ ಬರಲು, ಅವಳಿಗೆ ಎಚ್ಚರವಾಯಿತು ಪೂರ್ವರಾತ್ರಿಯ ಪೆಟ್ಟಿನಿಂದ ಅವಳಿಗೆ ಜ್ವರ ಬಂದಿದ್ದವು. ಎದ್ದೇಳಲು ಶಕ್ತಿಯಿರಲಿಲ್ಲ. ಅದರಿಂದ ಅವಳು ಬಿದ್ದ ಸ್ಥಳದಲ್ಲಿಯೇ ನರಳುತ್ತ ಬಿದ್ದುಕೊಂಡಿರಲು, ಆ ಊರ ಪ್ರಮುಖ ಕೃಷಿಕನೊಬ್ಬನು ಬೆಳಗಿನ ಝಾವದಲ್ಲಿ ಅದೇ ಮಾರ್ಗ ಹಿಡಿದು ತನ್ನ ಹೊಲದ ಕಡೆಗೆ ಸಾಗಿದ್ದನು. ಆಗ ಒಳ್ಳೇ ಪ್ರಶಾಂತ ಸಮಯವಾದ್ದರಿಂದ, ದಾರಿಯ ಸಕ್ಕದ ಚರಂಡಿಯಲ್ಲಿ ಒಂದೇಸವನೆ ನರಳುತ್ತಲೂ, ಆಗಾಗ್ಗೆ ಬಡಬಡಿಸುತ್ತಲೂ ಬಿದ್ದಿರುವ ಸಾವಿತ್ರಿಬಾಯಿಯ ಮಂದಮಂದವಾದ ಧ್ವನಿಯು, ಆ ಗೃಹಸ್ಥನಿಗೆ ಬಹು ಸ್ಪಷ್ಟವಾಗಿ ಕೇಳಿಸಿತು. ಆಗ ಇನ್ನೂ ಬೆಳ್ಳಗೆ ಬೆಳಗಾಗಿರಲಿಲ್ಲ. ಸಂಧಿಪ್ರಕಾಶವು ಬೀಳುವುದರಲ್ಲಿದ್ದಿತು ಆತನು ಅತ್ತಿತ್ತ ಹೊರಳಿ ನೋಡಿ, ದನಿಯು ಯಾವ ಕಡೆಯಿಂದ ಕೇಳಬರುವದೆಂಬದನ್ನು ಸೂಕ್ಷ್ಮವಾಗಿ ಅವಲೋಕಿಸತೊಡಗಿದನು. ಎಷ್ಟೋ ಹೊತ್ತಿನ ವರೆಗೆ ಅದರ ಸುಳುವೇ ಹತ್ತಲಿಲ್ಲ. ಕಡೆಗೆ ದಿಟ್ಟಿಸಿ ನೋಡಲು, ಸಮೀಪದ ಚರಂಡಿಯಲ್ಲೇ ಯಾರೋ ಬಿದ್ದುಕೊಂಡಿದ್ದು, ಅವರೇ ನರಳುತ್ತಿರುವರೆಂಬದು ಆತನಿಗೆ ತಿಳಿಯಿತು. ಬಳಿಕ ಅವನು ಸಾವಿತ್ರೀಬಾಯಿಯ ಸಮೀಪಕ್ಕೆ ಬಂದು ನೋಡುತ್ತಾನೆ, ಪಿಳಿಪಿಳಿ ಕಣ್ಣು ಬಿಡುತ್ತ, ಪೆಟ್ಟಿನ ವೇದನೆಯಿಂದ ನರಳುತ್ತ ಬಿದ್ದಿದ್ದ ಸಾವಿತ್ರಿಬಾಯಿಯು "ನೀರು-ನೀರು" ಎಂದು ಅನ್ನುತ್ತಿದ್ದಾಳೆ. ಕೂಡಲೆ ಆತನು ತನ್ನ ತತ್ರಾಣಿಯೊಳಗಿನ ಬೊಗಸೆ ನೀರನ್ನು ಆಕೆಗೆ ಕುಡಿಸಿದನು; ಹಾಗು ಅವಳನ್ನು ಆ ತಗ್ಗಿನೊಳಗಿಂದ ಎತ್ತಿ ತಂದು, ದಾರಿಯಲ್ಲಿ ಕೂಡ್ರಿಸಿದನು.

ಅವನು ಅವಳ ಸಂಗತಿಯನ್ನು ತಿಳಿದು, ಅವಳನ್ನು ತನ್ನ ಮನೆಗೆ ಕರೆದೊಯ್ದು ಆರೈಕೆ ಮಾಡತೊಡಗಿದನು. ಅಂತೆಯೇ ಭಾವುರಾಯನು ೨-೩ ಸಾರೆ ಲೋಣಿಗೆ ಹೋದರೂ, ಅವನಿಗೆ ಅಲ್ಲಿ ಸಾವಿತ್ರೀಬಾಯಿಯ ಪತ್ತೆ ಹತ್ತಲಿಲ್ಲ. ಅದಕ್ಕೆಂದೇ ತಳೇಗಾಂವದೊಳಗಿನ ದಾಭಾಡೆಯವರ ವಾಡೆಗೆ ಹೋದಾಗ ನಿಮ್ಮ ತಾಯಿಯ ಪತ್ತೆ ಹತ್ತಿಲ್ಲೆಂದು ಅವನು ಹಂಸೆಗೆ ತಿಳಿಸಿದ್ದನು.

ಹಂಸೆಯು ಅಂದು ದಾಭಾಡೆಯವರ ವಾಡೆಯಿಂದ ಫಕ್ಕನೆ ಅಂತರ್ಧಾನ ಹೊಂದಿದ್ದನ್ನು ಕೇಳಿ ದುಃಖವ್ಯಾಕುಲನಾದ ಭಾವೂರಾಯನು ತಳೇಗಾಂವದಿಂದ ತನ್ನ ಊರಿಗೆ ಮರಳಿ ಬರುತ್ತಿರಲು, ಸಾವಿತ್ರೀಬಾಯಿಯು ಯಾವ ಊರಲ್ಲಿಯು ಯಾವ ಕೃಷಿಕನ ಮನೆಯಲ್ಲಿ ಆರೈಕೆ ಹೊಂದುತ್ತಿದ್ದಳೋ, ಅವನಿಗೂ ಭಾವೂರಾಯನಿಗೂ ದಾರಿಯಲ್ಲಿ ಕಾಕತಾಲೀಯ ನ್ಯಾಯದಂತೆ ಆಕಸ್ಮಿಕವಾಗಿ ಭೆಟ್ಟಿಯಾಯಿತು. ಆ ಕೃಷಿಕನು ಸಾವಿತ್ರೀಬಾಯಿಯ ವಿಷಯವನ್ನು ತನಗೆ ತಿಳಿದ ಮಟ್ಟಿಗೆ ಭಾವೂರಾಯನಿಗೆ ತಿಳಿಸಲು, ಭಾವೂರಾಯನು ಆತನೊಡನೆ ಅವನ ಮನೆಗೆ ಹೋಗಿ ಸಾವಿತ್ರೀಬಾಯಿಯನ್ನು ಕಂಡು, ಹಂಸೆಯ ಸಂಗತಿಯನ್ನೆಲ್ಲ ಅವಳಿಗೆ ನಿವೇದಿಸಿದನು. ಬಳಿಕ ಭಾವೂರಾಯನು ತಾನು ಅಲ್ಪಾವಧಿಯಲ್ಲೇ ಮರಳಿ ಬರುವುದಾಗಿಯೂ, ಬಳಿಕ ತಾವಿಬ್ಬರೂ ಸೇರಿ ಹಂಸೆಯನ್ನು ಪತ್ತೆ ಹಚ್ಚುವದಾಗಿಯೂ ಸಾವಿತ್ರೀಬಾಯಿಯ ಎದುರಿಗೆ ವಚನಬದ್ಧನಾಗಿ, ಖೇಡಕ್ಕೆ ಹೊರಟು ಹೋದನು.

ಆತನು ಖೇಡಿಗೆ ಬರುವಷ್ಟರಲ್ಲಿ ಆತನ ತರುಣ ಒಡೆಯನಾದ ನಾಗೋಜಿರಾಯ ದೇಶಮುಖನು ಔರಂಗಜೇಬ ಬಾದಶಹನ ಯಾವನೋ ಒಬ್ಬ ಅಮೀರನ ಕ್ರೋಧಕ್ಕೆ ಬಲಿಯಾಗಿ, ಮನೆಯಿಂದ ಎತ್ತೋ ಹೊರಟು ಹೋಗಿದ್ದನು ಆದ್ದರಿಂದ ಭಾವೂರಾಯನು ತೋರಿಕೆಯಲ್ಲಿ ನಾಗೋಜಿರಾಯನ ಶೋಧಕ್ಕೆಂದು ಮನೆಯಿಂದ ಹೊರಬಿದ್ದು ನೆಟ್ಟಗೆ ಆ ಹಳ್ಳಿಗೆ ಬಂದು, ಸರ್ವಸಾಧಾರಣವಾಗಿ ಗುಣಹೊಂದಿದ್ದ ಸಾವಿತ್ರಿಬಾಯಿಯನ್ನು ಕರಕೊಂಡು ಹಂಸೆಯ ಶೋಧಕ್ಕೆಂದು ನಾಗಿದನು. ಭಾವೂರಾಯನು ಸಾವಿತ್ರೀಬಾಯಿಯನ್ನು ತನ್ನ ಕುದುರೆಯ ಮೇಲೆ ಕೂಡ್ರಿಸಿ, ತಾನು ಕಾಲ ನಡಿಗೆಯಿಂದಲೇ ನಡೆದಿದ್ದನು. ಅವರು ಆ ಹಳ್ಳಿಯಿಂದ ಹೊರಟವರು ಮೊದಲು ಚಿಂಚವಡಕ್ಕೆ ಬಂದರು. ಅಷ್ಟರಲ್ಲಿ ಕೊಂಕಣದಿಂದ ಶ್ರೀಮಂತ ಮೊದಲನೇ

ಬಾಜೀರಾಯಸಾಹೇಬ ಪೇಶ್ವೆಯವರ ಪರಮ ಗುರುಗಳಾದ ಶ್ರೀ ಬ್ರಹ್ಮೇಂದ್ರ ಸ್ವಾಮಿಗಳು ಚಿಂಚವಡದ ಸುಪ್ರಸಿದ್ಧ ಗಣಪತಿಯ ದರ್ಶನಕ್ಕೆಂದು ಬರತಕ್ಕವರಿದ್ದರು. ಅನಾಯಾಸವಾಗಿ ಮಹಾತ್ಮರ ದರ್ಶನವಾಗುವದೆಂದು ಬಗೆದು, ಭಾವೂರಾಯಾದಿಗಳು ಚಿಂಚವಡದಲ್ಲಿಯೇ ಕೆಲ ದಿನಗಳ ವರೆಗೆ ನಿಂತರು; ಹಾಗು ಆ ಮಹಾತ್ಮರ ದರ್ಶನ-ಆಶೀರ್ವಾದಗಳನ್ನು ಹೊಂದಿ, ಅವರು ತಮ್ಮ ಮುಂದಿನ ಉದ್ಯೋಗಕ್ಕೆ ಹೊರಟರು.

ಸಾವಿತ್ರೀಬಾಯಿಯ ಆ ಮೊಣಕಾಲ ಗಾಯವು ಸಂಪೂರ್ಣವಾಗಿ ಮಾದಿರಲಿಲ್ಲ. ಅದರಿಂದ ಅವರ ಪ್ರವಾಸವು ಅಷ್ಟೊಂದು ಒತ್ತರದಿಂದ ಸಾಗದೆ, ಮಂದಮಂದವಾಗಿ ನಡೆದಿತ್ತು; ಆದರೆ ಅವರು ಮರಾಟರ ಪ್ರದೇಶವನ್ನು ದಾಟಿ ಮೊಗಲಾಯಿಯಲ್ಲಿ ಪ್ರವೇಶಿಸಿದ ಬಳಿಕ, ಅಷ್ಟೊಂದು ಸಾವಕಾಶವಾಗಿ ಸಾಗಿದರೆ ನಡೆಯುವಂತಿರಲಿಲ್ಲ; ಯಾಕಂದರೆ, ಯಾವ ಕಾಲಕ್ಕೆ ಶತ್ರುಗಳ ಆಕ್ರಮಣಕ್ಕೆ ಅವರು ಒಳಗಾಗ ಬೇಕಾಗುವದೋ, ಎಂಬ ಬಗ್ಗೆ ನಿಯಮವಿರಲಿಲ್ಲ. ಆದರಿಂದ ಭಾವೂರಾಯನು ಎದೆಗುಂದಿ, ತಮ್ಮ ಪ್ರವಾಸವನ್ನು ಆದಷ್ಟು ತೀವ್ರವಾಗಿ ಮಾಡುತ್ತ, ಹಿಂದುಗಳ ವಸತಿಯಿದ್ದಲ್ಲೇ ತಂಗುತ್ತ ನಡೆದಿದ್ದನು. ಪ್ರವಾಸದ ತೊಂದರೆಯ ಮೂಲಕ ದಿನದಿನಕ್ಕೆ ಸಾವಿತ್ರೀಬಾಯಿಯ ಕಾಲನೋವು ಹೆಚ್ಚತೊಡಗಿತು ಒಂದು ದಿನವಂತೂ ಆಕೆಯ ಮೊಣಕಾಲು ಬಾತು, ಆನೆಯ ತಲೆಯಂತಾಯಿತು! ಅವಳು ಆ ನೋವನ್ನು ತಾಳದಾದಳು; ಆದರೂ ಮಾಡುತ್ತಾಳೇನು? ತನ್ನ ಮಗಳ ಪತ್ತೆ ಹತ್ತುವ ವರೆಗೆ ಅವಳ ಹಿಂದಿನ ಆ ಪ್ರವಾಸದ ಶುಕ್ಲಕಾಷ್ಟವು ಪರಿಹರಿಸುವಂತಿರಲಿಲ್ಲ.

ಹೀಗೆ ಸಾವಿತ್ರೀಬಾಯಿಯ ಕಾಲು ಬಾತು ಅವಳು ಪರಮ ವಿಹ್ವಲಳಾಗಲು, ಅಂದಿನ ಅವರ ಪ್ರವಾಸವು ಸರಿಯಾಗಿ ಸಾಗುವ ಬಗೆಯಂತು? ಭಾವೂರಾಯನು ಅವಳನ್ನು ಮಧ್ಯಾಹ್ನದ ಸಮಯಕ್ಕೆ ಒಂದು ಕಿರುಗಂಟಿಯ ಅರಣ್ಯದೊಳಗಿನ ಒಂದು ಹಳ್ಳದ ದಂಡೆಯಲ್ಲಿ ಇಳಿಸಿ, ಒಂದು ವಿಶಾಲವಾದ ಗಿಡದ ನೆಳಲಲ್ಲಿ ಮಲಗಿಸಿದನು; ಹಾಗು ಲಗುಬಗನೆ ಅಡಿಗೆ ಮಾಡಿ. ಉಂಡು, ಆಕೆಗೂ ಉಣಬಡಿಸಿದನು; ಆದರೆ ಸಾವಿತ್ರೀಬಾಯಿಗೆ ಅಂದು ಒಂದು ತುತ್ತು ಕೂಡ ಊಟ ಹೋಗಲಿಲ್ಲ. ಕಾಲ ನೋವಿನಿಂದ ಹೈರಾಣಾಗಿದ್ದ ಅವಳಿಗೆ ಅಂದು ಹೆಚ್ಚಾಗಿ ಜ್ವರ ಬಂದವು. ಆದರಿಂದ ಇನ್ನು

ಅವಳನ್ನು ಕುದುರೆಯ ಮೇಲೆ ಕೂಡ್ರಿಸಿಕೊಂಡು ಹೊರಡುವಂತಿರಲಿಲ್ಲ; ಆದರೆ ಅವರು ಇಳಿದುಕೊಂಡ ಸ್ಥಳವು ನಟ್ಟಡವಿಯ ಪ್ರದೇಶವಾದ್ದರಿಂದ, ಯಾವುದೊಂದು ಹಿಂದೂ ವಸತಿಯ ಗ್ರಾಮಕ್ಕೆ ತಲುಪದ ಹೊರತು, ಅವರ ಅಂದಿನ ಆ ಪ್ರವಾಸವು ಮುಗಿಯುವಂತಿರಲಿಲ್ಲ. ಈ ಎಲ್ಲ ತೊಂದರೆಯ ಮೂಲಕ ಭಾವೂರಾಯನು ಚಿಂತಾಕ್ರಾಂತನಾದನು.

ಅವನು ಹಾಗೆ ಬರಿಯ ಚಿಂತಿಸುತ್ತ ಕುಳಿತರೆ ನಡೆಯುವಂತಿರಲಿಲ್ಲ; ಯಾಕಂದರೆ, ಹೊತ್ತು ತಿರುಗಿತ್ತು. ಸಾವಿತ್ರೀಬಾಯಿಯ ಜ್ವರವು ಹೆಚ್ಚಿ, ಆಕೆಯು ಬಡಬಡಿಸತೊಡಗಿದ್ದಳು; ಇಷ್ಟೇ ಅಲ್ಲ, ಸಮೀಪದಲ್ಲಿಯೇ ಯಾರೋ ಗುಣಗುಟ್ಟುತ್ತಿರುವಂತೆ ಭಾಸವಾಯಿತು. ಆದರಿಂದ ಅವನು ಸಾವಿತ್ರೀಬಾಯಿಯನ್ನು ಅಲ್ಲಿಯೇ ಮಲಗಿಸಿ, ಶಬ್ದ ಬರುವ ದಿಕ್ಕಿನ ಕಡೆಗೆ ಅಶ್ವಾರೋಹಿಯಾಗಿ ಹೊರಟನು.

ಭಾವೂರಾಯನು ಹೆಚ್ಚು ದಾರೀ ಕ್ರಮಿಸಬೇಕಾಗಲಿಲ್ಲ. ಅಲ್ಪಾವಧಿಯಲ್ಲೇ ಅವನಿಗೊಂದು ವಿಚಿತ್ರ ದೃಶ್ಯವು ಗೋಚರವಾಯಿತು. ಅದರಿಂದ ಅವನು ತಾನು ಯಾವ ಸ್ಥಿತಿಯಲ್ಲಿರುತ್ತೇನೆ? ತನ್ನ ಸದ್ಯದ ಕರ್ತವ್ಯವೇನು? ಮುಂತಾದುದೆಲ್ಲವನ್ನೂ ಮರೆತು, ಆ ವಿಚಿತ್ರ ಸಂಗತಿಯನ್ನು ಟಕಮಕವೆಂದು ನೋಡುತ್ತ ನಿಂತುಕೊಂಡನು. ಎದುರಿಗೆ ಯಾವನೋ ಒಬ್ಬ ಸ್ವಾರನು ತನ್ನ ಸಿಡಿದಾದ ಧನುಷ್ಯವನ್ನು ಹೂಡಿಕೊಂಡು ಯಾವುದನ್ನೋ ಗುರಿ ಹೊಡೆಯುವ ಉದ್ಯೋಗದಲ್ಲಿ ತೊಡಗಿದ್ದನು; ಆದರೆ ಎಷ್ಟೋ ಕ್ಷಣಾಗಳಾದರೂ ಅವನ ಕೈಯೊಳಗಿನ ಧನುಷ್ಯದಿಂದ ಬಾಣವು ಹೊರಹೊರಡಲೊಲ್ಲದು. ಇಷ್ಟು ಆತುರಗ್ರಹಸ್ತನಾದ ಇವನು ತನ್ನ ಬಾಣವನ್ನೇಕೆ ಬಿಡಲೊಲ್ಲನೆಂಬ ಬಗ್ಗೆ ಭಾವೂರಾಯನಲ್ಲಿ ಸಹಜವಾಗಿಯೇ ಜಿಜ್ಞಾಸೆಯುಂಟಾಗಲು, ಅವನು ತನ್ನ ಕುದುರೆಯನ್ನು ಮತ್ತಿಷ್ಟು ಮುಂದಕ್ಕೆ ದೂಡಿ, ಆ ಸ್ವಾರನ ಒಂದು ಪಕ್ಕದ ಗಿಡದ ಮರೆಗೆ ನಿಂತುಕೊಂಡನು. ಆದರಿಂದ ಭಾವೂರಾಯನ ಇರವು ಆ ಸ್ವಾರನಿಗೆ ಗೋಚರವಾಗುವಂತಿರಲಿಲ್ಲ; ಆದರೆ ಆ ಸ್ವಾರನ ಚಲನವಲನವೂ, ಆತನ ಗುರಿಯೂ ಭಾವೂರಾಯನಿಗೆ ಚೆನ್ನಾಗಿ ಗೋಚರವಾಗುವಂತಿದ್ದವು. ಅದುವರೆಗೆ ತನ್ನ ಧನುಷ್ಯವನ್ನೆಳೆದು ನಿರೀಕ್ಷಿಸುತ್ತಿದ್ದ ಬೇಟೆಯು ಸ್ವಾರನ ಎದುರಿಗೆ ಬಂದಿತು; ಆದರೆ-ಆದರೆ ಅದು ಮೃಗಬೇಟೆಯಾಗಿರದೆ, ಮನುಷ್ಯ ಬೇಟೆಯಾಗಿತ್ತು. ಯಾವನೋ ಒಬ್ಬನು

ಎದುರಿಗಿನ ಆಲದ ಮರದಿಂದ ಬರಲಿಕ್ಕೂ, ಸ್ವಾರನು ಅವನ ಮೇಲೆ ತನ್ನ ಬಾಣವನ್ನು ಬಿಡಲಿಕ್ಕೂ ಗಂಟೇ ಬಿದ್ದಿತು! ಆದರೆ ಆ ವ್ಯಕ್ತಿಯು ಪ್ರಾಚೀನ ಪುಣ್ಯವಿಶೇಷದಿಂದ ಸ್ವಾರನ ಬಾಣವು ಅವನ ದೇಹಕ್ಕೆ ಒತ್ತಿ ಹೋಯಿತೇ ಹೊರತು, ಅದು ಅವನ ಶರೀರದಲ್ಲಿ ವಿದ್ಧವಾಗಲಿಲ್ಲ. ಅದರಿಂದ ಆ ಸ್ವಾರನು ತ್ವೇಷಗೊಂಡು, ಅತ್ತಿತ್ತ ನೋಡುತ್ತ:––"ಮೂರ್ಖ, ಹರಾಮಖೋರಾ" ಎಂದಂದನು.

ಸ್ವಾರನು ಹಾಗೆಂದು ನುಡಿಯುವಾಗ ಆತನ ಮುಖವು ಭಾವೂರಾಯ ನಿಗೆ ಕಾಣಿಸಿತಲ್ಲದೆ, ದನಿಯ ಗುರ್ತು ಹತ್ತಿತು. ಅದರಿಂದ ಭಾವೂರಾಯನು ವಿಸ್ಮಯವಿಸ್ಫೂರಿತ ನೇತ್ರಗಳಿಂದ ಆ ವ್ಯಕ್ತಿಯ ಕಡೆಗೆ ದಿಟ್ಟಿಸಿ ನೋಡುತ್ತ:- "ಇಸ್ಮಾಯಿಲ್-ಇಸ್ಮಾಯಿಲ್, ಇಂದೆಂತಹ ಬೇಟೆಯನ್ನಾಡುವಿಯೊ?" ಎಂದು ಆ ಸ್ವಾರನನ್ನು ಕುರಿತು ಪ್ರಶ್ನೆ ಮಾಡಿದನು. ಮೊದಲೇ ತನ್ನ ಗುರಿ ತಪ್ಪಿ ಘಾತವಾದ್ದರಿಂದ ವಿಷಾದಗೊಂಡಿದ್ದ ಆ ಸ್ವಾರನು ಭಾವೂರಾಯನನ್ನು ದೃಷ್ಟಿಸುತ್ತಲೆ, ಅವನು ಆ ತನ್ನ ಮೊದಲಿನ ಗುರಿಯನ್ನು ಬಿಟ್ಟು, ಭಾವೂ ರಾಯನ ಮೇಲೆಯೇ ಏರಿ ಬಂದನು.

ಆ ಸ್ವಾರನು ಬೇರೆ ಯಾರೂ ಆಗಿರದೆ, ಲೋಣಿಯಲ್ಲಿಯ ಬಡ ಪಿಂಜಾರನಾದ ಇಸ್ಮಾಯಿಲನಾಗಿದ್ದನು. ನಾಗೋಜಿರಾಯ ದೇಶಮುಖನ ಬಲಿಗೆ ಬಿದ್ದು, ಯಾವನು ಸೂರ್ಯಾಜಿಗೂ ಹಂಸೆಗೂ ಮೋಸಪಡಿಸಲು ಯತ್ನಿಸಿದ್ದನೋ ಮತ್ತು ಆಯತ ಕಾಲಕ್ಕೆ ಇದೇ ಭಾವೂರಾಯನ ತಂತ್ರದಿಂದ ಮುಖಭಂಗಿತನಾಗಿ ಆ ನಾಗೋಜಿರಾಯನ ರೋಷದಿಂದ ತನ್ನ ಸರ್ವಸ್ವವನ್ನೂ ನಾಶಗೊಳಿಸಿಕೊಂಡಿದ್ದನೋ, ಆ ಇಸ್ಮಾಯಿಲನ ವಿಷಯದ ಎಲ್ಲ ಸಂಗತಿಯು ನಮ್ಮ ವಾಚಕರಿಗೆ ಗೊತ್ತೇ ಇದೆ. "ನನ್ನ ಮನೆ-ಮಾರುಗಳನ್ನೆಲ್ಲ ಸಟ್ಟು ಸೂರೆಗೊಳಿಸಿದ ನೀಚಾ, ಕಾಫರಾ, ನೀನು ಮತ್ತೆ ಇಲ್ಲಿಗೂ ಬಂದೆಯಾ? ಇಲ್ಲಿ ಒಳ್ಳೇ ಚನ್ನಾಗಿ ಸಿಕ್ಕಿರುತ್ತೀ. ನಿನ್ನ ಪ್ರಾಣವನ್ನು ಹೀರದ ಹೊರತು, ಈ ಇಸ್ಮಾಯಿಲನಿಗೆ ಸಮಾಧಾನವಾಗುವಂತಿಲ್ಲ" ಎಂದಂದವನೇ ಇಸ್ಮಾಯಿಲನು ಭಾವೂರಾಯನ ಮೇಲೆ ಬಿದ್ದನು. ಭಾವೂರಾಯನ ಟೊಂಕಕ್ಕೆ ಖಡ್ಗವು ಇದ್ದೇ ಇತ್ತು. ಅದರಿಂದ ಅವನು ಸ್ವಲ್ಪವೂ ಹೆದರದೆ, ಏರಿ ಬರುತ್ತಿರುವ ಇಸ್ಮಾಯಿಲನ ಕುದುರೆಯನ್ನು ತುಂಡರಿಸಿದನು. ಕೂಡಲೆ ಇಸ್ಮಾಯಿಲನು ಕುದುರೆಯಿಂದ ಕೆಳಗೆ ಬಿದ್ದನು. ಇಸ್ಮಾಯಿಲನು

ಇನ್ನು ತನ್ನ ಬಾಣವನ್ನು ಭಾವೂರಾಯನ ಮೇಲೆ ಪ್ರಯೋಗಿಸತಕ್ಕವನು; ಅಷ್ಟರಲ್ಲಿ ಈ ಮೊದಲು ಇಸ್ಮಾಯಿಲನ ಬಾಣಕ್ಕೆ ಗುರಿಯಾದ ಮನುಷ್ಯನು, ಚಟ್ಟನೆ ಮುಂದೆ ಬಂದು ಇಸ್ಮಾಯಿಲನ ಕೈ ಹಿಡಿದನು.

ಆ ಗೃಹಸ್ಥನು ಇಸ್ಮಾಯಿಲನ ಕೈಯೊಳಗಿನ ಧನುಷ್ಯವನ್ನು ಕಸಗೊಂಡು ಬಹಳ ಕ್ರೋಧದಿಂದ ಅನ್ನುತ್ತಾನೆ:—“ಮೂರ್ಖ, ಮುಸುಂಡ್ಯಾ, ಹೇಡಿಯಂತೆ ಹೀಗೆ ಮರೆಗೆ ನಿಂತು ಬಾಣಪ್ರಯೋಗವನ್ನೇಕೆ ನಡಿಸಿರುತ್ತೀ? ಅಂಥ ಧೈರ್ಯವೇ ಇದ್ದರೆ, ಬಾ ಎದುರಿಗೆ; ಹಾಗು ತೋರಿಸು ನಿನ್ನ ಚಾತುರ್ಯ-ಸಾಹಸಗಳನ್ನು! ನೀಚಾ ಆ ಹೆಣ್ಣುಮಗಳ ವಿಷಯವಾಗಿ ನನ್ನ ಮೇಲೆ ಅಪವಾದ ಹೇರಬಯಸುತಿದ್ದೆಯಲ್ಲವೆ? ಬದ್‍ಮಾಷ್! ನಿನ್ನನ್ನು ಈಗಲೆ ತುಂಡರಿಸಿ ಚೆಲ್ಲುತ್ತಿದ್ದೆನು; ಆದರೆ ನೀನು ಆ ಸಾಧ್ವಿಯ ಗಂಡನಾದ್ದರಿಂದ, ನಿನ್ನನ್ನು ಇಂದು ಮತ್ತೆ ಕ್ಷಮಿಸಿ ಬಿಡುತ್ತೇನೆ. ಇಂದಿನಿಂದ ನೀನು ನಮ್ಮ ಊರ ಗಡಿಯಲ್ಲಿ ಕೂಡ ಇರದೆ, ನಿನಗೆ ದಾರಿ ತೋರಿದತ್ತ ಹೊರಟು ಹೋಗು. ನೀನು ಇನ್ನು ಮುಂದೆ ನನ್ನ ಕಣ್ಣಿಗೆ ಬೀಳುವ ಸಾಹಸವನ್ನೆಂದೂ ಮಾಡಬೇಡ. ಒಂದುವೇಳೆ ನೀನು ನಿನ್ನ ಈ ಲಂಡತನವನ್ನು ಮತ್ತೆ ನಡೆಸುತ್ತಿರುವದನ್ನು ಕಂಡರೆ, ನಿನ್ನನ್ನು ಅಲ್ಲಿಯೇ ಯಮಸದನಕಟ್ಟುವೆನೆಂಬದನ್ನು ಲಕ್ಷ್ಯದಲ್ಲಿಡು” ಎಂದೆಂದು, ಆ ತರುಣನು ಇಸ್ಮಾಯಿಲನಿಗೆ ಅರ್ಧಚಂದ್ರಕೊಟ್ಟು ದೂಡಿದನು.

ಆ ತರುಣನು ಇಪ್ಪತ್ತೈದರ ಒಳ-ಹೊರಗಿನ ವಯಸ್ಸಿನವನು. ಅವನು ಆಜಾನುಬಾಹುವಾಗಿದ್ದು, ಗೌರವರ್ಣದವನೂ, ಹುರಿಕಟ್ಟಿನ ಶರೀರದವನೂ ಆಗಿದ್ದನು. ಅವನ ದೃಷ್ಟಿಯು ಬಹಳ ತೇಜಃಪುಂಜವಾಗಿತ್ತು. ಆತನ ಮುಖಚರ್ಯೆಯಿಂದ ಅವನು ಎಷ್ಟು ಸರಳ ನಡತೆಯವನಾಗಿ ಕಾಣುತ್ತಿದ್ದನೋ, ಅಷ್ಟೇ ದೃಢಮನಸ್ಸಿನವನೂ ಆಗಿದ್ದನು. ಆತನ ಮಾತಿನ ರೀತಿಯಿಂದ, ಅದನ್ನು ಕೇಳುವವರಿಗೆ ಇವನಾವನೋ ಅಧಿಕಾರಿಯಿರಬೇಕೆಂದು ತಟ್ಟನೆ ಕಂಡು ಬರುತ್ತಿತ್ತು.

ಇಸ್ಮಾಯಿಲನು ಹೊರಟು ಹೋದ ಬಳಿಕ ಆ ತರುಣನು ಭಾವೂರಾಯನನ್ನುದ್ದೇಶಿಸಿ:—“ನೋಡಿರಿ, ಇವನು ಎಂಥ ನೀಚನಿರುವನೆಂಬದನ್ನು? ಇವನು ಹೀಗೆ ಮರೆಮೋಸದಿಂದ ನನ್ನನ್ನು ಕೊಲ್ಲಲಿಕ್ಕೆ ಪ್ರಯತ್ನಿಸಿದುದು

ಇದು ಎರಡನೇ ಸಲವು; ಆದರೆ ಈತನು ನಿಮ್ಮನ್ನು ಕೊಲ್ಲ ಬಯಸಿದ್ದರ ಕಾರಣವೇನಿರಬೇಕು? ಇವನ-ನಿಮ್ಮ ಪೂರ್ವದ ಪರಿಚಯವಿದೆಯೋ?" ಎಂದು ಪ್ರಶ್ನೆ ಮಾಡಲು, ಭಾವೂರಾಯನು ಇಸ್ಮಾಯಿಲನ ವಿಷಯದ ಎಲ್ಲ ಸಂಗತಿಯನ್ನೂ ತಿಳಿಸಿ:--"ಇವನು ನಿಮ್ಮನ್ನು ಮತ್ತೆ ಮತ್ತೆ ಕೊಲ್ಲಲಿಕ್ಕೆ ಪ್ರಯತ್ನ ಪಡುತ್ತಿರುವ ಕಾರಣವೇನೆ"ಂದು ಆ ತರುಣನಿಗೆ ಪ್ರಶ್ನೆ ಮಾಡಿದನು.

ಆಗ ಆ ತರುಣನು:—"ಆ ನೀಚನು ನನ್ನ ವಿಷಯವಾಗಿ ಹೊಲ್ಲದ ಸಂಶಯಕ್ಕೆ ಗುರಿಯಾಗಿರುತ್ತಾನೆ. ಕೆಲ ದಿನಗಳ ಹಿಂದೆ ನಮ್ಮ ಊರ ಬಳಿಯ ವಾಕಿನದ ಪರ್ಯಾನಾಯಕನ ಮೇಲೆ ಬಾದಶಹನು ಸ್ವತಃ ದಾಳಿಯಿಟ್ಟಿದ್ದನು. ಬಾದಶಹನ ಕಡೆಯ ಜಮಾಲಖಾನನೆಂಬ ಸರದಾರನು ನಮ್ಮ ಪಾರದ ಊರೊಳಗಿಂದ ಹಾಯ್ದು ಹೋಗುತ್ತಿರುವಾಗ, ಆ ಜಮಾಲಖಾನನಿಗೂ ಈ ನೀಚ ಇಸ್ಮಾಯಿಲ ಪಿಂಜಾರನಿಗೂ ಗಂಟುಬಿತ್ತು. ಈತನ ಪರಿಚಯವು ಆ ಖಾನನಿಗೆ ಮೊದಲಿನಿಂದಲೂ ಇದ್ದದರಿಂದ, ಆವನು ಈತನ ಮನೆಯಲ್ಲೇ ಬಂದಿಳಿದನು. ಈ ಇಸ್ಮಾಯಿಲನ ಹೆಂಡತಿಯು ಬಹಳ ಸುರೂಪಿಯಾಗಿರುವಂತೆ, ಬಹು ಸುಸ್ವಭಾವದವಳೂ ಆಗಿರುತ್ತಾಳೆ. ಈ ಗಂಡ-ಹೆಂಡಿರು ನಮ್ಮೂರಿಗೆ ಬಂದು ಕೆಲ ತಿಂಗಳುಗಳೇ ಆದವು. ಆ ಮೊದಲು ಇವರು ಪುಣೆಯ ಬಳಿಯಲ್ಲ ನೀವು ಹೇಳುವ ಲೋಣದಲ್ಲೇ ಇದ್ದರಂತೆ. ಖಾನನಂಥ ದೊಡ್ಡ ಮನುಷ್ಯನು ಬಂದು ಮನೆಯಲ್ಲಿ ತಳವೂರಿ ಕುಳಿತದ್ದರಿಂದ, ಇಸ್ಮಾಯಿಲನು ಆಗಾಗ್ಗೆ ಸಮೀಪದ ಪೇಟೆಯ ಊರಿಗೆ ಹೋಗಿ ಸಾಮಾನುಗಳನ್ನು ತರಬೇಕಾಯಿತು. ಈತನು ಮನೆಯಲ್ಲಿರದ ಸಂಧಿಯನ್ನು ಸಾಧಿಸಿ, ಆ ಖಾನನು ಇವನ ಹೆಂಡತಿಯ ಕೂಡ ಸಂಧಾನ ಕಟ್ಟತೊಡಗಿದನು. ವಯಸ್ಸಾದವನೂ, ದೊಡ್ಡ ಮನುಷ್ಯನೂ ಆದ ಖಾನನ ಕೂಡ ಆ ಸಾಧ್ವಿಯು ಸರಳತನದಿಂದ ನಡೆಯುತ್ತಿದ್ದಳು. ಖಾನನು ಕೈಸಡಿಲು ಬಿಟ್ಟು ಹಣ ಕೊಟ್ಟು, ಇಸ್ಮಾಯಿಲನನ್ನು ಆಗಾಗ್ಗೆ ಪೇಟೆಗೆ ಕಳಿಸಹತ್ತಿ, ಆಕೆಯ ಕೂಡ ಹೆಚ್ಚೆಚ್ಚು ಸಲಿಗೆ ನಡಿಸಹತ್ತಿದನು. ಮುಂದೆ ಒಂದು ದಿನ ಆ ಖಾನನ ಇಚ್ಛೆಯ ಮೇರೆಗೆ ಆ ತ್ರಿವರ್ಗವೂ ವನಭೋಜನಕ್ಕೆಂದು ಹೋಗಿರಲು, ಖಾನನು ಆವಳನ್ನು ಆವಳ ಗಂಡನಿಂದ ದೂರೀಕರಿಸಿ: 'ನೀನು ನನ್ನೊಡನೆ ನಡೆ. ನಾನು ದೊಡ್ಡ ಸರದಾರನಿರುತ್ತೇನೆ. ನೀನು ಈ ಬಡ ಪಿಂಜಾರನ ಹೆಂಡತಿಯಾಗಿರಲಿಕ್ಕೆ ತಕ್ಕವಳಲ್ಲ. ನಾನು ನಿನ್ನನ್ನು ನನ್ನ

ಪ್ರೀತಿಯ ಪೇಟಿಯನ್ನಾಗಿರಿಸಿಕೊಳ್ಳುತ್ತೇನೆ' ಎಂದು ಅಂದನು. ಅವಳು ಆತನ ಮಾತಿಗೆ ಕಿವಿಗೊಡದೆ ನಿರಾಕಾರಿಯಿಂದ ಹೇಳಿಕೊಂಡರೂ, ಆ ಯವನ ರಾಕ್ಷಸನು ಕೇಳಲಿಲ್ಲ; ಹಾಗು ಅವನು ಅವಳನ್ನು ಬಲಾತ್ಕಾರದ ತೊಡಗಿದನು. ಅವಳು ಒದರಾಡಿ ಚೀರಾಡಿ ರಂಪಾಟ ನಡಿಸಿದರೂ ಕೇಳದೆ, ಖಾನನು ಅವಳನ್ನು ತನ್ನ ಕುದುರೆಗೆ ಕಟ್ಟಿ ಓಡಿಸಿಕೊಂಡು ನಡೆದನು. ಸುದೈವದಿಂದ ನಾನೂ ಅಂದು ಆ ಕಡೆಗೆ ಏತಕ್ಕೋ ಹೋಗಿದ್ದೆನು. ನನ್ನನ್ನು ಕಂಡ ಕೂಡಲೆ ಅವನು ಕುದುರೆಯನ್ನು ಭರದಿಂದ ಬಿಟ್ಟನು ಆತನ ವಿಷಯವಾಗಿ ನನ್ನಲ್ಲಿ ಸಂಶಯವುಂಟಾಗಲು, ನಾನೂ ಅವನನ್ನು ಬೆನ್ನಟ್ಟಿದೆನು; ಹಾಗು ಅವನ ಕುದುರೆಯನ್ನು ಆಪತಗೊಳಿಸಿ, ಅವನನ್ನು ಕುದುರೆಯಿಂದ ಇಳಿಯ ಹಚ್ಚಿದೆನು. ಆಗ ಆ ಸಾಧ್ವಿಯು:—"ನನ್ನನ್ನು ಈ ನೀಚನ ಜಾಲದಿಂದ ಸಂರಕ್ಷಿಸಿರಿ" ಎಂದು ಚೀರಿದಳು. ಕೂಡಲೆ ನಾನು ನನ್ನ ಕೈಗತ್ತಿಯಿಂದ ಅವನನ್ನೂ ಆಪತಗೊಳಿಸಿದೆನು. ಅವನ ಗತಿಯು ಮುಂದೇನಾಯಿತೆಂಬದರ ಕಡೆಗೆ ಲಕ್ಷ್ಯಗೊಡದೆ, ನಾನು ಅವಳನ್ನು ಆತನ ಆ ಕುಂಟಬಿದ್ದ ಕುದುರೆಯ ಮೇಲೆಯೇ ಕೂಡ್ರಿಸಿಕೊಂಡು ನಮ್ಮ ಊರಿಗೆ ಬಂದೆನು. ದಾರಿಯಲ್ಲಿ ಅವಳು ನಡೆದ ಸಂಗತಿಯನ್ನೆಲ್ಲ ನನಗೆ ತಿಳಿಸಿದಳು. ನಾವು ಮನೆಗೆ ತಲುಪಲಿಕ್ಕೆ ರಾತ್ರಿಯಾಯಿತು. ಆದರಿಂದ ಆ ರಾತ್ರಿ ಅವಳನ್ನು ನನ್ನ ಮನೆಯಲ್ಲೇ ನನ್ನ ಮಲತಾಯಿಯ ಹತ್ತರ ಇರಿಸಿಕೊಂಡು, ಮರುದಿನ ಅವಳ ಗಂಡನ ಕಡೆಗೆ ಕಳಿಸಿ ಕೊಟ್ಟೆನು. ನಡೆದ ಸಂಗತಿಯ ಬಗ್ಗೆ ಅವನು ನನಗೆ ಕೃತಜ್ಞತೆಯನ್ನು ತೋರಿಸಬೇಕಾಗಿತ್ತು; ಆದರೆ ಆ ನೀಚನು ಹಾಗೆ ಮಾಡದೆ, ನನ್ನನ್ನೇ ಕೊಲ್ಲಲಿಕ್ಕೆ ಯತ್ನಿಸುತ್ತಿರುವನು!" ಎಂದು ಹೇಳಿದನು.

ಬಳಿಕ ಭಾವೂರಾಯನು ತನ್ನ ಹಾಗು ಸಾವಿತ್ರೀಬಾಯಿಯ ಸಂಗತಿಯನ್ನು ಆತನಿಗೆ ತಿಳಿಸಲು, ಕೂಡಲೆ ಆ ಸುಸ್ವಭಾವೀ ಶಹಾಜಿ ಪಾಟೀಲನು ಅವರನ್ನು ತನ್ನ ಮನೆಗೆ ಕರೆದೊಯ್ದನು

---

## ಪತಿತ ಪಿತನ ಅಧಃಪತನ!

ಸಾವಿತ್ರೀಬಾಯಿಯು ಪಾರದ ದುರ್ಗಕ್ಕೆ ಬಂದ ಬಳಿಕ ಆಕೆಯ ಬೇನೆಯು ಹೆಚ್ಚಿತೇ ಹೊರತು, ಕಡಿಮೆಯಾಗಲಿಲ್ಲ. ಪಾರದ ದುರ್ಗವು ಸೊಲ್ಲಾ

ಪುರಕ್ಕೆ ಸಮೀಪವಾಗಿತ್ತು. ಬಾದಶಹನ ದಾಳಿಯು ಆ ಪ್ರಾಂತಕ್ಕೆ ಆಗಾಗ್ಗೆ ಇದ್ದದ್ದೇ; ಯಾಕಂದರೆ, ಬಾದಶಹನ ಬೀಡು ಅಲ್ಲಿಂದ ಕೆಲ ಹರದಾರಿಗಳ ಮೇಲೆ ಭೀಮಾತೀರದಲ್ಲಿಯೇ ಇತ್ತು. ಶಹಾಜಿ ಪಾಟೀಲನು ಸಾವಿತ್ರಿ ಬಾಯಿಯ ವಿಷಯವಾಗಿ ಬಹು ಕನಿಕರಪಟ್ಟಿದ್ದನು. ಆತನು ಆಕೆಯ ಸೇವಾ-ಶುಶ್ರೂಷೆಗಾಗಿ ಕೆಲ ಜನ ದಾಸ-ದಾಸಿಯರನ್ನು ನಿಯಮಿಸಿದ್ದಲ್ಲದೆ, ತಾನು ಸ್ವತಃ ಆಕೆಯ ಅನ್ನ-ನೀರು, ಔಷಧೋಪಚಾರಗಳ ಬಗ್ಗೆ ಹೆಚ್ಚಾಗಿ ಶ್ರಮವಹಿಸುತ್ತಿದ್ದನು. ಧನಾಜಿ ಜಾಧವನ ಬಳಿಯಲ್ಲಿದ್ದ ಕಡುಗಲಿಯಾದ ಪದಮುಜಿಯು ಸಾವಿತ್ರೀಬಾಯಿಯ ಮಗನೆಂಬದನ್ನು ಕೇಳಿ, ಶಹಾಜಿಗೆ ಒಂದು ಬಗೆಯ ಅಭಿಮಾನವೂ ಸಂತೋಷವೂ ಎನಿಸಿತು; ಯಾಕಂದರೆ, ಪದಮುಜಿಯನ್ನು ಅವನು ಈ ಮೊದಲೇ ಕಣ್ಣುಟ್ಟಿ ನೋಡಿದ್ದು, ಅವನು ಆ ವೀರನ ಬಗ್ಗೆ ಸಹಾನುಭೂತಿಯುಳ್ಳವನಾಗಿದ್ದನು. ಅದರಿಂದ ಶಹಾಜಿಯು ಸಾವಿತ್ರೀಬಾಯಿಯನ್ನು ತನ್ನ ದುರ್ಗದಲ್ಲಿರಿಸಿಕೊಂಡು ಅವಳ ಸೇವಾಶುಶ್ರೂಷೆ ನಡಿಸಿದ್ದಲ್ಲದೆ, ಅವಳ ಆ ಏಕಮಾತ್ರ ಪುತ್ರನಾದ ಪದಮುಜಿಯನ್ನು ಧನಾಜಿ ರಾಯನ ದಂಡಿದ್ದಲ್ಲಿಗೆ ಹೋಗಿ ಕರೆತರಲಿಕ್ಕಂದು ತನ್ನ ವಿಶ್ವಾಸಿಕ ಜನರನ್ನು ಕಳಿಸಿಕೊಟ್ಟನು.

ಒಂದು ದಿನ ಭಾವೂರಾಯನು ಶಹಾಜಿಗೆ ಆ ಮಾತು ಈ ಮಾತು ಹೇಳುತ್ತ ಸೂರ್ಯಾಜಿ ಪಿಸಾಳನ ಸಂಬಂಧದ ಸಂಪೂರ್ಣ ಸಂಗತಿಯನ್ನು ತಿಳಿಸಿ, ಕಡೆಗೆ:—"ಪಾಟೀಲದಾದಾನವರೇ, ನಮ್ಮ ಹಂಸಾಬಾಯಿಯ ಬಗ್ಗೆ ನಿಮಗೆ ಎಷ್ಟು ಹೇಳಿದರೂ ಅಲ್ಪವೇ ಆಗುವಂತಿದೆ; ಯಾಕಂದರೆ, ಹಂಸಾಬಾಯಿಯ ವಿಷಯದ ಭವಿಷ್ಯವೇ ಅಷ್ಟು ಉಜ್ವಲವಾಗಿರುತ್ತದೆ. ಅವಳ ಉದರದಲ್ಲಿ ರಾಜಪುತ್ರನ ಜನ್ಮವಾಗುವದೆಂದು ನಗರದ ಸುಪ್ರಸಿದ್ಧ ಬುಡುಬುಡಿಕನು ಹೇಳಿರುತ್ತಾನೆ; ಆದರೆ ಆಕೆಯು ರಾಜಮಾತೆಯಾಗುವ ವರೆಗೆ ಹಲವು ಕುತ್ತಗಳನ್ನು ಮಾತ್ರ ದಾಟಬೇಕಾಗಿದೆ!"

"ಆಕೆಯ ವಿಷಯದ ಭವಿಷ್ಯವು ಹಾಗಿದ್ದರೆ, ಅವಳ ಧೈರ್ಯ-ಸಾಹಸಗಳಾದರೂ ಅಷ್ಟು ಉಜ್ವಲವೇ ಆಗಿರಬೇಕಾಗುವವು. ಅವಳು ಯಾವನೊಬ್ಬ ರಾಜ-ಮಹಾರಾಜನ ರಾಣಿಯಾಗಬಹುದು; ಆದರೆ ಭಾವುರಾಯಾ, ಅವಳನ್ನು ವರಿಸುವ ಅಂಥ ಯಾವ ದೊಡ್ಡ ರಾಜ ಇಲ್ಲವೆ ಮಹಾರಾಜನು ಈಗ ನಮ್ಮ ಮಹಾರಾಷ್ಟ್ರದಲ್ಲಿಲ್ಲಿರುವನು?"

'ಪಾದಾನಾ ಹೇಬ, ಹಾಗೆನ್ನಬೇಡಿರಿ. ಮನೆತನಸ್ಥ ಹಾಗು ಪ್ರತಿಷ್ಠಿತ ಮರಾಟರೇನು ಕಡಿಮೆಯಿರುವರೇ? ನೀವೇನು ದೊಡ್ಡ ಮನೆತನಸ್ಥ ಮರಾಟರಲ್ಲವೆ?''

''ಅಹುದು. ಅಲ್ಲ ಹೇಗೆ? ಆದರೆ ನಾವು ರಾಜರಲ್ಲ; ಪಾಟೀಲರು.''

''ಆದರೇನಾಯಿತು? ನಮ್ಮ ಶ್ರೀ ಶಿವಛತ್ರಪತಿಗಳ ಮನೆತನವೂ ಮೊದಲು ಪಾಟೀಲರದೇ ಆಗಿತ್ತು; ಅಲ್ಲದೆ ಛತ್ರಪತಿಗಳ ತಂದೆಯವರು ಕೆಲ ದಿನ ಪ್ರತ್ಯಕ್ಷ ಪಾಟೀಲರೇ ಆಗಿದ್ದರಂತೆ. ಅವರೂ ಮೊದಲು ನಿಜ್ಮಾಮಂತೆ ಬಾದ ಶಹನ ಹಸ್ತಕರೇ ಆಗಿದ್ದರು.''

ಭಾವೂರಾಯನ ಆ ಸ್ಪಷ್ಟೀಕರಣವನ್ನು ಕೇಳಿ ಶಹಾಜಿಯು ಸುಮ್ಮ ನಾದನು. ಹಂಸೆಯ ಸಂಗತಿಯನ್ನು ಕೇಳಿ ಕೇಳದಂತೆ ಆಕೆಯ ಕಾಲ್ಪನಿಕ ಮೂರ್ತಿಯು ಶಹಾಜಿ ಪಾಟೀಲನ ಮನಶ್ಚಕ್ಷುಗಳ ಮುಂದೆ ಮಂದಹಾಸ ದಿಂದ ಚಲಿಸಲಾರಂಭಿಸಿತು. ಮಾಡಿಕೊಂಡರೆ ಇಂಥ-ಹಂಸೆಯಂಥ-ಅವೇಕೆ ಹಂಸೆಯನ್ನೇ ಲಗ್ನ ಮಾಡಿಕೊಳ್ಳಬೇಕೆಂದು ಆ ತರುಣ ಪಾಟೀಲನಿಗೆ ಅನಿಸ ಲಾರಂಭಿಸಿತು. ಆದರಿಂದ ಎಷ್ಟು ಕಷ್ಟಪಟ್ಟಾದರೂ ಅವಳನ್ನು ಶೋಧಿಸಿ ತರಬೇಕೆಂದು ಅವನು ಸಂಕಲ್ಪಿಸಿಕೊಂಡು:-"ಭಾವುರಾಯಾ, ನಾವು ಹೇಗೂ ಪದಮಜಿಯನ್ನು ಕರೆತರಲಿಕ್ಕೆ ನಮ್ಮ ಜನರನ್ನು ಕಳಿಸಿ ಬಿಟ್ಟಿರುತ್ತೇವೆ. ಪದಮಜಿಯು ಬಂದ ಕೂಡಲೆ ಅವನ ಮುಖಾಂತರ ಹಂಸೆಯ ಪತ್ತೆಯನ್ನು ತೀವ್ರವಾಗಿ ಹಚ್ಚೋಣ,'' ಎಂದು ನುಡಿದನು.

ಎಷ್ಟು ಔಷಧೋಪಚಾರ ಮಾಡಿದರೂ ಸಾವಿತ್ರೀಬಾಯಿಗೆ ಗುಣ ವಾಗದೆ, ಆಕೆಯು ಹಾಸಿಗೆಯನ್ನೇ ಹಿಡಿದಳು. ಇವರ ಬೇನೆಯು ಯಾವ ಶಾರೀರಕ ರೋಗಕ್ಕಿಂತ ಮನೋರೋಗವೇ ಬಲವತ್ತರವಿದ್ದರಿಂದ, ಅದು ಯಾವ ಔಷಧಗಳಿಂದಲೂ ಕಡಿಮೆಯಾಗಲಾರದೆಂದು ವೈದ್ಯರು ಅಭಿಪ್ರಾಯ ಪಟ್ಟರು. ಭಾವೂರಾಯನೂ ಶಹಾಜ ಪಾಟೀಲನೂ ಕೂಡಿ ಎಷ್ಟು ಬಗೆ ಯಿಂದ ಸಮಾಧಾನ ಹೇಳಿದರೂ, ಆಕೆಗೆ ಕೊಂಚವೂ ವಿರಾಮವೆನಿಸ ಲೊಲ್ಲದು. ತನ್ನ ಗಂಡನೇ ಹಂಸೆಯನ್ನು ಬಾದಶಹನ ಜನಾನಖಾನೆಗೆ ಒಯ್ದು ಸೇರಿಸಿರುವದರಿಂದಲೂ, ಅವಳು ಮನೆಯಿಂದ ಹೊರಡುವಾಗ ತನಗೆ ಹೇಳಿ ಸಹ ಹೋಗದ್ದರಿಂದಲೂ, ಅವಳೂ ಅವಳ ತಂದೆಯಂತೆ ಜಾತಿ- ಕುಲ-ಶೀಲಭ್ರಷ್ಟಳಾದಳೆಂದು ಸಾವಿತ್ರೀಬಾಯಿಯ ಮನಸ್ಸಿನ ಸ್ಥಿತಿಯು

ವಾದಂತಾಗಿ ಬಿಟ್ಟಿತ್ತು. ಅದರಿಂದ ತಾನು ಇನ್ನು ಈ ಲೋಕದಲ್ಲಿ ಯಾವ ವೋರೆ ಕಷ್ಟಕೊಂಡು ಜೀವ ಹಿಡಿಯಬೇಕೆಂಬ ಬಗ್ಗೆ ಅವಳಿಗೆ ತೀರ ಉದಾಸವೆನಿಸಿತ್ತು. ಭಾವೂರಾಯನಾಗಲಿ, ಬೇರೆ ಜನರಾಗಲಿ ಹೇಳುವ ಸಾಮಾಧಾನೋಕ್ತಿಗಳಿಂದ ಅವಳ ಮನಸ್ಸಿಗೆ ಒಂದಿಷ್ಟು ಸಮಾಧಾನವೆನಿಸುತ್ತಿರಲಿಲ್ಲ; ಇಷ್ಟೇ ಅಲ್ಲ, ಅವುಗಳಿಂದ ಅವಳ ಅಂತಃಕರಣಕ್ಕೆ ಒಂದು ಬಗೆಯ ಅಸಹಿಷ್ಣುವಾದ ಒರೆಯು ಮಾತ್ರ ಆಗಾಗ್ಗೆ ಹಚ್ಚಿದಂತಾಗಿ, ಅದರಿಂದ ಅವಳ ತಲ್ಲಣವು ಹಾರತೊಡಗುತ್ತಿತ್ತು. ಸಾವಿತ್ರೀಬಾಯಿಯು ಅಂತರ್ದಾಹದಿಂದಲೂ, ಕಾಲನೋವಿನ ಬಾಧೆಯಿಂದಲೂ ಹೀಗೆ ಬಳಲುತ್ತಿರಲು, ಒಂದು ದಿನ ಬೆಳಗಿನ ಝಾವದಲ್ಲಿ ಅವಳಿಗೊಂದು ವಿಚಿತ್ರವಾದ ಸ್ವಪ್ನಬಿದ್ದಿತು:

ಆ ಸ್ವಪ್ನದಲ್ಲಿ ತನ್ನ ಬೇನೆಯ ಹೆಚ್ಚಳದಿಂದ ತಾನು ತೀರಿಕೊಂಡಂತೆ ಅವಳಿಗನಿಸಿತು. ಬಳಿಕ ತನ್ನ ಮಗಳಾದ ಹಂಸೆಯು ಬಾದಶಹನ ಸೆರೆಯಿಂದ ಪಾವಿತ್ರ್ಯಪೂರ್ಣ ಮುಕ್ತಳಾಗಿ ಬಂದಂತೆಯೂ, ಆಕೆಯನ್ನು ಪಾರದದ ಶಹಾಜಿ ಪಾಟೀಲನಿಗೆ ಕೊಟ್ಟು ಲಗ್ನವಾಗುತ್ತಿರುವಂತೆಯೂ ಆಕೆಗೆ ಭಾಸವಾಯಿತು. ಮಗಳ ಆ ಸೌಭಾಗ್ಯಸುಖವನ್ನು ಕಂಡು, ತಾನು ಒಳ್ಳೇ ಆನಂದಮಗ್ನಳಾಗಿರುವಂತೆ ಅವಳಿಗೆ ಭಾಸವಾಯಿತು. ಅಷ್ಟರಲ್ಲಿ ತನ್ನ ಮಗನಾದ ಪದಮಜಿಯು ದೊಡ್ಡ ಸರದಾರನೆಂದು ಪ್ರಸಿದ್ಧಿ ಹೊಂದಿ, ತನ್ನ ಅತುಲ ವೈಭವದೊಂದಿಗೆ ತನ್ನ ಭೆಟ್ಟಿಗೆಂದು ಕೇವಲ ಲೀನತೆಯಿಂದ ಬಂದು ತನ್ನ ಪಾದಗಳ ಮೇಲೆ ತಲೆಯನ್ನಿಟ್ಟು ನಮಸ್ಕರಿಸುತ್ತಿರುವಾಗ, ಒಳ್ಳೇ ಪ್ರೇಮಭರದಿಂದ ತಾನು ಆತನ ನೆತ್ತಿಯನ್ನಾಘ್ರಾಣಿಸಿ, ಅವನನ್ನು ಹಿಡಿದೆತ್ತುತ್ತಿರುವಂತೆಯೂ ಆ ಸಾವಿತ್ರೀಬಾಯಿಗೆ ಅಂದಿನ ಆ ಸ್ವಪ್ನದಲ್ಲಿ ತೋರಿತು. ತನ್ನ ಮಗನು ನಿಜವಾಗಿಯೇ ತನ್ನ ಎದುರಿಗೆ ಬಂದು ನಿಂತಿರುವನೆಂಬ ಭ್ರಮೆಯಿಂದ ಅವಳು ಕಣ್ತೆರೆದು ನೋಡುತ್ತಾಳೆ, ಯಾವುದೋ ಒಂದು ವ್ಯಕ್ತಿಯು ನಿಜವಾಗಿಯೂ ತನ್ನ ಕಾಲ ಮೇಲೆ ತಲೆಯನ್ನಿಟ್ಟು ನಮಿಸುತ್ತಿತ್ತು. ಆಗ ಅವಳು ಟಕಮಕವೆಂದು ಆ ವ್ಯಕ್ತಿಯ ಕಡೆಗೆ ನೋಡಹತ್ತಲು. ಆ ವ್ಯಕ್ತಿಯು:—ಅವ್ವಾ, ನಾನು ಪದಮಜಿಯು. ನಮಸ್ಕರಿಸುತ್ತೇನೆ, ಎಂದು ನುಡಿಯಿತು.

ಪದಮಜಿಯು ನಿಜವಾಗಿಯೂ ಆಗ ಅಲ್ಲಿಗೆ ಬಂದಿದ್ದನು! ಶಹಾಜಿ ಪಾಟೀ

ಲನ ಅನುಚರರು ಅವನನ್ನು ಧನಾಜಿರಾಯನ ದಂಡಿನಿಂದ ಕರೆತಂದಿದ್ದರು. ಆ ತಾಯಿ-ಮಕ್ಕಳ ಅಂದಿನ ಭೆಟ್ಟಿಯ ಸಂತೋಷವು ಅವರ್ಣನೀಯವಾಗಿತ್ತು!

ಸಾವಿತ್ರೀಬಾಯಿಯು ಅತ್ಯಾನಂದದಿಂದ ಕೆಲ ಕ್ಷಣಗಳನ್ನು ಕಳೆದ ಬಳಿಕ, ಮಗನನ್ನು ಕುರಿತು:-'ಅಪ್ಪಾ ಪದಮಾಜಿ, ನನ್ನ ಹಂಸೆಯು ಎಲ್ಲಿರು ತ್ತಾಳೆ?' ಎಂದು ತವಕದಿಂದ ಪ್ರಶ್ನೆ ಮಾಡಿದಳು.

"ಅವ್ವಾ, ಅದು ನನಗಿನ್ನೂ ತಿಳಿಯದು; ಆದರೂ ಅವಳು ಎಲ್ಲಿಯೇ ಇರಲಿ, ಅವಳನ್ನು ಕರೆತಂದು ನಿನಗೆ ಭೆಟ್ಟಿಮಾಡಿಸುತ್ತೇನೆ. ಇನ್ನು ನೀನು ಆ ಬಗ್ಗೆ ಕೊಂಚವೂ ಯೋಚಿಸಬೇಡ ನೀವಿಬ್ಬರೂ ಲೋಣಿಯಲ್ಲೇ ಸುಖವಾಗಿರುವಿರೆಂದು ನಾನು ಮೊದಲು ತಿಳಿದಿದ್ದೆನು; ಆದರೆ ಕೆಲ ದಿನಗಳ ಹಿಂದೆ ಬಾದಶಹನ ಸ್ವಾರಿಯು ಖೇಡದ ಕಡೆಗೆ ತಿರುಗಲು, ನಿಮ್ಮನ್ನು ಲೋಣಿಯಿಂದ ಬೇರೆ ಕಡೆಗೆ ಕರೆದೊಯ್ಯಬೇಕೆಂದು ನಾನು ಲೋಣಿಗೆ ಹೋಗಲು, ಆ ಊರ ಆ ವಾಡೆಯಲ್ಲಿ ನೀವು ಇರಲಿಲ್ಲ; ಇಷ್ಟೇ ಅಲ್ಲ, ಆ ಊರೊಳಗಿನ ಬಹುತರ ಎಲ್ಲ ಜನರೂ ತಮ್ಮ ಮನೆ-ಮಾರುಗಳನ್ನೆಲ್ಲ ತೊರೆದು ದೇಶಾಂತರಕ್ಕೆ ಹೊರಟು ಹೋಗಿದ್ದರು. ಅದರಿಂದ ಅಲ್ಲಿ ನನಗೆ ನಿಮ್ಮ ಪತ್ತೆ ಹತ್ತಲಿಲ್ಲ ಬಳಿಕ ನಾನು ನಾಗೋಜಿ-ಭಾವೂರಾಯರ ಪತ್ತೆ ಯನ್ನು ಹಚ್ಚಿ, ಅವರಿಂದ ನಿಮ್ಮ ಇರವನ್ನು ತಿಳಿಯಬೇಕೆಂದು ಖೇಡಿಗೆ ಹೋಗಲು, ಅವರೂ ಊರಲ್ಲಿರಲಿಲ್ಲ. ಆದರಿಂದ ಭಗ್ನಮನೋರಥನಾಗಿ ನಾನು ಅಲ್ಲಿಂದ ತಿರುಗಬೇಕಾಯಿತು. ಅಲ್ಲಿಂದ ಬಂದಂದಿನಿಂದ ನನಗೆ ನಿಮ್ಮ ವಿಷಯದ ಚಿಂತೆಯೇ ಚಿಂತೆಯು! ೨-೩ದಿನಗಳ ಹಿಂದೆ ಈ ಶಹಾಜಿ ಪಾಟೀಲರ ಜನರು ಬಂದು ನನಗೆ ಭೆಟ್ಟಿಯಾಗಿ, ನಿನ್ನ ಸಂಗತಿಯನ್ನು ತಿ ಸಿದ ಬಳಿಕ ಮಾತ್ರ ನನಗೆ ತುಸ ಹಾಯ್ ಎನಿಸಿತು."

ಬಳಿಕ ಶಹಾಜಿ ಪಾಟೀಲನು ಪದಮಾಜಿಯನ್ನು ಕುರಿತು:-"ಪದಮಾಜೀ, ನೀವು ಮುಂದೇನು ಮಾಡಬೇಕೆಂದಿರುತ್ತೀರಿ? ನಿಮ್ಮ ತಾಯಿಯವರ ಪ್ರಕೃ ತಿಯು ಚಿಂತಾಜನಕವಾಗಿದೆ; ಆದರಂತೆ ಹಂಸಾಬಾಯಿಯ ಪತ್ತೆ ಹಚ್ಚು ವದೂ ಅತ್ಯವಶ್ಯಕವಾಗಿದೆ. ಹಂಸಾಬಾಯಿಯನ್ನು ಕಾಣದ ಹೊರತು ನಿಮ್ಮ ತಾಯಿಗೆ ಗುಣವಾಗುವಂತಿಲ್ಲ. ಇಂದ ಮೇಲೆ ಏನು ಮಾಡುವದೆಂಬ ದನ್ನು ಬೇಗನೆ ನಿರ್ಧರಿಸಿರಿ" ಎನ್ನಲು,

"ನಮ್ಮ ಹಂಸೆಯು ನಮ್ಮ ತಂದೆಯ ಸಂಗಡ ಹೋಗಿರುವಳೆಂದ

ಬಳಿಕ ಆಕೆಯು ನಿರಾಪದವಾಗಿರಲಿಕ್ಕೆ ಸಾಕು; ಯಾಕಂದರೆ, ಅವಳನ್ನು ಕರದೊಯ್ಯುವಾಗ ನಮ್ಮ ತಂದೆಯು "ಇವಳನ್ನು ಸುರಕ್ಷಿತ ಸ್ಥಳದಲ್ಲಿರಿಸಿ, ಬಳಿಕ ಇವಳ ತಾಯಿಯನ್ನು ಇವಳೆಡೆಗೆ ಕರೆದೊಯ್ಯುತ್ತೇನೆ"ಂದು ಈ ಭಾವೂರಾಯನೆದುರಿಗೆ ಹೇಳಿರುತ್ತಾನೆ. ಆತನು ಸ್ವತಃ ಧರ್ಮಾಂತರಮಾಡಿದ್ದರೂ, ಧರ್ಮಾಂತರ ಮಾಡಬೇಕೆಂದು ತನ್ನ ಮಗಳಿಗೆ ಒತ್ತಾಯ ಪಡಿಸಲಾರನೆಂದು ನನಗೆನಿಸುತ್ತದೆ. ನಮ್ಮ ತಾಯಿಗೆ ಮಾತ್ರ ಆ ಬಗ್ಗೆ ಹೆಚ್ಚು ಸಂಶಯ ಉಂಟಾಗಿದೆ. ನಾನು ನಾಳೆಯೇ ಇಲ್ಲಿಂದ ಹೊರಡುವೆನು; ಹಾಗು ೮-೧೦ ದಿನಗಳಲ್ಲಿ ಇದ್ದಲ್ಲಿಂದ ಹಂಸೆಯ ಪತ್ತೆ ಹಚ್ಚಿ, ಅವಳನ್ನು ಕರೆ ತಂದು ನಮ್ಮಣ್ಣನಿಗೆ ಭೆಟ್ಟಿ ಮಾಡಿಸುತ್ತೇನೆ."

ಗೊತ್ತಾದ ಮೇರೆಗೆ ಪದಮಜಿಯು ತೀವ್ರವೇ ಎಲ್ಲರ ಅನುಮತಿಯನ್ನು ಪಡೆದು ಹಂಸೆಯ ಪತ್ತೆಗಾಗಿ ಬಾದಶಹನ ಛಾವಣಿಗೆ ನಡೆದನು ಪಾರದ ದುರ್ಗದಿಂದ ಬಾದಶಹನ ಛಾವಣಿಯು ೩-೪ ದಿನಗಳ ದಾರಿಯಲ್ಲಿತ್ತು. ಮಹಾಪುರ ಜಿಲ್ಲೆಯ ಮೇರೆಗೆ ಹೋಗಲು, ಬಾದಶಹನ ಛಾವಣಿಯು ಹತ್ತಿತು. ಅದು ಎಷ್ಟೋ ಮೈಲುಗಳ ವರೆಗೆ ಸೆರೆಗೊಂಡಿತ್ತು. ಛಾವಣಿಯು ದಾರಿ ಹಿಡಿದು ಅಲ್ಲಲ್ಲಿ ಒಂಟೆ-ಕುದುರೆಗಳು ಕಟ್ಟಲ್ಪಟ್ಟಿದ್ದು, ಸೈನಿಕರು ತಮ್ಮ ಅಡಿಗೆಯನ್ನು ನಡಿಸಿದ್ದರು. ಮುಂದೊತ್ತಟ್ಟಿಗೆ ಒಂದು ವಿಸ್ತಾರವಾದ ಪೇಟೆಯು ನೆಲೆಸಿದ್ದು, ಅಲ್ಲಿ ಕೊಡ-ತಕ್ಕೊಳ್ಳುವವರ ಕೋಲಾಹಲ ಶಬ್ದವು ಕೇಳುತ್ತಿತ್ತು. ದಾರಿಯು ಎಡ-ಬಲಗಳಲ್ಲಿ ಜೀವವಿಲ್ಲದ ಎಷ್ಟೋ ಪಶು-ಪ್ರಾಣಿಗಳ ಛಿನ್ನ-ವಿಚ್ಛಿನ್ನ ದೇಹಗಳು ಬಿದ್ದಿದ್ದು, ಅಲ್ಲಲ್ಲಿ ದುರ್ಗಂಧವು ಇಡಿಗಿ, ದಾರಿಕಾರರಿಗೆ ತೀವ್ರವಾದ ಹೇಸಿಗೆಯನ್ನುಂಟುಮಾಡುತ್ತಿತ್ತು. ದಾರಿಗುಂಟ ಚಿಕ್ಕ ಚಿಕ್ಕ ರಾಹುಟಿಗಳಿದ್ದು, ಪ್ರತಿಯೊಂದರಲ್ಲಿ ೨-೩ ಜನ ಶಿಪಾಯಿಗಳು ಇರುತ್ತಿದ್ದರು. ಅವರು ಮಲಿನ ಹರಕುಬರಕಾದ ಉಡಿಗೆ-ತೊಡಿಗೆಗಳನ್ನು ಧರಿಸಿದ್ದರು; ಹಾಗು ಅವರ ವಾಹನಗಳಾದ ಒಂಟೆ-ಕುದುರೆಗಳು ಸೊರಗಿ ಸೊರಗಿ ಸಾಯಲಾಗಿದ್ದವು! ಮನೂಚಿ ಎಂಬ ಪ್ರಸಿದ್ಧ ಇತಿಹಾಸಕಾರನು ಔರಂಗಜೇಬ ಬಾದಶಹನ ಛಾವಣಿಯ ಬಗ್ಗೆ ಹೀಗೆ ಬರೆದಿಟ್ಟಿರುತ್ತಾನೆ:— "ಬಾದಶಹನ ಛಾವಣಿಯಷ್ಟು ಹೊಲಸು ಪ್ರದೇಶವು ಭೂಮಂಡಲದಲ್ಲೇ ದೊರೆಯಲಿಕ್ಕಿಲ್ಲ. ಛಾವಣಿಯಲ್ಲಿ ದಿನಾಲು ಲೆಕ್ಕವಿಲ್ಲದಷ್ಟು ಮನುಷ್ಯರೂ, ಪಶುಗಳೂ ಸತ್ತು ದುರ್ಗಂಧವಿಡಗುತ್ತಿತ್ತು. ಪಶುಗಳಂತೆ, ಸತ್ತ ಮನುಷ್ಯರ

ಕಾಲಿಗೂ ಹಗ್ಗ ಕಟ್ಟಿ ದರದರನೆ ಎಳೆದೊಯ್ದು, ಅವರ ಮೈಮೇಲಿನ ಅರಿವೆ-ಅಂಚಡಿ, ವಸ್ತ್ರ-ಒಡವೆಗಳನ್ನೆಲ್ಲ ಕಿತ್ತುಕೊಂಡು, ಸಮೀಪದ ಯಾವುದೊಂದು ತೆಗ್ಗಿನಲ್ಲಿ ಚೆಲ್ಲಿಬಿಡುವರು! ಬಾದಶಹನ ಛಾವಣಿಯಲ್ಲಿ ಎಲ್ಲರಿಗಿಂತಲೂ ನರಿ-ನಾಯಿಗಳಿಗೆ ಮಾತ್ರ ಅಖಂಡವಾದ ಸೌಖ್ಯವು ಲಭಿಸಿತ್ತು! ಎಷ್ಟೋ ಸಾರೆ ಸ್ವತಃ ಬಾದಶಹನ ರಾಹುಟಿಯ ಬಳಿಯಲ್ಲಿ ಕೂಡ ಇದೇ ಪ್ರಕಾರವಿದ್ದದರಿಂದ, ಅಲ್ಲಿ ಹೋಗಬೇಕಾದರೆ ಆ ದುರ್ಗಂಧದ ಮೂಲಕ ನನ್ನ ಮೈಮೇಲೆ ಮುಳ್ಳೇಳುತ್ತಿದ್ದವು! ಅಲ್ಲಿ ನೊಣಗಳು ಮಿತಿಮೀರಿದ್ದು, ಅವು ಪ್ರತಿಯೊಂದು ಬಗೆಯ ಆಹಾರದ ಮೇಲೂ ರಾಶಿಗಟ್ಟಲೆ ಕೂಡ್ರುತ್ತಿದ್ದವು!"

ಇದು ವರೆಗೆ ಪದಮಜಿಯು ಧನಾಜಿರಾಯನೊಡನೆ ಹಲವು ಸಾರೆ ಬಾದಶಹನ ಛಾವಣಿಯನ್ನು ಸುಲಿದಿದ್ದರೂ, ಅವನು ಛಾವಣಿಯೊಳಗಿನ ಆ ಅವ್ಯವಸ್ಥೆಯನ್ನು ಮಾತ್ರ ಅಷ್ಟು ಪರೀಕ್ಷಿಸಿ ನೋಡಿರಲಿಲ್ಲ; ಯಾಕಂದರೆ, ಬಾದಶಹನ ವಿಪುಲವಾದ ಸೈನ್ಯದೊಡನೆ ಮರಾಟರು ಎದುರಿಗೆ ನಿಂತು ಯುದ್ಧಮಾಡುತ್ತಿರಲಿಲ್ಲ. ಅವರು ತಮ್ಮ [illegible] ಬಾದಶಹನನ್ನು ಬಣ್ಣಿಗೆ ತಂದಿದ್ದರು. ಅದರಿಂದ ಆತನಿಗೆ ಬಾದಶಹನ ಛಾವಣಿಯ ಆ ಅಂತರಂಗವು ತಿಳಿದಿರಲಿಲ್ಲ. ಇಂದು ಅವನು ಅದನ್ನು ಪ್ರತ್ಯಕ್ಷವಾಗಿ ನೋಡಿ:—"ಇದೊಂದು ಭೂಲೋಕದೊಳಗಿನ ಪ್ರತ್ಯಕ್ಷವಾದ ನರಕವೇ" ಎಂದು ತಿಳಕೊಂಡನು. ಪದಮಜಿಯು ಛಾವಣಿಯ ದಾರಿ ಹಿಡಿದು ನಡೆದು ಪಠಾಣ, ಬಲೂಚ, ಅಫಗಾಣ, ಪಹಾಡಿ, ಮೇವಾಡಿ, ಕಾಠೇವಾಡಿ ಮುಂತಾದ ಶಿಪಾಯಿಗಳ ಶಿಬಿರಗಳನ್ನು ದಾಟಿದನು. ಅಲ್ಲಿಂದ ಮುಂದೆ ಉತ್ತಮ ಸರದಾರ ಜನರ ರಾಹುಟಿಗಳು ಹತ್ತಿದವು. ಆ ರಾಹುಟಿಗಳೆಲ್ಲ ಒತ್ತಟ್ಟಿಗೆ ತುಸ ವಿಸ್ತಾರವಾಗಿ ಹಬ್ಬಿದ್ದವು. ಅವನ್ನು ದಾಟಿದ ಬಳಿಕ ಬಾದಶಹನ ಖಾಸ ಶಾಮಿಯಾನವು ಹತ್ತಿತು. ಅಲ್ಲಿ ಶಸ್ತ್ರಧಾರಿಗಳ ಸಂತತ ಪಹರೆಯಿದ್ದು, ಸುತ್ತಲೂ ದೊಡ್ಡ ದೊಡ್ಡ ತೋಫುಗಳು ಹೂಡಿ ಸಜ್ಜುಗೊಳಿಸಲ್ಪಟ್ಟಿದ್ದವು. ಬಾದಶಹನ ರಾಹುಟಿಯ ಎದುರಿಗೇ ಕೆಲ ಜನ ಕಟುಗರು ಪಶುಗಳನ್ನು ತುಂಡ ತುಂಡರಿಸಿ ಮಾರುತ್ತಿದ್ದರು. ಮಾಂಸವನ್ನು ಕೊಂಡ ಶಿಪಾಯಿಗಳು ಅವನ್ನು ಒಂದು ಉದ್ದನ್ನ ಕಬ್ಬಿಣ ಸಲಾಕಿಗೆ ಚುಚ್ಚಿ, ಅಲ್ಲಿಯೇ ಹೊತ್ತುತ್ತಿದ್ದ ಒಂದು ದೊಡ್ಡ ಅಗ್ನಿಕುಂಡದಲ್ಲಿ ಹಸಿಬಿಸಿಯಾಗಿ ಸುಟ್ಟು ತಿನ್ನುತ್ತಿದ್ದರು!

ಪಹರೆಯವನು ಪದಮಜಿಯ ಕುದುರೆಯನ್ನು ತರುಬಿ:—"ಸೂವ್ವರಕಾ ಅವಲಾದ! ಹಮಾರಾ ಖಾನಾ ಖರಾಬ ಕರನೇಕೋ ಇದರ ಆಯಾ?" ಎಂದೆಂದು ತನ್ನ ಕೈಯೊಳಗಿನ ಕಬ್ಬಿಣ ಸಳಿಯಿಂದ ಪದಮಜಿಯ ಕುದುರೆಗೆ ಹೊಡೆದನು. ಅದರಿಂದ ಆ ಕುದುರೆಯು ಬೆದರಿ, ಸಿಕ್ಕ ಕಾಲುಸಿಕ್ಕ, ದಾರಿ ಸಿಕ್ಕತ್ತ ಓಡತೊಡಗಿತು! ಕುದುರೆಯನ್ನು ಸಾವರಿಸಿ ಹಿಡಿದು, ಆ ಪಠಾಣ ಕಾವಲುಗಾರನ ಅತಿ ಪ್ರಸಂಗದ ಬಗ್ಗೆ ಕಡ ತೀರಿಸಬೇಕೆಂಬ ವಿಚಾರವು ಪದಮಜಿಯ ಮನಸ್ಸಿನಲ್ಲಿ ಬಂತು; ಆದರೆ ಇದು ಪ್ರಸಂಗವಲ್ಲೆಂದು ತಿಳಿದು, ಅವನು ಸುಮ್ಮನಾದನು. "ಸೂರ್ಯಾಜಿ ಪಿಸಾಳ"ನೆಂಬ ಸರದಾರನು ಎಲ್ಲಿರುತ್ತಾನೆಂದು ಪದಮಜಿಯು ಅಲ್ಲಿಯವರಿಗೆ ಕೇಳುತ್ತ ನಡೆದನು. ಈ ಹೆಸರನ್ನು ಅಲ್ಲಿಯವರಾರೂ ಕೇಳದ್ದರಿಂದ, ಆ ಪಠಾಣರು ತಮ್ಮ ಮೋರೆಯನ್ನು ಸೊಟ್ಟ ಸೊಟ್ಟ ಮಾಡಿ ಏನೇನೋ ಅನ್ನುತ್ತ, ಇವನಿಗೆ ಅಣಕಿಸತೊಡಗಿದರು. 'ಬಾದಶಹನ ಛಾವಣಿಯಲ್ಲಿ ತನ್ನ ತಂದೆ ಸೂರ್ಯಾಜಿಯು ಇದ್ದಯೆನು? ಆತನು ಮುಸಲ್ಮಾನನಾಗಿರುವದರಿಂದ, ಅವನ ಮುಸಲ್ಮಾನೀ ಹೆಸರೇನು?' ಮುಂತಾದ್ದೊಂದೂ ಪದಮಜಿಗೆ ಗೊತ್ತಿರಲಿಲ್ಲ. ಇದರಿಂದ ಅವನ ಪತ್ತೆ ಹಚ್ಚುವದು ದುಸ್ತರವಾಯಿತು. ಕಡೆಗೆ ಆತನನ್ನು 'ಸೂರಜಖಾನ' ಎನ್ನುವರೆಂಬದು ಒಬ್ಬ ಶಿಪಾಯಿಯಿಂದ ಅವನಿಗೆ ತಿಳಿಯಿತು. 'ನೀನು ಯಾರು? ಎಲ್ಲಿಯವನು? ಸೂರಜಖಾನನ ಕಡೆಗೆ ನಿನ್ನ ಕೆಲಸವೇನು?' ಎಂದು ಎಲ್ಲರೂ ಅವನನ್ನು ಒತ್ತಿ ಒತ್ತಿ ಕೇಳತೊಡಗಿದರು. ಅವನು, ಅದಾವುದನ್ನೂ ಹೇಳದೆ, "ನನಗೆ ಆ ಸೂರಜಖಾ ಸರದಾರರ ಭೆಟ್ಟಿಯಾಗಬೇಕಾಗಿದೆ" ಎಂದು ಅನ್ನುತ್ತಿದ್ದನು.

ಕಡೆಗೆ ಒಬ್ಬ ಮರಾಠಾ ಶಿಲೇದಾರನು ಪದಮಜಿಯನ್ನು ಸೂರಜಖಾನನ ತಂಬುವಿಗೆ ಕರೆದೊಯ್ದನು. ಆಗ ಸೂರ್ಯಾಜಿಯು ಊಟದ ವೇಳೆಯಾಗಿತ್ತು. ಯಾವನೋ ಒಬ್ಬ ಮರಾಠಾ ತರುಣನು ತನ್ನ ಭೆಟ್ಟಿಗೆ ಬಂದಿರುವನೆಂಬದನ್ನು ಕೇಳಿ, ಸೂರ್ಯಾಜಿಯು ರಾವುಟಿಯಿಂದ ಹೊರಗೆ ಬಂದನು. ಕಳೆದ 10-15 ವರ್ಷಗಳಿಂದ ತಂದೆಯನ್ನು ನೋಡದ ಪದಮಜಿಗೆ ಮೊದಮೊದಲು ಸೂರ್ಯಾಜಿಯ ಗುರುತು ಹತ್ತಲಿಲ್ಲ; ಯಾಕೆಂದರೆ, ಆತನ ಆಗಿನ ಮರಾಠಾಶಾಹಿಯ ಪೋಷಾಕಿಗೂ ಈಗಿನ ಮೊಗಲಾಯಿಯ ಪೋಷಾಕಿಗೂ ಭೂಮ್ಯಾಕಾಶದಷ್ಟು ಹೆಚ್ಚು-ಕಡಿಮೆಯಾಗಿತ್ತು. ಆದರೂ

ಅವನಿಗೆ ತನ್ನ ತಂದೆಯ ಗುರುತು ತೀವ್ರವೇ ಹತ್ತಿತು; ಆದರೆ ಸೂರ್ಯಾಜಿಗೆ ಮಾತ್ರ ಆತನ ಗುರುತು ಹತ್ತಲೇ ಇಲ್ಲ. ಬಳಿಕ ಪದಮಜಿಯು ತಾನಾರೆಂಬದನ್ನು ತಿಳಿಸಲು, ಅವನು ಪ್ರೇಮಭರದಿಂದ:--"ಚಾಂದಾ, ಚಾಂದಾ, ನೀನೇ ನನ್ನ ಚಾಂದಾನೇನು?" ಎಂದೆಂದು, ಅವನನ್ನು ಅಪ್ಪಿಕೊಂಡನು. ಆ ಪ್ರಥಮ ದೃಷ್ಟಿಯ ಕಾಲಕ್ಕೆ ಸೂರ್ಯಾಜಿಯ ಬಾಯಿಂದ ಹೊರಟ ಆ ಮಾಂಸದ ದುರ್ಗಂಧವನ್ನು ನೋಡಿ, "ತನ್ನ ಪಿತನು ಬಂದು ಪತಿತನಾಗಿರದೆ, ಈತನು ಸ್ವಧರ್ಮ-ಪತನಗೊಂಡಿರುತ್ತಾನೆ"ಂಬದು ಪದಮಜಿಗೆ ಖಾತ್ರಿಯಾಯಿತು.

---

## ವಿಚಿತ್ರ ಯೋಗಾಯೋಗ !

"ಅಪ್ಪಾ, ಈ ಹೊಲಸು ನಾತ! ಈ ಹೇಸಿಕೆ ಬರುವಂತಹ ಖಾನಾ! ಈ ನಿಮ್ಮ ಸೌದಾಗರದ ವೇಷ! ಇವೇ ಏನು. ನಿಮ್ಮ ಮತಾಂತರದ ವೈಶಿಷ್ಟ್ಯಗಳು! ಅಪ್ಪಾ, ನೀವು ಹೊಲ್ಲದ ದುರಾಶೆಗೆ ಮನಸೋತು ಮುಸಲರಾಗದೆ ಹಿಂದುಗಳೇ ಆದರೆ, ಶ್ರೀ ಶಿವಛತ್ರಪತಿಯ ಸ್ವರಾಜ್ಯದ ಸೇವೆಯನ್ನು ಮನಮುಟ್ಟಿ ಮಾಡಿದ್ದರೆ, ಮರಾಠಾಶಾಹಿಯಲ್ಲಿ ನಿಮಗೆಷ್ಟು ಮಹತ್ವವುಂಟಾಗುತ್ತಿತ್ತೆಂಬದರ ಅರಿವಾದರೂ ನಿಮಗಿದೆಯೆ? ಅಪ್ಪಾ, ಇಂದಿಗೆ ನೀವು ನಮ್ಮ ಕುಟುಂಬದಲ್ಲಿದ್ದರೆ ನಾವೆಷ್ಟು ಸುಖಿಗಳಾಗಿರುತ್ತಿದ್ದೆವು? ಅಪ್ಪಾ, ನೀವು ಈ ಧರ್ಮಾಂತರದ ಮಾಡಿ ಗಳಿಸಿದ್ದಾದರೂ ಏನು? ಇಲ್ಲಿ ನಿಮ್ಮನ್ನು ಕೇಳುವವರಾರು? ಅಪ್ಪಾ, ನಿಮ್ಮ ಕುಲಕಂಟಕತನಕ್ಕಾಗಿ ನಿಮಗೆ ವಾಯಿಯ ದೇಶಮುಖಗಿರಿಯನ್ನು ಕೊಟ್ಟಿದ್ದರಲ್ಲವೆ? ಅಂದಮೇಲೆ ನೀವು ಆ ದೇಶಮುಖತ್ವವನ್ನು ಬಿಟ್ಟು, ಈ ಬಾದಶಾಹೀ ಛಾವಣಿಯಲ್ಲಿ ಹೀಗೆ ಅನಾಮಧೇಯಿಗಳಾಗೇಕೆ ವಾಸಿಸಿರುತ್ತೀರಿ? ಅಪ್ಪಾ, ನೀವು ಸ್ವರಾಜ್ಯದ ಸತ್ಯಾನಾಶಗೊಳಿಸಿದ್ದಲ್ಲದೆ, ಕುಟುಂಬಘಾತವನ್ನೂ, ಆತ್ಮಘಾತವನ್ನೂ ಮಾಡಿಕೊಂಡಂತಾಗಿಲ್ಲವೆ?"

"ಚಾಂದಾ--ಚಾಂದಾ, ಪದಮಜಿ--ಪದಮಜಿ" ಹೀಗೆಂದು ನುಡಿದು, ಸೂರ್ಯಾಜಿಯು ತನ್ನ ಎರಡೂ ಕೈಗಳಿಂದ ಮೋರೆ ಮುಚ್ಚಿಕೊಂಡು ಬಿಕ್ಕಿ-ಬಿಕ್ಕಿ ಅಳಲಾರಂಭಿಸಿದನು. ಎಷ್ಟೋ ಹೊತ್ತಿನ ವರೆಗೆ ಅಶ್ರುವರ್ಷಣ ಮಾಡಿದ ಮೇಲೆ ಅವನ ಅಂತರಂಗವು ಪಶ್ಚಾತ್ತಾಪಾಗ್ನಿಯಿಂದ ಸುರುಪಳಿಸಿ ಹೋಯಿತು; ಆದರೆ ಅವನು ಈಗ ಪಶ್ಚಾತ್ತಾಪ ಪಟ್ಟಾದರೂ ಮಾಡುವ

ವೇನು? ಬಳಿಕ ಅವನು:‘ತಮ್ಮಾ, ನಾನು ನನ್ನ ಅನಂತ ಪಾಪಗಳನ್ನು ಈ ಪಶ್ಚಾತ್ತಾಪದ ವೇದನೆಯಿಂದ ಕ್ಷಾಲನ ಮಾಡುತ್ತಿರುತ್ತೇನೆ. ಒಂದು ಕ್ಷಣ ಕೂಡ ನನ್ನ ಮನಸ್ಸಿಗೆ ಶಾಂತಿಯಿಲ್ಲ. ತಮ್ಮಾ, ಇಂದು ನಾನು ಸಾಯಲಿಕ್ಕೆ ಸಿದ್ಧನಿರುತ್ತೇನೆ; ಆದರೆ ಸಾಯುವದಾದರೂ ಹೇಗೆ? ಪದಮಜೀ, ನನ್ನ ಪಾಪ ಸಮೂಹವು ನನ್ನನ್ನು ಸಾಯಗೊಡುವದಿಲ್ಲ. ತಮ್ಮಾ, ನಾನು ನನ್ನ ಪಾಪ ಗಳ ವಿಸ್ತಾರವನ್ನೆಷ್ಟೆಂದು ಹೇಳಲಿ? ನಾನು ಕುಟುಂಬ ಘಾತಕನು; ರಾಷ್ಟ್ರ ಘಾತಕನು; ಕುಲ ನಾಶಕನು; ಅಲ್ಲದೆ ಕಡೆಗೆ ನನ್ನ ಪ್ರಿಯಪುತ್ರಿ ಹಂಸೆಯ ಘಾತವನ್ನು ನಾನು ನನ್ನೀ ಕೈಯಿಂದ ಮಾಡಿರುತ್ತೇನೆ.”

“ಏನೆನ್ನುವಿರಿ? ಅಪ್ಪಾ, ನೀವು ಅಂದದ್ದೇನು? ಹಂಸೆಯ ಘಾತವೇ?”

“ಹೌದಪ್ಪಾ-ಹೌದು! ನಾನೇ ನನ್ನ ಹಂಸೆಯ ಘಾತಗೊಳಿಸಿದವನು! ಇನ್ನು ನಾನು ಆ ಸಂಗತಿಯನ್ನು ಮರೆಮಾಜಬೇಕೇಕೆ? ನನ್ನ ಹಂಸೆಯು ನಂಬಿಗೆಯಿಂದ ನನ್ನ ಬಳಿಯಲ್ಲಿ ಸಂರಕ್ಷಣ ಹೊಂದಲಿಕ್ಕೆ ಬಂದಿರಲು, ಈ ಪರಮ ನೀಚನಾದ ನಿನ್ನ ತಂದೆಯು ಆಕೆಯ ವಿಶ್ವಾಸಘಾತ ಮಾಡಿದನು!”

ಕೂಡಲೆ ಪದಮಜಿಯು ಒಮ್ಮೆಲೆ ಆತನ ಮುಂಗೈಯನ್ನು ಹಿಡಿದು:-“ಅಪ್ಪಾ, ಹೇಳಿರಿ, ಬೇಗನೆ ಹೇಳಿರಿ; ಹಂಸೆಯ ಅವಸ್ಥೆಯು ಏನಾಯಿತೆಂಬ ದನ್ನು ನನಗೆ ಹೇಳಿರಿ. ಅವ್ವನು ಹಂಸೆಗಾಗಿ ಕಂಠಸ್ಥಪ್ರಾಣಳಾಗಿ ಬಿದ್ದು ಕೊಂಡಿರುತ್ತಾಳೆ. ಹಂಸೆಯ ಘಾತವನ್ನು ನೀವು ಹೇಗೆ ಮಾಡಿದಿರೆಂಬದನ್ನು ಶಾಂತಮನಸ್ಕರಾಗಿ ಬೇಗನೆ ಹೇಳಿರಿ!” ಎನ್ನಲು,

ಸೂರ್‍ಯಾಜಿಯು ಹಂಸೆಯ ಆ ಮೊದಲಿನ ಸಂಗತಿಯನ್ನೆಲ್ಲ ತನ್ನ ಮಗ ನಿಗೆ ತಿಳಿಸಿ, ಬಳಿಕ:—“ಖಂಡೇರಾಯನು ಆಕೆಯನ್ನು ದರವಡೆಗಾರರಿಂದ ಬಿಡಿಸಿ ತಂದು ತನ್ನ ಮನೆಯಲ್ಲಿಟ್ಟುಕೊಂಡಿರಲು, ಖೇಡದ ನಾಗೋಜಿ ದೇಶ ಮುಖನು ದಾಭಾಡೆಯವರ ವಾಡೆಯಿಂದ ಅವಳನ್ನು ಸೆಳಕೊಂಡು ತಂದು, ಬಾದಶಹನ ಒಬ್ಬ ಅಮೀರನಿಗೆ ಅರ್ಪಿಸಿ, ಆತನ ಮುಖಾಂತರ ತಾನು ಬಾದ ಶಹನಿಂದ ಬಹು ದೊಡ್ಡ ದೇಶಮುಖಗಿರಿಯನ್ನು ಸಂಪಾದಿಸಬೇಕೆಂದಿದ್ದನು. ಆ ಸಂಗತಿಯು ನನಗೆ ತಿಳಿಯಲು, ಸಂಧಿಸಾಧಿಸಿ ನಾನು ಅವಳನ್ನು ಆ ಕುತ್ತ ದಿಂದ ಬಿಡಿಸಿದಂತಾಯಿತು. ಆದರೂ ನನ್ನ ಧರ್ಮಾಂತರದ ಹುಚ್ಚಿನ ಮೂಲಕ ಹಾಗು ನೀಚ-ಸ್ವಾರ್ಥಲೋಲುಪತೆಯ ಮೂಲಕ ಅವಳನ್ನು ಬಾದಶಹನ ಝನಾನಖಾನೆಗೆ ನಾನಾಗಿಯೇ ಕಳಿಸಿಕೊಟ್ಟಿರುತ್ತೇನೆ.”

"ಶಿವ! ಶಿವ!! ಅಪ್ಪಾ, ಎಂಥ ಪರಮ ನೀಚ ವಿಚಾರಗಳು ನಿಮ್ಮವಿವು? ಹಂಸೆಯು ನಿಮ್ಮ ಹೊಟ್ಟೆಯ ಮಗಳಲ್ಲವೆ? ಅಂಥವಳನ್ನು ಸ್ವಹಸ್ತದಿಂದ ಬಾದಶಹನ ಅಂತಃಪುರಕ್ಕೆ ದೂಡಿದಿರಲ್ಲವೆ? ಧಿಃಕಾರ-ಧಿಃಕಾರವು ನಿಮ್ಮ ಬಾಳಿಗೆ! ಅಪ್ಪಾ, ಈ ಸಂಗತಿಯನ್ನು ಕೇಳಿ, ನೀನು ಕ್ಷಣಕಾಲವಾದರೂ ಬದುಕಬಹುದೆ? ಅಪ್ಪಾ, ಇಂಥ ಪರಮ ನೀಚ ಕೃತಿಯನ್ನು ಮಾಡಿಯೂ ನೀವು ಇನ್ನೂ ಜೀವಿಸಿರುವಿರಲ್ಲವೆ!!! ಹಂಸಾ, ನನ್ನ ಪ್ರೀತಿಯ ಹಂಸಕ್ಕಾ! ಮರಾಟರ ಉಚ್ಚಕುಲದಲ್ಲಿ ಜನಿಸಿ, ಶ್ರೀ ಶಿವಛತ್ರಪತಿಯ ಛಾಪ ತ್ಯೈನಾತಿಯಲ್ಲಿ ಬೆಳೆದು, ಕಡೆಗೆ ನೀನು ಬಾದಶಹನ ಝನಾನಖಾನೆಗೆ ಹೋಗಿ ಸೇರಬೇಕಾಯಿತಲ್ಲವೆ? ಅಪ್ಪಾ! ತ್ವೇಷ, ಕೋಪ, ಸಂತಾಪ ಮುಂತಾದವು ಗಳಿಂದ ನನ್ನ ತಲೆಯು ಭ್ರಮಿಸತೊಡಗಿದೆ. ಅಪ್ಪಾ, ಈಗಳಿಗಲೇ ನಿಮ್ಮನ್ನು ತುಂಡರಿಸಿ, ಕೃತಕರ್ಮಗಳ ಪ್ರತಿಫಲವನ್ನು--ನರಕಭೋಗವನ್ನು ಭೋಗಿಸಲಿಕ್ಕೆ ಕಳಿಸುತ್ತಿದ್ದೆನು; ಆದರೆ ಏನಾದರೂ ನೀವು ನನ್ನ ಜನಕ ತಂದೆಯು: ನನಗೆ ಜನ್ಮಕೊಟ್ಟು. ನೀವು ನನಗೀ ಜಗತ್ತಿನ ದೃಶ್ಯವನ್ನು ತೋರಿಗೊಟ್ಟಿರುತ್ತೀರಿ. ಈ ಕೃತಜ್ಞತೆಗಾಗಿ ನಾನು ಈಗ ನನ್ನೀ ಶಸ್ತ್ರದಿಂದ ನಿಮ್ಮನ್ನು ತುಂಡರಿಸುವದಿಲ್ಲ. ನಿಮ್ಮ ಪಾಪಗಳನ್ನೆಲ್ಲ ನೀವು ಇದೇ ಜನ್ಮದಲ್ಲಿಯೇ ಅನುಭವಿಸಿ ಸಾಯಿರಿ!" ಹೀಗೆಂದು ನುಡಿದು, ಪದಮಜಿಯು ಒಕ್ಕೀ ಸಿಟ್ಟಿನಿಂದ ಆ ಡೇರೆಯೊಳಗಿಂದ ಹೊರಬಿದ್ದನು. "ತಮ್ಮಾ, ಸ್ವಲ್ಪ ತಡೆ" ಎಂದು ಹೇಳುವ ಶಬ್ದ ಶಕ್ತಿಕೂಡ ಸೂರ್ಯಾಜಿಯಲ್ಲಿ ಆಗ ಉಳಿದಿರಲಿಲ್ಲವಾದ್ದರಿಂದ, ಪದಮಜಿಯು ಹೊರಟು ಹೋಗುತ್ತಲೆ, ಆತನು ಮೋರೆ ಮುಚ್ಚಿಕೊಂಡು ಅಳುತ್ತ ಅಲ್ಲಿಯೇ ಬಿದ್ದುಬಿಟ್ಟನು

ವಾಚಕರೇ, ಅದಾವ ಮನೆತನಸ್ಥ ಮರಾಟನಿಗೆ ತನ್ನ ತಂಗಿಯ ವಿಷಯದ ಈ ಬಗೆಯ ತಿರಸ್ಕರಣೀಯ ಸಂಗತಿಯನ್ನು ಕೇಳಿ ತ್ವೇಷವುಂಟಾಗಲಿಕ್ಕಿಲ್ಲ? ಡೇರೆಯಿಂದ ಹೊರಬೀಳುತ್ತಲೆ ಪದಮಜಿಯು ತನ್ನ ಕುದುರೆಯನ್ನೇರಿ, ಭರದಿಂದ ನಡೆದನು. ಆಗ ಆತನ ಚಿತ್ತವು ಭ್ರಮಣಗೊಂಡಿತ್ತು. ವಿಚಾರಗಳ ಅತಿರೇಕದಿಂದ ಆವನು ಭ್ರಾಂತಿಸ್ಥನಾಗುವ ಸಮಯವೊದಗಿತ್ತು; ಅವೇಕೆ, ಅವನು ಆಗ ಬಹುಮಟ್ಟಿಗೆ ಹುಚ್ಚನೇ ಆಗಿದ್ದನು. ತಾನು ಹೋಗುತ್ತಿರುವದೆಲ್ಲಿಗೆ? ಎಂಬ ಬಗ್ಗೆ ಆತನಿಗೆ ಎಚ್ಚರವೇ ಇರಲಿಲ್ಲ. 'ತನ್ನ ತಂದೆಯೇ ತನ್ನ ತಂಗಿಯನ್ನು ಬಾದಶಹನ ಝನಾನಖಾನೆಗೆ ಸೇರಿಸಿರುವ

ನೆ''ಂಬ ವಿಚಾರವು ಅಸತ್ಯವಾಗಲು, ಪದಮಜಿಯು ತನ್ನಷ್ಟಕ್ಕೆ ತಾನೇ:--
"ಹಂಸಕನ್ಯೆ,ಯನ್ನು ಸತ್ತೆ ಪಟ್ಟಿದಾಗಲೇ ನಾನು ತಾಯಿಗೆ ಮೋರೆ ತೋರಿ ಸುವೆನು.'' ಎಂದು ಪುನಃ ಪುನಃ ಅಂದುಕೊಳ್ಳುತ್ತ, ಕುದುರೆಯನ್ನು ಓಡಿಸ ಹತ್ತಿದನು. ಆತನ ತಲೆಯಲ್ಲಿ ಆ ವಿಚಾರತಂದ್ರಿಯು ಎಷ್ಟು ಒತ್ತರದಿಂದ ನಡೆದಿತ್ತೋ, ಅಷ್ಟೇ ವೇಗದಿಂದ ಅವನು ತನ್ನ ಕುದುರೆಯನ್ನೂ ಬಿಟ್ಟಿದ್ದನು. ತನ್ನ ಕುದುರೆಯ ಒಗ್ಗೆ ಪದಮಜಿಯಲ್ಲಿ ಹೆಚ್ಚಾಗಿ ಪ್ರೇಮವಿದ್ದಿತು. ಕಾಲ ಕಾಲಕ್ಕೆ ದಾಣಿ-ನೀರು ಕೊಡುವದು, ಚಾಕರಿ ಮಾಡುವದು, ನಾಲು ಕಟ್ಟಿಸು ವದು ಮುಂತಾದ ತನ್ನ ಕುದುರೆಯ ಚಾಕರಿಗಳನ್ನು ಆತನು ಸ್ವತಃ ತಪ್ಪದೆ ಮಾಡುತ್ತಿದ್ದನು. ಅವನು ತನ್ನ ಕುದುರೆಯನ್ನೆಂದೂ ಹೊಡೆಯುತ್ತಿರಲಿಲ್ಲ. ಹೀಗೆ ಆತನು ತನ್ನ ಕುದುರೆಯನ್ನು ಬಹು ಪ್ರೇಮದಿಂದ ಸಲಹುತ್ತಿದ್ದರೂ, ಇಂದು ಆತನ ತಲೆಯೇ ತಾಳದಪ್ಪಿತ್ತಾದ್ದರಿಂದ, ಯಾವ ಸಂಗತಿಯ ಬಗ್ಗೆಯೂ ಆತನಿಗೆ ಎಚ್ಚರವಿರಲಿಲ್ಲ. ಆತನು ಆ ಕುದುರೆಯನ್ನು ಒಂದೇ ಸವನೆ ಥಳಿಸುತ್ತ ನಡೆದಿದ್ದನು. ಆದರಿಂದ ಆರೆಗಳಿಗೆಯಲ್ಲಿ ಆತನು ೪-೫ಹರ ದಾರಿಗಳ ದಾರಿಯನ್ನು ಸಹಜವಾಗಿ ಕ್ರಮಿಸಿದನು! ಪದಮಜಿಯ ಕುದು ರೆಯು ಬಾದಶಹನ ಝನಾನಖಾನೆಗಭಿಮುಖವಾಗಿ, ಅಂದರೆ ಭೀಮಾತೀರದ ಬೇಗಮುಪುರಿಯ ಕಡೆಗೆ ಭರದಿಂದ ಸಾಗಿತ್ತು. ಆಗ ವರ್ಷಾಕಾಲವಾದ್ದರಿಂದ ನಡು-ನಡುವಿನ ಹಳ್ಳ-ಕೊಳ್ಳಗಳು ತುಂಬಿ, ಹೊರಸೂಸಿ ಹರಿಯುತ್ತಿದ್ದವು. ಪದಮಜಿಯ ಚಿತ್ತವು ಅವಾವುಗಳ ಕಡೆಗೂ ಇರದೆ, ತಾನು ಎಷ್ಟು ತೀವ್ರ ಬೇಗಮುಪುರಿಗೆ ತಲುಪುವೆನೋ, ತನ್ನ ತಂಗಿಯನ್ನು ಅಲ್ಲಿಯ ಝನಾನಖಾನೆ ಯೊಳಗಿಂದ ಯಾವಾಗ ಬಿಡಿಸಿಕೊಳ್ಳುವೆನೋ ಎಂಬ ಒಂದೇ ವಿಚಾರದಿಂದ ಗ್ರಸ್ತವಾಗಿ ಬಿಟ್ಟಿತ್ತು. ಆ ಕುದುರೆಯು ದಾರಿಯೊಳಗಿನ ಸಣ್ಣ-ಪುಟ್ಟ ಹಳ್ಳ-ಹೊಳೆಗಳನ್ನು ದಾಟಿ ಸಂಧ್ಯಾಕಾಲಕ್ಕೆ ಭೀಮಾತೀರಕ್ಕೆ ಬಂದಿತು. ಆಗ ಭೀಮಾ ನದಿಯು ರಾಡಿ ನೀರಿನಿಂದ ಹೊರಸೂಸಿ ಹರಿಯುತ್ತಿತ್ತು. ಮೊದಲೇ ಕುದುರೆಯು ದಾಂ! ಅದರಲ್ಲಿ ತುಂಬಿದ ಹೊಳೆಯಲ್ಲಿ ಡುಬ್ಬದ ಮೇಲೆ ಸ್ವಾರ ನನ್ನ ಹೇರಿಕೊಂಡು ಈಸಿ ಪಾರಾಗುವದಕ್ಕೆ ಅದು ತಾನಾಗಿ ಮನಸ್ಸು ಮಾಡು ವದೇ? ಹೊಳೆಯು ಸಮೀಪಿಸುತ್ತಲೇ ಅದುವರೆಗೆ ಒಂದೇಸವನೆ ಓಡಿ ಬಂದ ಆ ಕುದುರೆಯು, ತನ್ನ ಒಡೆಯನಿಗೆ ತನ್ನ ನೈಸರ್ಗಿಕ ಸಂಜ್ಞೆಗಳಿಂದ ಹೊಳೆ ದಾಟಲಾರದ-ತನ್ನ ಅಸಮ್ಮತಿಯನ್ನು ತೋರ್ಪಡಿಸಿತು. ದಿನದಂತೆ

ಆಗಿದ್ದರೆ, ಪದಮಜಿಯು ಕುದುರೆಯಿಂದಿಳಿದು, ಅವರ ಹೊಟ್ಟೆಯ ವ್ಯವಸ್ಥೆ ಮಾಡಿ, ಹರಗೋಲಿದ್ದ ಕಡೆಗೆ ಅದನ್ನೊಯ್ದು, ಹರಗೋಲಿನ ಮುಖಾಂತರ ನದೀಪಾರಾಗುವ ಏರ್ಪಾಟು ಮಾಡುತ್ತಿದ್ದನು; ಆದರೆ ಇಂದು ಆತನ ಚಿತ್ತ ಭ್ರಮಣವಾಗಿತ್ತಾದ್ದರಿಂದ, ಅವನಿಗೆ ಅದಾವುದೂ ಹೊಳೆಯಲಿಲ್ಲ, ಕುದುರೆಯನ್ನು ಒಂದೇಸವನೆ ಹೊಡೆದು ನದಿಯಲ್ಲಿ ದುಮುಕಲು ಒತ್ತಾಯ ಪಡಿಸಿದನು. ಅನಿವಾರ್ಯವೆಂದು ಕಡೆಗೆ ಅದು ಹೊಳೆಯಲ್ಲಿ ಬಿದ್ದಿತು!

ಕುದುರೆಯು ನೀರಲ್ಲಿ ಹೊಕ್ಕೊಡನೆಯೇ ಪದಮಜಿಯೂ ಕುದುರೆಯೂ ನೀರಿನ ಪ್ರಚಂಡ ವೇಗದ ಮೂಲಕ ವಿಂಗಡಿಸಲ್ಪಟ್ಟರು. ಪದಮಜಿಗೆ ಚೆನ್ನಾಗಿ ಈಸ ಬರುತ್ತಿದ್ದ ಮೂಲಕ ಆತನು ಭರದಿಂದ ಈಸಿ, ಹೊಳೆಯನ್ನು ದಾಟಿದನು; ಆದರೆ ಬೆಳಗಿನಿಂದ ಅನ್ನಾಹಾರಗಳಿಲ್ಲದೆ, ಒಂದೇಸವನೆ ವೇಗದಿಂದ ದಾರಿ ಕ್ರಮಿಸಿ ಬಂದ ಆ ಮೂಕ ಪ್ರಾಣಿಯು ಆ ಪ್ರಚಂಡ ಪ್ರವಾಹವನ್ನು ಈಸಿ ಪಾರಾಗಲಾರದೆ ಹೊಳೆಯಲ್ಲಿ ಪ್ರವಾಹದ ಕೂಡ ತೇಲಿ ಹೋಗಹತ್ತಿತು. ಆಚೇ ಧಡಕ್ಕೆ ತಲುಪಿದ ನಂತರ ಪದಮಜಿಯು ಹೊರಳಿ ನೋಡುತ್ತಾನೆ, ಬಹು ದೂರದಲ್ಲಿ ಯಾವುದೋ ಒಂದು ಪ್ರಾಣಿಯಂಥ ಪದಾರ್ಥವು ನದಿಯ ಪ್ರವಾಹದ ಕೂಡ ತೇಲಿ ಹೋಗುತ್ತಲಿದೆ. ಆಗ ಬಾಹ್ಯ ಸೃಷ್ಟಿಯಲ್ಲಿ ಕತ್ತಲೆ ಮುಸುಕಿದಂತೆ, ಪದಮಜಿಯ ಚಿತ್ತವೂ ಭ್ರಾಂತಿಯೆಂಬ ಕಾರ್ಗತ್ತಲೆಯಿಂದ ಪೂರಾ ಮುಸುಕಿ ಬಿಟ್ಟಿತ್ತಾದ್ದರಿಂದ, ಆ ಬಗ್ಗೆ ಅವನಿಗೆ ಖೇದ-ಹರ್ಷಗಳಾವವೂ ಅನಿಸಲಿಲ್ಲ. ಅವನು ಆ ಕುದುರೆಯ ಕಡೆಗೆ ನೋಡುತ್ತ:—"ತೇಲಿ ಹೋಗುವಿಯಾ? ಹೋಗು, ಬೇಗನೆ ಹೊರಟು ಹೋಗು. ನಾನು ನಿನಗೆ ಇಂದಿನಿಂದ ಸಂಪೂರ್ಣ ವಿರಾಮವನ್ನು ಕೊಟ್ಟುಬಿಟ್ಟಿರುತ್ತೇನೆ; ಯಾಕಂದರೆ, ನನಗಿನ್ನು ಯಾವ ಸ್ವಾರಿ-ಶಿಕಾರಿಗಳ ಮೇಲೂ ಹೋಗುವದಿರುವದಿಲ್ಲ ಅಂದಮೇಲೆ ನಿನ್ನ ಆವಶ್ಯಕತೆಯಾದರೂ ಏನಿದೆ? ಕುದುರೀ, ನೀನು ಹೀಗೆಯೇ ತೇಲಿ ಹೋಗಿ, ನಿಮ್ಮ ಪದಮಜಿಯು ಹಂಸಕ್ಕನ ಶೋಧಕ್ಕಾಗಿ ಹೋಗಿರುವನೆಂದೂ, ಆಕೆಯ ಪತ್ತೆ ಹಚ್ಚದ ಹೊರತು ಅವನು ನಿಮಗೆ ಮೋರೆ ಕೂಡ ತೋರಿಸಲಾರನೆಂದೂ ನಮ್ಮಪ್ಪನಿಗೆ ಹೇಳು ಹೋಗು" ಎಂದು ನುಡಿದನು. ಪದಮಜಿಯು ಹೊಳೆ ದಾಟಿ ಪರತೀರವನ್ನು ಸೇರಿದಾಗ ಹೆಚ್ಚಾಗಿ ಕತ್ತಲುಗವಿದು, ದಾರಿ ಬಟ್ಟೆಗಳಾವವೂ ಕಾಣುವಂತಿದ್ದಿಲ್ಲ. ಆತನ ವಸ್ತ್ರಪ್ರಾವರಣಗಳೆಲ್ಲ ತೊಯ್ದು

ತೊಪ್ಪಡಿಗಳಾಗಿದ್ದವು. ಆತನು ಆಗ ಬೇಗಮುಪುರಿಯ ಹದ್ದಿನಲ್ಲಿ ಕಾಲಿಟ್ಟಿದ್ದನು; ಆದರೂ ಆತನು ಅಂದಿನ ರಾತ್ರಿಯನ್ನು ನದೀ ತೀರದಲ್ಲಿಯ ಒಂದು ಗಿಡದ ಕೆಳಗೆ ಕುಳಿತೇ ಕಳೆಯಬೇಕಾಯಿತು. ಬೆಳಗಿನಿಂದ ಒಂದೇಸವನೆ ಹಲವು ಕಷ್ಟ-ನಷ್ಟಗಳನ್ನು ಅನುಭವಿಸಿದ್ದರಿಂದ, ಅಂಥ ಆ ವಿಪನ್ನಾವಸ್ಥೆಯಲ್ಲಿಯೂ ಅವನಿಗೆ ಗಾಢವಾದ ನಿದ್ದೆ ಹತ್ತಿತು!

ಮರುದಿನ ಎಚ್ಚರಾದಾಗ, ಚಳಿಯಿಂದ ಆತನ ಶರೀರವೆಲ್ಲ ಅವಸಾನಗೆಟ್ಟು ಹೋಗಿತ್ತು; ಉದರಿ ಪ್ರಜ್ಞಾವಿಹೀನನಾದ ಆತನಿಗೆ ಅದು ತಿಳಿಯುವ ಬಗೆ ಹೇಗೆ? ಆದರಿಂದ ಅವನು ಅದಾವ ಕಡೆಗೂ ಲಕ್ಷ್ಯಗೊಡದೆ, ನೆಟ್ಟಗೆ ಬೇಗಮುಪುರಿಗಭಿಮುಖವಾಗಿ ಹೊರಟನು. ಆತನ ಮುಖಚರ್ಯೆಯ ಮೇಲೆ ಅಂದು ನಿಜವಾಗಿಯೂ ಭ್ರಮಿಷ್ಟನ ಕಳೆಯೇರಿತ್ತು! ಈ ಮೊದಲು ಅವನು ಧನಾಜಿರಾಯನ ದಂಡಿನೊಡನೆ ೨-೩ ಸಾರೆ ಬೇಗಮುಪುರಿಯ ಮೇಲೆ ದಾಳಿಯಿಕ್ಕಲಿಕ್ಕೆಂದು ಬಂದವನಾದ್ದರಿಂದ, ಆತನಿಗೆ ಅಲ್ಲಿಯ ಎಲ್ಲ ಮಾರ್ಗಗಳೂ ಅವಗತವಾಗಿದ್ದವು. ಪ್ರಸ್ತುತದಲ್ಲಿ ಆತನ ತಲೆಯು ತಾಳಗೆಟ್ಟಿದ್ದರೂ, ಆತನ ಕಾಲುಗಳು ಮಾತ್ರ ಹೋಗತಕ್ಕ ಮಾರ್ಗದಿಂದಲೇ ಬೇಗಮುಪುರಿಯ ಕಡೆಗೆ ಸಾಗಿದ್ದವು. ಊರಲ್ಲಿ ಹೊಕ್ಕೊಡನೆಯೇ ಆತನು ಬಾದಶಹನ ಝನಾನಖಾನೆಯ ಬಗ್ಗೆ ಶೋಧ ನಡಿಸಿದನು. ನಾಲ್ಕಾರು ಕಡೆಗೆ ಶೋಧ ನಡಿಸಿದ ನಂತರ, "ಬಾದಶಹನ ಪ್ರಕೃತಿಯು ಆಕಸ್ಮಿಕವಾಗಿ ಅಶಕ್ತವಾಗಲು, ಆತನ ಆದೇಶದ ಮೇರೆಗೆ ಎಲ್ಲ ಝನಾನಖಾನೆಯೂ ಬೇಗಮುಪುರಿಯಿಂದ ಆತನ ದಂಡಿನ ಛಾವಣಿಗೇ ರವಾನಿಸಲ್ಪಟ್ಟಿದೆ" ಎಂಬುದು ಆತನಿಗೆ ಗೊತ್ತಾಯಿತು. ಇಷ್ಟು ತಿಳಿದ ಕೂಡಲೆ ಆತನು ಹಿಂದಿರುಗಿ ಮತ್ತೆ ಛಾವಣಿಯ ಕಡೆಗೆ ನಡೆದನು. ಈಗ ಪದಮಜಿಯ ಬಳಿಯಲ್ಲಿ ಕುದುರೆಯಿರಲಿಲ್ಲ ಆತನ ತಲೆಯು ತಾಳಗೆಟ್ಟಿತ್ತು. ಆದರಿಂದ ಅವನು ಬಾದಶಹನ ಛಾವಣಿಗೆ ಹೋಗಿ ಮುಟ್ಟಲಿಕ್ಕೆ ಎಷ್ಟು ದಿನ-ವಾರ-ತಿಂಗಳುಗಳು ಬೇಕಾದಾವೆಂಬ ಬಗ್ಗೆ ನಿಯಮವೇ ಉಳಿದಿದ್ದಿಲ್ಲ. ಆದರಿಂದ ನಾವು ಸದ್ಯಕ್ಕೆ ಪದಮಜಿಯನ್ನು ಆ ಮಾರ್ಗದಲ್ಲಿಯೇ ಬಿಟ್ಟು, ಅತ್ತ ಝನಾನಖಾನೆಯಲ್ಲಿ ಹಂಸೆಯ ಗತಿಯೇನಾಗಿದೆಯೆಂಬದನ್ನು ನೋಡುವಾ ನಡಿಯಿರಿ.

ಹಂಸೆಯು ಝನಾನಖಾನೆಯಲ್ಲಿ ಸೆರೆಯಾಗಿರಿಸಲ್ಪಟ್ಟಂದಿನಿಂದ ಬಹು ಚಿಂತಾಕ್ರಾಂತಳಾಗಿದ್ದಳು; ಆದರೂ ಆಕೆಯ ಸುದೈವದಿಂದ ಬಾದಶಹ ಬೇಗ

ಮಳು ಆಕೆಯ ಸೇವೆಗಾಗಿ ನಿಯಮಿಸಿದ್ದ ಏಸೂ ಎಂಬ ಒಕ್ಕಲಗಿತ್ತಿಯು ಒಳ್ಳೆ ಸ್ವಭಾವದವಳಿದ್ದಳು. ಹಂಸೆಯನ್ನು ಕಂಡಾಗಿನಿಂದ ಏಸಿಗೆ ಒಂದು ಬಗೆಯ ಅಂತರಂಗಿಕ ಕಳವಳವುಂಟಾದಂತಾಗಿ, ಅವಳು ಆಕೆಗೆ ಸರ್ವತೋಮುಖದಿಂದ ಸಹಾಯ ಮಾಡಬೇಕೆಂದು ಕೃತಸಂಕಲ್ಪಳಾಗಿದ್ದಳು. ಹಂಸೆಯು ಬಾದಶಹನ ಝುನಾನಖಾನೆಯಲ್ಲಿ ಬಂದಿದ್ದರೂ ಆಕೆಯ ವಿಷಯದ ಸಂಗತಿಗಳೆಲ್ಲ ಬಾದಶಹ ಬೇಗಮಳ ಆದೇಶದ ಮೇರೆಗೆ ತೀರ ಗುಪ್ತವಾಗಿರಿಸಲ್ಪಟ್ಟಿದ್ದವು. ಅಗ್ನಿ ಇರಾಣಕ್ಕೆ ಓಡಿ ಹೋಗಿದ್ದ ಶಹಜಾದಾ ಅಕಬರನೇ ಔರಂಗಜೇಬನ ತರುವಾಯ ಮೊಗಲ ಸಮ್ರಾಟನಾಗುವನೆಂದು ಬಾದಶಹ ಬೇಗಮಳಿಗೆ ಖಾತ್ರಿಯೆನಿಸುತ್ತಿದ್ದ ಮೂಲಕ, ಆತನ ಪ್ರೀತಿ ಸಂಪಾದನಕ್ಕೆಂದು ಅವಳು ಹಂಸೆಯನ್ನು ಅವನಿಗಾಗಿ ಮೀಸಲಿರಿಸುವ ಯೋಜನೆ ಮಾಡಿದ್ದಳು. ಅಂತೇ ಅವಳು ಹಂಸೆಯ ಆಗಮನದ ಸುದ್ದಿಯನ್ನು ಬೇರೆಯಾರಿಗೂ ತಿಳಿಯದಂತೆ ಜಾಗ್ರತೆ ವಹಿಸಿದ್ದಳು. ಹಂಸೆಯು ಬಹು ಲಾವಣ್ಯವತಿಯೆಂಬವರೂ, ಅವಳನ್ನು ಝುನಾನಖಾನೆಯಲ್ಲಿ ತಂದಿಟ್ಟಿರುವರೆಂಬುದೂ ಬಾದಶಹನ ಇತರ ಬೇಗಮರಿಗೆ ಬಂದಿಷ್ಟಾದರೂ ತಿಳಿದಿದ್ದರೆ, ಹಂಸೆಯ ಅಸಹಾಯಕಸ್ಥಿತಿಯ ನ್ನಾ ಹಿತ್ಸರು ಆ ಝುನಾನಖಾನೆಯಲ್ಲಿ ಎಷ್ಟು ಕೊಲೆ ಪಾತಕ ನಡೆಸುತ್ತಿದ್ದರೋ ಯಾರು ಹೇಳಬೇಕು?

ಬಾದಶಹ ಬೇಗಮಳು ಆಗಾಗ್ಗೆ ಹಂಸೆಯ ಡೇರೆಗ ಬಂದು, ಅವಳ ಯೋಗಕ್ಷೇಮವನ್ನು ವಿಚಾರಿಸುತ್ತಿದ್ದಳಲ್ಲದೆ. "ನಿನ್ನನ್ನು ನಮ್ಮ ಅಕಬರನಿಗಾಗಿ ತರಿಸಿರುವೆನೆಂದೂ, ಮುಂದೆ ಆತನು ಬಾದಶಹನಾಗಿ ನಿನ್ನನ್ನು ತನ್ನ ಮುಖ್ಯ ಬೇಗಮಳನ್ನಾಗಿ ಮಾಡಿಕೊಳ್ಳುವನೆಂದೂ, ಮುಖ್ಯ ಬೇಗಮಳಾಗ ಬಲ್ಲಿ ಹಂಸಾ, ನೀನು ನನ್ನನ್ನು ಮರೆಯಲಾಗದೆಂದೂ" ಅವಳಿಗೆ ಹೇಳುತ್ತಿದ್ದಳು. ಇವಳಿಗೆ ತಕ್ಕ ಉತ್ತರ ಕೊಟ್ಟು ನಿರುತ್ತರಳನ್ನಾಗ ಮಾಡಬೇಕೆಂದು ಹಂಸೆಯು ಎಷ್ಟೋ ಸಾರೆ ಯೋಚಿಸಿದ್ದಳು; ಆದರೆ ಏಸಿಯ ಸೂಚನೆಯ ಮೇರೆಗೆ ಅವಳು ಆ ಶಬ್ದಗಳನ್ನು ತನ್ನ ಬಾಯಿಂದ ಉಚ್ಚರಿಸಿರಲಿಲ್ಲವಿಷ್ಟೇ. ಏಸಿಯು ಹಂಸೆಗೆ ಹಲವು ಬಗೆಯ ಆಶೆತೋರಿಸಿ ನುಡಿಯುತ್ತಿದ್ದಳೇನೆಂದರೆ:- "ಹಂಸಾಬಾಯಿ, ಸದ್ಯಕ್ಕೆ ನೀವು ಈ ಬಲೆಯಲ್ಲಿ ಸಿಕ್ಕಿರುವದೇನೋ ನಿಜ. ನೀವು ಇಲ್ಲಿಂದ ಹೊರಹೊರಡುವ ಯೋಗವು ಬೇಗನೆ ಒದಗಬಹುದೆಂದು ನನಗನಿಸುತ್ತದೆ. ನಿಮ್ಮ ಬಿಡುಗಡೆಯ ಸಮಯವನ್ನೂ, ಅದಕ್ಕೆ ತಕ್ಕ

ದ್ದಾದ ವ್ಯಕ್ತಿಯನ್ನೂ ನಾನು ಶೋಧಿಸುತ್ತಿದ್ದೇನೆ. ಸುಮ್ಮನೆ ಅವಸರಪಡುವದರಿಂದ ಕಾರ್ಯಸಾಧಿಸುವ ಬದಲು, ಇಲ್ಲದ ಭಯಂಕರ ಸಂಕಟಕ್ಕೆ ಮಾತ್ರ ಗುರಿಯಾಗಬೇಕಾದೀತು. ಬಾದಶಹನ ಈ ಛಾವಣಿಯಲ್ಲಿ ಮರಾಟಾ ಸರದಾರರು ಇಲ್ಲವೇ ಇಲ್ಲವೆಂತಲ್ಲ; ಆದರೆ ಯಾವ ದೊಡ್ಡ ಮನುಷ್ಯನಿಂದ ನಮಗೆ ಯೋಗ್ಯ ಸಹಾಯವು ದೊರಕಬಹುದೆಂದು ನನಗನಿಸುತ್ತಿದೆಯೋ, ಆ ವ್ಯಕ್ತಿಯು ಮಾತ್ರ ಇಲ್ಲಿ ಇರುವಂತೆ ಕಾಣುವದಿಲ್ಲ. ಅವನು ಯಾವಾಗಲೂ ಬಾದಶಹನ ಸಂಗಡವೇ ಇರುತ್ತಾನೆ. ಕರ್ಮ-ಧರ್ಮ ಸಂಯೋಗದಿಂದ ಆ ವ್ಯಕ್ತಿಯು ಇತ್ತ ಕಡೆಗೆ ಬಂದರೆ, ಹಂಸಾಬಾಯಿ, ಹಾ ಹಾ ಅನ್ನುವಷ್ಟರಲ್ಲಿ ಅವರಿಂದ ನಿಮ್ಮ ಬಿಡುಗಡೆಯಾಗುವದು."

ಅಂಥ ಮಹತ್ವದ ಆ ವ್ಯಕ್ತಿಯಾರೆಂದು ಹಂಸೆಯು ಪೀಡಿಸಿ-ಪೀಡಿಸಿ ಕೇಳಿದರೂ ಏಸಿಯು ಅದನ್ನು ತಿಳಿಸಲಿಲ್ಲ. ತಾನು ತನ್ನ ತಂದೆಯ ಹೆಸರನ್ನು ಏಸಿಗೆ ಹೇಗೆ ಕೆಲ ಕಾರಣದ ಮೂಲಕ ಇದು ವರೆಗೆ ಹೇಳಿರುವದಿಲ್ಲವೋ ಹಾಗೆಯೇ ಏಸಿಯಾದರೂ ಆ ವ್ಯಕ್ತಿಯ ಹೆಸರನ್ನು ತನಗೆ ಬೇರೆ ಕಾರಣದ ಮೂಲಕ ಹೇಳಲಾರಳೆಂದು ತಿಳಿದು ಹಂಸೆಯು ಸುಮ್ಮನಿದ್ದಳು; ಆದರೂ ಒಂದು ದಿನ ಅವಳು ಏಸಿಯನ್ನು ಕೇಳಿದಳು: "ಏಸೂ, ಬಹಳ ನನ್ನಂತೆ ರಜಪೂತ ಕುಮಾರಿಕೆಯರು ಸಂಕಟಗ್ರಸ್ತರಾಗಿಲು, ಅವರು ಯಾವನಾದ್ರ ಬಲಾಢ್ಯ ರಾಜನ ಕಡೆಗೆ 'ರಾಖಿ'ಯನ್ನು ಕಳಿಸಿ, ಆತನ ಸಹಾಯವನ್ನು ಯಾಚಿಸುತ್ತಿದ್ದರಂತೆ. ಬಳಿಕ ಆ ರಾಜನು ಆ ಕುಮಾರಿಯನ್ನು ತನ್ನ ತಂಗಿಯೆಂದು ತಿಳಿದು, ಅವಳನ್ನು ಆ ಸಂಕಟದಿಂದ ಪಾರುಮಾಡುತ್ತಿದ್ದನೆಂದು ಕೇಳಿದ್ದೇನೆ. ನಾನಾದರೂ ಈಗ ಅದರಂತೆಯೇ ನೀನು ಹೇಳುವ ಆ ದೊಡ್ಡ ಮನುಷ್ಯರ ಕಡೆಗೆ ನನ್ನ ಕಂಕಣವನ್ನು ಕಳಿಸಬೇಕೆಂದಿರುತ್ತೇನೆ; ಅಂದರೆ ಅವರು ನನ್ನ ಮುಕ್ತತೆಯ ಬಗ್ಗೆ ಧಾವಿಸಿ ಬಂದಾರಲ್ಲವೆ?" ಎನ್ನಲು, ಏಸಿಗೂ ಅದು ಸಮ್ಮತವಾಯಿತು.

ಮುಂದೆ ತುಸದಿನಗಳಲ್ಲಿಯೇ ಏಸಿಯು ಹಂಸೆಯ ಬಳಿಗೆ ಬಂದು, ಒಳ್ಳೇ ಉತ್ಸುಕತೆಯಿಂದ:-"ಹಂಸಾಬಾಯಿ, ನಿಮ್ಮ ಕೆಲಸ ಯುಕ್ತಿಯು ಫಲದ್ರೂಪವಾಗುವಂತೆ ತೋರುತ್ತದೆ; ಯಾಕಂದರೆ, ಔರಂಗಜೇಬ ಬಾದಶಹನ ಬೇನೆಯು ಹೆಚ್ಚಾಗಿದ್ದು ಆತನು ಆ ವ್ಯಕ್ತಿಯನ್ನು ತನ್ನ ಬಳಿಗೆ ಕರೆಸಿಕೊಂಡಿರುತ್ತಾನಂತೆ. ಹೀಗೆ ಯೋಗಾಯೋಗವೇ ವಿಚಿತ್ರವಾಗಿರುತ್ತವೆ!" ಎಂದಂದಳು.

## ಏಸಿಯ ಕಾರಸ್ಥಾನ.

"ಸ್ವಪ್ನ, ಸ್ವಾ. ಇಲ್ಲಿ ನಿಂತು ನೀನು ಹುಚ್ಚನಂತೆ ಟಕಮಕ ನೋಡುತ್ತಿರುವದೇನು? ನೀನು ಯಾರು? ನಿನಗೆ ಬೇಕಾದುದೇನು? ನೀನು ಯಾರ ಮಾರ್ಗ ನಿರೀಕ್ಷಣೆ ಮಾಡುತ್ತಿರುವೆ? "ಎಂಬ ಪ್ರಶ್ನೆಗೆ,

'ನಾನೆ?'-ನಾನು. ನನಗೆ ಬೇಕಾದವನೂ ನಾನೇ! ನಾನು-ನಾನು ಗಾರಿ ?ಯು ಪದ ದವೂ ನನ್ನವೆ! ನನಗ ಯಾರು ಬೇಕೆನ್ನುತ್ತೀರಾ...?

ಜೋತ್ಯಾಜಿಯು ತನ್ನ ಒಡೆಯನಾದ ರಾಜಛತ್ರಪತಿಯ ದೇರೆಯ ಬಳಿಗೆ ನಿಂತಿದ್ದನು. ಆ ದೇವಾಲಯದ ಸ್ವಲ್ಪ ಅಂತರದ ಮೇಲೆ ಹುಚ್ಚ ಪದಮಜಿಯು ನಿಂತುಕೊಂಡಿದ್ದನು. ಆತನ ದೃಷ್ಟಿಯು ಆ ಡೇರೆಯ ಕಡೆಗೇ ನಟ್ಟು ಹೋಗುತ್ತ ಇದ್ದಿದ್ದ ಜೋತ್ಯಾಜಿಯು ಆತನನ್ನು ಮೇಲೆ ಬರೆದಂತೆ ವಿಚಾರಿಸಲು, ಪದಮಜಿಯು ಆತನ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರ ಕೊಡದೆ, ತನ್ನ ಹುಚ್ಚಿನ ಭರದಲ್ಲಿ ಮೇಲೆ ವಿವರಿಸಿದಂತೆ ತನ್ನಷ್ಟಕ್ಕೆ ತಾನೇ ಬಡಬಡಿಸಲಾರಂಭಿಸಿದನು. ಇಷ್ಟರಲ್ಲಿ ಬಂಕಿ ಗಾಯಕವಾಡನೂ ಭಕ್ತಾಜಿ ರಾಜುರೆಯೂ ಅಲ್ಲಿಗೆ ಬಂದರು. ಆಗ ಬಂಕಿಯು ಪದಮಜಿಯ ಕಡೆಗೆ ನೋಡುತ್ತ ಜೋತ್ಯಾಜಿಯನ್ನು ಕುರಿತು:--"ಜೋತ್ಯಾಜರಾಯರೇ, ನೀವು ಈ ಹುಚ್ಚನನ್ನು ಕಾಣುವವರೇನು? ಕಳೆದ ಎಷ್ಟೋ ದಿನಗಳಿಂದ ಈತನು ಈ ಛಾವಣಿಯಲ್ಲಿ ತಿರುಗುತಲಿದ್ದಾನೆ. ಇದುವರೆಗೆ ಇವನು ಯಾರಿಗೂ ಏನನ್ನೂ ಹೇಳಿಲ್ಲ. ಬಾಯಿಗೆ ಬಂದಂತೆ ಬಡಬಡಿಸುತ್ತ ಅಡ್ಡಾಡುತ್ತಾನೆ."

'ಈತನು ಹುಚ್ಚನೇ? ನೋಡಲಿಕ್ಕಂತೂ ಹಾಗೆ ಕಾಣದು, ಒಳ್ಳೇ ವೀರ ಮರಾಠನಂತೆ ತೋರುತ್ತಾನೆ. ಎಲ-ಎಲ! ಈ ತರುಣನಿಗೆ ಹುಚ್ಚೇಕೆ ಹಿಡಿದಿರಬಹುದು! ನಾವೇ ಇವನನ್ನು ತಿರಸ್ಕರಿಸಿದರೆ, ಈ ಬಾದಶಹನ ಛಾವಣಿಯೊಳಗಿನ ಹೊಲೆಹಾವೆನಿಸುವ ಜಾತಿಯವರು ಇವನನ್ನೆಷ್ಟು ಪೀಡಿಸಬಹುದೋ ಅದಾರು ತರ್ಕಿಸಬೇಕು? ಈತನು ಜಾತಿಯಿಂದ ಮರಾಟನಿರುವದರಿಂದ, ನಾವು ಈತನನ್ನು ಸತ್ಕರಿಸಲೇಬೇಕು'' ಎಂದೆಂದು ಜೋತ್ಯಾಜಯು ಪದಮಜಿಯ ಬಳಿಗೆ ಹೋಗಿ, ಆತನ ಹೆಗಲ ಮೇಲೆ ಕೈಯಿಟ್ಟು, ಒಳ್ಳೇ ಮಮತೆಯಿಂದ.--'ತಮ್ಮಾ ನೀನು ಯಾರು? ನಿನ್ನ ಹೆಸರೇನು? ನೀನು ನನ್ನಲ್ಲಿ ಪರಕೀಯತ್ವವನ್ನು ತಾಳಬೇಡ. ನಾನು ನಿನ್ನ ಒಡಹುಟ್ಟಿದ ಅಣ್ಣನೆಂದು

ತಿಳಿದು, ನಿನ್ನ ಎಲ್ಲ ಸಂಗತಿಯನ್ನೂ ನನಗೆ ತಿಳಿಸು" ಎನ್ನಲು,

"ನೀನು ನನ್ನ ಅಣ್ಣನೇ? ನನಗೆ ಅಣ್ಣಂದಿರೇ ಇಲ್ಲವಲ್ಲ! ನನಗೊಬ್ಬ ತಂಗಿ ಮಾತ್ರ ಇದ್ದಾಳೆ. ಆಕೆಯ ಹೆಸರು ಹಂಸೆ. ಹಂಸಕ್ಕಾ, ಈಗ ನೀನೆಲ್ಲಿ ರುತ್ತೀ? ನಾನು ನಿನ್ನನ್ನೆಲ್ಲಿಂತ ಹುಡುಕಲಿ? ಹಂಸಾ. ನಿನ್ನನ್ನು ಇಲ್ಲಿಯ ಝುನಾನಖಾನೆಯಲ್ಲಿ ತಂದಿಟ್ಟಿರುವರಲ್ಲವೆ? ಅವ್ವಾ, ನೀನು ನನ್ನ ದಾರಿ ಕಾಯುತ್ತಿರಬಹುದಲ್ಲವೆ?" ಎಂದೆನ್ನುತ್ತ ಪದಮುಜಿಯು ಒಮ್ಮೆಲೆ ದಂಗು ಬಡಿದು ನಿಂತನು! ಆತನು ಕಳೆದ ಎಷ್ಟೋ ದಿನಗಳಿಂದ ಬಾದಶಹನ ಆ ಛಾವಣಿಯೊಳಗೆ ಕಂಡಕಂಡಲ್ಲಿ ಅಂಡಲೆಯುತ್ತಿದ್ದನು. ಆತನೊಬ್ಬ ಹುಚ್ಚನೆಂದು ಎಲ್ಲರಿಗೂ ಖಾತ್ರಿಯಾಗಿತ್ತಾದ್ದರಿಂದ. ಪಠಾಣರುಗಳೆಲ್ಲರೂ ಅವನಿಗೆ ರೊಟ್ಟಿ-ಬುತ್ತಿ, ಬಟ್ಟೆ-ಬರೆಗಳನ್ನು ತಾವಾಗಿ ಕೊಡುತ್ತಿದ್ದರು; ಆದರೂ ಆತನ ಬಟ್ಟೆಗಳೆಲ್ಲ ಹರಿದು ಹೋಗಿದ್ದವು. ಎಷ್ಟೋ ದಿನಗಳಿಂದ ಅವನು ಸ್ನಾನ ಮಾಡಿರಲಿಲ್ಲವಾದ್ದರಿಂದ, ಅವನ ಮೈಗೆ ಹೊಲಸು ವಾಸನೆ ಬರುತ್ತಿತ್ತು. ಅವನು ಹಗಲು-ರಾತ್ರಿಗಳೆನ್ನದೆ, ನಿದ್ದೆ-ನೀರಡಿಕೆಗಳ ಕಡೆಗೆ ಲಕ್ಷ್ಯಗೊಡದೆ, ಆ ಛಾವಣಿಯೊಳಗಿನ ಪ್ರತಿಯೊಂದು ಡೇರೆಯ ಬಳಿಗೆ ಹೋಗಿ "ಇಲ್ಲಿ ನನ್ನ ಹಂಸಕ್ಕನನ್ನು ಸೆರೆಯಿರಿಸಿರಬಹುದೆ?" ಎಂದು ತೀಕ್ಷ್ಣದೃಷ್ಟಿಯಿಂದ ನೋಡುತ್ತ ನಿಲ್ಲುತ್ತಿದ್ದನು.

ಪದಮುಜಿಯು ತನ್ನ ಈ ನಿತ್ಯಕ್ರಮದಂತೆ ಒಮ್ಮೆ ಸೂರ್ಯಾಜಿಯ ಡೇರೆಗೂ ಹೋಗಿದ್ದನು. ಸೂರ್ಯಾಜಿಯು ತಟ್ಟನೆ ಮುಗನನ್ನು ಗುರ್ತಿಸಿದನು; ಹಾಗು ಆತನನ್ನು ಪ್ರೇಮದಿಂದ ಒಳಗೆ ಕರೆದೊಯ್ದನು; ಆದರೆ ಪದಮುಜಿಯು ಆತನ ಮೇಲೆ ಹಲ್ಲುಕಡಿಯಹತ್ತಿ:—"ನೀನು ವಿಶ್ವಾಸ ಘಾತುಕನು! ನೀನು ನಮ್ಮ ಮಹಾರಾಜರ ವಿಶ್ವಾಸಘಾತಮಾಡಿ, ನಮ್ಮ ಮಹಾರಾಷ್ಟ್ರ ದೇಶದಲ್ಲಿ ಹಾಹಾಕಾರವನ್ನುಂಟು ಮಾಡಿದವನು. ನಮ್ಮ ಹಂಸಕ್ಕನನ್ನು ಝುನಾನಖಾನೆಗೆ ಸೇರಿಸಿ, ನನ್ನ ಬುದ್ಧಿಭ್ರಂಶಕ್ಕೆ ಕಾರಣನಾದ ನೀಚನು ನೀನೇ! ಕೃತಘ್ನಾ, ನೀನು ನಿನ್ನೀ ಪಾಪಗಳಿಗೆ ತಕ್ಕ ಪ್ರಾಯಶ್ಚಿತವನ್ನು ಭೋಗಿಸುವದಾದರೂ ಎಂಥ ನರಕದಲ್ಲಿ? ಕುಲಕಂಟಕಾ, ನೀನು ಸಾವಿರಾರು ಜನ್ಮಗಳ ವರೆಗೆ ನರಕ ಕುಂಡಗಳಲ್ಲಿ ಬಿದ್ದು ತೊಳಲುತ್ತೀರು! ಹಂಸಾ, ನೀನು ಎಲ್ಲಿರುವೆ? ನಿನ್ನನ್ನು ಶೋಧಿಸುವದಾದರೂ ಎಲ್ಲಿ?" ಎಂದೆನ್ನುತ್ತ ಅಲ್ಲಿಂದ ಹೊರಬಿದ್ದ ಅವನು ಮತ್ತೆ ಎಂದೂ ಆ ಸೂರ್ಯಾಜಿಯ ಡೇರೆಯ ಕಡೆಗೆ ಹಾಯಕ ಸಹ ನೋಡಲಿಲ್ಲ.

ಮೇಲೆ ಹೇಳಿದಂತೆ ಹುಚ್ಚ ಪದಮಜಿಯು ಔರಂಗಜೇಬ ಬಾದಶಹನ ಖಾಸ ಡೇರೆಯ ಬಳಿಯ ಶಾಹೂ ಛತ್ರಪತಿಯ ಡೇರೆಯ ಸಮೀಪದಲ್ಲಿ ನಿಂತಿದ್ದು, ಆತನೊಡನೆ ಜೋತ್ಯಾಜಿ ಮುಂತಾದವರು ಹಿತಗುಜದಿಂದ ಮಾತಾಡುವದನ್ನು ಕಂಡ ಆ ಭಾಗದ ಪಹರೆಯವನು ಓಡುತ್ತ ಬಂದು, ಪದಮಜಿಯನ್ನು ಅಲ್ಲಿಂದ ಹೊಡೆದೋಡಿಸಿದನು. ಆ ಪ್ರಕಾರವನ್ನು ಕಂಡು ಜೋತ್ಯಾಜಿಗೆ ಪರಮ ದುಃಖವಾಯಿತು! ಅವನು ದುಃಖಿತ ಮುದ್ರೆಯಿಂದಲೇ ಶಾಹುವಿನ ಡೇರೆಯನ್ನು ಹೊಕ್ಕನು. ಆತನ ಆ ಇಳಿಮುಖವನ್ನು ನೋಡಿ ಶಾಹುವು:—"ಜೋತ್ಯಾಜೀ, ಎಂದೂ ಕಾಣದೆ ಇದ್ದ ಈ ಚಿಂತಾತಾತರತೆಯು ಇಂದು ನಿನ್ನ ಮುಖವನ್ನೇಕೆ ಆವರಿಸಿತು?' ಎಂದು ಪ್ರಶ್ನೆ ಮಾಡಿದನು ಆಗ ಡೇರೆಯ ಹೊರಗೆ ನಡೆದ ಸಂಗತಿಯನ್ನೆಲ್ಲ ಜೋತ್ಯಾಜಿಯು ಶಾಹುವಿಗೆ ತಿಳಿಸಿದನು. ಅದನ್ನು ಕೇಳಿ ಶಾಹುವು ಒಳ್ಳೇ ಅವಸರದಿಂದ:-"ಜೋತ್ಯಾಜಿ, ಕೆಲ ದಿನಗಳ ಮುಂಚೆ ಝಬುನ್ನಿಸಾ ಬೇಗಮೆಯು ಆಗ್ರಾಕ್ಕೆ ಹೊರಟು ಹೋಗುವಾಗ 'ಈ ಝನಾನಖಾನೆಯಲ್ಲಿ ಯಾವಳೋ ಒಬ್ಬ ಮರಾಟರ ಹುಡುಗಿಯನ್ನು ಸೆರೆಹಿಡಿದಿಟ್ಟಿರುತ್ತಾರೆ. ಸಂಧಿ ಸಾಧಿಸಿ ನೀವು ಅವಳ ಬಿಡುಗಡೆ ಮಾಡಿರಿ' ಎಂದು ನನಗೆ ಹೇಳಿದ್ದಳು. ಆ ತರುಣಿಯು ಈ ಹುಚ್ಚ ಪದಮಜಿಯ ತಂಗಿಯಾದ ಹಂಸೆಯೇ ಆಗಿರಬಹುದೇನು? ಈ ಹಂಸಾ ಮತ್ತು ಪದಮಜಿ ಎಂಬ ಹೆಸರುಗಳನ್ನು ನಾನು ಎಲ್ಲಿಯೋ ಎಂದೋ ಬಹು ದಿನಗಳ ಹಿಂದೆ ಕೇಳಿದಂತೆ ಭಾಸವಾಗುತ್ತಿದೆ; ಆದರೆ ಎಲ್ಲಿ ಹಾಗು ಯಾವಾಗ ಎಂಬದು ಮಾತ್ರ ನೆನಪಿಗೆ ಬರಲೊಲ್ಲದು."

"ಧಣಿಯರೇ, ನನಗೂ ಹಾಗೆಯೇ ಅನಿಸುತ್ತದೆ; ಇಷ್ಟೇ ಅಲ್ಲ, ಆ ಹುಚ್ಚ ಪದಮಜಿಯು ಈಗ ಭರ ತಾರುಣ್ಯಕ್ಕೆ ಬಂದಿದ್ದರೂ, ಆತನ ಬಾಲ್ಯ ಕಾಲದಲ್ಲಿ ನಾನು ಆತನನ್ನು ಎಷ್ಟೋ ಸಾರೆ ಎತ್ತಿ ಮುದ್ದಾಡಿರುವಂತೆ ನನಗನಿಸುತ್ತಿದೆ; ಆದರೆ ಎಲ್ಲಿ ಮತ್ತು ಯಾವಾಗ? ಎಂಬದು ಮಾತ್ರ ತಮ್ಮಂತೆ ನನಗೂ ಈಗ ನೆನಪಾಗಲೊಲ್ಲದು!"

"ಅದಿರಲಿ. ಜೋತ್ಯಾಜೀ, ಇನ್ನು ಮುಂದೆ ಆ ಹುಚ್ಚನು ನಿನಗೆ ಮತ್ತೆ ಎಲ್ಲಿಯಾದರೂ ಭೆಟ್ಟಿಯಾದರೆ, ಅವನನ್ನು ಇಲ್ಲಿಗೆ ಕರೆತಂದು ನನಗೆ ಭೆಟ್ಟಿ ಮಾಡಿಸು; ಅಂದರೆ ಆ ಹುಡುಗಿಯನ್ನು ಹೇಗಾದರೂ ಪತ್ತೆಹಚ್ಚೋಣವಂತೆ."

"ಧಣಿಯರೇ, ಆ ಕೆಲಸವು ಬಹು ಬಿಕ್ಕಟ್ಟಿನದು; ಯಾಕಂದರೆ, ನಾವು

ಈ ಡೇರೆಯನ್ನು ಬಿಟ್ಟು ಹೊರಹೊರಡುವದೇ ದುಸ್ತರವಾಗಿರಲು, ಬಾದಶಹನ ಅಂತಃಪುರದಲ್ಲಿ ಗುಪ್ತವಾಗಿ ಸೆರೆಯಿರಿಸಲ್ಪಟ್ಟ ಆ ಹಂಸೆಯನ್ನು ಶೋಧಿಸುವ ಬಗೆ ಹೇಗೆ? ಆದರೂ ಆಕೆಯನ್ನು ಹುಡುಕುವ ಯುಕ್ತಿಯನ್ನು ಶೋಧಿಸಲೇ ಬೇಕು"

"ಏನಾದರೂ ಚಿಂತೆಯಿಲ್ಲ; ಝೇಬುನ್ನಿಸಾ ಬೇಗಮೆಗೆ ವಚನವಿತ್ತಂತೆ ನಾವು ಆ ಹುಡುಗಿಯನ್ನು ಮುಕ್ತಗೊಳಿಸಲೇಬೇಕು."

ಇತ್ತ ಶಾಹೂ ಛತ್ರಪತಿಯ ಡೇರೆಯಲ್ಲಿ ಆಕಸ್ಮಿಕವಾಗಿ ಹಂಸೆಯ ಬಿಡುಗಡೆಯ ಬಗ್ಗೆ ಹೀಗೆ ಬೇತುಗಳಾಗುತ್ತಿರಲು, ಅತ್ತ ಝನಾನಖಾನೆಯೊಳಗಿನ ಹಂಸೆಯ ಗುಪ್ತ ಡೇರೆಯಲ್ಲಿ ಹಂಸೆಗೂ, ಏಸಿಗೂ ಅವೇ ವಿಷಯದ ಬಗ್ಗೆ ಚರ್ಚೆ ನಡೆದಿತ್ತು. ಹಂಸೆಯು ತನ್ನ ಬಿಡುಗಡೆಯ ಬಗ್ಗೆ ಹತಾಶಳಾಗಿ ಕುಳಿತಿರಲು, ಏಸಿಯು ಒಳ್ಳೇ ಉತ್ತೇಜಕ ಸ್ವರದಿಂದ:-"ಹಂಸಾಬಾಯಿ, ಇಂದು ನಾನು ರಕ್ತಿಪೂರಿ ಹೆಣಗಿ ಆ ದೊಡ್ಡ ಮನುಷ್ಯನನ್ನು ಕಂಡು, ನಿಮ್ಮ ಬಿಡುಗಡೆಯ ಬಗ್ಗೆ ಅವನೆದುರಿಗೆ ಪ್ರಸ್ತಾಪವನ್ನೆತ್ತುವೆನು. ಅದಕ್ಕಾ ಮೊದಲು ನಾನು ಬಾದಶಹ ಬೇಗಮಳಿಗೆ ಭೆಟ್ಟಿಯಾಗಿ, ಇನ್ನು ಕೆಲ ದಿನಗಳ ವರೆಗೆ ಅವಳು ಈ ಕಡೆಗೆ ಸುಳಿಯದಂತೆ ಹಂಚಿಕೆ ಮಾಡುವೆನು; ಹಾಗು ನಿಮಗಾಗಿ ಕೆಲ ಪದಾರ್ಥಗಳನ್ನು ತರಬೇಕಾಗಿದೆಯೆಂದು ಹೇಳಿ, ಛಾವಣಿಯೊಳಗಿನ ಸಂತೆಗೆ ಹೋಗಿ ಬರುವ ಸಲುವಾಗಿ ಅವಳಿಂದ ಪರವಾನಿಗೆ ಪಡೆಯುವೆನು. ಅಂದರೆ ಮುಂದಿನ ನನ್ನ ಎಲ್ಲ ಕೆಲಸಗಳಿಗೂ ಅನುಕೂಲವಾಗುವದು" ಎಂದು ಹೇಳಿ, ಹಂಸೆಯ ಕೈಯೊಳಗಿನ ಒಂದು ರತ್ನಕಂಕಣವನ್ನಿಸಕೊಂಡು, ಆ ಡೇರೆಯಿಂದ ಹೊರಬಿದ್ದಳು. ಹೊರಡುವಾಗ ಡೇರೆಯ ಬಾಗಿಲ ಕಾವಲುಗಾರಳಾದ ನಗ್ನ ಖಡ್ಗಧಾರಿಣಿ ತಾರ್ತರಿಗೆ ಏಸಿಯು ತನ್ನಲ್ಲಿದ್ದ ಬಾದಶಹ ಬೇಗಮಳ ಅಂಕಿತದ ಉಂಗುರವನ್ನು ತೋರಿಸಲಿಕ್ಕೆ ಮರೆಯಲಿಲ್ಲ.

ಏಸಿಯು ಬಂದಾಗ ಬಾದಶಹ ಬೇಗಮೆಯು ಒಂದು ಪತ್ರವಾಚನದಲ್ಲಿ ತೊಡಗಿದ್ದಳು ಏಸಿಯನ್ನು ಕಂಡೊಡನೆ ಅವಳು ಆ ಪತ್ರವನ್ನು ಬದಿಗಿಟ್ಟು:—"ಏಸೂ, ಮತ್ತೇನು ವರ್ತಮಾನ? ಹಂಸೆಯು ಸುಖವಾಗಿರುವಳಷ್ಟೇ? ನಾನು ಯಾರ ಸಲುವಾಗಿ ಆಕೆಯನ್ನು ಇಷ್ಟು ಗುಪ್ತವಾಗಿಯೂ ಕಟ್ಟುನಿಟ್ಟಾಗಿಯೂ ಇರಿಸಿರುವೆನೋ, ಆ ನಮ್ಮ ಶಹಜಾದ ಅಕಬರನು ಇರಾಣದಿಂದ ತಿರುಗಿ ಬರುವಂತೆ ಕಾಣುವದಿಲ್ಲ. ಬಾದಶಹನು ಅವನಿಗೊಳ್ಳೇ

ಪ್ರೀತಿಯಿಂದಲೂ ಆಸ್ಥೆಯಿಂದಲೂ ಬರಲಿಕ್ಕೆ ತಿಳಿಸಿದ್ದರೂ, ಅದಕ್ಕೆ ಅವನು ಸಮ್ಮತಿಸಿರುವದಿಲ್ಲ. ಇನ್ನು ಆತನ ಆಶೆ ಹಿಡಿಯುವ ಕಾರಣವಿಲ್ಲ; ಯಾಕಂದರೆ ಮುಂದೆ ಆತನು ದಿಲ್ಲಿಯ ಬಾದಶಹನಾಗುವಂತೆಯೂ ಕಾಣುವದಿಲ್ಲ. ಇತ್ತೀಚಿಗೆ ಔರಂಗಜೇಬ ಬಾದಶಹನಿಗೆ ಕಾಮಬಕ್ಷನೇ ಬಹು ಪ್ರಿಯಕರನಾಗಿರುವನು ಅದರಿಂದ ಈ ಕಾಮಬಕ್ಷನೇ ಮುಂದೆ ಬಾದಶಹನಾಗುವ ಸಂಭವವಿರುವದರಿಂದ, ಈ ಹಂಸೆಯನ್ನು ಕಾಮಬಕ್ಷನಿಗೇ ಅರ್ಪಿಸಬೇಕೆಂಬ ಹೊಸ ವಿಚಾರವು ಇಂದಿನಿಂದಲೇ ನನ್ನ ಮನಸ್ಸಿನಲ್ಲಿ ಬರತೊಡಗಿವೆ; ಆದರೂ ಆ ಬಗ್ಗೆ ನನ್ನ ಮನಸ್ಸಿನ ನಿರ್ಧಾರವಿನ್ನೂ ಆಗಿರುವದಿಲ್ಲ" ಎಂದಳು.

"ಬೇಗಮಸಾಹೇಬ, ಹಂಸೆಯೆಂದರೆ ಒಂದು ಸುಂದರವಾದ ಗುಲಾಬೀ ಮೊಗ್ಗೆಯಾಗಿರುತ್ತಾಳೆ. ಕಾಮಬಕ್ಷ ಶಹಜಾದರು ಹಗಲೆಲ್ಲ ಸೆರೆಯ ಗುಂಗಿನಲ್ಲಿರುತ್ತಾರೆ ಆದ್ದರಿಂದ ಈ ಬಗ್ಗೆ ಚೆನ್ನಾಗಿ ವಿಚಾರ ಮಾಡಿಯೇ ಮಾಡತಕ್ಕದನ್ನು ನಿರ್ಧರಿಸಬೇಕು. ಬೇಗಮಸಾಹೇಬ, ಹಂಸೆಗಾಗಿ ಕೆಲ ಪದಾರ್ಥಗಳನ್ನು ಕೊಂಡುಕೊಳ್ಳಬೇಕಾಗಿದೆ ಅದಕ್ಕಾಗಿ ನಾನು ಛಾವಣಿಯೊಳಗಿನ ಪೇಟೆಗೆ ಹೋಗಿ ಬರಬೇಕೆನ್ನುತ್ತೇನೆ. ತಮ್ಮ ಅಪ್ಪಣೆ ..."

"ಏಸೂ, ನಿನ್ನ ಬಳಿಯಲ್ಲಿ ನನ್ನ ಅಂಕಿತದ ಉಂಗುರವಿದೆಯಲ್ಲವೆ? ನೀನು ಅದನ್ನು ಯಾವ ಪಹರೆಯ ಮೇಲೆ ತೋರಿಸಿದರೂ, ನಿನ್ನನ್ನು ಯಾರೂ ಪ್ರತಿಬಂಧಿಸಲಿಕ್ಕಿಲ್ಲ."

ಇದುವರೆಗೆ ಆ ಉಂಗುರವು ಬರಿಯ ಹಂಸೆಯ ಡೇರೆಯ ಪಹರೆಯಿಂದ ಪಾರಾಗುವ ಸಾಧನವೆಂದು ಏಸಿಯ ತಿಳುವಳಿಕೆಯಾಗಿತ್ತು; ಆದರೆ ಬೇಗಮೆಯ ಮಾತಿನಿಂದ ಆ ಉಂಗರದ ಮಹತ್ವವು ಅಂದು ಅವಳಿಗೆ ವಿಶದವಾಯಿತು. ಈ ಮೊದಲೇ ಆವಳಿಗೆ ಆ ಉಂಗುರದ ಕರಾಮತಿಯು ತಿಳಿದಿದ್ದರೆ, ಅವಳು ಹಂಸೆಯನ್ನು ಎಂದೋ ಆ ಝನಾನಖಾನೆಯಿಂದ ಬಂಧಮುಕ್ತಗೊಳಿಸುತ್ತಿದ್ದಳು. ಯಾವುದಕ್ಕೂ ಯೋಗಾಯೋಗವು ಕೂಡಿಬರಬೇಕಾಗುತ್ತದೆಂಬ ಮಾತು ಸುಳ್ಳಲ್ಲ. ಇರಲಿ.

ಏಸಿಯು ಆ ಉಂಗುರವನ್ನು ಸಂಗಡ ತಕ್ಕೊಂಡು ಪೇಟೆಗಭಿಮುಖವಾಗಿ ಹೊರಟಳು. ಝನಾನಖಾನೆಯ ಪ್ರತಿಯೊಂದು ಭಾಗದಲ್ಲಿ ಬಿಚ್ಚುಗತ್ತಿಯನ್ನು ಹಿಡಿದು, ಕೆರಳಿದ ಹುಲಿಯಂತೆ ಪಹರೆ ಮಾಡುತ್ತಿದ್ದ ತರುಣ ತಾರ್ತರೀ ಸ್ತ್ರೀಯರು ಏಸಿಯ ಮೇಲೆ ತಮ್ಮ ಕತ್ತಿಯನ್ನೆತ್ತಿಯೇ ಮುಂದೆ

ಬರುತ್ತಿದ್ದರು; ಆದರೆ ಏಸಿಯು ತನ್ನ ಸೆರಗಿನ ತುದಿಗೆ ಕಟ್ಟಿದ್ದ ಆ ಉಂಗುರವನ್ನು ತೋರಿಸುತ್ತಲೆ, ಅವರು ಕುರಿಯಂತೆ ಸಭ್ಯರಾಗಿ, ಏಸಿಗೆ ಮುಜುರೆಯು ಮಾಡಿ ದಾರಿ ತೋರುತ್ತಿದ್ದರು. ಝುನಾನಖಾನೆಯನ್ನು ದಾಟಿದ ಬಳಿಕ ಛಾವಣಿಯಲ್ಲಿ ಬಾದಶಹನ ಭವ್ಯವಾದ ಶಾಮಿಯಾನದ ಹೊರತು, ಮತ್ತೆಲ್ಲಿಯೂ ಪಹರೆಗಳಿರಲಿಲ್ಲ. ಆದರಿಂದ ಏಸಿಯು ದಾರಿಯೊಳಗಿನ ಪ್ರತಿಯೊಂದು ಡೇರೆಯ ಬಗ್ಗೆ ತನ್ನ ತರ್ಕದಿಂದ ಇಲ್ಲವೆ ಎಡಬಲದಲ್ಲಿದ್ದವರನ್ನು ಕೇಳಿ ತಿಳಕೊಳ್ಳುತ್ತ ನಡೆದಿದ್ದಳು ಏಸಿಯು ಬಾದಶಹನ ಖಾಸಶಾಮಿಯಾನದ ಬಳಿಗೆ ಹೋದಾಗ ಆ ಡೇರೆಯ ಸತ್ತಲೂ ದೊಡ್ಡ ದೊಡ್ಡ ತೋಫುಗಳು ಸಜ್ಜಾಗಿ ಹೂಡಲ್ಪಟ್ಟಿದ್ದು, ಬಳಿಯಲ್ಲಿಯೇ ಕೆಚ್ಚೆದೆಯ ಪಠಾಣರ ಬಿಚ್ಚುಗತ್ತಿಯ ಪಹರೆಯಿತ್ತು. ಆ ಪಹರೆಯ ಮಧ್ಯದಲ್ಲಿಯೇ ಶಾಹೂರಾಜನ ಡೇರೆಯಿತ್ತು. ಏಸಿಯು ಅಲ್ಲಿಗೆ ಬರುತ್ತಲೆ, ಅಲ್ಲಿಯ ಪಹರೆಯವನು ತನ್ನ ನಿಡಿದಾದ ನಗ್ನ ಖಡ್ಗವನ್ನು ಅವಳ ಎದುರಿಗೆ ಅಡ್ಡವಾಗಿ ಹಿಡಿದು, ಅವಳನ್ನು ತಡೆದನು. ಅದುವರೆಗೆ ಇಂಥ ಎಷ್ಟೋ ಪಹರೆಗಳನ್ನು ಸಹಜವಾಗಿ ದಾಟಿ ಬಂದಿದ್ದ ಏಸಿಯು, ಕೂಡಲೆ ತನ್ನಲ್ಲಿಯ ಉಂಗುರವನ್ನು ಆ ಉಗ್ರಮುಖದ ಪಠಾಣನಿಗೆ ತೋರಿಸಿದಳು. ಆ ಕೂಡಲೆ ಆತನು ತನ್ನ ಖಡ್ಗವನ್ನು ಬದಿಗೆ ತಕ್ಕೊಂಡು, ಆ ಉಂಗುರಕ್ಕೆ ಬೊಗ್ಗಿ ಸಲಾಮು ಮಾಡಿ, ನಿಶ್ಶಬ್ದದಿಂದ ಬದಿಗಾದನು. ಏಸಿಯು ಹೀಗೆ ಎಲ್ಲೆಡೆಯಲ್ಲಿಯೂ ನಿರಾತಂಕವಾಗಿ ಸಾಗಿ, ಕಡೆಗೆ ಶಾಹೂರಾಜನ ಡೇರೆಯನ್ನೊಮ್ಮೆ ಪ್ರವೇಶಿಸಿದಳು

ಕೆಲ ವರ್ಷಗಳ ಮುಂಚೆ ಏಸಿಯು ಕೆಲ ದಿನಗಳ ವರೆಗೆ ಮಾತ್ರ ಶಾಹೂರಾಜನ ತಾಯಿಯ-ಏಸೂಬಾಯಿ ರಾಣೀಸಾಹೇಬರ ಬಳಿಯಲ್ಲಿ ದಾದಿಯಾಗಿದ್ದಳು; ಆದರೆ ಮುಂದೆ ಇವಳನ್ನು ಬಾದಶಹ ಬೇಗಮಳು ತನ್ನ ಖಾಸ ತೈನಾತಿಗೆಂದು ಕರೆಸಿಕೊಂಡಳು; ಯಾಕಂದರೆ, ಏಸಿಯು ಅಡಿಗೆಯನ್ನು ಅತ್ಯುತ್ತಮವಾಗಿ ಮಾಡುತ್ತಿದ್ದಳು. ಕಳೆದ ನಾಲ್ಕೈದು ವರ್ಷಗಳಿಂದ ಏಸಿಯು ಬೇಗಮೆಯ ಕಡೆಗೇ ಇದ್ದಳು; ಆದರೂ ಅವಳು ಏಸೂಬಾಯಿ ರಾಣಿಯವರನ್ನೂ ಶಾಹುರಾಜರನ್ನೂ ಮರೆತಿರಲಿಲ್ಲ. ಶಾಹುವಿನ ಸ್ವಭಾವವು ಅವಳಿಗೆ ಚೆನ್ನಾಗಿ ಅವಗತವಾಗಿತ್ತು. ಆತನು ಪಾಪಭೀರುವೂ, ಶಾಂತನೂ, ಉದಾರನೂ ಆಗಿರುವನೆಂಬದು ಅವಳಿಗೆ ಗೊತ್ತಿತ್ತಾದ್ದರಿಂದಲೇ ಹಂಸೆಯ ಬಿಡುಗಡೆಯು ಈ ದೊಡ್ಡ ಮನುಷ್ಯನಿಂದಲೇ ಆದೀತೆಂದು ಆಕೆ-

ಯ ಖಾತ್ರಿಯಾಗಿತ್ತು; ಆದರೆ ಸ್ವತಃ ಶಾಹೂರಾಜನು ಬಾದಶಹನ ನಜರ ಕೈದಿನಲ್ಲಿದ್ದ ಮೂಲಕ ಅತನ ಹೆಸರು ಹೇಳುವದು ಯುಕ್ತಿಸಮ್ಮತವಲ್ಲೆಂದು ತಿಳಿದು, "ಒಬ್ಬ ದೊಡ್ಡ ಮನುಷ್ಯ" ಎಂಬ ಉಪನಾಮದಿಂದಲೇ ಅವಳು ಅವನನ್ನು ಸಂಬೋಧಿಸುತ್ತಿದ್ದಳು.

ಡೇರೆಯಲ್ಲಿ ಯಾವಳೋ ಹೆಣ್ಣುಮಗಳ ಪ್ರವೇಶವಾದದ್ದನ್ನು ಕಂಡು, ಜೋತ್ಯಾಜಿಯು ಮುಂದೆ ಬಂದನು. ಶಾಹುರಾಜನು ಒಳಗೆ ಪರದೆಯ ಮರೆಗಿದ್ದ ತನ್ನ ಆಸನದಲ್ಲಿ ಕುಳತಿದ್ದನು. ಜೋತ್ಯಾಜಿಯನ್ನು ಕಂಡು ಏಸಿಯು ಒಳ್ಳೇ ತವಕದಿಂದ:"ರಾಯರೇ, ಈಗ ಮಹಾರಾಜರ ಭೇಟಿಯಾದೀತೇನು? ನಾನು ಅವರನ್ನು ಈಗಲೆ ಕಾಣಬೇಕಾಗಿದೆ"ಎಂದು ಮೆಲ್ಲನೆ ಕೇಳಿದಳು.

"ಹಾಗಾದರೆ ನಡೆ ಒಳಗೆ" ಎಂದ ಕೂಡಲೆ ಏಸಿಯು ಜೋತ್ಯಾಜಿಯೊಡನೆ ಶಾಹುವಿನ ಬಳಿಗೆ ಹೋಗಿ ನಮಸ್ಕಾರ ಮಾಡಿ ನಿಂತಳು.

"ಏಸೂ, ನೀನು ಬಾದಶಹ ಬೇಗಮರ ಖಾಸ ತೈನಾತಿಯಲ್ಲಿರುವದರಿಂದ, ನಮನ್ನು ಮರತೇ ಬಿಟ್ಟಿಯೇನು?" ಎಂದು ಶಾಹುರಾಜನು ಏಸಿಯನ್ನು ಕಂಡು ವಿನೋದಪರವಾಗಿ ನುಡಿದನು.

"ಮಹಾರಾಜ, ನಾನು ತಮ್ಮ ಚರಣಸೇವಕಳು-ದಾಸಾನುದಾಸಿಯು. ತಮನ್ನು ನಾನು ಮರೆಯುವದೆಂದರೇನು?"

"ಇದಿರಲಿ. ಏಸೂ, ನಿನಗೆ ಈಗೇಕೆ ನಮ್ಮ ನೆನಪಾಯಿತು? ಸಹಜ ಬಂದಿದ್ದೆಯೇನು?"

"ಅಂಥ ಜರೂರಿಯ ಕೆಲಸಕ್ಕಾಗಿಯೇ ಸನ್ನಿಧಿಗೆ ಬಂದಿದ್ದೇನೆ...."

ಶಾಹುವು ಏಸಿಯನ್ನು ಮತ್ತೆ ಮಾತಾಡಗೊಡದೆ:—"ಏಸೂ, ಒಳ್ಳೇ ಹೊತ್ತಿಗೆ ಬಂದೆ ಬಿಡು. ಜುನಾನಖಾನೆಯೊಳಗಿನ ಒಂದು ಗುಪ್ತ ಸುದ್ದಿಯನ್ನು ನಾವು ನಿನ್ನಿಂದ ತಿಳಿಯಬೇಕಾಗಿದೆಯಲ್ಲ? ನೀನು ಅದನ್ನು ನಮಗೆ ತಿಳಿಸಬಹುದೇ? ನಿನಗೆ ಗೊತ್ತಿದ್ದ ಸಂಗತಿಗಳನ್ನು ನೀನು ನಮ್ಮೆದುರಿಗೆ ಮರೆ ಮಾಡಲಾರೆಯೆಂಬದು ನಮ್ಮ ಖಾತ್ರಿಯಿದೆ. ಅಂತೆಯೆ ನಾವು ನಿನಗಾ ಸಂಗತಿಯನ್ನು ಕೇಳುತ್ತೇವೆ. ನೀನು ಬಾದಶಹ ಬೇಗಮೆಯ ಖಾಸ ತೈನಾತಿಯ ದಾಸಿಯಾದ್ದರಿಂದ ನಿನಗೆ ಆ ಸಂಗತಿಯು ಗೊತ್ತಿರಲೇಬೇಕು. ಏಸೂ, ನಿಮ್ಮ ಝುನಾನಖಾನೆಯಲ್ಲಿ ಒಬ್ಬ ಮನೆತನಸ್ಥ ಮರಾಟರ ಹುಡುಗಿಯನ್ನು ಸೆರೆ ಹಿಡಿದಿಟ್ಟಿರುವರಂತೆ. ಅದು ನಿಜವೋ?" ಎಂದು ಕೇಳಲು,

“ಮಹಾರಾಜ, ಅಹುದೆಂಬ ಬರಿಯ ಸಮ್ಮತಿಕೊಡಲಿಕ್ಕೆ ಈಗ ನಾನು ಇಲ್ಲಿಗೆ ಬಂದಿಲ್ಲ. ಆಕೆಯ ಬಿಡುಗಡೆಯು ಆವರ ತಮ್ಮಿಂದಲೇ ಆಗತಕ್ಕದ್ದಾದ್ದರಿಂದ, ಅವಳ ಬಿಡುಗಡೆಗಾಗಿ ತಮ್ಮೆಡೆಯಲ್ಲಿ ಪ್ರಾರ್ಥಿಸಲಿಕ್ಕೆಂದೇ ಇಂದು ನಾನು ಇಲ್ಲಿಗೆ ಬಂದಿರುತ್ತೇನೆ.”

“ವಾಹವ್ವಾ! ವಾಹವ್ವಾ!! ಜೋತ್ಯಾಜೀ, ನೋಡಿದೆಯಾ, ಈ ವಿಚಿತ್ರ ಯೋಗಾಯೋಗವನ್ನು! ಏಸೂ, ನಿನ್ನಂತೆ ನಾವೂ ಆ ಹುಡುಗೆಯ ಬಿಡುಗಡೆಯ ಬಗ್ಗೆ ಝೇಬುನ್ನಿಸಾ ಬೇಗಮೆಗೆ ವಚನಬದ್ಧರಾಗಿರುತ್ತೇವೆ.”

ಕೂಡಲೆ ಏಸಿಯು ಹಂಸೆಯಿಂದ ಇಸಕೊಂಡು ಬಂದಿದ್ದ ರತ್ನಕಂಕಣವನ್ನು ಶಾಹುವಿನ ಮುಂದೆ ಇಟ್ಟು:—“ಮಹಾರಾಜ, ಆ ಹುಡುಗಿಯು-ಹಂಸೆಯು ತಮ್ಮನ್ನು ತನ್ನ ಬಂಧುವೆಂದು ತಿಳಿದು, ತಮಗೀ ಕಂಕಣವನ್ನು ಕಳಿಸಿ, ತನ್ನ ಬಿಡುಗಡೆಯ ಬಗ್ಗೆ ತಮ್ಮನ್ನು ಪ್ರಾರ್ಥಿಸಿರುತ್ತಾಳೆ. ಸನ್ನಿಧಿಯ ಅಪ್ಪಣೆಯೇನಾಗುವದೋ, ಅದರಂತೆ ಈ ದಾಸಿಯು ವರ್ತಿಸತಕ್ಕವಳು” ಎಂದು ನುಡಿದಳು. ಕೂಡಲೆ ಶಾಹುವು ಆ ಕಂಕಣವನ್ನು ತಕ್ಕೊಂಡು ವಿಚಾರಮಗ್ನನಾದನು. ಏಸಿಯು ತನ್ನ ಕಾರಸ್ಥಾನದ ಮೂಲಕ ಹಂಸೆಯ ಬಿಡುಗಡೆಯ ಭಾರವನ್ನು ಆತನ ಮೇಲೆ ಹೊರಿಸಿ, ತಾನು ನಿರ್ಲಿಪ್ತಳಾದಳು.

## ತಂಗಿಯ ಬಿಡುಗಡೆ ಅಣ್ಣನ ಬಂಧನ

ಏಸಿಯ ನುಡಿಗಳನ್ನು ಕೇಳಿ ಶಾಹುರಾಜನು ಕೆಲಹೊತ್ತು ವಿಚಾರ ಮಗ್ನನಾದನು. ಹಂಸೆಯ ಮೇಲೆ ಯಾವಾಗ ಎಂಥ ಪ್ರಸಂಗವೊದಗಬಹುದೋ ಎಂಬ ಬಗ್ಗೆ ಅವನಿಗೆ ಭರವಸೆಯೆನಿಸದಾಯಿತು. ಅದರಿಂದ ಅವನು ಜೋತ್ಯಾಜಿಯನ್ನು ಕುರಿತು:-ಜೋತ್ಯಾಜೀ, ಹಂಸಾಬಾಯಿಯನ್ನು ಆ ಝುನಾನಖಾನೆಯೊಳಗಿಂದ ಹೊರಹೊರಡಿಸುವ ಬಗೆ ಹೇಗೆ? ನಿನಗೆ ಆ ಬಗ್ಗೆ ಏನಾದರೂ ಯುಕ್ತಿತೋಚುವದೇ? ಎನ್ನಲು, ಜ್ಯೋತ್ಯಾಜಿಯು ಮುಂದುಗಾಣದೆ ಸುಮ್ಮನೆ ನಿಂತನು. ಆಗ ಏಸಿಯು ಶಾಹುರಾಜನಿಗೆ ಹೇಳುತ್ತಾಳೆ:-“ಮಹಾರಾಜ, ತಾವು ಹಂಸಾಬಾಯಿಯನ್ನು ಬಂಧಮುಕ್ತಗೊಳಿಸಲಿಕ್ಕೆ ಸಿದ್ಧರಾದರೆ, ನಾನು ತಮಗೆ ಯೋಗ್ಯವಾದ ಮಾರ್ಗವನ್ನು ತೋರಿಸಿ ಕೊಡುತ್ತೇನೆ” ಎಂದವಳೇ, ಅವಳು ತನ್ನ ಸೆರಗಿನೊಳಗಿನ ಬೇಗಮೆಯ ಅಂಕಿತದ ಆ ಉಂಗುರವನ್ನು ಅವನಿಗೆ

ತೋರಿಸಿದಳು. ಖುದ್ದ ಬಾದಶಹನ ಮಾತಿಗೆ ಎಷ್ಟು ಗೌರವವಿದ್ದಿತೋ, ಅಷ್ಟೇ ಗೌರವವು ಆ ಉಂಗುರಕ್ಕಿದೆಯೆಂಬದು ಶಾಹುರಾಜನಿಗೆ ಗೊತ್ತಿತ್ತು. ಅದರಿಂದ ಶಾಹುರಾಜನು ಆ ಅಂಗುಲೀಕವನ್ನು ವಿಸ್ಮಯ-ವಿಸ್ಫಾರಿತ ನೇತ್ರಗಳಿಂದ ನೋಡುತ್ತಿರಲು, ಏಸಿಯು ಮತ್ತೆ ಅನ್ನುತ್ತಾಳೆ: "ಮಹಾರಾಜ, ಬೇಗಮೆಯು ಹಂಸಾಬಾಯಿಯನ್ನು ಒಳ್ಳೇ ಕಠಿಣವಾದ ಪಹರೆಯಲ್ಲಿರಿಸಿರುತ್ತಾಳೆ. ಈ ಉಂಗುರವನ್ನು ತೋರಿಸದ ಹೊರತು ಆ ಕಾರ್ತರಿಯರು ನನ್ನನ್ನು ಅತ್ತಿತ್ತ ಅಗಲಾಡಗೊಡುವದಿಲ್ಲ! ಅವರು ನನ್ನನ್ನು ಬಹು ದಿನಗಳಿಂದ ಚೆನ್ನಾಗಿ ಗುರ್ತಿಸುತ್ತಾರೆ; ಆದರೂ ಈ ಉಂಗುರವನ್ನು ತೋರಿಸದ ಹೊರತು ಅವರು ನನ್ನನ್ನು ಎಲ್ಲಿಯೂ ಹೋಗಗೊಡುವದಿಲ್ಲ. ಆದ್ದರಿಂದ ಮಹಾರಾಜ, ಹಂಸಾಬಾಯಿಯನ್ನು ಬೇಗನೆ ಬಂಧಮುಕ್ತಗೊಳಿಸಲಿಕ್ಕೆ ಇದೊಂದೇ ಖಾತ್ರಿಯ ಸುಲಭ ಮಾರ್ಗವಾಗಿದೆ. ಇದು ನಿಮ್ಮ ಬಳಿಯಲ್ಲಿದ್ದರೆ ನಿಮಗೆ ಯಾರೂ ಅಡ್ಡಿ ಮಾಡಲಿಕ್ಕಿಲ್ಲ. ಜನಾನಖಾನೆಯೊಳಗಿನ ಮೊದಲಿನ ಆರು ಡೇರೆಗಳನ್ನು ದಾಟಿದ ಬಳಿಕ, ಏಳನೇ ಡೇರೆಯೇ ಹಂಸೆಯದು. ನಾನು ಮೊದಲು ಅಲ್ಲಿಗೆ ಹೋಗಿ, ಅವಳಿಗೆ ಈ ಸಂಗತಿಯನ್ನು ತಿಳಿಸುತ್ತೇನೆ; ಆದರೆ ತಾವು ಯಾರು? ಎಂಬದನ್ನು ಮಾತ್ರ ಆಕೆಗೆ ಈಗಲೆ ತಿಳಿಸುವದಿಲ್ಲ; ಯಾಕಂದರೆ, ತಮ್ಮ ಹೆಸರಿನ ಪರಿಸ್ಫೋಟವು ಎಲ್ಲಿಯೂ ಆಗದಿರುವದೇ ವಿಹಿತವು. ಕತ್ತಲೆಗವಿದ ಮೇಲೆ ನಾನು ಮತ್ತೆ ಇಲ್ಲಿಗೆ ಬರುತ್ತೇನೆ. ಬಳಿಕ ತಾವು ಈ ಉಂಗುರವನ್ನು ತಕ್ಕೊಂಡು ಅಲ್ಲಿಗೆ ಹೋಗಬೇಕು. ತಾವು ಮರಳಿ ಬಂದ ಮೇಲೆ ಮುಂದೆ ಮಾಡತಕ್ಕ ಸಂಗತಿಯ ಬಗ್ಗೆ ಆಲೋಚಿಸತಕ್ಕದ್ದು."

ಏಸಿಯ ಆ ಸಲಹೆಯು ಶಾಹುರಾಜನಿಗೆ ಸಮ್ಮತವಾಯಿತು; ಜೋತ್ಯಾಜಿಯೂ ಒಪ್ಪಿದನು; ಆದರೂ ಅವನು:— "ಮಹಾರಾಜರು ಹಂಸಾಬಾಯಿಗೆ ಭೆಟ್ಟಿಯಾಗಲಿಕ್ಕೆ ಅಡ್ಡಿಯಿಲ್ಲ; ಆದರೆ ಈ ವೇಷದಿಂದ ಮಾತ್ರ ಹೋಗಕೂಡದು; ಯಾಕಂದರೆ, ನಮ್ಮ ಮಹಾರಾಜನನ್ನು ಇಲ್ಲಿಯ ಪ್ರತಿಯೊಬ್ಬರೂ ಗುರ್ತಿಸುವರು'' ಎಂದು ಸೂಚಿಸಿದನು. ಅದಕ್ಕೆ ಎಲ್ಲರೂ ಸಮ್ಮತಿಸಿ, ಅದರಂತೆಯೇ ಮಹಾರಾಜರು ಕೃತ್ರಿಮ ವೇಷ ತಾಳಿ ಹಂಸಾಬಾಯಿಯ ಡೇರೆಗೆ ಹೋಗತಕ್ಕದ್ದೆಂಬ ನಿರ್ಣಯವಾಯಿತು.

ಏಸಿಯು ಮರಳಿ ಹೋಗಿ:—''ಹಂಸಾಬಾಯಿ, ಆ ದೊಡ್ಡ ಮನುಷ್ಯರು ನಿಮ್ಮ ಬಂಧಮುಕ್ತತೆಯನ್ನು ತೀವ್ರವೇ ಮಾಡುವವರಿದ್ದಾರೆ.

ನಾನು ಈ ಬಗ್ಗೆ ಅವರಿಂದ ಈಗಲೆ ವಚನ ಕೂಡ ತಕ್ಕೊಂಡು ಬಂದಿರುತ್ತೇನೆ. ಇಂದು ಸಂಜೆಗೆ ನಾನು ಮತ್ತೆ ಅವರೆಡೆಗೆ ಹೋಗುವೆನು; ಬಳಿಕ ಅವರು ಬಂದು ನಿಮಗೆ ಭೆಟ್ಟಿಯಾಗುವರು. ಅವರು ಇಲ್ಲಿಗೆ ಬಂದಾಗ ನಾನು ನಿಮ್ಮ ಬಳಿಯಲ್ಲಿರಲಾರೆನು; ಯಾಕಂದರೆ, ನನ್ನ ಬಳಿಯ ಈ ಉಂಗುರದ ಸಹಾಯದಿಂದಲೇ ಇಲ್ಲಿಗೆ ಯಾರೊಬ್ಬರ ಪ್ರವೇಶವಾಗತಕ್ಕದ್ದು. ನಾನು ಹೋಗಿ ಅವರ ಕೈಯಲ್ಲಿ ಈ ಉಂಗುರವನ್ನು ಕೊಟ್ಟು, ಅವರನ್ನು ಇಲ್ಲಿಗೆ ಕಳಿಸಿಕೊಡುತ್ತೇನೆ. ಆಗ ನೀವು ಅವರೆದುರಿಗೆ ಕೊಂಚವೂ ಸಂಕೋಚಪಡಬೇಡಿರಿ. ಆ ದೊಡ್ಡ ಮನುಷ್ಯರು ನಿಮ್ಮನ್ನು ಬೇಗನೆ ಬಂಧಮುಕ್ತಗೊಳಿಸುತ್ತಾರೆ;" ಎಂದು ಹೇಳಿದ್ದನ್ನು ಕೇಳಿ, ಹಂಸೆಗೆ ಎಷ್ಟೋ ಧೈರ್ಯವೆನಿಸಿತು.

ಕೆಲ ಕ್ಷಣಗಳ ನಂತರ ಹಂಸೆಯು ಸಚಿಂತ ಮುದ್ರೆಯಿಂದ:--"ಏಸೂ, ನೀನು ನನ್ನನ್ನು ಆ ದೊಡ್ಡ ವ್ಯಕ್ತಿಯ ಸಹಾಯದಿಂದ ಹೇಗಾದರೂ ಬಿಡುಗಡೆ ಮಾಡುವೆಯೆಂದಂತಾಯಿತು; ಆದರೆ ನಾನು ಇಲ್ಲಿಂದ ಹೊರಟು ಹೋದ ಮೇಲೆ ನಿನ್ನ ಗತಿಯೇನಾದೀತು?"

"ಹಂಸಾಬಾಯಿ, ಆ ಬಗ್ಗೆ ನೀವು ಸ್ವಲ್ಪವೂ ಯೋಚಿಸಬೇಡಿರಿ. ಮೊದಲು ನೀವು ಇಲ್ಲಿಂದ ಸುಖರೂಪ ಪಾರಾಗಿ ಹೋಗಿರಿ. ಆ ಮೇಲೆ ನನ್ನದು ನಾನು ನೋಡಿಕೊಳ್ಳುತ್ತೇನೆ. ನಾನೇನು, ಹೇಳಿ ಕೇಳಿ ದಾಸಿಯು. ಬಹಳವಾದರೆ ನನಗೆ ಮರಣದಂಡಣೆಯಾದೀತು! ನೀವು ಪಾರಾದಿರೆಂದರೆ ಸಾಕು; ಇಲ್ಲಿ ನನ್ನ ಜೀವ ಹೋದರೂ ಚಿಂತೆಯಿಲ್ಲ"

"ಛೀ, ಛೀ, ಹಾಗಾಗದು. ನನ್ನೊಡನೆ ನೀನೂ ಬರಬೇಕು."

ಹಂಸಾಬಾಯಿ, ಇದು ಹೀಗೆ ಹಟಮಾಡತಕ್ಕ ಸಮಯವಲ್ಲ. ನಾನೂ ನಿಮ್ಮೊಡನೆ ಇಲ್ಲಿಂದ ಪಾರಾಗಿ ಬರಬಹುದಾಗಿತ್ತು; ಆದರೆ ಪಹರೆಯವರಿಗೆ ತೋರಿಸತಕ್ಕ ಉಂಗುರವು ಇದೊಂದೇ ಆಗಿದ್ದು, ನೀವು ಇಲ್ಲಿಂದ ಹೊರಟು ಹೋದ ಬಳಿಕ, ಇದು ನನಗೆ ಲಭಿಸಲು ಶಕ್ಯವಿಲ್ಲ. ಆದ್ದರಿಂದ ನೀವು ಈಗ ಹಟತೊಡದೆ, ನಾನು ಹೇಳುವಂತೆ ವರ್ತಿಸಲೇಬೇಕು.

ಅನಿವಾರ್ಯವೆಂದು ಕಡೆಗೆ ಹಂಸೆಯು ಅದಕ್ಕೊಪ್ಪಿದಳು. ಅಷ್ಟರಲ್ಲಿ ಸಂಜೆಯಾಗಿ ಕತ್ತಲೆಯೂ ಆಯಿತು. ಕೂಡಲೆ ಏಸಿಯು ಡೇರೆಯಿಂದ ಮತ್ತೆ ಹೊರಬಿದ್ದಳು. ಬಳಿಕ ಹಂಸೆಯೊಬ್ಬಳೇ ತನ್ನ ಡೇರೆಯೊಳಗಿನ ಆಸನದ ಮೇಲ್ಲಿ ಕುಳಿತು ವಿಚಾರಮಗ್ನಳಾದಳು. ಅವಳ ಆಗಿನ ವಿಚಾರದ ಕೇಂದ್ರವು

ಸ್ವಲ್ಪ ಹೊತ್ತಿನಲ್ಲಿ ತನ್ನೆಡೆಗೆ ಬರಬಹುದಾಗಿದ್ದ ಆ ದೊಡ್ಡ ವ್ಯಕ್ತಿಯೇ ಆಗಿತ್ತು. ಆ ದೊಡ್ಡ ವ್ಯಕ್ತಿಯು ಯಾರು? ಆತನು ತನ್ನನ್ನು ಯಾವ ಉದ್ದೇಶದಿಂದ ಬಂಧಮುಕ್ತಗೊಳಿಸುವನು? ಎಂಬ ವಿಚಾರಗಳೇ ಆಗ ಹಂಸೆಯನ್ನು ಆವರಿಸಿ ಬಿಟ್ಟಿದ್ದವು.

ಏಸಿಯು ಅತ್ತ ಶಾಹುವಿನ ಡೇರೆಗೆ ತಲುಪಲು, ಜ್ಯೋತ್ಯಾಜಿಯು ಶಾಹುವಿನ ವೇಷವನ್ನು ಬದಲಿಸಿದನು. ಅವನಿಗೆ ಯಾವನೊಬ್ಬ ಅಪರಿಚಿತ ರಜಪೂತನ ವೇಷವನ್ನು ತೊಡಿಸಲು, ಆತನ ಗುರ್ತು ಏಸಿಗೂ ಕೂಡ ಹತ್ತದಾಯಿತು. ಬಳಿಕ ಶಾಹೂರಾಜನು ಏಸಿಯು ಕೈಯೊಳಗಿನ ಬೇಗಮೆಯ ಅಂಕಿತದ ಆ ಉಂಗುರವನ್ನಿಸಕೊಂಡು ಹಂಸೆಯು ಡೇರೆಗಭಿಮುಖನಾಗಿ ನಡೆದನು. ನಡುವಿನ ಪ್ರತಿಯೊಂದು ಪಹರೆಯು ಶಾರ್ತರಿಯರೂ ಆ ಅಪರಿಚಿತ ರಜಪೂತ ವ್ಯಕ್ತಿಯ ಬಳಿಯಲ್ಲಿ ಬೇಗಮೆಯ ಅಂಕಿತದ ಆ ಉಂಗುರವನ್ನು ಕಂಡು ಆಶ್ಚರ್ಯಪಡುತ್ತಿದ್ದರು; ಆದರೆ ಆ ವ್ಯಕ್ತಿಯನ್ನು ತಡೆಯುವ ಧೈರ್ಯವು ಮಾತ್ರ ಅವರಾರಿಗೂ ಇರಲಿಲ್ಲ; ಯಾಕಂದರೆ, ಆ ಉಂಗುರದ ಪ್ರಭಾವವೇ ಹಾಗಿದ್ದಿತು! ನಡುವಿನ ಆರು ಪಹರೆಗಳನ್ನು ದಾಟಿ, ಶಾಹೂರಾಜನು ಹಂಸಾಬಾಯಿಯ ಕಡೆಗೆ ಹೋಗಿ, ಅಲ್ಲಿಯ ಖಡ್ಗಧಾರಿಣಿಯರಾದ ಪಹರೆಯವರಿಗೂ ಆ ಉಂಗುರವನ್ನು ತೋರಿಸಿ ಒಳಹೊಕ್ಕನು. ಆಗ ಹಂಸೆಯು ಮೇಲೆ ಹೇಳಿದಂತೆ ಆ ದೊಡ್ಡ ವ್ಯಕ್ತಿಯ ಬಗ್ಗೆ ಆಲೋಚಿಸುತ್ತ ಕುಳಿತಿದ್ದಳು. ಮಹಾರಾಜರನ್ನು ಕಂಡ ಕೂಡಲೆ ಹಂಸೆಯು ಚಟ್ಟನೆ ಎದ್ದು ನಿಂತು:--

"ಮಹಾರಾಜ, ಬನ್ನಿರಿ, ಇತ್ತ ವಿಶ್ರಮಿಸಿರಿ" ಎಂದು ಅತ್ಯಾದರದಿಂದ ನುಡಿದಳು.

ಪರಸ್ಪರರು ಪರಸ್ಪರರನ್ನು ದೃಷ್ಟಿಸುತ್ತಲೆ ಇಬ್ಬರೂ ಕ್ಷಣಕಾಲ ಸಂಕೋಚಗೊಂಡರು. ಹಂಸೆಗೆ ಶಾಹೂರಾಜನ ಗುರುತು ಹತ್ತದಿದ್ದರೂ ಶಾಹೂರಾಜನಿಗೆ ಹಂಸೆಯ ಗುರ್ತು ಚೆನ್ನಾಗಿ ಹತ್ತಿತು; ಯಾಕಂದರೆ, ರಾಯಗಡದಲ್ಲಿ ಶಾಹೂರಾಜನು ಹಂಸಾ ಹಾಗು ಪದಮುಜಿಯರೊಡನೆ ತನ್ನ ಬಾಲ್ಯಕಾಲದಲ್ಲಿ ಬಹು ದಿನಗಳ ವರೆಗೆ ಆಟವಾಡಿದ್ದನು.

ಶಾಹುವು ಆಸನಾಧಿಷ್ಠಿತನಾಗಿ ಹಂಸೆಯನ್ನು ಕುರಿತು:--"ಹಂಸಾಬಾಯಿ, ನೀವೂ ಕುಳಿತುಕೊಳ್ಳಿರಿ. ನನ್ನ ಬಗ್ಗೆ ಸಂಕೋಚಪಡಬೇಡಿರಿ. ನೀವು ನನ್ನ ತಂಗಿಯಂತಿರುತ್ತೀರಿ. ನಿಮ್ಮನ್ನು ಈ ಪಾಪಮಯವಾದ

ರ್ವನಾಸಹಾಸೆಯೊಳಗಿಂದ ಬಿಡುಗಡೆ ಮಾಡುವದು ನನ್ನ ಕರ್ತವ್ಯವಾಗಿರುತ್ತದೆ. ಹಂಸಾಬಾಯಿ, ನಿನ್ನ ಕಂಕಣದ ಸಂದೇಶವು ತಲುಪಿತು. ನಾನು ಆ ಬಗ್ಗೆ ಮಾಡತಕ್ಕದ್ದನ್ನು ಬೇಗನೆ ಮಾಡುತ್ತೇನೆ; ಆದರೆ ಹಂಸಾಬಾಯಿ, ನಿನ್ನ ತಂದೆ-ತಾಯಿ-ಅಣ್ಣ ಮುಂತಾದವರು ಈಗ ಎಲ್ಲಿರುತ್ತಾರೆ? ಅವರ ಕುಶಲ ವಾರ್ತೆಯನ್ನಷ್ಟು ತಿಳಿಸು ನೋಡೋಣ” ಎನ್ನಲು,

“ಮಹಾರಾಜ, ಅದನ್ನೇನೆಂದು ಹೇಳಲಿ? ನೀವು ಯಾರೆಂಬುದು ನನಗನ್ನು ತಿಳಿಯದಿದ್ದರೂ ನಿಮ್ಮ ಪ್ರಶ್ನೆಗೆ ಸಮರ್ಪಕವಾದ ಉತ್ತರ ಕೊಡುವದು ನನ್ನ ಕರ್ತವ್ಯವೇ ಆದ್ದರಿಂದ, ನಾನು ನನ್ನ ಸಂಗತಿಯನ್ನು ನಿಮ್ಮೆದುರಿಗೆ ನಿರಪಾಜಡಿ ಹೇಳುತ್ತೇನೆ, ಕೇಳಿರಿ ನಾನು ಅಂತಿಂಥ ಮನೆತನದ ಮಗಳಲ್ಲ. ನನ್ನ ತಂದೆಯು ಶ್ರೀ ಶಿವಛತ್ರಪತಿಯ ರಾಜಧಾನಿಯಾದ ರಾಯಗಡದ ಸುಭೇದಾರನಾಗಿದ್ದನು. ನಾವು ಯಾವಾಗಲೂ ಆ ರಾಜಮನೆತನದವರ ಸಾನ್ನಿಧ್ಯದಲ್ಲಿ ಬಹು ಆನಂದದಿಂದ ಕಾಲಕ್ರಮಿಸುತ್ತಿರಲು, ಶಿವಪ್ರಭುಗಳ ತರುವಾಯ ಕಾಲಗತಿಯಿಂದ ನನ್ನ ತಂದೆಗೆ ದುಷ್ಟಬುದ್ಧಿ ಹುಟ್ಟಿತು. ಅದರಿಂದ ಆತನು ಶತ್ರುಗಳಿಗೆ ಫಿತೂರಾಗಿ ಆ ಗಡವನ್ನು ಅವರಿಗೊಪ್ಪಿಸಿದ್ದಲ್ಲದೆ, ಮಹಾರಾಣಿಯಾದ ಏಸೂಬಾಯಿಯವರನ್ನೂ ಯುವರಾಜರಾದ ಶಾಹೂರಾಜರನ್ನೂ ಬಾದಶಹರ ಸ್ವಾಧೀನಪಡಿಸಿದನು. ನನ್ನ ತಂದೆಯು ತನ್ನ ಹೆಂಡಿರು-ಮಕ್ಕಳನ್ನು ಅನಾಥರನ್ನಾಗಿ ಮಾಡಿ ತಾನು ಧರ್ಮಾಂತರ ತಾಳಿದನು. ಮಹಾರಾಜ, ಆ ಕರ್ಮಕಥೆಯನ್ನು ಎಷ್ಟು ವಿವರಿಸಿದರೂ ಸ್ವಲ್ಪವೇ ಇರುತ್ತದೆ. ಇರಲಿ. ತದನಂತರ ನಾವು ಪೇಠದ ಬಳಿಯ ಲೋಣಿಗೆ ಹೋಗಿ, ಅಲ್ಲಿ ಕಾಲಹರಣ ಮಾಡುತ್ತಿರಲು, ನಗರದ ಒಬ್ಬ ಬುಡುಬುಡಿಕನು ಒಂದು ದಿನ ನನ್ನ ಕೈ ನೋಡಿ, ನನ್ನ ಹೊಟ್ಟೆಯಲ್ಲಿ ರಾಜಪುತ್ರನುದಯಗೊಳ್ಳುವನೆಂದೂ, ಆ ವರೆಗೆ ನಾನು ನಾನಾ ಬಗೆಯ ಕಷ್ಟಗಳಿಗೊಳಗಾಗಬೇಕಾಗುವದೆಂದೂ ಭವಿಷ್ಯ ಹೇಳಿದನು. ಬಾಲ್ಯದಿಂದಲೂ ನಾನು ನಮ್ಮ ಯುವರಾಜರಾದ ಶಾಹುಮಹಾರಾಜರನ್ನು ಪ್ರೀತಿಸುತ್ತಿರುವೆನಾದ್ದರಿಂದ, ಅವರೇ ನನ್ನನ್ನು ವರಿಸಬಹುದೆಂದು ನಾನು ಅಂದಿನಿಂದ ನನ್ನ ಸೆರಗಿಗೆ ಗಂಟುಹೊಡಕೊಂಡು, ಅವರನ್ನು ಹೊಂದುವವರೆಗೆ ಬರಬಹುದಾಗಿದ್ದ ವಿಪತ್ತುಗಳಿಗೆಲ್ಲ ಧೈರ್ಯದಿಂದ ಎದುರಾಗುತ್ತಲಿರುವೆನು.

“ಮಹಾರಾಜ, ಆ ಬುಡುಬುಡಿಕನ ಭವಿಷ್ಯದ ಪ್ರಕಾರ ನಾನು ನಾನಾ

ಅನರ್ಥಗಳಿಗೆ ಈಡಾಗಿರುವೆನೆಂದ ಬಳಿಕ, ನನ್ನ ಹೊಟ್ಟೆಯಲ್ಲಿ ರಾಜಪುತ್ರನಾಗುವನೆಂಬ ಆತನ ವಚನವಾದರೂ ಸುಳ್ಳಾಗುವ ಬಗೆ ಹೇಗೆ? ಅದಿರಲಿ. ಮಹಾರಾಜ, ನಾವು ಲೋಣಿಯಲ್ಲಿರುವಾಗ ನನ್ನ ಆ ವಿಧರ್ಮಿಯು ತಂದೆಯು ಒಂದು ದಿನ ನಮ್ಮೂರಿಗೆ ಬಂದಿರಲು, ಅಂದೇ ನಮ್ಮೂರ ಬಳಿಯ ಜೇಡದ ದೇಶಮುಖ ನಾಗೋಜಿರಾಯನು ನನ್ನನ್ನು ಅಪಹರಿಸುವ ಸಲುವಾಗಿ ಒಂದು ಬಹು ದೊಡ್ಡ ಕುತಂತ್ರವನ್ನೇ ಹೂಡಿದ್ದನು; ಆದರೆ ಬಾಪೂರಾಯನೆಂಬ ಹೆಸರಿನ ಆತನ ಪ್ರಾಮಾಣಿಕನಾದ ಸೇವಕನ ಮುಂಜಾಗ್ರತೆಯ ಮೂಲಕ ಅಂದು ನಾನು ನನ್ನ ತಂದೆಯೊಡನೆ ಅಲ್ಲಿಂದ ಪಾರಾದೆನು. ಮುಂದೆ ಜಮಾಲಖಾನನೆಂಬ ನನ್ನ ತಂದೆಯ ಸ್ನೇಹಿತನ ನೀಚ ಮತ್ತು ಸ್ವಾರ್ಥದ ಕೃತಿಯ ಮೂಲಕ ನಾನು ಈ ಝುನಾನಖಾನೆಗೆ ಸೇರಿಸಲ್ಪಟ್ಟೆನು. ಮಹಾರಾಜ, ಆಗಿನಿಂದ ನನ್ನ ತಾಯಿ, ನನ್ನ ಪ್ರೀತಿಯ ಅಣ್ಣನಾದ ಪದಮಜಿ ಮೊದಲಾದವರು ಎಲ್ಲಿರುವರೆಂಬದು ನನಗೆ ತಿಳಿಯುವ ಬಗೆಯೆಂತು?

ಹಂಸೆಯ ವಿಷಯದ ಆ ಭವಿಷ್ಯವಾಣಿಯನ್ನು ಕೇಳಿ, ಇಂಥ ಸುಲಕ್ಷಣಾ ಸ್ತ್ರೀರತ್ನವು ತನಗೆ ಲಭಿಸಿದರೆ, ತನ್ನ ಛತ್ರಪತಿ ವಂಶಕ್ಕೆ ಭೂಷಣವೇ ಆಯಿತೆಂದು ಶಾಹುರಾಜನ ಮನಸ್ಸಿನಲ್ಲಿ ಬಂದಿತು. ಅದರಿಂದ ಕ್ಷಣಕಾಲದ ವರೆಗೆ ಆತನ ಮನಸ್ಸು ಚಂಚಲವಾಯಿತು; ಆದರೆ ತಾನು ಈಕೆಯನ್ನು ತನ್ನ ಒಡಹುಟ್ಟಿದ ತಂಗಿಯೆಂದು ತಿಳಿದಿರುವನೆಂಬ ಸಂಗತಿಯು ಉತ್ತರ ಕ್ಷಣದಲ್ಲಿಯೇ ಆತನಿಗೆ ನೆನಪಾಗಲು, ಅವನ ಕಣ್ಣಮುಂದಿನ ಆ ಮೋಹದ ಪರದೆಯು ಒಡೆದು ಲಾಯಿತು. ಅವನು ಹಂಸೆಯನ್ನು ಕಕ್ಕಾವಿಕ್ಕಿಯಾಗಿ ನೋಡತೊಡಗಿದನು.

"ಮಹಾರಾಜ, ತಾವು ಅಂಥ ಯಾವ ಗಹನ ವಿಚಾರದಲ್ಲಿ ತೊಡಗಿರುತ್ತೀರಿ?" ಎಂದು ಹಂಸೆಯು ಮಿಕಿಮಿಕಿ ನೋಡುತ್ತ ಸುಮ್ಮನೆ ಕುಳಿತಿದ್ದ ಶಾಹುರಾಜನನ್ನು ಕೇಳಲು, "ಹಂಸಾಬಾಯೀ, ನಿನ್ನ ದೈವವು ಬಲವತ್ತರವಿದೆಯೆಂಬ ಬಗ್ಗೆ ತಿಲಮಾತ್ರವೂ ಸಂಶಯವಿಲ್ಲ. ನಾನು ನಿನ್ನನ್ನು ಇಲ್ಲಿಂದ ತೀವ್ರವೇ ಬಂಧಮುಕ್ತಗೊಳಿಸುವೆನು. ಆ ಬಗ್ಗೆ ನೀನು ನಿರ್ಧಾಸ್ತಳಾಗಿರು. ನಾನು ಈಗ ಆಲೋಚಿಸುತ್ತಿರುವದೇನಂದರೆ, ನಿನ್ನ ತಾಯಿ-ಅಣ್ಣಂದಿರ ಪತ್ತೆಯಿಲ್ಲದಿರುವಾಗ ನಿನ್ನನ್ನು ಎಲ್ಲಿಗೆ ಕಳಿಸಬೇಕೆಂಬುದೇ ಆಗಿದೆ."

"ಆ ಬಗ್ಗೆ ಮಹಾರಾಜರು ಆಲೋಚಿಸುವ ಕಾರಣವಿಲ್ಲ. ನಾನು ಇಲ್ಲಿಂದ ಪಾರಾದೆನೆಂದರೆ, ನನ್ನ ಅಣ್ಣಾ ಹಾಗು ತಾಯಿಯ ಪತ್ತೆಯನ್ನು ನಾನೇ ಹಚ್ಚು

ನೆನು; ಆದರೆ ಮಹಾರಾಜ, ನಾನು ತಮ್ಮೆಡೆಯಲ್ಲಿ ಇನ್ನೊಂದು ವಿಷಯವನ್ನು ಕುರಿತು ಪ್ರಾರ್ಥಿಸದೆ ಇರಲಾರೆನು. ಅದೇನೆಂದರೆ, ಯಾವ ಏಸೂ ದಾಸಿಯು ನನ್ನ ಬಂಧಮುಕ್ತತೆಗಾಗಿ ಇಷ್ಟು ಕಷ್ಟಪಟ್ಟಿರುವಳೋ, ತಾವು ಅವಳನ್ನೂ ಹೇಗಾದರೂ ಇಲ್ಲಿಂದ ಪಾರು ಮಾಡಿಸಬೇಕು. ಹಾಗೆ ಮಾಡದಿದ್ದರೆ ನನಗಾಗಿ ಆ ಬಡವಿಯು ಪ್ರಾಣಹಾರುವವೇ ಖಂಡಿತವು!''

ನೀನು ಆ ಬಗ್ಗೆ ಯೋಚಿಸುವ ಕಾರಣವಿಲ್ಲ. ನಾನು ಅದನ್ನೂ ಮಾಡುವೆನು. ನನ್ನ ಇಬ್ಬರು ಸ್ವಾರರು ನಾಳೆ ಸಾಯಂಕಾಲಕ್ಕೆ ಈ ಛಾವಣಿಯಿಂದ ಉತ್ತರಕ್ಕಿರುವ ದೊಡ್ಡ ಆಲದ ಮರದ ಬಳಿಯಲ್ಲಿ ನಿಮಗಾಗಿ ಎರಡು ಕುದುರೆಗಳನ್ನು ಸಿದ್ಧಗೊಳಿಸಿಕೊಂಡಿರುತ್ತಾರೆ. ನೀನು ಇಲ್ಲಿಂದ ಹೊರಡುವಾಗ ಏಸಿಯು ಹರಕು ಸೀರೆಯನ್ನುಟ್ಟುಕೊಂಡು ಹೊರಡು. ನಡುವೆ ಯಾರಾದರೂ ನಿನ್ನನ್ನು ಕೇಳಿದರೆ, ನಾನು ಬೇಗಮೆಯ ದಾಸಿಯೆಂದೂ, ಬೇಗಮ ಸಾಹೇಬರ ಅಪ್ಪಣೆಯ ಮೇರೆಗೆ ಕೆಲ ಖಾಸಗೀ ಕೆಲಸಕ್ಕಾಗಿ ಹೊರಟಿರುವೆನೆಂದೂ ಕೊಂಚವೂ ಅಂಜದೆ, ಸ್ಪಷ್ಟವಾಗಿ ತಿಳಿಸು. ಆ ಆಲದ ಮರಕ್ಕೆ ತಲಪುತ್ತಲೆ, ನನ್ನ ಸೇವಕರು ನಿನ್ನ ಬಳಿಯ ಉಂಗುರವನ್ನು ಕೇಳುವರು. ಅವರಿಗೆ ಅದನ್ನು ಕೊಡು; ಅಂದರೆ ಅಲ್ಪಾವಧಿಯಲ್ಲೇ ಏಸಿಯೂ ಅಲ್ಲಿಗೆ ಬಂದು ನಿನ್ನನ್ನು ಕೂಡಿಕೊಳ್ಳುತ್ತಾಳೆ. ಬಳಿಕ ನೀವು ಅಲ್ಲಿ ಒಂದು ಕ್ಷಣ ಕೂಡ ನಿಲ್ಲದೆ--ಹಗಲು-ರಾತ್ರಿ, ನಿದ್ರೆ-ನೀರಡಿಕೆಗಳೆನ್ನದೆ--ನನ್ನ ಆ ಸ್ವಾರರೊಡನೆ ಮಾರ್ಗಕ್ರಮಣಮಾಡಿರಿ. ಅವರು ನಿಮ್ಮನ್ನು ನಿರ್ಧಾರಸ್ತವಾದ ಸ್ಥಳಕ್ಕೊಯ್ದು ತಲುಪಿಸುವರು. ತಿಳಿಯಿತೇ? ಹಂಸಾಬಾಯಿ, ನಾನಿನ್ನು ಹೊರಡಲೊ? ನಾಳೆ ಸಾಯಂಕಾಲಕ್ಕೆ ನೀನು ತಪ್ಪದೆ ಅಲ್ಲಿಗೆ ಬರಬೇಕು; ನಡುವೆ ಎಲ್ಲಿಯೂ ಎದೆಗುಂದಬೇಡ" ಎಂದು ಹೇಳಿ, ಶಾಹೂರಾಜನು ಹಂಸೆಯ ಡೇರೆಯಿಂದ ತೆರಳಿದನು.

ಗೊತ್ತಾದ ಮೇರೆಗೆ ಮರುದಿನ ಮೂರೂ ಸಂಜೆಯ ಹೊತ್ತಿಗೆ ಹಂಸೆಯು ದಾಸಿಯ ವೇಷದಿಂದ ಆ ಆಲದ ಮರಕ್ಕೆ ಬರಲು, ಅಲ್ಲಿಯೇ ನಿಂತಿದ್ದ ಜೋತ್ಯಾಜಿಯು ಆಕೆಯ ಬಳಿಯ ಆ ಉಂಗುರವನ್ನು ತಕ್ಕೊಂಡು, ತನ್ನ ಅಗಲವಾದ ಬಾಣದ ತುದಿಗೆ ಅದನ್ನು ಕಟ್ಟಿ, ಆ ಬಾಣವನ್ನು ಅದುವರೆಗೆ ಹಂಸೆಯನ್ನು ಸೆರೆಯಾಗಿರಿಸಿದ್ದ ಡೇರೆಯ ಮೇಲೆ ಬಿಟ್ಟನು. ಕೂಡಲೆ ಆ ಬಾಣವು "ಸೂಂಂಂ'' ಎನ್ನುತ್ತ ಹೋಗಿ, ಆ ಡೇರೆಯ ಮೇಲಿನ ಅರಿವೆ

ಯನ್ನು ಹರಿದು ಒಳಗೆ ಬಿತ್ತು. ಒಳಗೆ ಏಸಿಯು ಆ ಬಾಣದ ನಿರೀಕ್ಷಣೆಯಲ್ಲೇ ಇದ್ದಳು. ಕೂಡಲೆ ಅವಳು ಅದಕ್ಕೆ ಕಟ್ಟಿದ ಉಂಗುರವನ್ನು ಬಿಚ್ಚಿಕೊಂಡು, ಹಂಸೆಯು ಬಂದು ನಿಂತಿದ್ದ ಆಲದ ಮರಕ್ಕೆ ಬಂದಳು. ಉತ್ತರ ಕ್ಷಣದಲ್ಲಿಯೇ ಅವರೆಲ್ಲರೂ ಕುದುರೆಗಳನ್ನು ಏರಿ ಪಂಢರಪುರದ ಮಾರ್ಗ ಹಿಡಿದು ಭರದಿಂದ ಸಾಗಿದರು. ಅಷ್ಟರಲ್ಲಿ ಗಾಢವಾದ ಕತ್ತಲೆಯು ಬೀಳಲು, ಆ ಕುದುರೆಗಳು ಯಾರಿಗೂ ಕಾಣದಂತಾದವು.

ಮರುದಿನ ಶಾಹೂರಾಜನ ಆದೇಶದ ಮೇರೆಗೆ ಜೋತ್ಯಾಜಿಯು ಆ ಥಾವಣಿಯಲ್ಲೆಲ್ಲ ಅಡ್ಡಾಡಿ, ಆ ಹುಚ್ಚ ಪದಮಜಿಯನ್ನು ಹಿಡಕೊಂಡು ಬಂದನು; ಹಾಗು ಆತನಿಗೆ ಹಂಸೆಯು ಬಿಡುಗಡೆಯ ಸಂಗತಿಯನ್ನು ತಿಳಿಸಿದರೆ ಆತನ ಹುಚ್ಚು ಕೂಡಲೆ ಇಳಿಯೀತೆಂದು ತಿಳಿದು, ಅವನಿಗೆ ಆ ಸಂಗತಿಯನ್ನು ಮೆಲ್ಲಮೆಲ್ಲನೆ ಹೇಳತೊಡಗಿದನು. ಅದನ್ನು ಕೇಳಿ ಪದಮಜಿಯು ಹುಚ್ಚು ಮತ್ತಿಷ್ಟು ತಲೆಗೇರಿತು. ಅವನು ಬಾಯಿಗೆ ಬಂದಂತೆ ಬೊಗಳಹತ್ತಿದನು. ಕ್ಷಣದಲ್ಲಿ ಶಾಹುರಾಜನನ್ನು ಹೊಗಳಿದರೆ, ಪರಕ್ಷಣದಲ್ಲಿ ಬಾದಶಹನನ್ನು ಬಾಯಿಗೆ ಬಂದಂತೆ ಸ್ತುತಿಸುತ್ತಿದ್ದನು. ಬರಬರುತ್ತ ಆತನ ಹುಚ್ಚು ಅತಿರೇಕಗೊಂಡಿತು. ಅದನ್ನು ಕಂಡು ಶಾಹೂರಾಜನಿಗೆ ಪರಮ ದುಃಖವೆನಿಸಿತು; ಆದರೂ ಅವರು ಆತನನ್ನು ಶಾಂತಗೊಳಿಸುವ ಯತ್ನ ಮಾಡಹತ್ತಿದ್ದರು. ಶಾಹುರಾಜರ ಬಳಿಯು ಆ ಹುಚ್ಚನ ಆ ಬೊಗಳುವಿಕೆಯನ್ನು ಕೇಳಿ, ಥಾವಣಿಯ ಆ ಭಾಗದ ಪರಿಚಯವನು ಥಾವಣೆಯ ಕೊತವಾಲನಿಗೆ ಏನೇನೋ ಕಿವಿಮಂತ್ರ ಹೇಳಲು, ಕೊತವಾಲನು ತನ್ನ ಕೆಲಜನ ಸೇವಕರೊಡನೆ ಅಲ್ಲಿಗೆ ಬಂದು, ಈತನು ನಿಜವಾದ ಹುಚ್ಚನಲ್ಲ; ಶತ್ರುಪಕ್ಷದ ವೇಷಧಾರಿಯಾದ ಹೇರನು'' ಎಂದು ನಿರ್ಣಯಿಸಿ, ಅವನನ್ನು ಸೆರೆ ಹಿಡಕೊಂಡು ನಡೆದನು. ಹೀಗಾಗಿ ತಂಗಿಯು ಬಂಧನಮುಕ್ತಳಾಗುವಷ್ಟರಲ್ಲಿ ಅಣ್ಣನಿಗೆ ಬಂಧನವಾಗಿ ಬಿಟ್ಟಿತು.

---

## ತಾನೊಂದು ಬಗೆದರೆ ದೈವವೊಂದು ಬಗೆಯುವದು.

ಔರಂಗಜೇಬನ ಕಾಲಕ್ಕೆ ಇ. ಸ. ೧೬೬೯ ನೇ ವರ್ಷವೇ ಹಿಂದುಗಳ ಛಲನದ ಪ್ರಾರಂಭದ ವರ್ಷವು. ಆ ವರ್ಷ ಬನಾರಸ, ಮಥುರಾ ಮುಂತಾದ ಕಡೆಯ ಕೆಲ ಜನ ಬ್ರಾಹ್ಮಣರು ತಮ್ಮ ಧರ್ಮವನ್ನು ಮುಸಲ್ಮಾನರಿಗೆ ಕೂಡ

ಕಲಿಸುತ್ತಿರುವರೆಂಬ ಸುದ್ದಿಯು ಹಬ್ಬಿತು. ಹಿಂದುಗಳ ಛಲನ ಮಾಡಲಿಕ್ಕೆ ಔರಂಗಜೇಬನಿಗೆ ಇದೊಂದು ದೊಡ್ಡ ನೆವವೇ ಸಿಕ್ಕಂತಾಯಿತು. ಕೂಡಲೆ ಆತನು ಬನಾರಸದೊಳಗಿನ ಹಿಂದೂ ಧರ್ಮಾಧ್ಯಕ್ಷರ ನೇಮಣೂಕಿಗಳನ್ನು ನಿಲ್ಲಿಸಿ ಬಿಟ್ಟನು; ಮತ್ತು ೧೬೬೯ನೇ ಎಪ್ರೀಲದಲ್ಲಿ ಆತನು ಒಂದು ಒಟ್ಟು ಹುಕುಮು (ಆರ್ಡರನನ್ನು) ತೆಗೆದು, ಹಿಂದುಗಳ ಎಲ್ಲ ಪಾಠಶಾಲೆ, ಮಠ, ದೇವಾಲಯ ಮುಂತಾದವುಗಳನ್ನು ವಿಧ್ವಂಸಗೊಳಿಸಬೇಕೆಂದು ಕಟ್ಟಪ್ಪಣೆಗೆಯ್ದನು. ಔರಂಗಜೇಬನ ರಾಜ್ಯದಲ್ಲಿ ೧೦೦ಕ್ಕೆ ೭೫ ರಂತೆ ಹಿಂದುಗಳೇ ಇದ್ದದ್ದರಿಂದ, ಆತನ ಆ ಹುಕುಮು ಅಮಲಿನಲ್ಲಿ ಬರುವದು ಕಠಿಣವಿತ್ತೆಂಬದು ಸಹಜವಾಗಿದೆ. ಆದರೂ ಔರಂಗಜೇಬನು-ಆ ಪರಮ ಹಿಂದೂ ದ್ವೇಷಕನು—ತನ್ನ ಆ ಹುಕುಮನ್ನು ಸಕ್ತಿಯಿಂದ ಅಮಲಿನಲ್ಲಿ ತಂದನು. ಅದೇ ವರ್ಷದ ಸಪ್ಟಂಬರದಲ್ಲಿ ಅವನು ಕಾಶೀ ಕ್ಷೇತ್ರದೊಳಗಿನ ಶ್ರೀ ವಿಶ್ವೇಶ್ವರನ ದೇವಾಲಯುವನ್ನು ಕೆಡಹಿ ನೆಲಸಮ ಮಾಡಿದನು. ಬುಂದೇಲಖಂಡದ ಅರಸನಾದ ನರಸಿಂಗದೇವನು ಮೂವತ್ತುಮೂರು ಲಕ್ಷ ರೂಪಾಯಿ ಖರ್ಚು ಮಾಡಿ ಮಥುರೆಯಲ್ಲಿ ಕಟ್ಟಿಸಿದ್ದ ಕೇಶವ ದೇವರ ಅತ್ಯಂತ ಭವ್ಯವಾದ ಮಂದಿರವನ್ನು ೧೬೭೦ರಲ್ಲಿ ಕೆಡಹಿ, ಅದೇ ಸ್ಥಳದಲ್ಲಿ ಮಶೀದಿಯನ್ನು ನಿರ್ಮಿಸಿದನು. ಇದಲ್ಲದೆ ಉಳಿದ ಕಡೆಯ ಸುಪ್ರಸಿದ್ಧ ದೇವಾಲಯುಗಳನ್ನೆಲ್ಲ ವಿಧ್ವಂಸಗೊಳಿಸಿ, ಅವುಗಳೊಳಗಿನ ಮೂರ್ತಿಗಳನ್ನೆಲ್ಲ ಆಗ್ರಾಕ್ಕೆ ತರಿಸಿದನು; ಮತ್ತು ಅವುಗಳನ್ನೆಲ್ಲ ಅಲ್ಲಿಯ ಸುಪ್ರಸಿದ್ಧ ಮಶೀದೆಯ ಮೆಟ್ಟಿಲುಗಳ ಕೆಳಗೆ ಬೊಕ್ಕಬೋರ್ಲಾಗಿ ಹುಗಿಸಿದನು! ಆಗ ಯೋಗಿ ಮತ್ತು ಸಂನ್ಯಾಸಿಗಳಿಗಂತೂ ಇಡಿ ಹಿಂದುಸ್ತಾನದಲ್ಲಿ ನೆಲೆಯಿಲ್ಲದಾಯಿತು. ಆತನು ಕಾಠೇವಾಡದೊಳಗಿನ ಸೋಮನಾಥ ಮಂದಿರವನ್ನು ಕೆಡವಿಸಿದನು. ಹಿಂದುಗಳ ಎಲ್ಲ ಹಬ್ಬ-ಹುಣ್ಣಿವೆಗಳೂ ಜಾತ್ರೆ-ತೇರುಗಳೂ ನಿಲ್ಲಿಸಲ್ಪಟ್ಟು, ಹಿಂದುಗಳನ್ನೆಲ್ಲ ಸರಕಾರೀ ಚಾಕರಿಯಿಂದ ಬರತರಪು ಮಾಡಿಬಿಟ್ಟನು! ದೇವರ ಹಾಡೇ ಹಾಗಾದ ಬಳಿಕ ಔರಂಗಜೇಬನು ಕ್ಷುದ್ರ ಮಾನವರನ್ನು ಯಾವ ಗತಿಗೆ ಮುಟ್ಟಿಸಿರಬಹುದೆಂಬದನ್ನು ಅದಾರು ಹೇಳಬೇಕು? ಆತನ ಸರದಾರನಾದ ಅಫಝುಲ್ಲಖಾನನು ಪಂಢರಪುರಕ್ಕೆ ಹೋಗಿ ಅಲ್ಲಿಯ ಜಗಪ್ರಸಿದ್ಧವಾದ ಶ್ರೀ ಪಾಂಡುರಂಗನ ದೇವಾಲಯುವನ್ನು ಕೆಡಹಿ ಮೂರ್ತಿಯನ್ನು ನಾಮಶೇಷಗೊಳಿಸಿದನಲ್ಲದೆ, ತುಳಜಾಪುರದಲ್ಲಿಯ ಭವಾನಿಯನ್ನೂ ಒಡೆದು ಚೂರ-ಚೂರಾಗ ಮಾಡಿದನು! ಆತನ ಆ ಅಮಾನುಷ

ಕೃತ್ಯಕ್ಕಾಗಿ ಸಂತಾಪಗೊಂಡ ಶಿವಾಜಿರಾಜನು ಆ ಖಾನನನ್ನು ಕೊಂದು, ಆತನ ಮುಂಡವನ್ನು ಕೊಯ್ದು, ಪ್ರತಾಪಗಡದ ದಿಡ್ಡಿಯ ಬಾಗಿಲಿಗೆ ಕಟ್ಟಿಸಿದ್ದನು!

ಆದರೆ ಕಾಲಗತಿಯು ವಿಚಿತ್ರವಾದದ್ದು. ತಿಪ್ಪೆಯು ಉಪ್ಪರಿಗೆಯಾಗುವದೂ, ರಾಜನು ರಂಕನಾಗುವದೂ ಕಾಲಗತಿಯ ಪರಿಣಾಮಗಳೇ. ಯಾವ ಔರಂಗಜೇಬ ಬಾದಶಹನ ದರ್ಪವು ದಿಲ್ಲಿಯಿಂದ ವಿಜಾಪುರ-ಗೋವಳಕೊಂಡಗಳ ವರೆಗೆ ಏಕೋಪ್ರಕಾರವಾಗಿತ್ತೋ, ಕಾಲಗತಿಯು ಬದಲಾಗಲು, ಅದೇ ಔರಂಗಜೇಬನನ್ನು ಆತನ ಕೇವಲ ವಿಶ್ವಾಸಿಕ ಸರದಾರರೂ ಕೂಡ ಕೇಳದಾದರು. ಅವನ ಛಾವಣಿಯಲ್ಲಿ ಅಷ್ಟು ಬೇಬಂದಶಾಹಿಯು ನಡೆದಿದ್ದಿತೆಂದೇ ಹಂಸೆಯು ಆ ಇಕ್ಕಟ್ಟಿನ ಪಹರೆಯೊಳಗಿಂದ ಅಷ್ಟು ಸುಲಭವಾಗಿ ಪಾರಾಗಿ ಬಂದಳು. ಹಂಸೆಯು ಏಸಿಯೊಡನೆ ಆ ಡೇರೆಯೊಳಗಿಂದ ಹೊರಟು ಹೋದ ಮೇಲೆ, ಇಪ್ಪತ್ತಾಲ್ಕು ತಾಸುಗಳ ವರೆಗೆ ಆ ಛಾವಣಿಯೊಳಗಿನವರಾರಿಗೂ ಅವರ ಪಲಾಯನದ ಸುದ್ದಿ ಕೂಡ ಹತ್ತಲಿಲ್ಲ! ಮರುದಿನ ಸಂಜೆಯ ಮುಂದೆ ಬಾದಶಹನ ಬೇಗಮೆಯು ಸಹಜವಾಗಿ ಆ ಡೇರೆಗೆ ಹೋಗಿ ನೋಡುತ್ತಾಳೆ, ಅಲ್ಲಿ ಹಂಸೆಯೂ ಇಲ್ಲ! ಏಸಿಯೂ ಇಲ್ಲ!! ಆ ಸುದ್ದಿಯು ಕ್ರಮವಾಗಿ ಮರಣೋನ್ಮುಖನಾಗಿ ಬಿದ್ದಿದ್ದ ಔರಂಗಜೇಬ ಬಾದಶಹನಿಗೂ ತಿಳಿಯಿತು; ಆದರೆ ಅವನಾದರೂ ಆ ಸ್ಥಿತಿಯಲ್ಲಿ ಮಾಡುವದೇನು? ಇರಲಿ.

ಹಂಸೆಯನ್ನು ಕರಕೊಂಡು ನಡೆದಿದ್ದ ಶಾಹೂರಾಜನ ಆ ಸವಾರರು ತಮ್ಮ ಕುದುರೆಗಳನ್ನು ಬೆಳತನಕ ಒಂದೇಸವನೆ ಓಡಿಸಿದರು; ಹಾಗು ನಡುವಿನ ೨೦-೨೫ ಹರದಾರಿಗಳ ದಾರಿಯನ್ನು ಕ್ರಮಿಸಿ, ಬೆಳಗಾಗುವಷ್ಟರಲ್ಲಿ ಅವರು ಪಂಢರಪುರಕ್ಕೆ ಹೋಗಿ ತಲುಪಿದರು. ಹಂಸೆಯು ಏಸಿಯೊಡನೆ ಪಂಢರಪುರಕ್ಕೆ ಬಂದ ದಿನವೇ ಆಷಾಢ ಶುದ್ಧ ಏಕಾದಶಿಯಾಗಿತ್ತು. ಆದರಿಂದ ಅಂದು ಪಂಢರಪುರದಲ್ಲಿ ಲಕ್ಷಗಟ್ಲೆ ವಾರಕರೀ ಜನರು ಕಲೆತಿದ್ದರು. ಎಲ್ಲಿ ನೋಡಿದತ್ತ ಜನರೇ ಜನರು! ಚಂದ್ರಭಾಗೆಯನ್ನು ದಾಟಿ ಅವರು ಊರೊಳಗೆ ನಡೆದರು. ಊರೊಳಗೆಲ್ಲ "ಜಯ ವಿಠಲ! ಜಯ ಜಯ ವಿಠಲ! ಜಯ ಹರಿವಿಠಲ!" ಎಂಬ ಶಬ್ದವು ನಿನಾದಗೊಳ್ಳುತ್ತಿತ್ತು. ಆದರಿಂದ ಅಂದು ಆ ಪಂಢರಪುರವು ಪ್ರತ್ಯಕ್ಷ ದೇವನಗರಿಯಾಗಿ ತೋರುತ್ತಿತ್ತು. ಹಂಸೆಯು ಏಸಿಯೊಡನೆ ಕುದುರೆಯಿಂದಿಳಿದು, ಚಂದ್ರಭಾಗೆಯಲ್ಲಿ ಸ್ನಾನ ಮಾಡಿ, ದೇವದರ್ಶನಕ್ಕೆಂದು ನಡೆದಳು. ಅವಳನ್ನು ಕಳಿಸಬಂದಿದ್ದ ಬಂಕಿಯೂ, ಭಕ್ತಾ

ಜಿಯೂ ಎಲ್ಲ ಕುದುರೆಗಳನ್ನು ತಮ್ಮ ಪರಿಚಯದವರಲ್ಲಿ ಕಟ್ಟಿ, ಅವುಗಳ ಮೇವು ನೀರಿನ ವ್ಯವಸ್ಥೆ ಮಾಡಹತ್ತಿದರು.

ಹಂಸೆಯು ಗುಡಿಗೆ ಹೋಗಿ ಅಲ್ಲಿಯ ದೇವಮೂರ್ತಿಗಳನ್ನೂ ಆ ಭಕ್ತವೃಂದವನ್ನೂ ನೋಡಿ ಆನಂದಪರವಶಳಾದಳು. ಎಷ್ಟೋ ಹೊತ್ತಿನ ವರೆಗೆ ಆ ಭಜನೆಯ ನಾದದಲ್ಲಿ ಅವಳು ದೇಹಭಾನ ವಿವರ್ಜಿತಳಾದಳು. ಬಳಿಕ ಅವಳು ಏಸಿಯೊಡನೆ ತಮ್ಮ ಬಿಡಾರಕ್ಕೆ ಸಾಗಲು, ಅವಳ ಮನಸ್ಸು ನಾನಾ ಬಗೆಯ ಆಲೋಚನೆಗೆ ಒಳಗಾಯಿತು. ದೇವರ ದಯೆಯಿಂದ ನಾನು ಆ ಝನಾನಖಾನೆಯಿಂದ ಪಾರಾಗಿ ಬಂದಿದ್ದೇನೋ ನಿಜ; ಆದರೆ ನನ್ನನ್ನು ಅಲ್ಲಿಂದ ಬಂಧಮುಕ್ತ ಮಾಡಿದ ಆ ದೊಡ್ಡ ಮನುಷ್ಯರಾರಾಗಿರಬೇಕು? ಅದನ್ನು ನಾನು ಇದುವರೆಗೂ ತಿಳಕೊಳ್ಳದಿರುವದು ಕೃತಘ್ನತೆಯ ಲಕ್ಷಣವಲ್ಲವೇ? ಈ ಏಸಿಯು ಅವರ ಹೆಸರನ್ನು ಹೇಳದಿದ್ದರೂ, ಆ ಸವಾರರು ಅದನ್ನು ಸಹಜವಾಗಿ ಹೇಳಬಹುದು. ಈಗ ಮನೆಗೆ ಹೋಗಿ, ಅವರಿಂದ ಆ ದೊಡ್ಡ ಮನುಷ್ಯರ ಹೆಸರು-ದೆಸೆಗಳನ್ನು ತಿಳಕೊಳ್ಳುವದಲ್ಲದೆ, ಆ ಸವಾರರ ಮುಖಾಂತರ ನನ್ನ ಅಣ್ಣ ಪದಮಜಿಯು ಸೈನಿಕನಾಗಿರುವ ಸಂತಾಜಿ ಜಾಧವರ ದಂಡು ಈಗ ಎತ್ತಕಡೆಗಿದೆಯೆಂಬದನ್ನಷ್ಟು ತಿಳಕೊಳ್ಳಬೇಕು; ಅಂದರೆ ಆ ಸವಾರರನ್ನು ಇಲ್ಲಿಂದಲೇ ಛಾವಣಿಗೆ ತಿರುಗಿ ಕಳಿಸಿ, ಅಣ್ಣನ ಪತ್ತೆ ಹಚ್ಚಲಿಕ್ಕೆ ನನಗೆ ಅನುಕೂಲವಾದೀತು. ಅಣ್ಣನ ಪತ್ತೆ ಹತ್ತಿತೆಂದರೆ, ನಾನು ನಿರ್ಧಾಸ್ತಳಾಗುವೆನು. ಬಳಿಕ ನಾನೂ ಅಣ್ಣನೂ ಕೂಡಿ ಅವ್ವನು ಎಲ್ಲಿದ್ದರೂ ಅವಳನ್ನು ಕೂಡಲೆ ಪತ್ತೆ ಹಚ್ಚಬಹುದು.

ಹೀಗೆ ವಿಚಾರಗ್ರಸ್ತಳಾಗಿ ಹಂಸೆಯು ಏಸಿಯೊಡನೆ ತಮ್ಮ ಬಿಡಾರಕ್ಕೆ ಬರುವಷ್ಟರಲ್ಲಿ ಬಂಕಿಯು ಯಾರೊಡನೆಯೋ ಮಾತಾಡುತ್ತಿದ್ದನು; ಆ ಅಪರಿಚಿತನೆದುರಿಗೆ ಒಮ್ಮೆಲೆ ಹೋಗಬಾರದೆಂದು ಯೋಚಿಸಿ, ಹಂಸೆಯು ಏಸಿಯೊಡನೆ ಅಲ್ಲಿಯೇ ಮರೆಗೆ ನಿಂತುಕೊಂಡು, ಅವರ ಸಂಭಾಷಣವನ್ನು ಕೇಳಹತ್ತಿದ್ದಳು.

ಬಂಕಿಯು ಆ ಅಪರಿಚಿತನಿಗೆ ಅನ್ನುತ್ತಾನೆ:—“ಏನರೀ ಬಾಳಾಜಿಪಂತ, ನೀವು ಇತ್ತೆತ್ತ ಬಂದಿರಿ? ಸಂತಾಜಿಜಾಧವರ ದಂಡಿನ ಬೀಡು ಈಗ ಎಲ್ಲಿರುತ್ತದೆ?” ಎಂದು ಪ್ರಶ್ನೆ ಮಾಡಲು,

“ಬಂಕೀ ನಾಯಕವಾಡಾ, ನಾನು ಇತ್ತ ಸಂತಾಜಿರಾಯರ ಕಡೆಗೇ ನಡೆ

ಬಿದ್ದೇನೆ. ಇದು ವರೆಗೆ ಅವರ ದಂಡು ವಿಜಾಪುರದ ಕಡೆಗೇ ಇತ್ತು; ಆದರೆ ಕೆಲ ದಿವಸಗಳಿಂದ ಅದು ಈ ಪಂಢರಪುರದ ಸಮೀಪದಲ್ಲಿಯೇ ಇರುತ್ತದೆಂದು ಕೇಳಿ, ಇತ್ತ ಕಡೆಗೆ ಬಂದೆನು. ಇಂದು ಆಷಾಢೀ ಏಕಾದಶಿಯಾದದ್ದರಿಂದ, ಅನಾಯಾಸವಾಗಿ ವಿಠೋಬನ ದರ್ಶನವಾಗುವದೆಂದು ಯೋಚಿಸಿ, ಇಲ್ಲಿ ನಿಂತುಕೊಂಡೆನು. ಬಂಕೇ, ಅದಿರಲಿ; ಈಗ ಶಾಹೂಮಹಾರಾಜನ ವರ್ತಮಾನವೇನು?"

"ಅವರದೇನು ವರ್ತಮಾನವಿರಬೇಕು? ಅವರು ಬಾದಶಹನ ಸೆರೆಯಲ್ಲಿ ದಿನಗಳನ್ನೆಣಿಸುತ್ತ ಕಾಲಹರಣ ಮಾಡುತ್ತಿರುವರು. ನಾನು ನಿನ್ನೆಯೇ ಅಮಾತ್ಯ ರಾಮಚಂದ್ರಪಂತರಿಂದ ಕೆಲ ಗುಪ್ತ ಸಂದೇಶವನ್ನು ಅಲ್ಲಿಗೆ ಒಯ್ದಿದ್ದೆನು. ಅಷ್ಟರಲ್ಲಿ ಶಾಹೂರಾಜರಿಗೆ ಬಾದಶಹನ ಝನಾನಖಾನೆಯಲ್ಲಿ ಫಿತೂರೀ ಸೂರ್ಯಾಜಿ ಪಿಸಾಳನ ಮಗಳಾದ ಹಂಸಾಬಾಯಿಯನ್ನು ಎರಡು ಮೂರು ವರ್ಷಗಳಿಂದ ಯಾರೋ ಸೆರೆಯಲ್ಲಿಟ್ಟಿದ್ದಾರೆಂಬುದು ತಿಳಿಯಿತು. ಮಹಾರಾಜರು ಆ ಹಂಸಾಬಾಯಿಯ ದಾಸಿಯ ಸಹಾಯದಿಂದ ಅವಳನ್ನು ಬಂಧಮುಕ್ತಗೊಳಿಸಿ, ನಮ್ಮೊಡನೆ ಇತ್ತ ಕಳಿಸಿರುತ್ತಾರೆ. ನಾವು ಅವರನ್ನು ಪನ್ಹಾಳಗಡಕ್ಕೆ ಕರೆದೊಯ್ಯಬೇಕೆಂದಿರುವೆವು; ಆದರೆ ಹಂಸಾಬಾಯಿಯು ಜಾಧವರ ದಂಡಿನಲ್ಲಿರುವ ತನ್ನ ಅಣ್ಣನಾದ ಪದಮಜಿಯ ಬಳಿಗೆ ಹೋಗಬೇಕೆನ್ನುತ್ತಾಳೆ. ಬಾಳಾಜಿಪಂತ, ಆ ಪದಮಜಿಯ ಸ್ಥಿತಿಯನ್ನೇನು ಹೇಳಲಿ? ಆತನಿಗೆ ಹುಚ್ಚುಹಿಡಿದು ಬಿಟ್ಟಿದೆ! ಅವನು ಕಳೆದ ಎಷ್ಟೋ ತಿಂಗಳುಗಳಿಂದ ಬಾದಶಹನ ಛಾವಣಿಯಲ್ಲಿ ಏಕಾಕಿಯಾಗಿ ತಿರುಗುತ್ತಲಿದ್ದಾನೆ. ಸೂರ್ಯಾಜಿಯ ಆ ದೇಶದ್ರೋಹವು ಆತನಿಗಷ್ಟೇ ಬಡಕೊಳ್ಳದೆ, ಆತನ ಹೆಂಡರು-ಮಕ್ಕಳಿಗೆಲ್ಲರಿಗೂ ಒಂದೇಸವನೆ ಬಾಧಿಸತೊಡಗಿದೆ! ಪದಮಜಿಯ ಆ ಸಂಗತಿಯನ್ನು ಹಂಸಾಬಾಯಿಗೆ ಈಗಲೆ ತಿಳಿಸಿದರೆ ಎದೆಯೊಡಕೊಂಡಾಳೆಂದು, ಅದನ್ನು ಅವಳಿಗೆ ಪನ್ಹಾಳಗಡಕ್ಕೆ ತಲುಪುವ ವರೆಗೆ ತಿಳಿಸುವಂತಿಲ್ಲ."

ಆಗ ಬಾಳಾಜಿ ವಿಶ್ವನಾಥನು ಏನನ್ನೋ ಜ್ಞಾಪಿಸಿಕೊಂಡು:—"ಬಂಕೇ, ಆ ಹುಡುಗಿಯ ಹೆಸರು ಹಂಸಾಯೆಂದಲ್ಲವೆ? ನಾನು ಅವಳನ್ನೆಲ್ಲಿಯೋ ನೋಡಿರುವಂತೆ ನೆನಪಿದೆ" ಎನ್ನಲು, ತನ್ನನ್ನು ಗುರ್ತಿಸುವವರು ಇವರಾರಿರಬೇಕೆಂಬದನ್ನು ತಿಳಿಯುವದಕ್ಕೆಂದು ಹಂಸೆಯು ತಟ್ಟನೆ ಅವರೆದುರಿಗೆ ಹೋಗಿ ನಿಂತಳು. ಅವಳನ್ನು ದಿಟ್ಟಿಸಿ ನೋಡಿ, ಬಾಳಾಜಿಯು:—"ತಂಗೀ, ಹಂಸಾ

ಬಾಯಿಸಾಹೇಬರೆಂದರೆ ನೀನೇ ಏನು? ಮೂರು-ಮೂರೂವರೆ ವರ್ಷಗಳ ಹಿಂದೆ ನೀನು ತಳೇಗಾಂವದ ಪಾಭಾಡೆಯವರ ವಾಡೆಯಲ್ಲಿರಲಿಲ್ಲವೆ?"ಎಂದು ಕೇಳಲು,

ಹಂಸೆಯು:- -'ಹೌದು' ಎಂದು ಉತ್ತರ ಕೊಟ್ಟು, ಆ ಗೃಹಸ್ಥನ ಕಡೆಗೆ ಪುರ ಮಿಕಿಯೊಂದು ನೋಡತೊಡಗಿದಳು.

"ನಿನ್ನ ತಾಯಿಯು ಪೇಡದ ಬಳಿಯ ಲೋಣಿಯಲ್ಲಿದ್ದಿಲ್ಲವೆ? ಪೇಡದ ನೀತನ . . - ನಾಗೋಜಿಯು ನಿನ್ನನ್ನು...." ಎಂದು ಬಾಳಾಜಿಯು ನುಡಿಯುತ್ತಿರಲು ಹಂಸೆಯು ಆತನನ್ನು ಮುಂದೆ ಮಾತಾಡಗೊಡದೆ: 'ಅಹುದು. ಅದೆಲ್ಲಾ ನಿಜ; ಆದರೆ ಸದ್ಯಕ್ಕೆ ನನ್ನ ತಾಯಿಯು ಎಲ್ಲಿರುತ್ತಾಳೆಂಬದು ನಿಮಗೆ ಗೊತ್ತಿದೆಯೆ?' ಎಂದು ಬಹಳ ಉತ್ಸುಕತೆಯಿಂದ ಪ್ರಶ್ನೆಮಾಡಿದಳು.

ಅದಕ್ಕೆ ಬಾಳಾಜಿಯು:--"ತಂಗೀ, ನಿನ್ನೆಯ ದಿನ ಪೇಡದ ಆ ಭಾವೂರಾಯನು ದಾರಿಯಲ್ಲಿ ನನಗೆ ಭೆಟ್ಟಿಯಾಗಿದ್ದನು. ನಿನ್ನ ತಾಯಿಯು ಪಾರದದ ದುರ್ಗದಲ್ಲಿ ರತಾಜಿ ಪಾಟೀಲನ ಮನೆಯಲ್ಲಿರುತ್ತಾಳಂತ. ಕಳೆದ ಎಷ್ಟೋ ದಿನಗಳಿಂದ ಆಕೆಯು ಬೇನೆಯಿಂದ ತೊಳಲುತ್ತಿದ್ದು, ಇತ್ತೀಚೆಗಂತೂ ಅವಳು ತೀರ ಸ್ವರುಣಾಗಿರುವಳಂತೆ" ಎಂದು ಹೇಳಿ, ಆತನು ಬಂಕಿಯನ್ನು ಕುರಿತು:- "ಒಂಟೀ, ಇವಳನ್ನು ಅಷ್ಟು ದೂರದ ಪನ್ಹಾಳಗಡಕ್ಕೆ ಕರೆದೊಯ್ಯುವದಕ್ಕಿಂತ, ಇಲ್ಲಿಯೇ ಸಮೀಪದಲ್ಲಿರುವ ಆ ಪಾರದದ ದುರ್ಗಕ್ಕೆ ತಲುಪಿಸಬಾರದೆ?" ಎಂದು ಹೇಳಿದನು.

"ನನ್ನನ್ನು ನನ್ನ ತಾಯಿಯ ಬಳಿಗೇ ಕರೆದೊಯ್ಯಿರಿ" ಎಂದು ಹಂಸೆಯು ಬಹಳೇ ಆತುರದಿಂದ ನುಡಿದು, ಅಳಲಾರಂಭಿಸಿದಳು. ಏಸಿಯು ಅವಳನ್ನು ಸಾಂತ್ವನಗೊಳಿಸಹತ್ತಿದಳು.

ಅದೇ ಮನೆಗೆ ಯಾತ್ರಾರ್ಥಿಗಳಾಗಿ ಬಂದಿದ್ದ ಜನರಲ್ಲಿಯ ಒಬ್ಬ ವೃದ್ಧ ಹೆಣ್ಣುಮಗಳು ಹಂಸೆಯ ಆ ರೋದನವನ್ನು ಕೇಳಿ:-"ಈ ಹೆಣ್ಣುಮಗಳಾರು? ಪಾರದದ ದುರ್ಗದಲ್ಲಿ ಬೇನೆ ಬಿದ್ದವರು ಇವಳಿಗೇನಾಗಬೇಕು?" ಎಂದು ಬಹಳೇ ಲವಲವಿಕೆಯಿಂದ ಕೇಳಿದಳು.

"ಈ ನಮ್ಮ ಬಾಯಿಸಾಹೇಬರ ತಾಯಿಯೇ ಅಲ್ಲಿ ಬೇನೆ ಬಿದ್ದಿರುವರು" ಎಂದು ಏಸಿಯು ಅನ್ನಲು.

"ಇವರಿಗೂ ಪಾರದದ ರತಾಜಿ ಪಾಟೀಲರಿಗೂ ಏನಾದರೂ ಸಂಬಂಧ ಇದೆಯೋ?" ಎಂದು ಆ ಹೆಣ್ಣುಮಗಳು ಮತ್ತೆ ಕೇಳಿದಳು

"ಛೇ-ಛೇ. ಅದೇನೂ ಇಲ್ಲ; ಆದರೆ ನೀವು ಈ ಬಗ್ಗೆ ಇಷ್ಟೇಕೆ ಪೃಚ್ಛಾಪೃಚ್ಛ ಮಾಡುತ್ತಿರುವಿರಿ?" ಎಂಬ ಏಸಿಯ ಪ್ರಶ್ನೆಗೆ,

"ಶಹಾಜಿ ಪಾಟೀಲನು ನನ್ನ ಅಕ್ಕನ ಮಗನು. ನಾನು ...ಕ್ಕೆ ಹೋಗಬೇಕಾಗಿದೆ. ನಮ್ಮ ಊರಾದ ಕುರ್ಡೂವಾಡಿಯು ಇಲ್ಲಿಂದ ಸಮೀಪದಲ್ಲಿದೆ. ಇಂದು ಸಂಜೆಗೆ ನಾವೆಲ್ಲರೂ ಅಲ್ಲಿಗೆ ಹೋಗೋಣ. ನಾಳೆ ಬೆಳಿಗ್ಗೆ ಅಲ್ಲಿಂದ ಹೊರಟು ಪಾರಪಕ್ಕೆ ಹೋಗೋಣ. ಅಂದರೆ ನಿಮಗೆ ನಿಮ್ಮ ತಾಯಿಯ ಹಾಗು ನನಗೆ ನನ್ನ ಅಕ್ಕನ ಮಗನ ಭೆಟ್ಟಿಯಾಗುವದು" ಎಂದು ಹೇಳಿದಳು.

ಆ ಹೆಣ್ಣುಮಗಳ ಆ ಸಹಾನುಭೂತಿಪರ ಮಾತುಗಳಿಂದ ಹಂಸಾಗೆಷ್ಟೋ ಸಮಾಧಾನವಾಯಿತು. ಬಳಿಕ ಅವರೆಲ್ಲರೂ ಅಂದು ಮಧ್ಯಾಹ್ನವೇ ಕುರ್ಡೂವಾಡಿಯ ಕಡೆಗೆ ಸಾಗಿದರು. ಕುರ್ಡೂವಾಡಿಯು ಅಲ್ಲಿಂದ ಬಹಳ ದೂರ ಲಿಲ್ಲ. ನಡುವಿನ ದಾರಿಯಿಂದ ಸಾಗಿ, ಅವರು ಮೂರುಸಂಜೆಯ ಹೊತ್ತಿಗೆ ಕುರ್ಡೂವಾಡಿಯೊಳಗಿನ ಶಹಾಜಿ ಪಾಟೀಲನ ಆ ಅಬಚಿಯ ಮನೆ ಹೋಗಿ ತಲುಪಿದರು.

† † † † †

ಪದಮಜಿಯು ಹಂಸೆಯನ್ನು ಇಷ್ಟಲ್ಲಿಂದ ಹುಡುಕಿಕೊಂಡು ಬರುವೆನೆಂದು ಪಾರಪದಲ್ಲಿ ಹಾಸಿಗೆ ಹಿಡಿದು ಬಿದ್ದಿದ್ದ ತನ್ನ ತಾಯಿಗೆ ಹೇಳಿ ಹೊರಟವನು, ನಾಲ್ಕು ದಿನಗಳಾದರೂ ಮರಳಿ ಬರಲಿಲ್ಲ. ಇಂದು ಬಂದಾನು, ನಾಳೆ ಬಂದಾನು ಎಂದು ಮುಂದೆ ಎರಡು ತಿಂಗಳಾದರೂ ಆತನ ಪತ್ತೆಯೇ ಇಲ್ಲ. ಆಗ ಸಾವಿತ್ರೀಬಾಯಿಯು ಹತಾಶಳಾಗಲು, ಆವಳ ರೋಗವು ಹೆಚ್ಚಿತು. ಅದರಿಂದ ಆವಳು ತನ್ನ ಮಕ್ಕಳ ಹೆಸರುಗೊಂಡು ಒಂದೇಸವನೆ ಬಡಬಡಿಸಲಾರಂಭಿಸಿದಳು. ಕಡೆಗೆ ಶಹಾಜಿ ಪಾಟೀಲನ ಮೇಲೆಯೇ ಆಕೆಯ ಸೇವಾ-ಶುಶ್ರೂಷೆಯ ಭಾರವನ್ನೆಲ್ಲ ಹಾಕಿ, ಭಾನೂರಾಯನು ಬಾದಶಹನ ಛಾವಣಿಗೆ ಹಂಸಾ-ಪದಮಜಿಯರ ಶೋಧಕ್ಕೆಂದು ನಡೆದನು. ತಿಂಗಳುಗಟ್ಲೆ ಹುಡುಕಿದರೂ ಆ ವಿಶಾಲವಾದ ಛಾವಣಿಯಲ್ಲಿ ಯಾರೊಬ್ಬರ ಪತ್ತೆಯೂ ಹತ್ತದಾಗಲು, ನಿರಾಶಗೊಂಡ ಆತನು ಪಾರದಕ್ಕೆ ಹಿಂದಿರುಗಿ ನಡೆದನು. ದಾರಿಯಲ್ಲಿ ಅವನಿಗೆ ಬಾಳಾಜಿ ವಿಶ್ವನಾಥನು ಭೆಟ್ಟಿಯಾದನು. ಬಾಳಾಜಿ ವಿಶ್ವನಾಥನು ಸಂತಾಜಿ ಜಾಧವರ ಫಡಣವೀಸನಾದ್ದರಿಂದ, ಆತನ ಗುರ್ತು

ಮರಾಠಾಶಾಹಿಯೊಳಗಿನ ಪ್ರತಿಯೊಬ್ಬರಿಗೂ ಇದ್ದಿತು. ಆದರಿಂದ ಭಾವುವು ಆತನಿಗೆ ಸಾವಿತ್ರೀಬಾಯಿಯ ಸಂಬಂಧದ ಸಂಗತಿಯನ್ನೆಲ್ಲ ತಿಳಿಸಿದನು. ಕುರ್ಮೂರವಾಡಿಯಲ್ಲಿ ಸಖಾಜಿ ಪಾಟೀಲನ ಅಬಚಿಯ ಮನೆಯಿದೆಯೆಂಬದು ಭಾವೂರಾಯನಿಗೆ ಕೇಳಿ ಗೊತ್ತಿತ್ತು. ಆದರಿಂದ ಅವನು ಪಾಟೀಲನ ಅಬಚಿಗೆ ಭೆಟ್ಟಿಯಾಗಿ, [illegible] ತದಕ್ಕೆ ಹೋಗಬೇಕೆಂದು ಯೋಚಿಸಿ, [illegible]ಗೆ ನಡೆದನು.

[illegible] ಮಾತು ಸುಳ್ಳಲ್ಲ. ಭಾವೂರಾಯನು ಊರ ಅಗಸೆಯನ್ನು ಪ್ರವೇಶಿಸುವಷ್ಟರಲ್ಲಿ ತನ್ನ ಹಿಂದಿನಿಂದ ಒಬ್ಬ ಸವಾರನು ಬರುತ್ತಿರುವದು ಅವನಿಗೆ ಕಾಣಿಸಿತು. ಆಗ ಮೂರೂ ಸಂಜೆಯ ಸಮಯವಾದ್ದರಿಂದ, ತೀರ ಹತ್ತರ ಬಂದ ಹೊರತು ಆ ಸವಾರನಾರೆಂಬುದು [illegible]ಯುವಂತಿರಲಿಲ್ಲ. ಆದರಿಂದ ಭಾವೂರಾಯನು ತನ್ನ ಕುದುರೆಯನ್ನು ತಡೆದು, ಆ ಸವಾರನಾರೆಂಬವನ್ನು ತಿಳಿಯುವದಕ್ಕೆಂದು ನಿಂತನು. ಆತನ ಹಿಂದಿನಿಂದ ಬರುತ್ತಿರುವ ಆ ಸವಾರನು ಬೇರೆಯಾವನೂ ಆಗಿರದೆ, ಆತನ ಒಡೆಯನಾದ ಬೀಡದ ದೇಶಮುಖರ ನಾಗೋಜಿಯೇ ಆಗಿದ್ದನು! ಅವನನ್ನು ಕಂಡು ಅಂತರಂಗದಲ್ಲಿ ಅಂಜಿದ ಭಾವೂರಾಯನು, ಬಹಿರಂಗ[illegible] ನಗುನಗುತ್ತ:—"ಧಣಿಯರೇ. ತಾವು ಶೋಧಕ್ಕೆ ಹೋಗಿ [illegible] ಪ್ರಶ್ನೆ ಮಾಡಿದನು.

'[illegible] ಪತ್ತೆ [illegible]' ನಾನು ಶೋಧವನ್ನು ಬಿಟ್ಟು [illegible]. ದಾದರಾಯನು ನನಗೆ ದೊಡ್ಡ [illegible], ಕಡೆಗೆ ಪಕ್ಷಪಾತ ಮಾಡಿದನಾದ್ದರಿಂದ, ನಾನು ಇನ್ನು ಶೋಧಕ್ಕೆ ಹೋಗಿ ಮಾಡುವದಾದರೂ ಏನು? ನಾನು ಆ ಚಾಂಡಾಲ ದಾದರಾಯನಿಗೆ [illegible]ತದಾರನಾಗದೆ, ಶ್ರೀಮಂತ ತಾರಾಬಾಯಿ ಸಾಹೇಬರ ಕಡೆಗೇ ಚಾಕರಿಗಿದ್ದರೆ. ನನ್ನ ಕೋಟಿ ಕಲ್ಯಾಣವಾಗುತ್ತಿತ್ತು. ನಾನು ಎಷ್ಟೋ ದಿನ [illegible] ತನ್ನಕ್ಕೆ ಕೂಡ ಗತಿಯಿಲ್ಲದೆ ತಿರುಗಾಡುತ್ತಿರುತ್ತೇನೆ. ಇನ್ನು ನಾನು ಆ ಎಲ್ಲ [illegible]ವನ್ನು ಬಿಟ್ಟು, ಎಲ್ಲಿಗಾದರೂ ಹೋಗಿ ಸ್ವಸ್ಥವಾಗಿರಬೇಕೆಂದು ಯೋಚಿಸುತ್ತಿದ್ದೇನೆ.'

ಧಣಿಯರೇ, ಮೂರು ವರ್ಷಗಳಿಂದ ನಾನು ದೇಶ-ವಿದೇಶಗಳನ್ನು ಸುತ್ತಿ ನನ್ನ [illegible]ನವನ್ನು ನಡೆಸಿದ್ದೇನೆ. ಇದುವರೆಗೆ ಎಲ್ಲಿಯೂ ತನ್ನ ಪತ್ತೆ

ಹತ್ತಲಿಲ್ಲ. ಆದರಿಂದ ಬೇಸತ್ತು ನಾನು ಇನ್ನು ಖೇಡದ ಕಡೆಗೇ ನಡೆದಿದ್ದೆನು. ಇಂದು ಅನಾಯಾಸವಾಗಿ ತಮ್ಮ ಭೇಟಿಯಾದ ಬಗ್ಗೆ ನನಗೆ ಪರಮ ಸಂತೋಷವಾಗಿದೆ. ಅದಿರಲಿ. ಧಣಿಯರೇ, ತಮಗೆ ಹಂಸಾಬಾಯಿಯ ಶೋಧವೇನಾದರೂ ಹತ್ತಿತೇನು?'

"ನಾನು ಆಕೆಯ ಹೆಸರನ್ನೇ ಬಿಟ್ಟುಬಿಟ್ಟಿರುತ್ತೇನೆ. ಆಗ ಆದ ಅಪಮಾನವೇ ಸಾಕಾಗಿ ಹೋಗಿದೆ. ಆ ಹಂಸೆಯ ಹಂಬಲವೇ ನನ್ನನ್ನೀ ಗತಿಗೆ ಮುಟ್ಟಿಸಿತು! ಹೋಗಲಿ ಬಿಡು, ಇನ್ನು ಆ ಮಾತನ್ನೆತ್ತಬೇಡ. ಭಾವೂ, ಅಪರಿಚಿತವಾದ ಈ ಊರಲ್ಲಿ ಇಳಕೊಳ್ಳುವದೆಲ್ಲಿ?"

ಆ ಅಲ್ಪ ಪರಿಚಯದಿಂದ ನಾಗೋಜಿಯು ಖೇಡಕ್ಕೆ ಹೋಗಿಲ್ಲೆಂಬದೂ, ಅದರಿಂದ ತಾನು ಇವನ ಮನೆಬಿಟ್ಟು ಹೊರಟ ಸಂಗತಿಯು ಇವನಿಗೆ ಗೊತ್ತಿಲ್ಲೆಂಬದೂ, ಹಂಸೆಯನ್ನು ಇವನು ಮತ್ತೆ ತನ್ನ ಜಾಲದಲ್ಲಿ ತೊಡಗಿಸಿಲ್ಲೆಂಬದೂ ಭಾವೂರಾಯನಿಗೆ ತಿಳಿಯಲು, ಅವನಿಗೆ ಕೆಲಮಟ್ಟಿಗೆ ಸಮಾಧಾನವಾಯಿತು. ಬಳಿಕ ತಾನು ನಾಗೋಜಿಯೊಡನೆ ಆ ಊರಲ್ಲಿರುವ ಪಠಾಣಿ ಪಾಟೀಲನ ಬಿಡಾರಿಯ ಮನೆಗೆ ನಡೆದನು; ಹಾಗು ಅಂದುರಾತ್ರಿ ಅವರಿಬ್ಬರೂ ಅಲ್ಲಿಯೇ ಉಳಿದುಕೊಂಡರು.

## ತಕ್ಕ ಪ್ರಾಯಶ್ಚಿತ್ತ

ದೀಪದ ಬೆಳಕಿನಲ್ಲಿ ಭಾವೂವು ನಾಗೋಜಿರಾಯನನ್ನು ದಿಟ್ಟಿಸಿ ನೋಡಲು, ಆತನ ಮುಖವು ತೀರ ಕಪ್ಪಿಟ್ಟಿತ್ತು. ಗುರ್ತು ಹತ್ತುವದು ಕೂಡ ದುಸ್ತರವಾಯಿತು. ನಾಗೋಜಿಯು ಕುದುರೆಯಿಂದಿಳಿದ ಕೂಡಲೆ ತನ್ನ ಜೇಬಿನ ಮೇಲಿನ ಒಂದು ಚೀಲವನ್ನು ಹುಡುಕಲಾರಂಭಿಸಿದನು. ಆ ಅಸ್ಪಷ್ಟವಾದ ಬೆಳಕಿನಲ್ಲಿ ಎಷ್ಟು ಹುಡುಕಿದರೂ ಅದು ಸಿಗದಾಗಲು, ಅವನ ಮುಖವು ಮತ್ತಿಷ್ಟು ಕಪ್ಪಿಟ್ಟಿತು. ಬಾಯಿಂದ ಮಾತು ಕೂಡ ಹೊರಡದಾದವು; ಆದರೂ ಅವನು ಒಳ್ಳೇ ಗಾಬರಿಯಿಂದ: "ಭಾವು, ಅಫುವಿನ ಡಬ್ಬಿಯನ್ನಿಟ್ಟಿದ್ದ ಆ ನನ್ನ ಚೀಲವೆಲ್ಲಿಯೂ ಕಾಣಿಸಲೊಲ್ಲದಲ್ಲ! ಇಂದು ಮುಂಜಾವಿನಿಂದ ನಾನು ಒಂದಿಷ್ಟು ಅಫುವನ್ನೂ ತಕ್ಕೊಂಡಿಲ್ಲ. ಇದ್ದ ಅಲ್ಪಸ್ವಲ್ಪನ್ನು ಸಂಜೆಗೆಂದು ಬೇಕೆಂತ ಕಾದಿಟ್ಟಿದ್ದೆನು. ಆ ನನ ಅಫುವು-ನನ್ನ ಭಾಗದ ಪರವ್ನ

ದೇವತೆಯು-ನನ್ನ ಪ್ರೀತಿಯ ಗೆಳತಿಯು ಹೀಗೆ ಆಕಸ್ಮಿಕವಾಗಿ ಮಾಯ ವಾಗಿರುವಳಲ್ಲ! ಭಾವೂ, ಆ ಅಫುವನ್ನು ತೊರೆದು ಇಂದು ನಾನು ಬದುಕುವ ಬಗೆ ಹೇಗೆ? ಈ ಊರಲ್ಲಿ ಅದು ಸಿಗುವದಿಲ್ಲವೆ? ಸಿಗುತ್ತಿದ್ದರೂ ಅದನ್ನು ಕೊಳ್ಳಲಿಕ್ಕೆ ನನ್ನಲ್ಲಿ ಹಣ-ಕಾಸುಗಳೆಲ್ಲಿವೆ? ಭಾವೂ, ಇಂದು ನನ್ನ ಪ್ರಾಣೋತ್ಕ್ರಮಣವಾಗುವದೇ ಖಂಡಿತ!" ಎಂದೆಂದು ಅಳತೊಡಗಿದನು.

ಆಗಿನ ಆತನ ವಿಲಕ್ಷಣ ಸ್ಥಿತಿಯನ್ನು ಕಂಡು ಭಾವೂನ ಜೀವವು ಹೆಚ್ಚಾಗಿ ಕಳವಳಗೊಂಡಿತು. ಆಗ ಆತನು ನಾಗೋಜಿರಾಯನನ್ನು ಕುರಿತು: "ಧಣಿಯರೇ, ಈ ದುಷ್ಟ ಮತ್ತು ಹೇಡಿ ವ್ಯಸನವು ನಿಮಗೆಲ್ಲಿಂದ ಗಂಟು ಬಿದ್ದಿತು? ನೀವು ಇಂಥ ಭಯಂಕರ ವ್ಯಸನಾಧೀನರಾದ ಬಳಿಕ, ಇನ್ನು ನಿಮ್ಮಿಂದ ಆವಾವ ಪೌರುಷದ ಕೆಲಸವಾಗುವಂತಿವೆ? ನೀವು ಇದ್ದ ನಿಮ್ಮ ದೇಶಮುಖಗಿರಿಯನ್ನಾದರೂ ಸಂಬಾಳಿಸಿಕೊಳ್ಳು ವಿರೊ-ಇಲ್ಲವೋ ಎಂಬ ಬಗ್ಗೆ ನನಗೆ ಸಂದೇಹವೇ ತೋರುತ್ತಿದೆ" ಎಂದೆನಲು, ನಾಗೋಜಿಯು:—"ಭಾವೂ, ಬೆಂಕೀ ಹಚ್ಚು ಆ ದೇಶಮುಖಗಿರಿಗೆ ಮೊದಲು ನನಗೆ ಒಂದು ಮೊದ್ದು ಉತ್ತತ್ತಿಯಷ್ಟಾದರೂ ಅಫುವು ದೊರೆತರೆ ನನ್ನ ಪ್ರಾಣವುಳಿಯುವದು. ಭಾವೂ, ಮೂರು ವರ್ಷಗಳ ಹಿಂದೆ ನಾನು ಬಾದಶಹನ ಪ್ರೀತಿಯ ಒಬ್ಬ ಅಮೀರನ ಸ್ನೇಹ ಬೆಳಿಸಲು. ಆತನ ಸಹವಾಸದಿಂದ ನನಗೀ ದುಷ್ಟ ವ್ಯಸ ನವು ಅಂಟಿಕೊಂಡಿರುತ್ತದೆ. ಆ ಅಮೀರನ ಜೊತೆಯಲ್ಲಿರುವ ವರೆಗೆ ನನಗೆ ಈ ಅಫುವಿನ ಕೊರತೆಯಾಗಲಿಲ್ಲ; ಯಾಕೆಂದರೆ. ಆತನ ಬಳಿಯಲ್ಲಿ ಮಣ ಗಟ್ಲೆ ಅಫುವು ಯಾವಾಗಲೂ ಸಿಲ್ಕು ಇರುತ್ತಿತ್ತು; ಆದರೆ ಮುಂದೆ ಆ ಅಮೀ ರನು ಒಂದು ಕಾಳಗದಲ್ಲಿ ಕೊಲ್ಲಲ್ಪಟ್ಟನು. ಅಂದಿನಿಂದ ನನಗೆ ಆ ಅಫುವಿನ ಅಭಾವನಾಗಹತ್ತಲು, ಬಳಿಕ ನಾನು ಕಂಡಕಂಡವರಲ್ಲಿ ಬಿಕ್ಕೆ ಬೇಡಿ, ನನ್ನ ತಲಬಿನ ಮಟ್ಟಿಗೆ ಅದನ್ನು ಸಂಗ್ರಹಿಸಹತ್ತಿದೆನು. ಛಿದೆ-ಮುರವತ್ತಿನಿಂದ ಅಥವಾ ಭಿಕ್ಷೆಯಿಂದ ಅಫುವಿನಂತಹ ತುಟ್ಟಿಯ ಮಾದಕ ದ್ರವ್ಯವು ಎಷ್ಟು ದಿನಗಳ ವರೆಗೆ ನನಗೆ ಸಿಕ್ಕೀತು? ಕಡೆಗೆ ನಾನು ಆ ಅಫುವಿನ ಸಲುವಾಗಿ ಸಣ್ಣ-ಪುಟ್ಟ ಕಳವುಗಳನ್ನೂ ಮಾಡಹತ್ತಿದೆನು. ಕಟ್ಟ ಕಡೆಗೆ ಕೊಲೆ ಸುಲಿಗೆ ಗಳನ್ನು ಕೂಡ ಮಾಡಬೇಕಾಯಿತು. ಇಂದು ಮಾವಿನಕಾಯಿಯಷ್ಟು ಅಫು ವನ್ನು ಒಂದು ಭಯಂಕರ ಕೊಲೆಗೆಯ್ದು ಸಂಪಾದಿಸಿದ್ದೆನು. ಭಾವೂರಾಯಾ, ನಿನ್ನ ಎದುರಿಗೆ ಯಾವ ಗುಪಿತವನ್ನೂ ಬಚ್ಚಿಟ್ಟಿಲ್ಲ. ಆದ್ದರಿಂದ ಹೇಗಾದರೂ

ಮಾಡಿ ನನಗೀಗ ಒಂದಿಷ್ಟು ಅಪ್ಪುವನ್ನು ಸಗ್ರಹಿಸಿ ತಂದು ಕೊಡು."

ಭಾವೂರಾಯನು ಏನೂ ಉತ್ತರ ಕೊಡಲಿಲ್ಲ. ತನ್ನ ಹರೆಯದ ಯಜಮಾನನಿಗೆ ಅಪ್ಪುವಿನ ಆ ದುರ್ವ್ಯಸನ ಗಂಟುಬಿದ್ದದ್ದಕ್ಕಾಗಿ ಆತನು ಬಹು ವಿಷಾದಗೊಂಡನು. ಕಡೆಗೆ ಅವನು ನೆರೆಹೊರೆಯವರಲ್ಲಿ ಕೇಳಿ ಗುಂಜಿಯೆರಡು ಗುಂಜಗಳಷ್ಟು ಅಪ್ಪುವನ್ನು ಸಂಗ್ರಹಿಸಿ, ಅದರಲ್ಲಷ್ಟು ಎರೇ ಮಣ್ಣನ್ನು ಕೂಡಿಸಿ, ಉತ್ತುತ್ತಿಯಷ್ಟು ಮುದ್ದೆ ಮಾಡಿ ತಂದು ನಾಗೋಜಿಯ ಕೈಗೆ ಕೊಟ್ಟನು. ದುಷ್ಕಾಲಪೀಡಿತ ರಾಷ್ಟ್ರದೊಳಗಿನ ಬಡವರಿಗೆ ಪಂಚ ಪಕ್ವಾನ್ನದ ಊಟ ದೊರೆತರೆ ಆನಂದಪಡುವಂತೆಯೂ, ಒಣಗಿದ ಹುಲ್ಲು-ಕಡ್ಡಿಗಳು ಕೂಡ ತಿನ್ನಲಿಕ್ಕೆ ದೊರೆಯದ ಆಕಳಿಗೆ ಅತ್ಯುತ್ತಮವಾದ ಹಸಿಯ ಹುಲ್ಲು ದೊರೆತರೆ ಸಂತೋಷವಾಗುವಂತೆಯೂ ಆ ಅಪ್ಪುವಿನ ಮುದ್ದೆಯನ್ನು ಕಂಡ ನಾಗೋಜಿಯು ಸಂತೋಷಭರಿತನಾಗಿ ಒಮ್ಮೆಲೆ ಅದನ್ನು ನುಂಗಿದನು; ಹಾಗು ಸ್ವಲ್ಪ ಹೊತ್ತಿನಲ್ಲಿಯೇ ಆ ಗುಂಗಿನಲ್ಲಿ ತಲ್ಲೀನನಾಗಿ ಅಲ್ಲಿಯೇ ಒತ್ತಟ್ಟಿಗೆ ಅಡ್ಡಾದನು.

ಪಾಲಕರ ಸಹಾಜಯು ಅಬಚಿಯು ಪಂಢರಪುರಕ್ಕೆ ಹೋಗಿರುವ ಳೆಂದೂ ಅವಳು ಒಂದೆರಡು ದಿನಗಳಲ್ಲಿ ಮರಳಿ ಬರುವಳೆಂದೂ ಕುಡೂರ್ವಾಡೆಯೊಳಗಿನ ಆಕೆಯ ಮನೆಯ ಜನರು ಹೇಳಲು, ಭಾವೂರಾಯನು ಆಕೆಯ ದಾರಿ ಕಾಯುತ್ತ ಅವರಲ್ಲಿಯೇ ಉಳಿದನು. ಬೇರೆ ಆಶ್ರಯದ ಸ್ಥಾನವೇ ಇರದ್ದರಿಂದ, ನಾಗೋಜಿಯೂ ಅಲ್ಲಿಯೇ ಇದ್ದನು. ನಿತ್ಯಕ್ರಮದಂತೆ ನಾಗೋಜಿಯು ಆ ರಾತ್ರಿಯ ಕಾಲದಲ್ಲಿ ಅಪ್ಪುವನ್ನು ಸೇವಿಸಿ, ಎಚ್ಚರಿಲ್ಲದೆ ಬಿದ್ದಿದ್ದನು. ಅದರಿಂದ ಪಂಢರಪುರದಿಂದ ತಾಳ-ಮೃದಂಗಗಳೊಡನೆ ಭಜನೆ ಮಾಡುತ್ತ ಬರುತ್ತಿದ್ದ ವಾರಕರೀ ಜನರ ಸುಳಿವು ಕೂಡ ಆತನಿಗೆ ಹತ್ತಲಿಲ್ಲ. ಇಷ್ಟರಲ್ಲ ಆ ಮನೆಯ ಒಂದು ಹುಡುಗಿಯು ಓಡುತ್ತ ಬಂದು:- "ಅಣ್ಣಾ, ಅವ್ವನೂ ಅಕ್ಕನೂ ಪಂಢರಪುರದಿಂದ ಬಂದರು; ಅವರೊಡನೆ ಮತ್ತೆ ಯಾರೋ ಮೂರು-ನಾಲ್ಕು ಜನ ಹೊಸಬರೂ ಬಂದಿರುವರು" ಎಂದು ಆ ಮನೆಯವನಿಗೆ ಹೇಳಿತು. ಸಹಾಜಯು ಅಬಚಿಯು ಬಂದಳೆಂದು ತಿಳಿದು, ಭಾವೂರಾಯನು ಆಕೆಯ ಸ್ವಾಗತಕ್ಕೆ ಸಜ್ಜಾದನು. ಅಷ್ಟರಲ್ಲಿ ಆ ಜನರೆಲ್ಲ ಭಜನೆ ಮಾಡುತ್ತ ಮನೆಯನ್ನು ಪ್ರವೇಶಿಸಿದರು. ಆ ಮನೆಯೊಳಗೆ ತನ್ನ ಪರಿಚಯದ ಭಾವೂರಾಯನಿದ್ದದ್ದನ್ನು ಕಂಡು ಪರಮಸೋಜಿಗದಿಂದ ಹಂಸೆಯು

"ಭಾವೂ, ನೀನು ಇಲ್ಲಿಗೆ ಎಂದು ಬಂದೆ? ಪಂಢರಿನಾಥನ ಕೃಪೆಯಿಂದಲೇ ಇಂದು ಆಕಸ್ಮಿಕವಾಗಿ ನಿನ್ನ ಭೆಟ್ಟಿಯಾಯಿತು. ಇದಿರಲಿ ಭಾವೂ. ಅಮ್ಮನು ಹೇಗಿದ್ದಾಳೆ?" ಎಂದು ಪ್ರಶ್ನೆಮಾಡಲು,

"ಅದೆಲ್ಲವನ್ನೂ ಆ ಮೇಲೆ ಹೇಳುತ್ತೇನೆ. ನಡೆಯಿರಿ ಒಳಗೆ' ಎಂದೆನ್ನುತ್ತ, ಗಟ್ಟಿಯಾಗಿ ಮಾತಾಡಬಾರದೆಂದು ಭಾವುವು ಹಂಸಗೆ ಸಂಜ್ಞೆ ಮಾಡಿದನು.

ಹಂಸಯು ಸುಮ್ಮನೆ ಒಳಗೆ ಹೋಗುತ್ತಿದ್ದಳು. ಹಂಸಯು ದನಿಯನ್ನು ಕೇಳಿ, ಪಂಕುಹಿಡಿದ ನಾಗರ ಹಾವಿನಂತೆ ನಾಗೋಜಿಯು ಒಮ್ಮೆಲೆ ಎದ್ದು ಕುಳಿತು: 'ಹಂಸಾ!' ಎಂದೆಂದನು.

ನಾಗೋಜಿಯನ್ನು ಕಂಡು ಹಂಸಯು ನಿಂತಲ್ಲಿಯೇ ಸ್ತಂಭಿತಳಾಗಿ ಬಿಟ್ಟಳು. ಒಂದು ಕ್ಷಣದ ವರೆಗೆ ಅವಳ ಮುಖಮುದ್ರೆಯು ಹುಚ್ಚಿಟ್ಟು ಹೋಯಿತು! ಆದರೆ ಕೂಡಲೆ ಅದು ಕ್ರೋಧ ಮತ್ತು ತಿರಸ್ಕಾರಗಳಿಂದ ಕೂಡಿ ಭಯಾನಕವಾಗಿ ತೋರತೊಡಗಿತು.

ಯಾವ ಪ್ರಸಂಗವನ್ನು ತಪ್ಪಿಸಬೇಕೆಂದು ಭಾವೂರಾಯನು ಪ್ರಯತ್ನಿಸಿದ್ದನೋ ಕಡೆಗೆ ಅದು ಒದಗಿಯೇ ಬಿಟ್ಟಿತು. ನಾಗೋಜಿ ಮತ್ತು ಹಂಸಾ ಇವರ ಭೆಟ್ಟಿಯಾಗಬಾರದೆಂದು ಆತನು ಪ್ರಯತ್ನಿಸುತ್ತಿರಲು, ಅದು ಆಗಿಯೇ ಹೋಯಿತು. ಆಗಿನ ಕಾಲದ ನಾಗೋಜಿ ಮತ್ತು ಹಂಸೆಯರ ಮುಖಭಾವವನ್ನು ಕಂಡು ಶಹಾಜಿಯ ಅಬಜಿಯೂ, ಏಸಯೂ, ಬಂಕೆ ಮೊದಲಾದ ಸವಾರರೂ ವಿಸ್ಮಯಭರಿತರಾದರು. ಹಂಸಯು ಅಲ್ಲಿ ಕ್ಷಣಕಾಲವೇ ನಿಂತು, ಬಳಿಕ ತಟ್ಟನೆ ಒಳಗೆ ಹೋಗಿ ಬಿಟ್ಟಳು ಕೂಡಲೆ ಭಾವುವನ್ನು ಕುರಿತು ನಾಗೋಜಿಯು:—"ಭಾವೂ, ನೀನು ಈಕೆಯನ್ನು ಗುರುತಿಸಿದೆಯಾ? ನನಗೆ ಭ್ರಮ ಬೇರೆಯಾಗಿರಲಿಕ್ಕಿಲ್ಲವೆ? ಕಳೆದ ಎಷ್ಟೋ ದಿನಗಳಿಂದ ಇವಳು ನನ್ನ ಕಣ್ಣಿಗೆ ಬಿದ್ದಿರುವದಿಲ್ಲ; ಆದರೇನಾಯಿತು? ಅವಳೇ ಇವಳು; ಆದರೆ ಭಾವೂ, ಅವಳು ಇಲ್ಲೆಲ್ಲಿಗೆ ಬಂದಿರುವಳು? ಈಕೆಯ ಮದುವೆ-ಗಿದುವೆ ಆಗಿರಬಹುದಲ್ಲವೆ? ಹೋಗು, ಒಳಗೆ ಹೋಗಿ ಅದನ್ನೆಲ್ಲ ತಿಳಿದುಕೊಂಡು ಬಾ; ನೋಡೋಣ. ಸುಮ್ಮನೆ ಹಳೇ ದ್ವೇಷವನ್ನು ಕೆದರಿ, ಮನಸ್ಸಿಗೆ ನೋವನ್ನುಂಟು ಮಾಡಿಕೊಳ್ಳುವ ಇಚ್ಛೆಯು ನನಗಿಲ್ಲ. ಆದದ್ದೇ ಸಾಕು. ಸಾಕಾಗಿ ಹೋಗಿದೆ" ಎಂದೆಂದನು.

ಇದನ್ನು ಕೇಳಿ ಭಾವೂರಾಯನಿಗೆ ಸಮಾಧಾನವೆನಿಸಿತು. ನಾಗೋಜಿಯಂಥ ಘಟಸರ್ಪವು ತನ್ನ ವಿಷವನ್ನು ಗುಳಿಬಿಟ್ಟಿದೆಯೆಂಬವನ್ನು ತಿಳಿದು ಯಾರಿಗೆ ಸಮಾಧಾನವಾಗಲಿಕ್ಕಿಲ್ಲ? ಆದರೆ ನಾಗೋಜಿಯು ನಿಜವಾಗಿಯೂ ಅಷ್ಟು ಸಂಭಾವಿತನಾಗಿದ್ದನೇನು? ಛೇ-ಛೇ! ಹಾಗೇನೂ ಇಲ್ಲ. ಅತ್ಯಂತ ವ್ಯಸನಾಧೀನತೆಯ ಮೂಲಕ ಆತನು ದುರ್ಬಲನಾದ್ದರಿಂದ ಅವನ ಬಾಯಿಂದ ಆ ಪ್ರಕಾರದ ಶಬ್ದಗಳು ಹೊರಟಿದ್ದವಷ್ಟೆ. ನಿಜವಾಗಿ ಯೋಚಿಸಿದರೆ ಹಂಸೆಯ ವಿಷಯದ ದ್ವೇಷದ ಭಾವನೆಯು ಅವನ ಮನಸ್ಸಿನೊಳಗಿಂದ ಇದು ವರೆಗೂ ಅಳಿದಿರಲಿಲ್ಲ. ಅವನೊಡನೆ ಬಂದಿದ್ದ ಇಬ್ಬರು ಸಶಸ್ತ್ರ ಸವಾರರನ್ನೂ, ಇಬ್ಬರು ಹೆಂಗಸರನ್ನೂ ಕಂಡು ಅವನು ಅಂದು ಹಾಗೆ ಸೌಮ್ಯವಾಗಿ ನುಡಿದಿದ್ದನು ಮಾತ್ರ.

ಭಾವೂರಾಯನು ಒಳಗೆ ಹೋಗಲು, ಬಂಕಿಯು ಆತನನ್ನು ಕುರಿತು: "ಭಾವೂರಾಯರೆಂದರೆ ನೀವೇ ಏನು? ಬಾಳಾಜಿ ವಿಶ್ವನಾಥರು ನಮಗೆ ಪಂಢರಪುರದಲ್ಲಿ ಭೆಟ್ಟಿಯಾಗಿದ್ದರು. ನಿಮಗೆ ಹಂಸಾಬಾಯಿಯ ತಾಯಿಯ ಸಂಗತಿಯು ಗೊತ್ತಿದೆಯೆಂದು ಅವರಿಂದಲೇ ನಾವು ತಿಳಿದೆವು. ಆದ್ದರಿಂದ ಭಾವೂರಾಯಾ, ಈಗ ಸಾವಿತ್ರೀಬಾಯಿಗೆ ಹೇಗೆ ಇದೆ? ಹಾಗು ಹೊರಗೆ ನಿಮ್ಮೊಡನೆ ಮಾತಾಡುತ್ತಿದ್ದ ಆ ಮನುಷ್ಯರಾರು?" ಎಂದು ಪ್ರಶ್ನೆ ಮಾಡಿದನು.

"ಅಹುದು, ನಾನೇ ಭಾವುವು. ಹಂಸಾಬಾಯಿ-ಪದಮಜಿಯರ ಭೇಟಿಗಾಗಿಯೇ ಸಾವಿತ್ರೀಬಾಯಿಯವರು ಕಣ್ಣಲ್ಲಿ ಜೀವ ಹಿಡಕೊಂಡು ಬಿದ್ದಿರುತ್ತಾರೆ. ನನ್ನೊಡನೆ ಮಾತಾಡಿದ ಅವರು ನನ್ನ ಋಣಾನುಬಂಧಿಗಳಲ್ಲೊಬ್ಬರು."

"ಹಾಗಾದರೆ ಅವನನ್ನು ಕಂಡ ಕೂಡಲೆ ಹಂಸಾಬಾಯಿಯು ಅಷ್ಟೊಂದು ಗಾಬರಿಗೊಂಡ ಕಾರಣವೇನು?"

'ಮೊದಲು ಅವರಿಗೂ ಹಂಸಾಬಾಯಿಗೂ ತುಸ ವಿರೋಧವುಂಟಾಗಿತ್ತು; ಆದರೆ ಕಾಲಾಂತರದಿಂದ ಅದು ಲೋಪವಾದ್ದರಿಂದ, ಈಗ ಅವರೂ ನನ್ನಂತೆ ಹಂಸಾಬಾಯಿಯ ಶೋಧಕ್ಕೋಸ್ಕರವೇ ಹೊರಟಿದ್ದರು" ಹೀಗೆಂದು ಹೇಳಿ ಭಾವುವು ನಾಗೋಜಿಯ ವಿಷಯಕ್ಕೆ ಅನರ್ಹಳಿರು 'ಸಾಗಬಹುದಾಗಿದ್ದ ಸಂತೋಷವನ್ನು ದೂರೀಕರಿಸಿದನು.

"ಅವರ ಹೆಸರೇನು? ಅವರು ಯಾವ ಊರಿನವರು?"

"ಅವರ ಹೆಸರು ನಾಗೋಜಿರಾಯ ಘಾಟಗೆ ಎಂದು. ಖೇಡದ ದೇಶ ಮುಖರ ಮಕ್ಕಳವರು."

"ಓಹೋ ಹಾಗೆಯೋ? ಗೊತ್ತಾಯಿತು-ಗೊತ್ತಾಯಿತು! ಅದಿರಲಿ. ಭಾವೂ ರಾಯಾ, ಈ ಹಂಸಾಬಾಯಿಯನ್ನು ಇನ್ನು ನೀನು ಇವಳ ತಾಯಿಯ ಬಳಿಗೆ ಕರೆದೊಯ್ಯುವಿಯಾ? ದಾರಿಯಲ್ಲಿ ಮತ್ತೆ ಏನಾದರೂ ಅಂಜಿಕೆಯಿದ್ದರೆ ಹೇಳು; ಪಾರದದ ವರೆಗೂ ಬಂದು, ನಾವು ಇವಳನ್ನು ಅಲ್ಲಿ ಬಿಟ್ಟು ಬರುತ್ತೇವೆ."

"ಛೇ-ಛೇ, ನೀವೇನೂ ಅಷ್ಟು ತೊಂದರೆ ವಹಿಸಬೇಕಾಗುದುದಿಲ್ಲ. ಇನ್ನು ನೀವು ಹಂಸಾಬಾಯಿಯ ಬಗ್ಗೆ ಯೋಚಿಸುವ ಕಾರಣವಿಲ್ಲ; ಯಾಕಂ ದರೆ, ಹಂಸಾಬಾಯಿಯ ಆ ಮೊದಲಿನ ಶತ್ರುವೇ ಈಗ ಹಿತಚಿಂತಕನಾಗಿರು ತ್ತಾನೆ."

"ಹಾಗಾದರೆ ಬಹಳ ನೆಟ್ಟಗಾಯಿತು. ನಾಳೆ ಬೆಳಗ್ಗೆ ನೀವು ಇವರೊ ಡನೆ ಪಾರದಕ್ಕೆ ಹೊರಡಿರಿ. ನಾವೂ ನಮ್ಮ ಬೇರೆ ಕೆಲಸಗಳಿಗೆ ತೆರಳುತ್ತೇವೆ"

ಬಳಿಕ ಅವರೆಲ್ಲರೂ ಅಂದು ರಾತ್ರಿ ಶಹಾಜಿಯ ಅಬಚಿಯ ಮನೆಯಲ್ಲೇ ಉಂಡು, ವಿಶ್ರಮಿಸಿದರು. ಆ ರಾತ್ರಿ ಆ ಅಬಚಿಯು ಹಂಸೆಯನ್ನು ಹತ್ತರ ಕೂಡ್ರಿಸಿಕೊಂಡು ಅವಳ ವೃತ್ತಾಂತವನ್ನೆಲ್ಲ ಕೇಳಿಕೊಂಡಳು. ಅದನ್ನು ಕೇಳಿ ಅವಳಿಗೆ ಬಹು ದುಃಖವೆನಿಸಿತು. ಬಳಿಕ ಅವಳು ಹಂಸೆಯನ್ನು ಸಮಾಧಾನ ಗೊಳಿಸಲಿಕ್ಕೆಂದು ಹೀಗೆ ನುಡಿದಳು:––"ತಂಗೀ, ಹಂಸಾ, ನಿನ್ನ ಸಂಕಟ ಗಳೆಲ್ಲ ಪಂಢರೀನಾಥನ ಕೃಪೆಯಿಂದ ಇನ್ನು ಬಯಲಾದವೆಂತಲೇ ತಿಳಿ. ಇನ್ನು ನೀನು ಯಾವನೊಬ್ಬ ಶೂರನನ್ನು ಮದುವೆಯಾಗಿ ಸುಖವಾಗಿ ಸಂ ಸಾರ ಮಾಡು; ಬೇರೆಯವರನ್ನು ವರಿಸುವದಕ್ಕಿಂತ, ಪಾರದದ ಆ ನಮ್ಮ ಶಹಾಜಿ ಪಾಟೀಲನೇ ನಿನಗೆ ತಕ್ಕ ವರನಾಗಿರುತ್ತಾನೆ."

ಆ ಮುದುಕೆಯ ನುಡಿಗಳನ್ನು ಕೇಳಿ ಸುಮ್ಮನಿರಲಾರದ ಭಾವೂರಾ ಯನು ಹಂಸೆಯನ್ನು ಕುರಿತು:––"ಹಂಸಾಬಾಯಿ, ಶಹಾಜಿ ಪಾಟೀಲರು ರೂಪಸಂಪನ್ನರಿರುವರಂತೆ ಗುಣಪೂರ್ಣರೂ ಆಗಿರುತ್ತಾರೆ. ಅವರು ನಿಮ್ಮ ತಾಯಿಯ ಸೇವೆಯನ್ನು ನಿಮ್ಮ ಅಣ್ಣನಿಗಿಂತಲೂ ಚೆನ್ನಾಗಿ ಮಾಡಿರುತ್ತಾರೆ. ನಿಮ್ಮ ತಾಯಿಯ ಮನಸ್ಸಿನಲ್ಲಾದರೂ ನಿಮ್ಮನ್ನು ಅವರೇ ವರಿಸಬೇಕೆಂದಿ ರುತ್ತದೆ" ಎಂದು ಹೇಳಿದನು.

ಹಂಸೆಯು ಆಗ ಏನೂ ಉತ್ತರಕೊಡಲಿಲ್ಲ. ಅವರಿಬ್ಬರ ಮಾತಿನ

ಕಡೆಯ ವಾಕ್ಯಗಳು ಅವಳ ಕಿವಿಯಲ್ಲಿ ಆಗಾಗ್ಗೆ ಪ್ರತಿಧ್ವನಿಗೊಡಹತ್ತಿದವು. ಆ ರಾತ್ರಿ ಅವಳ ಕನಸಿನಲ್ಲೆಲ್ಲ ಅದೇ ವಿಷಯವೇ ಮತ್ತೆ ಮತ್ತೆ ಪ್ರಗ್ಗೋಚರವಾಗತೊಡಗಿತು.

ಮರುದಿನ ಬೆಳಗಾಗುತ್ತಲೆ ಬಂಕಿಯು ಭಕ್ತಾಜಿಯೊಡನೆ ತನ್ನ ಬೇರೆ ಕೆಲಸಕ್ಕೆ ನಡೆದನು. ಭಾವೂರಾಯನು ಹಂಸೆ, ಏಸಿ ಹಾಗು ಶಹಾಜಿಯ ಅಬಚಿ ಇವರೆಲ್ಲರೊಡನೆ ಪಾರದದ ಮಾರ್ಗ ಹಿಡಿದನು. ನಾಗೋಜಿಗೆ ಬೇರೆ ಆಶ್ರಯಸ್ಥಾನವೇ ಇರದ್ದರಿಂದ ಅವನೂ ಅವರೊಡನೆ ನಡೆದನು. ಆದರೂ ಆತನ ಮನಸ್ಸಿನಲ್ಲಿ ಎಂಥವೋ ವಿಚಾರಗಳು ಆಗಾಗ್ಗೆ ಉಕ್ಕಿ ಉಕ್ಕಿ ಏಳುತ್ತಿದ್ದವೆಂಬದು ಆತನ ಮುಖದಿಂದ ವ್ಯಕ್ತವಾಗುತ್ತಲಿತ್ತು. ನಾಗೋಜಿಯು ಈ ಮೊದಲು ನುಡಿದಂತೆ ಈತನಲ್ಲಿಯ ಹಂಸೆಯ ವಿಷಯದ ಡಂಕು ನಿಜವಾಗಿಯೂ ಅಳಿದು ಹೋಗಿರುವದೆಂದು ಭೋಳೇ ಸ್ವಭಾವದ ಭಾವೂನ ಗ್ರಹಿಕೆಯಾಗಿತ್ತು; ಆದರೆ ಹಂಸೆಗೆ ಮಾತ್ರ ನಾಗೋಜಿಯ ನುಡಿಯಲ್ಲಿ ನಂಬಿಕೆಯಿರಲಿಲ್ಲ; ಆದರಿಂದ, ನಾಗೋಜಿ-ಹಂಸೆಯರು ಪರಸ್ಪರರ ವಿಷಯಕ್ಕೆ ಒಂದಿಷ್ಟು ಅಂಜುತ್ತಲೇ ದಾರಿ ಕ್ರಮಿಸುತಲಿದ್ದರು.

ಮೂರು ವರ್ಷದ ಬುದ್ಧಿ ನೂರು ವರ್ಷವಾದರೂ ತಿದ್ದದೆಂಬ ಮಾತು ಸುಳ್ಳಲ್ಲ. ಒಂದೆರಡು ದಿನಗಳ ನಿಕಟ ಸಹವಾಸದಿಂದ ಹಂಸೆಯ ವಿಷಯದ ನಾಗೋಜಿಯ ಪ್ರೇಮಲಾಲಸೆಯು ಮತ್ತೆ ಚೇತನಗೊಂಡಿತು. ಅದರಿಂದ ಅವನು ಆ ಮಾತು ಈ ಮಾತು ತೆಗೆಯುತ್ತ ಮೆಲ್ಲನೆ:--"ಹಂಸಾ, ಲೋಣಿಯೊಳಗಿನ ನನ್ನ-ನಿನ್ನ ನಡುವಿನ ಪ್ರೇಮದ ಪ್ರಸಂಗವನ್ನು ಮರತೇ ಬಿಟ್ಟೆಯೇನು?" ಎಂದು ಪ್ರಸ್ತಾಪವೆತ್ತಿದನು.

ಕೂಡಲೆ ಹಂಸೆಯು ಕೆಂಪಡರಿದ ಕಣ್ಣುಗಳಿಂದ ಆತನನ್ನು ನೋಡುತ್ತ: "ನಾಗೋಜೀ, ಮೂರ್ಖಾ, ನಿನ್ನ ಗತಿಯು ಈ ಮೆಟ್ಟಿಗೆ ಮುಟ್ಟಿದ್ದರೂ, ಆ ಪ್ರಸಂಗವನ್ನು ಮತ್ತೆ ಒಡನುಡಿಯಲಿಕ್ಕೆ ನಿನಗೆ ನಾಚಿಕೆ ಬರುವದಿಲ್ಲವೆ? ನಿನ್ನ ಆ ಪ್ರೇಮವನ್ನು ನಾನು ಆಗಲೆ ತುಳಿದು ಮಣ್ಣುಗೂಡಿಸಿ ಬಿಟ್ಟಿರುತ್ತೇನೆ."

"ಹಂಸಾ, ಇನ್ನು ಆ ಆದ ಹೋದ ಮಾತಿನ ನೆನಪು ತೆಗೆಯುವದರಲ್ಲೇನು ಅರ್ಥವಿದೆ? ನೀನು ಸಮ್ಮತಿಸಿದರೆ, ಈಗಲೂ ನನ್ನ ದೇಶಮುಖಗಿರಿಯನ್ನೆಲ್ಲ ನಿನ್ನ ಸ್ವಾಧೀನಪಡಿಸುತ್ತೇನೆ."

"ನಾಗೋಜಿ, ಬೆಂಕೀಹಚ್ಚು ನಿನ್ನ ಆ ದೇಶಮುಖಗಿರಿಗೆ! ಹೊರಡು

ಇದ್ದೀಯಂದ. ಇನ್ನು ಇಂಥ ಅಭದ್ರ ಮಾತನ್ನಾಡಿದರೆ, ನಿನ್ನ ಗತಿಯು ನೆಟ್ಟಗಾಗಲಿಕ್ಕಿಲ್ಲ, ತಿಳಿಯಿತೆ?"

"ಹೀಗೆಯೋ! ಹಂಸಾ, ನಿನ್ನ ಸೊಕ್ಕು ಇನ್ನೂ ತೆಗ್ಗಲಿಲ್ಲವೆ? ನೀನು ನೂರು ವರ್ಷಗಳ ಬಾದಶಹನ ಜನಾನಖಾನೆಯಲಿದ್ದರೂ ಇನ್ನೂ ನಿನ್ನ ನಾನು ನೋಡಿಕೊಳ್ಳುವೆನು? ಹುಡುಗೀ, ಏನಾದರೂ ಆಗಲಿ. ಅದೆಲ್ಲವನ್ನೂ ಮರೆತು, ಇಂದು ನಾನು ಮತ್ತೆ ನಿನ್ನಲ್ಲಿ ಪ್ರೇಮವನ್ನು ಯಾಚಿಸುತ್ತೇನೆ. ಒಲ್ಲೆನೆನ್ನದೆ, ನನ್ನನ್ನಂಗೀಕರಿಸು."

"ನಾಚಿಕೆಗೇಡೀ; ಭಂಗಿಬಡಕಾ: ನಿನ್ನ ನಾಲಿಗೆಯು ಸೆಳೆದು, ನೀನು ಬೇಗನೆ ಮಣ್ಣುಗೂಡು ಹೋಗು!"

ಕೂಡಲೆ ನಾಗೋಜಿಯು ಒಳ್ಳೆ ಸಿಟ್ಟಿನಿಂದ ತನ್ನ ಕುದುರೆಯನ್ನು ಆ ರಾಜಮಾರ್ಗದಿಂದ ಬಿಡಿಸಿ, ಅಡವಿಯ ಮಾರ್ಗದಿಂದ ಭರದಿಂದ ಬಿಟ್ಟನು. ತುಸ ದೂರ ಹೋಗುವಷ್ಟರಲ್ಲಿ ಅವನಿಗೆ ಮೂರು ಜನ ಮುಸಲ್ಮಾನ ಸವಾರರು ಭೆಟ್ಟಿಯಾದರು. ಪಾರವದ ದುರ್ಗವು ಇಲ್ಲಿಂದ ಎಷ್ಟು ದೂರಿದೆ? ಎಂದು ನಾಗೋಜಿಯು ಅವರನ್ನು ಕೇಳಲು, ಆ ಸರದಾರರಲ್ಲಿಯ ಒಬ್ಬನು ಇವನನ್ನು ಗುರ್ತಿಸಿ ಗಟ್ಟಿದನಿಯಿಂದ:—"ಎಲೊ, ಈತನೇ ನನ್ನ ಮುಖ್ಯ ವೈರಿಯು! ಈತನ ಸಲುವಾಗಿಯೇ ನನ್ನ ಸಂಸಾರವೆಲ್ಲ ಮಣ್ಣುಪಾಲಾದದ್ದು. ಆದ್ದರಿಂದ ಇವನನ್ನು ಕೂಡಲೆ ಹರಿಗಡಿಯಿರಿ" ಎಂದು ಕೂಗಿದನು.

"ಛೀ ಛೀ, ನಮ್ಮ ನಿಮ್ಮ ನಡುವೆ ಇವನನ್ನು ಕೊಲ್ಲುವ ಕಟ್ಟಳೆಯಾಗಿಲ್ಲ. ಇಸ್ಮಾಯಿಲಾ, ಹಾದಿಯಿಂದ ಹೋಗುವ ಪ್ರತಿಯೊಬ್ಬರನ್ನೂ ಕೊಲ್ಲುವ ಬಗ್ಗೆ ನೀನು ಹೇಳಿದರೆ, ನಾವು ಅದರಂತೆ ನಡೆಯಬೇಕೇನು?" ಎಂದು ಆತನ ಸಂಗಡಿಗರು ನುಡಿದರು.

ಈ ಇಸ್ಮಾಯಿಲನೇ ಲೋಣಿಯೊಳಗಿನ ಬಡ ಪಿಂಜಾರ-ಇಸ್ಮಾಯಿಲನು. ಈತನ ಸಹಾಯದಿಂದಲೇ ನಾಗೋಜಿಯು ಒಂದು ದಿನ ಹಂಸೆಯನ್ನು ಓಡಿಸಿಕೊಂಡು ಹೋಗತಕ್ಕವನಿದ್ದನು: ಆದರೆ ಅಂದು ಲಾಗ ತಪ್ಪಿದ್ದರಿಂದ, ನಾಗೋಜಿಯು ಬೇಡಜನರಿಂದ ಇಸ್ಮಾಯಿಲನನ್ನೇ ಸುಲಿದು ಸೂರೆಗೊಂಡಿದ್ದನು. ಇತ್ತೀಚೆಗೆ ಇಸ್ಮಾಯಿಲನು ಪಾರವದಲ್ಲಿರುತ್ತಿದ್ದುದೂ, ಅವನು ತನ್ನ ಹೆಂಡತಿಯ ಸಲುವಾಗಿ ಶಹಾಜಿ ಪಾಟೀಲನನ್ನು ಕೊಲ್ಲಲುದ್ಯುಕ್ತನಾದದ್ದೂ ನಮ್ಮ ವಾಚಕರಿಗೆ ಈ ಮೊದಲೇ ತಿಳಿದಿದೆ. ಈ ದಿನ

ಅವನು ಶಹಾಜಿಯನ್ನು ಕೊಲ್ಲುವ ಸಲುವಾಗಿ ಮತ್ತೆ ೨-೩ ಜನ ಕೊಲೆಗಡಕರನ್ನು ಗೊತ್ತು ಮಾಡಿಕೊಂಡು ನಡೆದಿದ್ದನು. ದಾರಿಯಲ್ಲಿ ಆಕಸ್ಮಿಕವಾಗಿ ಆತನಿಗೆ ನಾಗೋಜಿಯ ಭೆಟ್ಟಿಯಾಯಿತು; ಅಂದಬಳಿಕ ಕೇಳುವದೇನು?

ಆ ಸಮಾರಸ್ಯ ಒಪ್ಪಿದಾಗಲು, ಇಸ್ಮಾಯಿಲನೇ ತನ್ನ ಕುದುರೆಯನ್ನು ಮುಂದಕ್ಕೆ ಮಾಡಿ, ನಾಗೋಜಿಯನ್ನು ಒಂದೇ ಏಟಿನಿಂದ ತುಂಡರಿಸಿ, ತನ್ನ ದೀರ್ಘದ್ವೇಷವನ್ನು ತೀರಿಸಿಕೊಳ್ಳುವಷ್ಟರಲ್ಲಿ, ಎದುರಿನಿಂದ ಬರುತ್ತಿದ್ದ ಮುತ್ತೋಜಿಯ ತೇಜಸ್ವಿಯ ಕತ್ತಿಯ ಹೊಡತಕ್ಕೆ ಆ ಇಸ್ಮಾಯಿಲನೂ ಮರಣ ಹೊಂದಿದನು! ಹೀಗಾಗಿ ಆ ಇಬ್ಬರು ಪರಮ ನೀಚರಿಗೂ ಅಂದು ತಕ್ಕ ಪ್ರಾಯಶ್ಚಿತ್ತವಾಯಿತು!

---

## ಹೃದಯಮೀಲನ.

ಒಂದು ದಿನ ಬೆಳಿಗ್ಗೆ ಪಾರದದ ಶಹಾಜಿ ಪಾಟೀಲನು ತನ್ನ ಎರಡು-ಮೂರು ಜನ ಗೆಳೆಯರೊಡನೆ ಬೇಟೆಯಾಡುವದಕ್ಕೆಂದು ಸಮೀಪದ ಅರಣ್ಯಕ್ಕೆ ಹೋಗಿದ್ದನು. ಅವನು ಒಂದು ಕಾಡ ಹಂದಿಯನ್ನು ಬೆನ್ನಟ್ಟಿ ನಡೆದಿರಲು, ಒಂದು ಪೆಳೆಯ ಮರೆಗೆ ನಿಂತು ಶಹಾಜಿ ಪಾಟೀಲನನ್ನು ತನ್ನ ಬಾಣದಿಂದ ಸಂಹರಿಸಬೇಕೆಂದು ಆತನ ದಾರಿಯನ್ನೇ ಕಾಯುತ್ತಿದ್ದ ಒಂದು ವ್ಯಕ್ತಿಯು ದೂರದಿಂದಲೇ ಶಹಾಜಿ ಪಾಟೀಲನ ಸಂಗಡಿಗನ ದೃಷ್ಟಿಗೆ ಬಿತ್ತು. ಕೂಡಲೆ ಅವನು ಶಹಾಜಿಯನ್ನು ಒಮ್ಮೆಲೆ ಕೂಗಿ:---"ಮುಂದೆ ಒಂದು ಹೆಜ್ಜೆಯನ್ನು ಕೂಡ ಇಡಬೇಡ"ೆಂದು ಹೇಳಲು, ಮರೆಗೆ ನಿಂತಿದ್ದ ಆ ವ್ಯಕ್ತಿಯು ಮನಸ್ಸಿನಲ್ಲಿ ಅತ್ಯಂತ ಖತಿಗೊಂಡರೂ, ಇನ್ನು ಇಲ್ಲಿ ತನ್ನ ಆಟ ನಡೆಯಲಾರದೆಂದೂ ತಾನು ಇನ್ನು ಇಲ್ಲಿ ಇರುವದರಿಂದ ತನ್ನ ಜೀವಕ್ಕೆ ಅಪಾಯಕರವೆಂದೂ ಬಗೆದು, ಅಲ್ಲಿಂದ ನುಸುಳಿ ಬೇರೆ ಕಡೆಗೆ ಹೊರಟು ಹೋಯಿತು. ಆ ವ್ಯಕ್ತಿಯು ಮರೆಯಾಗಲು, ಶಹಾಜಿಯೂ ಆತನ ಸಂಗಡಿಗರೂ ಆತನ ಬೆನ್ನಟ್ಟುವದನ್ನು ದುರ್ಲಕ್ಷಿಸಿ, ತಮ್ಮ ಮುಖ್ಯ ಉದ್ದೇಶದ ಕಡೆಗೆ, ಅಂದರೆ ಬೇಟೆಯ ಕಡೆಗೇ ಚಿತ್ತವನ್ನಿರಿಸಿದರು. ಅಲ್ಪಾವಧಿಯಲ್ಲಿಯೇ ಅವರ ಆ ಬೇಟೆಯು ಹಸ್ತಗತವಾಯಿತು. ಆದರಿಂದ ಹರ್ಷನಿರ್ಭರರಾದ ಅವರು ಆ ಅರಣ್ಯಮಧ್ಯದಿಂದ ತಮ್ಮೂರ ಮಾರ್ಗದ ಕಡೆಗೆ ಮೆಲ್ಲಮೆಲ್ಲನೆ ಸಾಗಿದರು.

ಆ ಅರಣ್ಯಾಮಧ್ಯದ ದಾರಿಯಲ್ಲಿ ಯಾವನೋ ಒಬ್ಬ ಸವಾರನು ತನ್ನ ಕುದುರೆಯನ್ನು ಭರದಿಂದ ಓಡಿಸುತ್ತ ಬರಲು, ಶಹಾಜಿಯನ್ನು ಈ ಮೊದಲು ಆ ಪೆಳೆಯ ಮರೆಗೆ ನಿಂತು ಕೊಲ್ಲಬಯಸಿದ್ದ ಆ ವ್ಯಕ್ತಿಯು ತನ್ನ ಓರ್ವ ಸಂಗಡಿಗನೊಡನೆ ತಟ್ಟನೆ ಮುಂದೆ ಬಂದು: "ಈ ನೀಚ ನಾಗೋಜಿಯ ಸಲುವಾಗಿಯೇ ನಾನು ಹೀಗೆ ಬಾಳುವೆಗೇಡಾದದ್ದು. ಕಾರಣ ಇವನನ್ನು ಈಗಲೆ ನಿರ್ನಾಮಗೊಳಿಸಬೇಕು" ಎಂದಂದು, ಅವನು ತನ್ನ ಆ ಸಂಗಡಿಗನಿಗೆ ಆ ಸ್ವಾರನನ್ನು ಕೊಲ್ಲಲಿಕ್ಕೆ ಹೇಳಿದನು; ಆದರೆ ಆತನ ಆ ಸಂಗಡಿಗನು: "ನಾನು ಶಹಾಜಿ ಪಾಟೀಲನ ಕೊಲೆಗೆಯ್ಯಲಿಕ್ಕೆ ಮಾತ್ರ ನಿನಗೆ ನೆರವಾಗುವೆನೆಂದು ವಚನಬದ್ಧನಾಗಿರುವೆನೇ ಹೊರತು, ಹಾದಿ ಹಿಡಿದು ಹೋಗುವ ಕಂಡಕಂಡವರನ್ನು ಕೊಲ್ಲಲಿಕ್ಕೆ ನೀನು ಹೇಳಿದರೆ, ನಾನು ಅದನ್ನು ಮನ್ನಿಸಲಾರೆನೆ"ಂದು ನಿಕ್ಷುಣ್ಣವಾಗಿ ತಿಳಿಸಿದನು. ಆಗ ಆ ನೀಚನು ತಾನೇ ಮುಂದರಿದು, ಆ ಸ್ವಾರನು-ನಾಗೋಜಿಯು ಜೀವದಾನ ಕೊಡೆಂದು ಅಂಗಲಾಚಿ ಬೇಡಿಕೊಳ್ಳಹತ್ತಿದ್ದರೂ ಆ ಶಬ್ದಗಳನ್ನು ಕಿವಿಯ ಮೇಲೆ ಕೂಡ ಹಾಕಿಕೊಳ್ಳದೆ, ತನ್ನ ಕೈಖಡ್ಗದಿಂದ ಅವನನ್ನು ತುಂಡರಿಸಿ ಚೆಲ್ಲಿದನು. ಅಷ್ಟರಲ್ಲಿ ಪಕ್ಕದ ದಾರಿಯಿಂದ ಶಹಾಜಿಯು ತನ್ನ ಸಂಗಡಿಗರೊಡನೆ ಅಲ್ಲಿಗೇ ಬಂದನು. ಆಗ ಅವರೆಲ್ಲರಿಗೆ ಆ ನೀಚ ವ್ಯಕ್ತಿಯ ಗುರುತು ಪತ್ತಿತು. ಕೂಡಲೆ ಶಹಾಜಿಯು ಯಾವ ವಿಚಾರವನ್ನೂ ಮಾಡದೆ, ತನ್ನ ಖಡ್ಗದ ಒಂದೇ ಏಟಿನಿಂದ ಆ ನೀಚನ ರುಂಡವನ್ನು ದಿಂಡದಿಂದ ವಿಂಗಡಿಸಿ ಬಿಟ್ಟನು! ಶಹಾಜಿಯ ಸಂಗಡಿಗನೋರ್ವನು ಆ ನೀಚ ವ್ಯಕ್ತಿಯ;ಆ ಬಾಡಿಗೆಯ ಹಸ್ತಕನ ಶಿರವನ್ನೂ ಧರೆಗಿಳಿಸಿದನು. ಇಷ್ಟಾಗುವಷ್ಟರಲ್ಲಿ ಭಾವೂರಾಯನು ಹಂಸಾಬಾಯಿಯೊಡನೆ ಆ ಸ್ಥಳಕ್ಕೆ ಬಂದೇ ಬಿಟ್ಟನು.

ಆಗ ಭಾವೂರಾಯನು ವಿಸ್ಮಯವಿಸ್ಫಾರಿತ ನೇತ್ರಗಳಿಂದ ನಾಗೋಜಿಯ ಪ್ರೇತದ ಕಡೆಗೂ ಅವನನ್ನು ತುಂಡರಿಸಿ ಕಡೆಗೆ ಶಹಾಜಿಯ ಕತ್ತಿಗೆ ತುತ್ತಾದ ಆ ನೀಚನ ಹೆಣದ ಕಡೆಗೂ ಮಿಕಿ ಮಿಕಿ ನೋಡಹತ್ತಿದನು. ಹಂಸೆಯು ನಾಗೋಜಿಯನ್ನು ಕೊಂದ ಆ ವ್ಯಕ್ತಿಯನ್ನು ಅಂಥ ಆ ವಿಪರೀತ ಸ್ಥಿತಿಯಲ್ಲೂ ಗುರುತಿಸಿ:—"ಇಸ್ಮಾಯಿಲಾ, ನೀಚಾ, ಇಂದು ನಿನಗೆ ತಕ್ಕ ಶಾಸನವಾಯಿತು. ನಾಗೋಜಿಯೂ ನೀನೂ ಒಂದೇ ವರ್ಗದವರು!" ಎಂದಂದು, ಮೂರ್ಛೆಗೊಂಡಳು.

"ಶಹಾಜಿರಾಯರೇ, ಇವರೇ ನಮ್ಮ ಹಂಸಾಬಾಯಿಯವರು. ಸಾವಿತ್ರೀಬಾಯಿಯವರು ಈಗ ಹೇಗಿರುತ್ತಾರೆ? ಪದಮಜಿಯ ಪತ್ತೆಯೇನಾದರೂ ಹತ್ತಿತೇ?'' ಎಂದು ಭಾವೂರಾಯನು ನುಡಿಯುತ್ತಿರಲು, ಮೂರ್ಛೆಯಿಂದ ಆವರಿಸಿದ ಹಂಸೆಯು ತನ್ನ ಕುದುರೆಯಿಂದ ಉರುಳಿ ಬೀಳುತ್ತಿದ್ದಳು. ಅದನ್ನು ಕಂಡು ಶಹಾಜಿಯು ತಟ್ಟನೆ ಅವಳ ಬಳಿಗೆ ಹೋಗಿ, ನೆಲಕ್ಕೆ ಬೀಳದಂತೆ ಅವಳನ್ನು ತನ್ನ ವಕ್ಷಸ್ಥಲದ ಮೇಲೆಯೇ ಗಟ್ಟಿಯಾಗಿ ಹಿಡಿದುಕೊಂಡನು. ಆಕಸ್ಮಿಕವಾಗಿ ಯಾವನೊಬ್ಬನ ಅಂಗಸ್ಪರ್ಶವಾದ ಕೂಡಲೆ, ಹಂಸೆಯು ಸ್ಮೃತಿಹೊಂದಿದಳು.

'ಶಹಾಜಿ' ಎಂಬ ಹೆಸರನ್ನು ಕೇಳಿ ಹಂಸೆಯೂ, 'ಹಂಸಾಬಾಯಿ' ಎಂಬ ಹೆಸರನ್ನು ಕೇಳಿ ಶಹಾಜಿಯೂ ಪರಸ್ಪರರನ್ನು ಏಕಸಮಯಾವಚ್ಛೇದದಿಂದ ಟಕಮಕವಾಗಿ ನೋಡಹತ್ತಿದರು. ಆಗ ಅವರಿಬ್ಬರ ಮನಸ್ಸುಗಳೂ ತೀರ ಅಸ್ವಸ್ಥವಾಗಿದ್ದವು ಕ್ಷಣಾರ್ಧದಲ್ಲಿಯೇ ಹಂಸಾಬಾಯಿಯು ಆ ಸ್ಥಿತಿಯಿಂದ ಎಚ್ಚತ್ತು, ನಾಚಿ, ತನ್ನ ಸೀರೆಯ ಸೆರಗನ್ನು ಇನ್ನಿಷ್ಟು ಜಗ್ಗಿಕೊಂಡು, ಅದರಿಂದ ತನ್ನ ಮುಖವನ್ನು ಮುಚ್ಚಿಕೊಳ್ಳಲಿಕ್ಕೆ ಪ್ರಯತ್ನಿಸತೊಡಗಿದಳು; ಹಾಗು ಶಹಾಜಿಯಿಂದ ಒತ್ತಟ್ಟಿಗೆ ಬದಿಗಾಗಿ ನಿಂತುಕೊಳ್ಳಬೇಕೆಂದು ಪ್ರಯತ್ನಿಸಿದಳು; ಆದರೆ ಆ ನೀಚದ್ವಯರ ಆಕಸ್ಮಿಕ ಮರಣದಿಂದ ಆಕೆಯ ಮನಸ್ಸಿನ ಮೇಲೆ ಒಳ್ಳೇ ಆಘಾತವಾದದ್ದರಿಂದ, ಅವಳ ದೇಹವು ನಿತ್ರಾಣವಾಗಿತ್ತು. ಅದರಿಂದ ದೂರ ಸರಿಯಲಿಕ್ಕೆ ಪ್ರಯತ್ನಿಸಿದಾಗ ಅದು ಸಾಧಿಸದೆ ಜೋಲಿ ಹೋದದ್ದರಿಂದ, ಹಂಸೆಯು ಶಹಾಜಿ ಪಾಟೀಲನ ವಕ್ಷಸ್ಥಳದ ಮೇಲೆ ಮತ್ತೆ ಕಡಕೊಂಡು ಬಿದ್ದಳು. ಅದರಿಂದ ಅವಳಿಗೆ ಮತ್ತಿಷ್ಟು ನಾಚಿಕೆಯೆನಿಸಿದರೂ ಆ ಅಂಗಸ್ಪರ್ಶದಿಂದ ಅವಳಿಗೊಂದು ಬಗೆಯ ಅಜ್ಞಾತ ಮತ್ತು ಅವರ್ಣನೀಯವಾದ ಸುಖ-ಸಮಾಧಾನಗಳು ಒಮ್ಮೆಲೆ ಪ್ರಾಪ್ತವಾದವು. ಆ ಕ್ಷಣೈಕ ಸುಖ-ಸಮಾಧಾನಗಳನ್ನು ಅವಳು ಇದುವರೆಗೆಂದೂ ಅನುಭವಿಸಿರಲಿಲ್ಲ!

ಅಲ್ಪಾವಧಿಯಲ್ಲೇ ಹಂಸೆಯು ಚೆನ್ನಾಗಿ ಚೇತರಿಸಿಕೊಂಡು, ಒತ್ತಟ್ಟಿಗೆ ಸರಿದು ನಿಂತಳು. ಆಗ ಶಹಾಜಿಯು ಅವಳನ್ನುದ್ದೇಶಿಸಿ:—"ಈಗ ನಿಮಗೆ ಹುಷಾರಿಯೆನಿಸುವದಷ್ಟೇ?" ಎಂದು ಪ್ರಶ್ನೆ ಮಾಡಲು, ಉತ್ತರವನ್ನೇನೂ ಕೊಡದೆ, ಹಂಸೆಯು ಮುಗುಳುನಗೆಯಿಂದ ನಕ್ಕಳು ಮಾತ್ರ.

ಬಳಿಕ ಶಹಾಜಿಯು ತನ್ನ ಸಂಗಡಿಗರಿಗೆ ಆ ಹೆಣಗಳ ವ್ಯವಸ್ಥೆಯನ್ನು ಹೇಗೆ ಮಾಡಬೇಕೆಂಬದನ್ನು ತಿಳಿಸಿ ಕುರ್ಲ್ಯಾವಾಡಿಯ ತನ್ನ ಅಬಜಿ, ಹಂನಾ, ಭಾವೂ, ಏಸಿಯರೊಡನೆ ತನ್ನ ಊರಿಗೆ ನಡೆದನು. ಅವರು ಊರ ಸಮೀಪಕ್ಕೆ ಬರುವಷ್ಟರಲ್ಲಿ ಶಹಾಜಿಯ ತಂದೆಯೂ ಶಹಾಜಿಯ ಇಬ್ಬರು ಮಲತಮ್ಮಂದಿರೂ ಅಶ್ವಾರೋಹಿಗಳಾಗಿ ಎದುರಿಗೆ ಬರುತ್ತಿದ್ದರು. ಅರಣ್ಯದಿಂದ ಮನೆಗೆ ಬರಲಿಕ್ಕೆ ಶಹಾಜಿಗೆ ತಡವಾದ್ದರಿಂದ ಶಹಾಜಿಯ ಮನೆಯವರು ಯೋಚಿಸುತ್ತಿರಲು, ನಾಗೋಜಿ-ಇನಾಯಿಲರ ಕೊಲೆಗಳನ್ನು ದೂರದಿಂದ ಕಂಡ ಆ ಊರ ಕೆಲ ಜನರು ಶಹಾಜಿಯ ತಂದೆಗೆ ಆ ಸಂಗತಿಯನ್ನು ತಿಳಿಸಿದರು. ಅದರಿಂದ ಆತನ ಚಿಂತೆಯು ದ್ವಿಗುಣಿತವಾಗಿ, ಅವನು ಮಗನ ಶೋಧಕ್ಕೆಂದು ಹೊರಟನು. ಆತನ ಇಬ್ಬರು ಚಿಕ್ಕಮಕ್ಕಳೂ ತಂದೆಯನ್ನನುಸರಿಸಿ ಬಂದಿದ್ದರು.

ಶಹಾಜಿಯನ್ನು ಕಂಡಕೂಡಲೆ ಆತನ ಚಿಕ್ಕ ತಮ್ಮನು-ಶಿರಾಜಿಯು ದೂರದಿಂದಲೇ:—"ಅಣ್ಣಾನವರೇ, ಆ ಮುಸುಂಡಿಯನ್ನು ನೀವೇ ಸಂಹರಿಸಿದಿರೇನು? ಇಂಥ ಎಲ್ಲ ಕೆಲಸಗಳನ್ನು ನೀವೇ ಮಾಡಹತ್ತಿದ ಬಳಿಕ, ನಾವು ಮುಂದಾಗುವದೆಂತು? ಅಣ್ಣಾ, ನಿಮ್ಮೊಡನೆ ಬರುತ್ತಿರುವ ಈ ಹೆಂಗಸು ಯಾರು? ನಾವು ಇವರನ್ನು ಏನೆಂದು ಕರೆಯಬೇಕು?" ಎಂದು ವಿಚಿತ್ರ ಪ್ರಶ್ನೆ ಮಾಡಲು, ಹಂಸೆಯು ಮೋರೆ ತಿರುಗಿಸಿದಳು. ಶಹಾಜಿಯು ತನ್ನ ತಮ್ಮನಿಗೆ ಏನು ಉತ್ತರ ಕೊಡಬೇಕೆಂಬದನ್ನು ಕ್ಷಣಕಾಲವೇ ಯೋಚಿಸಿ: ತಮ್ಮಾ, ನಮ್ಮ ಮನೆಯಲ್ಲಿ ಜಡ್ಡಿನಿಂದ ಮಲಗಿರುವ ಆ ಸಾವಿತ್ರೀಬಾಯಿಯವರಿಲ್ಲವೆ? ಇವರೇ ಅವರ ಮಗಳು ಹಂಸಾಬಾಯಿಯು, ಎಂದು ವಿವರಿಸಿ ಹೇಳಿದನು.

ಆದರೂ ಆ ಹುಡುಗನು ಮತ್ತೆ: ಅಣ್ಣಾ, ಆದೆಲ್ಲ ನಿಜವಿರಬಹುದು; ಆದರೆ ನಾನು ಇವರಿಗೆ ಏನೆಂದು ಕರೆಯಬೇಕೆಂಬದನ್ನು ಮೊದಲು ಹೇಳಬಾರದೇ? ಎಂದೆನಲು, ಹಾಗಾದರೆ ಅವರನ್ನೇ ಕೇಳು, ಎಂದೆಂದು ಶಹಾಜಿಯು ಸುಮ್ಮನಾದನು. ಆ ಹುಡುಗನು ತನ್ನ ಕುದುರೆಯನ್ನು ಹಂಸಾಬಾಯಿಯ ಹತ್ತರ ಒಯ್ದು: ಏನರೀ ಬಾಯಿಯವರೇ, ನಾನು ನಿಮಗೆ ಏನೆಂದು ಕರೆಯಬೇಕೆಂಬದನ್ನು ನೀವಾದರೂ ಹೇಳಬಾರದೇ? ಎಂದು ನಿರ್ಭಿಡೆಯಿಂದ ಕೇಳಹತ್ತಿದನು.

ಶಿರಾಜಿಯ ಆ ಬಾಲಸ್ವಭಾವವನ್ನು ಕಂಡು ಮೋದಗೊಂಡ ಹಂಸೆಯು "ನೀವು ನನ್ನನ್ನು ಹಂಸೆಯೆಂದೇ ಕರೆಯಬಹುದು' ಎಂದು ಅಂದಳು.

"ಛೇ-ಛೇ! ಹಾಗಾಗದು. ನೀವು ನನಗಿಂತ ಎಷ್ಟೋ ದೊಡ್ಡವರಿದ್ದು, ನಿಮ್ಮನ್ನು ನಾನು ಹಾಗೆ ಏಕವಚನದಿಂದ ಸಂಬೋಧಿಸುವದುಂಟೇ?"

"ಹಾಗಾದರೆ ಈ ಬಗ್ಗೆ ಅವರನ್ನೇ ಕೇಳಿರಿ" ಎಂದಂದು ಹಂಸೆಯು ಶಹಾಜಿಯನ್ನೊಮ್ಮೆ ಓರೆನೋಟದಿಂದ ನೋಡಿದಳು.

"ಭಲೆ! ಭಲೆ! ನೀವಿಬ್ಬರೂ ಬಲು ಮೋಜಿನವರಾಗಿ ಕಾಣುತ್ತೀರಿ. ಅಣ್ಣಾನವರು ನಿಮ್ಮನ್ನು ಕೇಳೆನ್ನುವರು; ನೀವು ಅವರನ್ನು ಕೇಳೆನ್ನುವಿರಿ. ಇದೊಳ್ಳೇ ಪೇಚು ಬಂತು ಬಿಡಿರಿ'' ಎಂದಂದು ಯೋಗನೆ ನಕ್ಕನು.

ಹೀಗೆ ಅವರೆಲ್ಲರೂ ವಿನೋದಪ್ರಚುರ ಭಾಷಣ ಮಾಡುತ್ತ ಊರಿಗೆ ಬಂದರು. ಕೂಡಲೆ ಶಹಾಜಿಯು ಕುದುರೆಯಿಂದಿಳಿದು ಓಡುತ್ತೋಡುತ್ತ ಹೋಗಿ ಹಂಸಾಬಾಯಿಯು ಬಂದಿರುವಳೆಂದು ಸಾವಿತ್ರೀಬಾಯಿಗೆ ತಿಳಿಸಿದನು. ಅಷ್ಟರಲ್ಲಿ ಹಂಸೆಯೂ ಅಲ್ಲಿಗೆ ಬಂದಳು. ಕೂಡಲೆ ನೆಲ ಹಿಡಿದು ಬಿದ್ದಿದ್ದ ಸಾವಿತ್ರೀಬಾಯಿಯು ಹರ್ಷಾತಿರೇಕದಿಂದ ಚಟ್ಟನೆ ಎದ್ದು ಕುಳಿತು: "ಹಂಸಾ, ಬಂದೆಯಾ? ಬಹು ದಿನಗಳಿಂದ ನಾನು ನಿನ್ನ ಮಾರ್ಗವನ್ನೇ ನಿರೀಕ್ಷಿಸುತ್ತಿರುವೆನು. ಇದುವರೆಗೆ ನೀನು ಇದ್ದದ್ದಾದರೂ ಎಲ್ಲಿ?" ಎಂದು ಒಳ್ಳೇ ತವಕದಿಂದ ನುಡಿದು, ಮಗಳನ್ನು ಬಿಗಿಯಾಗಪ್ಪಿಕೊಂಡಳು.

''ಅಮ್ಮಾ, ಏನು ನಿನ್ನ ದುರ್ದೆಸೆಯಿದು!!'' ಎಂದಂದು ಹಂಸೆಯೂ ಸಾವಿತ್ರೀಬಾಯಿಯನ್ನು ಅಪ್ಪಿಕೊಂಡು ಅಳಹತ್ತಿದಳು.

ಆ ತಾಯಿ-ಮಕ್ಕಳ ಆ ಭೆಟ್ಟಿಯಿಂದ ಅಲ್ಲಿಯ ಎಲ್ಲ ಜನರಿಗೂ ಸಮಾಧಾನವೆನಿಸಿತು. ಹಂಸೆಯು ತಾಯಿಯೊಡನೆ ಹಿತಗುಜಗೋಷ್ಟಿಗಳನ್ನು ಮಾತಾಡುತ್ತ ಕುಳಿತಿರಲು, ಶಹಾಜಿಯು ಸಾವಿತ್ರೀಬಾಯಿಯ ಪ್ರಕೃತಿ ಹೇಗಿದೆಯೆಂದು ವಿಚಾರಿಸ ಬಂದನು. ಆಗ ಹಂಸೆಯು ಒತ್ತಟ್ಟಿಗೆ ಸರಿದು, ಎದ್ದು ನಿಂತಳು. ಅವಳ ಆ ತರದ ಶಾಲೀನತೆಯನ್ನು ಕಂಡು ಶಹಾಜಿಯ ಅಬಚಿಗೂ, ಹಂಸೆಯ ತಾಯಿಗೂ, ಶಹಾಜಿಯ ಮಲತಾಯಿಗೂ ಬಹು ಸಮಾಧಾನವೆನಿಸಿತು. ಕೂಡಲೆ ಶಹಾಜಿಯ ಅಬಚಿಯು ಶಹಾಜಿಯನ್ನು ಯನ್ನು ಕುರಿತು: ''ತಮ್ಮಾ, ಶಹಾಜೀ, ನಾನು ಈ ಹಂಸಾಬಾಯಿಯನ್ನು ನಿನಗೆ ವಧುವೆಂದು ಗೊತ್ತುಮಾಡತಕ್ಕವಳಿರುತ್ತೇನೆ. ನಿನಗೆ ಇವಳು ತಕ್ಕವಳಾಗಬಹುದೆ?'' ಎಂದು ಕೇಳಿದಳು.

ಅಷ್ಟರಲ್ಲಿ ಸಾವಿತ್ರೀಬಾಯಿಯೂ ಶಹಾಜಿಯನ್ನು ಕುರಿತು:—''ಶಾಹೀ

ಲರೇ, ನೀವು ನನ್ನ ಹಂಸೆಯ ಜವಾಬುದಾರಿಯನ್ನು ವಹಿಸಿದಿರೆಂದರೆ ತೀರಿತು'' ಎಂದು ಒತ್ತರಿಸಿ ಬಂದ ಕಂಠದಿಂದ ನುಡಿದಳು.

ಆಗ ಶಹಾಜಿಯು ಅವರಿಬ್ಬರಿಗೂ ಕೂಡಿ ಒಂದೇ ಮಾತಿನಿಂದ ಹೀಗೆ ಉತ್ತರವಿತ್ತನು: "ನೀವು ಇದೇನು ವಿಚಿತ್ರ ಪ್ರಶ್ನೆ ಮಾಡುತ್ತಿರುವಿರಿ? ನನಗೆ ಹಂಸಾಬಾಯಿಯು ತಕ್ಕವಳಾಗುವಳೆಂದರೇನು? ಹಾಗು ನಾನು ಅವರ ಜವಾಬುದಾರಿಯನ್ನು ವಹಿಸುವವನೆಷ್ಟರವನು? ನಾನು ಅವರಿಗೆ ತಕ್ಕವನೆನಿಸಿದರೆ, ನಿಮ್ಮ ಮನಸ್ಸಿಗೆ ಬಂದಂತೆ ಮಾಡಿರಿ. ಯಾವ ದೇವರು ಅವರನ್ನು ಇದುವರೆಗಿನ ನಾನಾ ಸಂಕಟಗಳಿಂದ ಪಾರು ಮಾಡಿರುವನೋ, ಮುಂದಾದರೂ ಅವನೇ ಪಾರುಗಾಣಿಸುವನು. ಅವರ ಭವಿಷ್ಯವು ಅಷ್ಟು ಬಲವತ್ತರವಾಗಿರುತ್ತದೆಂಬುದು ಸುಳ್ಳಲ್ಲ."

ಆಗ ಭಾವೂರಾಯನು ನಡುವೇ ಬಾಯಿಹಾಕಿ:—"ಶಹಾಜಿರಾಯರೇ, ನನಗೆ ನೀವಾಡುವ ಮಾತಿನ ಅರ್ಥವು ತಿಳಿಯಿತು. ನಿಮ್ಮಿಬ್ಬರ ಮನೋದಯವು ನಮಗೆ ತಿಳಿದಿಲ್ಲೆಂದು ಭಾವಿಸುವಿರೇನು? ಈಗ ಪ್ರಸಂಗವೇ ಬಂದಿರುವದರಿಂದ ಇಂದು ಈ ಮಾತಿನ ನಿಷ್ಕರ್ಷ ಮಾಡಿಬಿಡುವದು ಉಚಿತವಾಗಿದೆ. ನೀವು ಹಂಸಾಬಾಯಿಯನ್ನು ವರಿಸಬೇಕೆಂದು ಈ ಸಂಗರದ ಗಡಿಯೊಳಗಿನವರೆಲ್ಲರೂ ಅಭಿಪ್ರಾಯಪಡುತ್ತಾರೆ. ಹಂಸಾಬಾಯಿಗೂ ಸಾವಿತ್ರೀಬಾಯಿಯವರಿಗೂ ಇದು ಸಮ್ಮತವಾಗಿದೆ. ಅಂದಮೇಲೆ ನೀವು ಇನ್ನು ಸುಮ್ಮನೆ ಮಾತು ಬೆಳೆಯಿಸುವದರಲ್ಲಿ ಅರ್ಥವೇನು?''

''ಅದೇನಿಲ್ಲ. ಭಾವೂ-ಅದೇನಿಲ್ಲ'' ಎಂದೆಂದು ಶಹಾಜಿಯು:-"ಒಳ್ಳೇದು; ಹಂಸಾಬಾಯಿಯು ಈ ಮಾತಿಗೆ ಒಪ್ಪಿದರೆ, ನಾನೂ ಒಪ್ಪುತ್ತೇನೆ. ಈ ಪ್ರಸಂಗದಲ್ಲಿ ಅವರು ಒಲ್ಲೆವೆಂದರೆ ಮಾತ್ರ, ಇಲ್ಲಿದ್ದವರೆಲ್ಲರಿಗೂ ಅಪಮಾನವಾದೀತು ನೋಡಿಕೋ'' ಎಂದು ಸ್ಪಷ್ಟವಾಗಿ ನುಡಿದನು.

''ಇನ್ನು ಬರಿ ಮಾತುಗಳೇಕೆ? ಇಂದೇ ನಿಶ್ಚಯದ ಕಾರಣವಾಗಲಿ. ನಾನು ನಿಮ್ಮ ಹಿರಿಯರಿಗೆ ಹೇಳಿ ಈಗಲೆ ನಿಶ್ಚಯಕಾರಣದ ಸಿದ್ಧತೆ ಮಾಡಿಸುವೆನು; ಹಾಗು ಹಂಸಾಬಾಯಿಯಿಂದ ನಿಮಗೆ ತಾಂಬೂಲವನ್ನು ಕೊಡಿಸಿ, ಅವರ ಸಮ್ಮತಿಯನ್ನು ಕಾರ್ಯತಃ ಕೊಡಿಸುವೆನು. ಅಂದರಾಗಲಿಲ್ಲವೆ?'' ಎಂದೆಂದು ಭಾವೂರಾಯನು ತಟ್ಟನೆ ಅಲ್ಲಿಂದೆದ್ದು ಒಳಗೆ ಹೋಗಿ, ಶಹಾಜಿಯ ತಂದೆಗೆ ಅದೆಲ್ಲವನ್ನೂ ತಿಳಿಸಿ, ವಾಗ್ನಿಶ್ಚಯದ ಸಿದ್ಧತೆ ಮಾಡಿದನು.

ಮನೆಯ ಜನರೆಲ್ಲರೂ ವಾಙ್ನಿಶ್ಚಯದ ಸಿದ್ಧತೆಯಲ್ಲಿ ತೊಡಗಲು, ಶಹಾಜಿಯು ಅಟ್ಟದ ಮೇಲಿನ ತನ್ನ ಕೋಣೆಯಲ್ಲಿ ಕುಳಿತು ಹಂಸಾಬಾಯಿಯನ್ನು ಒಮ್ಮೆ ಪ್ರತ್ಯಕ್ಷ ಕೇಳಿಯೇ ಮುಂದಿನ ಉದ್ಯೋಗಕ್ಕೆ ಹತ್ತಬೇಕೆಂದು ಯೋಚಿಸಿ, ಆಕೆಯನ್ನು ಏಕಾಂತದಲ್ಲಿ ಕಾಣುವ ಬಗೆ ಹೇಗೆಂದು ಆಲೋಚಿಸುತ್ತಿರುವಷ್ಟರಲ್ಲಿ, 'ಈ ಎತ್ತರವಾದ ಅಟ್ಟದಿಂದ ಈ ಊರಿನ ದೃಶ್ಯವು ಚೆನ್ನಾಗಿ ಕಾಣುತ್ತಿರಬಹುದಲ್ಲವೆ?' ಎಂದಂದುಕೊಂಡು, ಹಂಸೆಯು ಅಲ್ಲಿ ಯಾರೂ ಇರಲಾರರೆಂದು ಭಾವಿಸಿ, ಆ ಅಟ್ಟವನ್ನೇರಿ ಹೋದಳು.

ಶಹಾಜಿಯು ಕುಳಿತ ಸ್ಥಳವು ತುಸ ಮರೆಗಿದ್ದುದರಿಂದ ಅವನು ಹಂಸೆಗೆ ಒಮ್ಮೆಲೆ ಕಾಣಿಸಲಿಲ್ಲ. ಆದರಿಂದ ಅವಳು ಅಟ್ಟವನ್ನು ಹತ್ತಿ, ಆದರ ಮುಮ್ಮಗ್ಗಲಿನ ಬೈಲು ಭಾವಣಿಯ ಮೇಲೆ ನಿಂತು ಬಹು ದೂರದ ವರೆಗಿನ ಸೃಷ್ಟಿಸೌಂದರ್ಯವನ್ನು ನೋಡಲುದ್ಯುಕ್ತಳಾದಳು. ಪಾರದದ ಗಡಿಯು ಒಳ್ಳೇ ಎತ್ತರದ ಮೇಲಿತ್ತು. ಅದರಲ್ಲಿ ಆ ಎತ್ತರವಾದ ಅಟ್ಟದ ಆ ಕೋಣೆಯು ಬಹು ಎತ್ತರವಾಗಿ ಕಟ್ಟಲ್ಪಟ್ಟಿತ್ತು. ಅಂದಮೇಲೆ ಅಲ್ಲಿಂದ ಬಹು ದೂರದ ವರೆಗಿನ ಸೃಷ್ಟಿಸೌಂದರ್ಯವು ಒಳ್ಳೇ ಮನೋವೇಧಕವಾಗಿ ಕಾಣುತ್ತಿದ್ದರೆ ಆಶ್ಚರ್ಯವೇನು?

ಹಂಸೆಯು ಹೊರಗಿನ ಭಾವಣಿಯಲ್ಲಿ ನಿಂತು ಸೃಷ್ಟಿಸೌಂದರ್ಯ ನಿರೀಕ್ಷಣೆಯಲ್ಲಿ ತತ್ಪರಳಾಗಿರಲು, ಆ ಕೋಣೆಯೊಳಗೆ ಹಂಸೆಯ ಹಿಮ್ಮಗ್ಗಲಿನಲ್ಲಿ ಕುಳಿತ ತರುಣ ಶಹಾಜಿ ಪಾಟೀಲನು ತನ್ನ ಭಾವೀ ಪತ್ನಿಯ ಅಂಗ ಸೌಷ್ಟವವನ್ನು ಮನದಣಿಯಾಗಿ ನೋಡುತ್ತಿದ್ದನು. ಹೀಗೆ ಅವರಿಬ್ಬರೂ ತಮ್ಮ ತಮ್ಮ ದೃಶ್ಯಗಳನ್ನು ಬಹಳ ಹೊತ್ತಿನ ವರೆಗೆ ನಿರೀಕ್ಷಿಸಿದರು. ಇಷ್ಟರಲ್ಲಿ ಸಿರಾಜಿಯು ಮೆಲ್ಲನೆ ಅಲ್ಲಿಗೆ ಬಂದು:— "ಹಂಸಾಬಾಯೀ, ದಾದಾಸಾಹೇಬ, ನೀವಿಬ್ಬರೂ ಇಲ್ಲಿ ಮಾಡುವದೇನು?" ಎಂದು ಒಮ್ಮೆಲೆ ಪ್ರಶ್ನ ಮಾಡಿದನು ಆಗ ಆ ಅಪರಿಚಿತ ನವತರುಣ-ತರುಣಿಯರಿಗೆ ಏನೆನಿಸಿರಬಹುದೆಂಬದನ್ನು ಅಂಥ ಪ್ರಸಂಗದಲ್ಲಿ ಸಿಕ್ಕ ತರುಣ-ತರುಣಿಯರೇ ಊಹಿಸಬಲ್ಲರಲ್ಲದೆ, ಅನ್ಯರು ಆ ಸೂಕ್ಷ್ಮ ವಿಚಾರದಲ್ಲಿ ತೊಡಗದಿರುವದೇ ಯೋಗ್ಯವು!

ಗಾಬರಿಗೊಂಡ ಹಂಸೆಯು ತನ್ನ ಸೆರಗನ್ನು ಸಾವರಿಸಿಕೊಳ್ಳುತ್ತ, ಆ ಬೈಲುಭಾವಣಿಯ ಒಂದು ಪಕ್ಕಕ್ಕೆ ಹೋಗಿ ಹುದುಗಿಕೊಂಡು ನಿಂತಳು. ಆ ಭಾವಣಿಯಾಗಲಿ, ಕೋಣೆಯಾಗಲಿ ಅಷ್ಟೊಂದು ದೊಡ್ಡವಾಗಿರಲಿಲ್ಲ. ಒಂದೇ

ಅಂಕಣದ ಆ ಕೋಣೆಗೆ ಹೊರಗಿನ ಮಗ್ಗಲು ಒಂದೇ ಒಂದು ಮೊಳ ಅಗಲಾದ ಅಷ್ಟೇ ಉದ್ದಳತೆಯ ಒಂದು ಬೈಲು ಛಾವಣಿಯಿತ್ತು. ಪಿರಾಜಿಯು ಮೇಲೇರಿ ಬಂದ ಕೂಡಲೆ ಶಹಾಜಿಯು ಆ ಛಾವಣಿಯ ಬಾಗಿಲಡೆದುರಿಗೇ ಹೋಗಿ ನಿಂತನು. ಅದರಿಂದ ಪಾವಟಿಗೆ ಇಳಿದು ಹೋಗಲಿಕ್ಕೆ ಹಂಸೆಗೆ ಸ್ಥಳವಿರಲಿಲ್ಲ. ಈಗ ಪಿರಾಜಿಯು ಮತ್ತೆ ತನ್ನ ಮೊದಲಿನ ಪ್ರಶ್ನೆಯನ್ನೇ ಮಾಡಿದನು.

ತನ್ನ ಪ್ರಶ್ನೆಗೆ ಯಾರಿಂದಲೂ ಏನೂ ಉತ್ತರ ದೊರೆಯದಾಗಲು, ಪಿರಾಜಿಯು:-"ಅಣ್ಣಾ, ನಾನು ಇವರಿಗೆ ಏನೆಂದು ಕರೆಯಬೇಕೆಂಬದನ್ನು ಹೇಳಲೇ ಇಲ್ಲವಲ್ಲ! ಅದನ್ನು ಹೇಳದ ಹೊರತು ನಾನು ನಿಮ್ಮಿಬ್ಬರನ್ನೂ ಕೆಳಗೆ ಹೋಗಗೊಡುವದಿಲ್ಲ" ಎಂದಂದು ಪಾವಟಿಗೆಯ ಬಾಗಿಲು ಕಟ್ಟಿ ನಿಂತು ಬಿಟ್ಟನು.

"ಇವರಿಗೇನೆಂದು ಕರೆಯಬೇಕೆನ್ನುವೆಯಾ? ನಾನು ಹೇಳಿದ ಹೆಸರು ಇವರಿಗೆ ರುಚಿಸುವದೋ-ಇಲ್ಲವೋ ಅದಾರು ಹೇಳಬೇಕು? ಆ ಬಗ್ಗೆ ನೀನು ಇವರನ್ನೇ ಕೇಳು" ಎಂದು ಶಹಾಜಿಯು ಮುಗುಳು ನಗೆಯಿಂದ ನುಡಿದನು.

"ಅಣ್ಣಾ, ನಿನ್ನ ಮಾತು ನಿಜವೇ!" ಎಂದಂದು ಹಂಸೆಯ ಕಡೆಗೆ ತಿರುಗಿ: "ನಿಮಗೆ ನಾನು ಏನೆಂದು ಕರೆಯಬೇಕೆಂಬದನ್ನು ಬೇಗನೆ ತಿಳಿಸಿರಿ," ಎಂದಂದನು.

"ಅವರನ್ನೇ ಕೇಳಿರಿ" ಎಂದು ಹೇಳಿ. ಹಂಸೆಯು ಶಹಾಜಿಯ ಕಡೆಗೆ ಓರೆನೋಟದಿಂದ ನೋಡಿದಳು

"ಅಣ್ಣಾನವರು ಹೇಳುವ ಹೆಸರು ನಿಮಗೆ ರುಚಿಸಬಹುದೇ? ಅದನ್ನು ಕೇಳಿ ನೀವು ಸಿಟ್ಟಿಗೆಟ್ಟಾಗಲಿಕ್ಕಿಲ್ಲವೆ?"

"ಛೇ-ಛೇ. ಸ್ವಲ್ಪವೂ ಸಿಟ್ಟಾಗಲಾರೆನು" ಎಂದು ಹಂಸೆಯು ಮೋದಭರದಿಂದ ನುಡಿಯಲು.

"ಹಾಗಾದರೆ ಅಣ್ಣಾ, ಇನ್ನೇಕೆ ತಡ? ಬೇಗನೆ ಹೇಳು, ನಾನು ಇವರನ್ನು ಯಾವ ಹೆಸರಿನಿಂದ ಕರೆಯಬೇಕೆಂಬದನ್ನು? ಹೂಂ, ಹೇಳು ಬೇಗನೆ" ಎಂದು ಆ ಮುದ್ದು ಪಿರಾಜಿ ಬಾಲಕನು ಅವರ ಮಧ್ಯದಲ್ಲಿ ನಿಂತು ಅವಸರ ಪಡಿಸಹತ್ತಿದನು.

"ಹೇಳಲ್ಯಾ?--ಹೇಳಲ್ಯಾ? ಸಿಟ್ಟಾಗಲಿಕ್ಕಿಲ್ಲವೆ?--ಸಿಟ್ಟಾಗಲಿಕ್ಕಿಲ್ಲವೆ?"

ಎಂದು ಮೂರು ಮೂರು ಸಾರೆ ಕೇಳಿ, ಬಳಿಕ ಶಹಾಜಿಯು:—"ಪಿರಾಜೀ, ನೀನು ಇವರನ್ನು 'ಅತ್ತಿಗೀ' ಎಂದು ಕರೆ" ಎಂದಂದನು.

ಕೂಡಲೆ ಮರ್ಕಟಚೇಷ್ಟೆಯ ಆ ಪಿರಾಜಿಯು "ಅತ್ತಿಗೀ-ಅತ್ತಿಗೀ; ನಮ್ಮ ಅಣ್ಣಾನ ಪ್ರೀತಿಯ ಅತ್ತಿಗೀ" ಎಂದೆನ್ನುತ್ತ ಅಲ್ಲಿಂದ ಓಡಿ ಹೋದನು. ಈಗ ಹಂಸೆಯು ಶಹಾಜಿಯ ಮುಂದೆ ಬಂದು ನಿಲ್ಲಲು, ಹೃದಯಮಾಲನ ಮಾಪ ಆ ಉಭಯತರೂ ಪರಸ್ಪರರನ್ನು ಬಿಗಿಯಾಗಿ ಅಪ್ಪಿಕೊಂಡರು.

---

## ಹುಚ್ಚನ ನಿಚ್ಚಳವಾದ ಮಾತು!

ಸಾರದದ ಶಹಾಜ ಪಾಟೀಲನು ಉಚ್ಚ ಮರಾಟಾ ಜಾತಿಯವನಿದ್ದದರಿಂದ, ಅವನಾದರೂ ಶ್ರೀ ಶಿವಛತ್ರಪತಿಯಂತೆ ಭವಿಷ್ಯತ್ಕಾಲದಲ್ಲಿ ಘನತೆಗೇರಿ "ತನ್ನ ಮಗಳ ಹೊಟ್ಟೆಯಲ್ಲಿ ರಾಜಪುತ್ರನ ಜನ್ಮವಾಗುವದೆ"ಂಬ ಭವಿಷ್ಯವು ನಿಜವಾಗಬಹುದೆಂದೆಣಿಸಿ, ಸಾವಿತ್ರೀಬಾಯಿಯು ಹಂಸೆಯನ್ನು ಶಹಾಜಿಗೆ ಕೊಟ್ಟು ಲಗ್ನ ಮಾಡಲಿಕ್ಕೆ ಸಮ್ಮತಿಸಿದಳು. ಶಹಾಜಿಯ ಆಬಚಿಯಂತೂ ಆ ಕಾರ್ಯಕ್ಕೆ ಈ ಮೊದಲೇ ಒಪ್ಪಿಕೊಂಡಿದ್ದಳು. ಅಂದಮೇಲೆ ಕೇಳುವದೇನು? ಕೂಡಲೆ ಆ ಹಿರಿಯರ ಆದೇಶದಂತೆ ಹಂಸಾ-ಶಹಾಜಿಯರ ಲಗ್ನದ ಸಿದ್ಧತೆಯು ಭರದಿಂದ ನಡೆಯಿತು. ದಿನದಿನಕ್ಕೆ ಸಾವಿತ್ರೀಬಾಯಿಯ ಚೇನೆಯು ಹೆಚ್ಚುತ್ತಿತು. ಬಹುದಿನಗಳ ಆಕೆಯ ಕಾಲನೋವು ಕಡಿಮೆಯಾಗಿ, ಅವಳು ಆ ಲಗ್ನದ ಮನೆಯಲ್ಲಿ ಅತ್ತಿಂದಿತ್ತ ಇತ್ತಿಂದತ್ತ ಸರಾಗವಾಗಿ ಓಡ್ಯಾಡ ಹತ್ತಿದಳು. ತನ್ನ ಮಗಳ ಲಗ್ನಕ್ಕೆ ತನ್ನ ಕುಲಗೇಡಿ ಗಂಡನು ಬಾರದಿರುವದರಿಂದ ಅವಳಿಗೆ ವಿಶೇಷ ಕೆಡಕೆನಿಸಲಿಲ್ಲ; ಆದರೆ ತನ್ನ ಏಕಮಾತ್ರ ಪುತ್ರನಾದ ಪದುಮಜಿಯು ಬಾರದ ಮೂಲಕ, ಅವಳಿಗೆ ಹೆಚ್ಚಾಗಿ ದುಃಖವೆನಿಸಿತು. ಸಾವಿತ್ರೀಬಾಯಿಯ ಆ ದುಃಖಿತ ಸ್ಥಿತಿಯನ್ನು ಕಂಡು, ಭಾಪೂರಾಯನು ಪದುಮಜಿಯನ್ನು ಹುಡುಕುವದಕ್ಕಾಗಿ ಮತ್ತೆ ಹೊರಡುವವನೇ; ಆದರೆ ಮನೆಯಲ್ಲಿ ಲಗ್ನದ ಸೌರಣೆಯು ಒತ್ತರದಿಂದ ನಡೆದ ಮೂಲಕ, 'ಈಗ ನೀನು ಇಲ್ಲಿಂದ ಹೋಗಕೂಡದೆ'ಂದು ಸಾವಿತ್ರೀಬಾಯಿಯೇ ಹೇಳಿದ್ದರಿಂದ, ಅವನು ನಿರುಪಾಯನಾದನು.

ಔರಂಗಜೇಬನ ಛಾವಣಿಯ ಕೊತವಾಲನು ಶಾಹೂರಾಜನ ಡೇರೆಯು

ಬಳಿಯಲ್ಲಿ ಸುತ್ತಾಡುತ್ತಿದ್ದ ಹುಚ್ಚ ಪದಮಾಜಿಯನ್ನು ವೇಷಧಾರಿಯಾದ ಶತ್ರುಗಳ ಗುಪ್ತಹೇರನೆಂದು ತಿಳಿದು, ಅವನನ್ನು ಸೆರೆಹಿಡಿದಿದ್ದನೆಂಬುದು ನಮ್ಮ ವಾಚಕರಿಗೆ ತಿಳಿದೇ ಇದೆ. ಕೊತವಾಲನ ಆ ಕೃತ್ಯವು ಜೋತ್ಯಾಜಿಗಾಗಲಿ, ಶಾಹೂರಾಜನಿಗಾಗಲಿ ರುಚಿಸಲಿಲ್ಲ; ಆದರೆ ಅವರು ಕೊತವಾಲನ ಆ ಸಂಶಯ ವಾದ ಕೃತ್ಯದ ಬಗ್ಗೆ ಬಹಿರಂಗದಲ್ಲಿ [illegible] ಮಾಡುವಂತಿರಲಿಲ್ಲ. ಬಾದಶಹನ ಬಳಿಗೆ ತನ್ನ ಮುತವರ್ಜಿಯನ್ನು ನಡಿಸಿ, ಪದಮಾಜಿಯನ್ನು ಕೊತವಾಲನ ಸೆರೆಯೊಳಗಿಂದ ಬಿಡಿಸಬೇಕೆಂದು ಶಾಹೂರಾಜನಿಗೆ ಆಗಾಗ್ಗೆ ಅನಿಸುತ್ತಿತ್ತು; ಆದರೆ ಔರಂಗಜೇಬನ ಸ್ವಭಾವವು ಬಹು ಸಂಶಯಗ್ರಸ್ತವಾದದ್ದು. ತಾನು ಹೇಳುವ ಮಾತಿನ ಅರ್ಥವನ್ನು ಅವನು ವಿಪರೀತವಾಗಿ ಮಾಡಿಕೊಂಡರೆ, ಆ ನೀಚ ಬಾದಶಹನು ಆ ಹುಚ್ಚ ಪದಮಾಜಿಯನ್ನು ನಿಜವಾಗಿಯೂ ಶತ್ರುಗಳ ಗುಪ್ತಚಾರನೆಂದು ತಿಳಿದು, ಅವನ ಪ್ರಾಣಕ್ಕೆ ಕೂಡ ಧಕ್ಕೆ ತರಬಹುದೆಂದೆಣಿಸಿ, ಶಾಹೂರಾಜನು ತನ್ನ [illegible] ಸುಮ್ಮನಿದ್ದನು. ಜೋತ್ಯಾಜಿಯು ಸಮಯ ಸಿಕ್ಕಾಗ [illegible] ಕೊತವಾಲನ [illegible] ಠಾನಡಿಗೆ ಹೋಗಿ, ಪದಮಾಜಿಯ ಸಮಾಚಾರವನ್ನು ತಿಳಿದು ಬಂದು ಶಾಹೂರಾಜನಿಗೆ ತಿಳಿಸುತ್ತಿದ್ದನು. ಚಾವಡಿಯೊಳಗಿನ ಪಹರೆ ಶಿಪಾಯಿಗಳು ಹುಚ್ಚನೆಂಬ ಒಂದೇ ಕಾರಣದಿಂದ ಪದಮಾಜಿಯನ್ನು ಬಹುಪರಿಯಾಗಿ ಗೋಳಾಡಿಸುತ್ತಿದ್ದರು. ಅವರು ಅವನಿಗೆ ಹೊಟ್ಟೆತುಂಬ ಕೂಳು ಕೂಡ ಕೊಡುತ್ತಿರಲಿಲ್ಲ! ತಮ್ಮ ವಿನೋದಕ್ಕಾಗಿ ಅವರು ಅವನಿಗೆ ನಾನಾ ಬಗೆಯಿಂದ [illegible] ಮಾಡಿ ಹಿಂಸಿಸುತ್ತಿದ್ದರು. ಪದಮಾಜಿಯ ಆ ಗೋಳನ್ನು ಕೇಳಿ ಕೇಳಿದಾಗ ಶಾಹೂರಾಜನ ಅಂತಃಕರಣಕ್ಕೆ ಬರೆಹಚ್ಚಿದಂತಾಗುತ್ತಿತ್ತು!

ಹೀಗಿರಲು, ಒಂದು ದಿನ ಔರಂಗಜೇಬನ ಕೇವಲ ಪ್ರೀತಿಯ ಸರದಾರನಾದ ಝುಲ್ಫಿಕಾರಖಾನನು ಶಾಹೂರಾಜನ ಭೆಟ್ಟಿಗೆಂದು ಅತನ ಡೇರೆಗೆ ಹೋದನು. ಉಭಯತರಲ್ಲಿ ಕುಶಲ ಪ್ರಶ್ನೆಗಳಾದ ಬಳಿಕ ಆ ಖಾನನು: — "ಶಾಹೂರಾಜರೇ, ನಿಮ್ಮನ್ನು ಸಿಂಹಗಡದ ಯುದ್ಧಕ್ಕೆ ಸಂಗಡ ಕರಕೊಂಡು ಹೋಗುವ ಬಗ್ಗೆ ಬಾದಶಹನು ನನಗೆ ಆಜ್ಞಾಪಿಸಿರುತ್ತಾನೆ. ನಿಮ್ಮನ್ನು ಬಂಧಮುಕ್ತಗೊಳಿಸಿ, ಪ್ರಸ್ತುತದ ರಣಸಂಗ್ರಾಮವನ್ನು ನಿಲ್ಲಿಸಬೇಕೆಂದು ಬಾದಶಹನ ಆಲೋಚನೆಯಿತ್ತು; ಮತ್ತು ಅದರಂತೆ ಎಲ್ಲ ಸಿದ್ಧತೆಯೂ ಆಗಿತ್ತು; ಆದರೆ ಆಯತ ಕಾಲಕ್ಕೆ ಮರಾಟರು ಮತ್ತಿಷ್ಟು ಏರಿ ಬಂದದ್ದರಿಂದ,

ಬಾದಶಹನ ಆಲೋಚನೆಯು ಮರಕಳಿಸಿತು. ಈಗ ಬಾದಶಹನ ಪ್ರಕೃತಿಯು ತೀರ ಕೆಟ್ಟಿದೆ; ಹಾಗು ಆತನಿಗೆ ಯುದ್ಧದ ವಿಷಯವೂ ಬೇಜಾರಗೊಂಡಿದೆ. ಆದ್ದರಿಂದ ಈ ಸಿಂಹಗಡದ ದಾಳಿಯಲ್ಲಿ ನಿಮ್ಮ ಸ್ವದಸ್ತೂರದ ಪತ್ರಗಳನ್ನು ಮರಾಠಾ ಸರದಾರರಿಗೆ ಕಳಿಸಿ, ಈ ಸಂಗ್ರಾಮವನ್ನು ನಿಲ್ಲಿಸಬೇಕೆಂದು ಬಾದಶಹನ ಅಂಬೋಣವಿದೆ. ಈ ಬಗ್ಗೆ ನಿಮ್ಮ ಅಭಿಪ್ರಾಯವೇನು?" ಎಂದು ಶಾಹೂರಾಜನನ್ನು ಕುರಿತು ಪ್ರಶ್ನೆಮಾಡಿದನು

"ಖಾನಸಾಹೇಬ, ನಾನು ಬಾದಶಹನ ಇಚ್ಛೆಗೆ ವಿರುದ್ಧವಾಗಿಲ್ಲ. ನನ್ನ ಸ್ವದಸ್ತೂರದ ಪತ್ರಗಳಿಂದ ಈ ಸಂಗ್ರಾಮವು ಶಾಂತವಾಗುತ್ತಿದ್ದರೆ, ಅದರಿಂದ ನನಗೂ ಸಂತೋಷವೇ ಸರಿ. ಬಾದಶಹರ ಪ್ರಕೃತಿಯು ತೀರ ಹೈರಾಣಾದಂತೆ ತೋರುತ್ತದೆ. ಇನ್ನು ಅವರು ವಿಶ್ರಾಂತಿಪಡೆಯುವದೇ ವಿಹಿತವಾಗಿದೆ" ಎಂದು ಶಾಹೂರಾಜನು ನುಡಿಯಲು,

"ಬಾದಶಹರದಂತೂ ಅದೇ ಆಲೋಚನೆಯಿದೆ. ಅವರು ಈ ಯುದ್ಧವನ್ನು ನಿಲ್ಲಿಸಿ, ಅಹಮ್ಮದನಗರದಲ್ಲಿ ಛಾವಣಿಮಾಡಿಕೊಂಡಿರಬೇಕೆನ್ನುತ್ತಾರೆ."

ಹೀಗೆ ಅವರೀರ್ವರಲ್ಲಿ ಆಗಿನ ಕಾಲದ ರಾಜಕಾರಣದ ಬಗ್ಗೆ ತುಸ ಸಂಭಾಷಣವಾದ ಬಳಿಕ, ಶಾಹೂರಾಜನು ಝುಲ್ಫೀಕಾರಖಾನನನ್ನುದ್ದೇಶಿಸಿ: "ಖಾನಸಾಹೇಬ, ನಾನು ನಿಮ್ಮ ಬಳಿಯಲ್ಲೊಂದು ವಿನಂತಿ ಮಾಡಬೇಕೆಂದಿರುತ್ತೇನೆ. ಹುಚ್ಚು ಹಿಡಿದ ಒಬ್ಬ ತರುಣ ಮರಾಟನು ಎಷ್ಟೋ ದಿನಗಳಿಂದ ಈ ಬಾದಶಾಹೀ ಛಾವಣಿಯಲ್ಲಿ ಅಡ್ಡಾಡುತ್ತಿದ್ದನು. ಕೆಲವು ವರ್ಷಗಳ ಹಿಂದೆ ಅವನ ತಂಗಿಯು ನಾಪತ್ತೆಯಾದಳು. ಅವಳು ಬಾದಶಹನ ಝನಾನಖಾನೆಯಲ್ಲಿಯೋ ತಂದಿರಿಸಲ್ಪಟ್ಟಿರುವಳೆಂದು ಆ ಹುಚ್ಚನ ತಿಳುವಳಿಕೆಯಾಗಿದೆ. ಅಂತೇ ಅವನು ಅವಳ ಶೋಧಕ್ಕಾಗಿ ಈ ಛಾವಣಿತುಂಬ ಅಡ್ಡಾಡುತ್ತಿದ್ದನು. ಛಾವಣಿಯೊಳಗಿನ ಜನರು ಅವನನ್ನು ಪರಿಪರಿಯಿಂದ ಪೀಡಿಸುತ್ತಿದ್ದರು. ಆ ಹುಚ್ಚನು ಮರಾಟರ ಕಡೆಯ ಗುಪ್ತಚಾರನೇ ಎಂದು ಕಲ್ಪಿಸಿ, ಛಾವಣಿಯ ಕೊತವಾಲನು ಅವನನ್ನು ಸೆರೆಯಲ್ಲಿರಿಸಿರುತ್ತಾನೆ. ಚಾವಡಿಯೊಳಗಿನ ಶಿಪಾಯಿಗಳು ಅವನನ್ನು ಬಹು ಪರಿಯಾಗಿ ಪೀಡಿಸುತ್ತಿರುತ್ತಾರೆಂದು ನನಗೆ ತಿಳಿದು ಬಂದಿದೆ...."

"ಆ ಶಿಪಾಯಿಗಳ ಪಾರುಪತ್ಯವನ್ನು ಚೆನ್ನಾಗಿ ಮಾಡಿಸುವೆನು. ನಾನು ಈಗ ಆ ಕೊತವಾಲ ಚಾವಡಿಗೆ ಹೋಗಿ, ಕೊತವಾಲನಿಗೂ ಆ ಬಗ್ಗೆ ಕಿವಿ

ಹಿಂಡಿ ಹೇಳುತ್ತೇನೆ''

"ಆದರೆ ಖಾನಸಾಹೇಬ, ಆತನು ಕೇವಲ ಹುಚ್ಚನು; ಹೇರನಲ್ಲೆಂಬ ಬಗ್ಗೆ ನನ್ನ ಮಾತಿನಲ್ಲಿ ವಿಶ್ವಾಸವಿಟ್ಟು ಅವನನ್ನು ಬಂಧಮುಕ್ತ ಮಾಡಿಸಬಲ್ಲಿರಾ?''

"ಶಾಹೂರಾಜರೇ, ಆ ಬಗ್ಗೆ ನೀವು ನನಗೆ ಇಷ್ಟೊಂದು ಹೇಳಿಕೊಳ್ಳುವ ಕಾರಣವಿಲ್ಲ. ತಮ್ಮ ಆಜ್ಞೆಯು ಬಾದಶಹನ ಆಜ್ಞೆಗೆ ಸಮಾನವೆಂದೆಂದೇ ನಾನು ಭಾವಿಸುತ್ತೇನೆ. ಏನಾದರೂ ತಾವು ಛತ್ರಪತಿ ಮಹಾರಾಜರು! ತಮ್ಮ ಮಾತನ್ನು ಅಸತ್ಯವೆಂದು ಅದಾರು ತಿಳಿದಾರು? ಕೊತವಾಲನಿಗೆ ಹೇಳಿ, ನಾನು ಈಗಲೇ ಆತನನ್ನು ಬಂಧಮುಕ್ತ ಮಾಡಿಸುತ್ತೇನೆ.''

"ಖಾನಸಾಹೇಬ, ತಾವು ಇಷ್ಟು ಕೆಲಸ ಮಾಡಿದರೆ ನನಗೆ ಪರಮಾನಂದವಾದೀತು. ಆ ಬಡ ಹುಚ್ಚನು ನಮ್ಮ ಪರಿವಾರದಲ್ಲಿದ್ದು ಉಂಡುಟ್ಟು ಉಪಜೀವಿಸಬಹುದು.''

ಶಾಹೂರಾಜನು ಹೀಗೆಂದು ಹೇಳಲು, ಝುಲ್ಫೀಕಾರಖಾನನು ಅದಕ್ಕೆ ಸಮ್ಮತಿಸಿ ಹೊರಟು ಹೋದನು. ಆಗ ಬಾದಶಹನು ಬಹಳ ನಿಶ್ಶಕ್ತನಾಗಿದ್ದನು. ಬಾದಶಹನು ಇನ್ನು ಬದುಕುವದಿಲ್ಲೆಂದು ತಿಳಿದು, ಆತನ ಕುಟುಂಬದವರೆಲ್ಲ ದಾರುಣವಾದ ಚಿಂತೆಗೊಳಗಾಗಿದ್ದರು. ಆಗಿನ ಕಾಲದ ಸ್ಥಿತಿಯನ್ನು 'ಮನೂಚಿ' ಎಂಬ ಪಾಶ್ಚಾತ್ಯ ಪ್ರವಾಸಿಕನು ಬಹು ಚೆನ್ನಾಗಿ ವರ್ಣಿಸಿರುವನು: "ಬಾದಶಹನು ಹಾಸಿಗೆ ಹಿಡಿದು ಬಿದ್ದಾಗ ಆತನ ಬೇಗಮೆಯರೂ, ಹೆಣ್ಣು ಮಕ್ಕಳೂ ಆತನಿಗೆ ವಿನಂತಿ ಮಾಡಿಕೊಂಡರೇನಂದರೆ 'ರಾಜಧಾನಿಯನ್ನು ಬಿಟ್ಟು ೩೦-೩೨ ವರ್ಷಗಳಾದವು. ಈ ದೀರ್ಘಕಾಲವನ್ನು ನಾನಾ ದೇಶದ ಅಡವಿ-ಕಾಡುಗಳನ್ನು ತಿರುಗುತ್ತಲೂ, ಅನೇಕ ಸಂಕಟಗಳನ್ನು ಅನುಭೋಗಿಸುತ್ತಲೂ ಕಳೆದು, ಚಿಕ್ಕವರಾಗಿದ್ದ ನಾವು ಮುಪ್ಪಿನ ಮುದುಕೆಯರಾದೆವು. ಇನ್ನು ನಮ್ಮನ್ನು ಆಗ್ರಾಕ್ಕೆ ಕಳಿಸಿ ಕೊಡಿರಿ. ಅಂದರೆ ನಾವು ಶತ್ರುಗಳ ಕೈವಶರಾಗುವ ಅಂಜಿಕೆಯುಳಿಯಲಾರದು.' ಆಗ ಬಾದಶಹನು: 'ಈ ಬಗ್ಗೆ ನೀವು ಕೊಂಚವೂ ಅಂಜಬೇಡಿರಿ. ನಿಮ್ಮ ಸಂರಕ್ಷಣದ ವ್ಯವಸ್ಥೆಯನ್ನು ಎರಡು ವರ್ಷಗಳ ಮುಂಚೆಯೇ ನಾನು ಮಾಡಿಟ್ಟಿರುತ್ತೇನೆ.''

ಹೀಗೆ ಬಾದಶಹನು ಎಲ್ಲರಿಗೂ ಧೈರ್ಯ ಕೊಡುತ್ತಿದ್ದರೂ, ಆಗಿನ ಸ್ಥಿತಿಯು ಎಲ್ಲ ಕಡೆಯಿಂದಲೂ ವಿಪರೀತವಾಗಿತ್ತು! ದಂಡಾಳುಗಳ ಸಂಬಳವು

ಬಾಕಿ ನಿಂತದ್ದರಿಂದ, ಅವರು ಸಣ್ಣ-ಪುಟ್ಟ ಬಂಡುಗಳನ್ನೆಬ್ಬಿಸಿಸತೊಡಗಿದರು. ದಂಡಾಳುಗಳಿಗೆ ತಿನ್ನಲಿಕ್ಕೆ ನಾಕಷ್ಟು ಕೂಳು ಕೂಡ ಸಿಗುತ್ತಿರಲಿಲ್ಲ. ಅಂದ ಬಳಿಕ ಅವರಾದರೂ ಏನು ಮಾಡಬೇಕು? ಅತ್ತ ಮರಾಟಾ ಸರದಾರರು ಸುತ್ತ ಕಡೆಯಿಂದಲೂ ಬಾದಶಹನಿಗೆ ತೊಂದರೆ ಕೊಡುತ್ತಿದ್ದರು. ಸುರತ, ಬರ್ಹಾಣಪೂರ, ವರ್ಹಾಡ, ಮಾಳವಾ ಮುಂತಾದ ಬಾದಶಾಹೀ ಸುಭೆಗಳೊಳಗಿಂದ ದೊಡ್ಡ ದೊಡ್ಡ ರಕಮುಗಳನ್ನು ಅವರು ವಸೂಲ ಮಾಡಿಕೊಂಡು ನಡೆಯುತ್ತಿದ್ದರು. ಅವರಿಗೆ ಬಾದಶಹನ ಅಳವು ಚೆನ್ನಾಗಿ ತಿಳಿದಿತ್ತು. ಅದರಿಂದಲೇ ಅವರು ಬಾದಶಹನಿಗೆ ಸ್ವಲ್ಪವೂ ಹದರದೆ, ತಮ್ಮ ಗನೀಮೀ ಕಾವಾದ' ಕಾರ್ಯಕವನ್ನು ಎಡೆಬಿಡದೆ ನಡಿಸಿದ್ದರು.

ಖಾನನಿಗೆ ಹೇಳತಕ್ಕದ್ದನ್ನು ಹೇಳಿ ಶಾಹೂರಾಜನು ತನ್ನ ಡೇರೆಯಲ್ಲಿ ವಿಚಾರಮಗ್ನನಾಗಿ ಕುಳಿತಿದ್ದನು. ತನ್ನ ಸ್ವಂತದ ಬಿಡುಗಡೆಯ ವಿಷಯವಾಗಿ ಆತನು ಎಂದೂ ನಿರಾಶೆಗೊಂಡಿರಲಿಲ್ಲ. ಇಂದಿಲ್ಲ ನಾಳೆ ತನ್ನ ಬಿಡುಗಡೆಯು ಆಗಿಯೇ ಆಗುವದೆಂದು ಆತನ ಮನದಟ್ಟಾಗಿ ಹೋಗಿತ್ತು. ಆತನು ಬಾದಶಹನ ಎಲ್ಲ ಅಮೀರ-ಉಮರಾವರನ್ನೂ ಮಾಂಡಲಿಕರನ್ನೂ ಪ್ರಸನ್ನೀಕರಿಸಿಕೊಂಡಿದ್ದನು. ಅದರಿಂದ ಆತನು ಬಾದಶಹನ ಸೆರೆಯಾಳಾಗಿದ್ದರೂ, ಅವನನ್ನು ಎಲ್ಲರೂ ಚೆನ್ನಾಗಿ ನನ್ಮಾನಿಸುತ್ತಿದ್ದರು. ಝುಲ್ಫೀಕಾರ ಖಾನನಂಥ ಬಲಾಢ್ಯ ಹಾಗು ಔರಂಗಜೇಬನ ವಿಕಸಿಷ್ಟ ಸರದಾರನು ಕೂಡ ಶಾಹೂರಾಜನಲ್ಲಿ ನಮ್ರನಾಗಿಯೇ ನಡೆಯುತ್ತಿದ್ದನು!

ಖಾನನು ಚಾವಡಿಗೆ ಹೋಗಿ ಕೊತವಾಲನಿಗೆ ಚೆನ್ನಾಗಿ ಸಿಟ್ಟುಮಾಡಿ, ಆ ಹುಚ್ಚ ಪದಮಜಿಯನ್ನು ಬಂಧಮುಕ್ತಗೊಳಿಸಿದನಲ್ಲದೆ, ಆ ಹಾಜೀಖಾನ ಕೊತವಾಲನನ್ನು ಶಾಹೂರಾಜರ ಕಡೆಗೆ ಕಳಿಸಿ, ನಡೆದ ಪ್ರಕಾರದ ಬಗ್ಗೆ ಶಾಹೂರಾಜರಲ್ಲಿ ಕ್ಷಮೆಯಾಚಿಸ ಹಚ್ಚಿದನು. ವರಿಷ್ಠರ ಅಪ್ಪಣೆಯಾದ ಬಳಿಕ ಪಾಪ! ಆ ಹಾಜೀಖಾನನು ಮಾಡುವದೇನು? ಅವನು ಪದಮಜಿಯನ್ನು ಕರಕೊಂಡು ಶಾಹೂರಾಜರ ಡೇರೆಗೆ ಬಂದನು; ಹಾಗೂ ಅವರಿಗೆ ಕುರ್ನಿಸಾತ್ ಮಾಡಿ--"ಮಹಾರಾಜರೇ, ನಾನು ಈ ಹುಚ್ಚನನ್ನು ಸೆರೆಸೆರೆಯಲ್ಲಿರಿಸಿರುತ್ತೇನೆಂದು ಯಾರೋ ತಮ್ಮೆದುರಿಗೆ ಸುಳ್ಳು ಹೇಳಿದಂತೆ ಕಾಣುತ್ತದೆ. ಛಾವಣಿಯೊಳಗಿನ ಜನರು ಈತನನ್ನು ನಿಷ್ಕಾರಣವಾಗಿ ಪೀಡಿಸುತ್ತಿದ್ದರಿಂದ, ನಾನು ಇವನಿಗೆ ಆ ಪೀಡೆಯಾಗಬಾರದೆಂದು ಇವನನ್ನು

ಬೇಕಂತ ನನ್ನ ಚಾವಡಿಯಲ್ಲಿಟ್ಟು, ಈತನ ಸಂಗೋಪನ ನಡಿಸಿದ್ದೆನು" ಎಂದು ಹೇಳಿ, 'ಹೊತ್ತು ತಿರುಗಿದಂತೆ ಕೊಡೆ ಹಿಡಿಯುವ' ತನ್ನ ಧೋರಣಾ ದಂತೆ ನಡೆದು, ತನ್ನ ಅಪರಾಧಕ್ಕಾಗಿ ಕ್ಷಮೆ ಬೇಡಿಕೊಂಡನು.

ಕೊತವಾಲನ ಆ ಮಾತನ್ನು ಕೇಳಿ, ಪದಮಜಿಯ ಹುಚ್ಚು ತಾಳ ದಪ್ಪಿತು! "ಮಹಾರಾಜ, ಈ ಮುಸುಂಡಿಯು ನನ್ನನ್ನು ಸೆರೆ ಹಿಡಿಯುವ ನಲ್ಲವೆ? ನಮ್ಮ ಜಾಧವರಾಯರು ಬರಲಿ; ಅಂದರೆ ತೋರಿಸುವೆನು ಇವನಿಗೆ ನನ್ನ ಕೈಯ! ಎಲಾ, ಮುಸುಲಾ, ನಾನು ಈಗಲೇ ನಿನ್ನನ್ನು ಸೆರೆ ಹಿಡಿಯು ವೆನು; ನಿಮ್ಮಪ್ಪನನ್ನು ರಸಾತಳಕ್ಕೆ ಮೆಟ್ಟುವೆನು; ನಿಮ್ಮ ಆ ಹೇಡಿ ಬಾದ ಶಹನನ್ನು ಕೂಡ ಸೆರೆ ಹಿಡಿದು ಜಾಧವರಾಯರ ಬಳಿಗೆ ದರದರವೆಂದು ಎಳೆಮೊಯ್ಯುವೆನು, ತಿಳಿಯಿತೇ? ಈ ಪದಮಜಿಯನ್ನು ಯಾರೆಂದು ತಿಳಿ ದಿರುವಿ? ಯಾಕೆ?" ಎಂದು ಆವೇಶಭರದಿಂದ ಒದರಾಡಹತ್ತಿದನು.

"ಸುಮ್ಮನಿರು. ಹಾಗೆ ಮಾತಾಡಬಾರದು" ಎಂದು ಶಾಹೂರಾಜನು ಕೈಸನ್ನೆಯಿಂದ ಅವನಿಗೆ ತಿಳಿಹೇಳಲು,

"ಮಹಾರಾಜ, ಮಾತಾಡಬೇಡೆನ್ನುವಿರಾ? ತಮ್ಮ ಆಜ್ಞೆ; ಆದರೆ ಈ ಧೀರ ಪದಮಜಿಯು ಪ್ರತ್ಯಕ್ಷ ಬಾದಶಹನನ್ನೂ ಕೂಡ ಸೆರೆ ಹಿಡಿಯಬಲ್ಲ ನೆಂದು ತಿಳಿಯಿರಿ."

"ಎಲಾ ಹುಚ್ಚಾ, ನೀನು ಯಾರಿಗೆ ಹಾಗೂ ಯಾರೆದುರಿಗೆ ಏನೆಂದು ನುಡಿಯುತ್ತಿರುವೆಯೆಂಬದರ ಅರಿವಾದರೂ ನಿನಗಿದೆಯೆ? ಇವರು ನಿಮ್ಮ ಶಾಹೂ ಮಹಾರಾಜರು. ಮುಚ್ಚು ಬಾಯಿ!" ಎಂದಂದು, ಆ ಕೊತವಾ ಲನು ಪದಮಜಿಯನ್ನು ಸುಮ್ಮನಿರಿಸ ಹೋದನು.

"ಏನಂದೀ? ಇವರು ನಮ್ಮ ಛತ್ರಪತಿಗಳೇ?" ಎಂದು ಆಶ್ಚರ್ಯಭರ ದಿಂದ ನುಡಿಯುತ್ತ, ಅವನು ಒಮ್ಮೆ ತನ್ನ ತಲೆಯನ್ನು ವೇಗದಿಂದ ಕೊಡ ವಿದನು. ಆ ಕೂಡಲೆ ಆತನ ತಲೆಯೊಳಗಿನ ಭ್ರಮಣವೆಲ್ಲ ಕಟ್ಟಾಯಿತು! ಅವನ ಹುಚ್ಚು ನಿಚ್ಚಳವಾಯಿತು!! ಆತನ ಮೋರೆಯ ಮೇಲಿನ ಹುಚ್ಚಿನ ಕಳೆಯು ಒಮ್ಮೆಲೆ ಮಾಯವಾಯಿತು!!! ಕೂಡಲೆ ಆ ಪದಮಜಿಯು ಒಳ್ಳೇ ಆದರದಿಂದಲೂ ಲೀನತೆಯಿಂದಲೂ ಶಾಹೂರಾಜರ ಚರಣಗಳಿಗೆರಗಿ:—

"ಮಹಾರಾಜ, ಅಪ್ಪಣೆ ಕೊಡಿರಿ; ಕೊಡಿರಿ ಅಪ್ಪಣೆಯನ್ನು! ಈ ಸೇವಕನು ತಮ್ಮ ಹುಕುಮಿನ ಅಮಲು ನಡಿಸಲಿಕ್ಕೆ ಸಿದ್ಧನಿರುತ್ತಾನೆ. ಈ ಹಾಜೀ-

ಹಾಜೀ ಮಾಡುವ ಹಾಜೀಖಾನ ಕೊತವಾಲನನ್ನು ಸೆರೆಹಿಡಿಯುವ ಅಪ್ಪಣೆ ಕೊಡಿರಿ. ಈ ಖಾನನನ್ನು ಈಗಲೆ ಚಂಡು ತಿರುವಿ ನಿಮ್ಮ ಚರಣಗಳ ಮೇಲೆ ಕೆಡವುತ್ತೇನೆ" ಎಂದಂದವನೇ, ಪದಮುಜಿಯು ನಿಜವಾಗಿಯೂ ಆ ಕೊತವಾಲನ ಗೋಣು ತಿರುವಿ, ಶಾಹೂರಾಜನ ಪಾದದ ಕೆಳಗೆ ಹತ್ತಿಕ್ಕಿದನು! ಅಸಾವಧನಾಗಿದ್ದರಿಂದ ಅಲ್ಲದೆ ಪದಮುಜಿಯು ಒಳ್ಳೇ ಕಸುವಿನಿಂದ ಹತ್ತಿಕ್ಕಿದ್ದರಿಂದ ಹಾಜೀಖಾನನ ಹಣೆಯು ನೆಲದ ಮೇಲಿನ ಕಲ್ಲುಹಾಸಿಗೆಗೆ ಪಟ್ಟೆಂದು ಅಪ್ಪಳಿಸಿತು! ಹುಚ್ಚ ಪದಮುಜಿಯ ಆ ಅನನ್ವಿತ ಕೃತ್ಯವನ್ನು ನೋಡಿ ಶಾಹೂರಾಜನಿಗೆ ಕೂಡ ನಗೆ ಬಂದಿತು. ಕೊತವಾಲನು ಆತನ ಕೈಯಿಂದ ತಪ್ಪಿಸಿಕೊಂಡು, ಬಾಡಿದ ಮುಖದಿಂದ ಒತ್ತಟ್ಟಿಗೆ ಸರಿದು ನಿಂತುಕೊಂಡನು. ಆಗ ಪದಮುಜಿಯು ಮತ್ತೆ ಒಳ್ಳೇ ಆವೇಶದಿಂದ:—"ಮಹಾರಾಜ, ಈ ಕ್ಷುದ್ರ ಕೊತವಾಲನ ಯೋಗ್ಯತೆಯೇನು? ತಮ್ಮ ಅಪ್ಪಣೆಯಾಗಲಿ. ಖುದ್ದ ಬಾದಶಹನನ್ನು ಕೂಡ ಹೀಗೆಯೇ ತಮ್ಮ ಚರಣಾಕ್ರಾಂತನಾಗುವಂತೆ ಮಾಡುವೆನು. ನಾನು ಅಂಥಿಂಥವನಲ್ಲ. ಜಾಧವರಾಯರ ದಂಡಾಳಾಗಿರುತ್ತೇನೆ. ವೈರಿಗಳನ್ನು ಕೊಂದೇನಲ್ಲದೆ, ಸತ್ತರೂ ವೈರಿಗಳಿಗಂಜಲಾರೆನು; ಆದರೆ ಮಹಾರಾಜ, ನೀವು ಯಾರು? ನೀವೇ ನಮ್ಮ ಶಾಹೂ ಮಹಾರಾಜರೇನು? ಛೀ-ಛೀ; ನೀವು ಶಾಹೂಛತ್ರಪತಿಗಳಲ್ಲ. ಅಲ್ಲ-ಅಲ್ಲ, ಸರ್ವಥಾ ಅಲ್ಲ! ನಿಮ್ಮ ಛತ್ರವೆಲ್ಲಿದೆ? ನಿಮಗೆ ಛತ್ರವೇ ಇಲ್ಲದ ಬಳಿಕ, ನೀವು ಮಹಾರಾಜರೂ ಅಲ್ಲ; ಛತ್ರಪತಿಗಳೂ ಅಲ್ಲ. ನೀವೂ ಒಬ್ಬ ಸೆರೆಯಾಳಾಗಿರುತ್ತೀರಿ. ನೀವು ಬಾದಶಹನ ಒಬ್ಬ ಸಾಮಾನ್ಯ ಸೆರೆಯಾಳು. ನೀಚಾ, ಬಾದಶಹಾ, ನಿನ್ನ ಎಲಬುಗಳನ್ನು ಪುಡಿಪುಡಿ ಮಾಡಿ, ನಿನ್ನನ್ನು ಕೊಂದಾಗಲೇ ನಮ್ಮ ಮರಾಟರ ಸಮಾಧಾನವಾದೀತು!"

'ಜೋತ್ಯಾಜೀ' ಎಂದು ಶಾಹೂರಾಜನು ಕೂಗುತ್ತಲೇ, ಮುಜುರೆ ಮಾಡುತ್ತ ಜೋತ್ಯಾಜಿಯು ಅಲ್ಲಿಗೆ ಬಂದನು. ಕೂಡಲೆ ಶಾಹುವು ಪದಮುಜಿಯನ್ನು ಬೇರೆ ಕಡೆಗೆ ಕರಕೊಂಡು ಹೋಗಬೇಕೆಂದು ಆತನಿಗೆ ತಿಳಿಸಿದನಲ್ಲದೆ:—"ಕೊತವಾಲಸಾಹೇಬ, ನೀವು ನಿಮ್ಮ ಕೆಲಸಕ್ಕೆ ಹೊರಡಿರಿ. ಈತನು ಕೇವಲ ಹುಚ್ಚನು! ಈ ಹುಚ್ಚನ ಮಾತು-ಕಥೆಗಳ ಕಡೆಗೆ ಲಕ್ಷ್ಯಗೊಡಬೇಡಿರಿ" ಎಂದು ಕೊತವಾಲನಿಗೆ ಹೇಳಿ, ಅವನನ್ನು ಸಮಾಧಾನಪಡಿಸಿ ಕಳಿಸಿದನು. ಜೋತ್ಯಾಜಿಯು ಪದಮುಜಿಯ ಕೈಹಿಡಿದು ಅವ

ನನ್ನು ಒಳಗೆ ಕರೆದೊಯ್ದು, ಎಲ್ಲಕ್ಕೂ ಮೊದಲು ಅವನ ಮೈಗೆ ಎಣ್ಣೆ ಹಚ್ಚಿಸಿ ಸ್ನಾನಕ್ಕೆ ಹಾಕಿಸಿದನು. ಸೆರೆಯಲ್ಲಿರುವಾಗ ನೀಚ ಮುಸಲ್ಮಾನ ಶಿಪಾಯಿಗಳು ತಮ್ಮ ಹಿಂಸ್ರ ವಿನೋದಕ್ಕಾಗಿ ಅವನ ಮೈಕೈಗಳಿಗೆ ಬರ್ಚಿಯ ಇಲ್ಲವೆ ಬೇರೆ ಆಯುಧಗಳ ಹದನಾದ ತುದಿಗಳನ್ನು ಚುಚ್ಚಿ ಚುಚ್ಚಿ, ಮೈ ತುಂಬ ಗಾಯಗೊಳಿಸಿದ್ದರು! ಜೋತ್ಯಾಜಿಯ ಆಜ್ಞೆಯ ಮೇರೆಗೆ ಸೇವಕರು ಪದಮುಜಿಯ ಮೈಕೈಗಳಿಗೆ ಚೆನ್ನಾಗಿ ಎಣ್ಣೆ ಹಚ್ಚಿ ಹಚ್ಚಿ ತಿಕ್ಕಿ, ಬಿಸಿಬಿಸಿ ನೀರಿನಿಂದ ಸ್ನಾನಕ್ಕೆ ಹಾಕಿದರು; ಹಾಗು ಆತನ ಮೊದಲಿನ ಹರಕು ಚಿಂದಿಗಳನ್ನೆಲ್ಲ ಕಿತ್ತೊಗೆದು, ಬೇರೆ ಹೊಸ ಬಟ್ಟೆಗಳನ್ನು ಅವನಿಗೆ ತೊಡಿಸಿದರು. ಬಳಿಕ ಅವನಿಗೆ ಹೊಟ್ಟೆತುಂಬ ಸವಿಯೂಟವನ್ನು ಉಣಿಸಿದರು. ಇಷ್ಟೆಲ್ಲ ವ್ಯವಸ್ಥೆಯು ಶಾಂತರೀತಿಯಿಂದ ನಡೆಯಿತು. ನಂತರ ಜೋತ್ಯಾಜಿಯು ಪದಮುಜಿಯನ್ನು ಶಾಹೂರಾಜರ ಬಳಿಗೆ ಕರೆತಂದನು. ಜೋತ್ಯಾಜಿಯು ಶಾಹೂರಾಜರಿಗೆ ಮುಜುರೆ ಮಾಡಲು, ಪದಮುಜಿಯೂ ಶಾಹೂರಾಜರಿಗೆ ಮುಜುರೆ ಮಾಡಿದನು. ಆಗ ಜೋತ್ಯಾಜಿಯು:- "ಮಹಾರಾಜ, ಈಗ ಈ ವೀರನ ಮುಖದ ಮೇಲೆ ಹೇಗೆ ಕಾಂತಿಬಂದಿದೆ ನೋಡಿರಿ! ಹುಚ್ಚುಹಿಡಿದಂದಿನಿಂದ ಈತನ ಹೊಟ್ಟೆ-ಬಟ್ಟೆಗಳ ಕಡೆಗೆ ಅದಾರು ನೋಡಿರುವರು? ತಮ್ಮಾ, ಮಹಾರಾಜರಿಗೆ ನಿನ್ನ ಹೆಸರನ್ನು ಹೇಳು ನೋಡುವಾ" ಎಂದೆಂದು ಪದಮುಜಿಯ ಬೆನ್ನ ಮೇಲೆ ಅಂತಃಕರಣಪೂರ್ವಕವಾಗಿ ಕೈಯಾಡಿಸಲು,

"ಮಹಾರಾಜ, ನನಗೆ 'ಪದಮುಜ' ಎಂದೆನ್ನುತ್ತಾರೆ" ಎಂದು ಅವನು ನುಡಿದನು.

"ನಿನ್ನ ಮನೆಯಲ್ಲಿ ಯಾರ್ಯಾರಿರುವರು? ಅವರು ಎಲ್ಲೆಲ್ಲಿ ವಾಸಿತ್ತಾರೆ? ನಿನ್ನ ಊರು ಯಾವದು?"

"ನನ್ನ ಊರೇ? ನನ್ನ ಜನರೆನ್ನುವಿರ್ಯಾ ನನ್ನವರೆಂದರೆ, ನೀವೇ! ಈ ಜೋತ್ಯಾಜಿ ಹಾಗು ನೀವು ಇವರಷ್ಟೇ ನನ್ನವರು. ನಾನು ಮಹಾರಾಜರವನು; ಮಹಾರಾಜರು ನನ್ನವರು. ಬೇರೆ ಜನರು ನನಗೆಲ್ಲಿಂದ ಬರಬೇಕು?"

"ನಿನಗೆ 'ಹಂಸೆ' ಎಂಬ ಹೆಸರಿನ ಒಬ್ಬ ತಂಗಿಯಿರುವಳಲ್ಲವೆ?"

ಹಂಸೆಯ ಹೆಸರು ಕಿವಿಗೆ ಬಿದ್ದಕೂಡಲೆ ಪದಮುಜಿಯ ಕಿವಿಗಳು ಒಮ್ಮೆಲೆ ನೆಟ್ಟಗಾದವು. ಕೂಡಲೆ ಅವನು ತನ್ನ ತಲೆಯನ್ನು ಎರಡೂ ಕೈಗಳಿಂದ ಗಟ್ಟಿಯಾಗಿ ಹಿಡಕೊಂಡನು. ಕಳೆದ ಎಷ್ಟೋ ತಿಂಗಳುಗಳ ನಂತರ

ಇಂದು ಆತನಿಗೆ ಹಂಸೆಯ ನೆನಪಾಯಿತು. ಆಗ ಅವನು ಒಮ್ಮೆಲೆ ಅಳಹತ್ತಿದನು; ಹಾಗು ಅನ್ನಹತ್ತಲೆ:"ತಂಗೀ, ಹಂಸಾ, ಈಗ ನೀನೆಲ್ಲಿರುವೆಯವ್ವಾ? ನನ್ನ ತಂಗಿಯು ಬಾದಶಹನ ಜನಾನಖಾನೆಯಲ್ಲಿರುವಳಲ್ಲವೇ? ಎಲ-ಎಲಾ! ಚಾಂಡಾಲಾ, ಕುಟುಂಬ ಘಾತಕಿಯೇ, ಅಪ್ಪಾ, ಸೂರ್ಯಾಜೀ, ನೀನಾಗಿ ನಿನ್ನ ಮಗಳನ್ನು ಬಾದಶಹನ ಜನಾನಖಾನೆಗೆ ಸೇರಿಸಿದೆಯಲ್ಲವೆ? ನೀಚಾ, ನೀನು ನಿನ್ನೀ ಅಘೋರಪಾತಕವನ್ನು ಭೋಗಿಸುವದಾದರೂ ಎಲ್ಲಿ? ಹಂಸಾ, ತಂಗೀ, ನೀನಿರುವದೆಲ್ಲಿ? ಅವ್ವಾ, ನೀನು ನನ್ನ ಹಾದಿ ಕಾಯುತ್ತಿರುವೆಯಲ್ಲವೆ?'' ಎಂದು ಶೋಕಿಸಹತ್ತಿದನು. ಆಗ ಜೋತ್ಯಾಜಿಯು ಅವನನ್ನು ನಾನಾಬಗೆಯಿಂದ ಸಾಂತ್ವನಗೊಳಿಸಿದನು.

ಶಾಹುವು ಪದಮಜಿಯನ್ನು ಕುರಿತು:—"ಪದಮಜೀ, ನಿನ್ನ ಹಂಸೆಯು ಎಲ್ಲಿರುವಳು? ನಾನು ಅವಳನ್ನು ಕೂಡಲೆ ಬಂಧಮುಕ್ತಗೊಳಿಸುವೆನು."

''ನಮ್ಮ ಹಂಸೆಯು ಬಾದಶಹನ ಸೆರೆಯಲ್ಲಿರುವಳು. ನಮ್ಮ ಮಹಾರಾಜರೂ ಬಾದಶಹನ ಸೆರೆಯಲ್ಲಿರುವರು. ಮಹಾರಾಜರೇ, ಸೆರೆಯಾಳಾದ ಬಳಿಕ, ಅವರು ಬೇರೆಯವರನ್ನು ಬಂಧಮುಕ್ತಗೊಳಿಸುವ ಸಂಭವವಾದರೂ ಉಂಟೇ?''

ಇಷ್ಟರಲ್ಲಿ 'ಬಾದಶಹನ ಬೇನೆಯು ಹೆಚ್ಚಿದೆಯೆಂದೂ, ಆತನು ತಮ್ಮನ್ನು ಕಾಣಬಯಸುವನಾದ್ದರಿಂದ ತಾವು ಬೇಗನೆ ಅಲ್ಲಿಗೆ ಬರಬೇಕೆಂದೂ ಶಾಹೂರಾಜನಿಗೆ ಬಾದಶಹನಿಂದ ಕರೆಯು ಬಂದಿತು. ಕೂಡಲೆ ಶಾಹೂರಾಜನು ಹೊರಡಲನುವಾಗಲು, ಹುಚ್ಚ ಪದಮಜಿಯು ಅವನನ್ನು ತಡೆದು:—"ಮಹಾರಾಜ, ತಾವು ಆ ನೀಚನ ಬಳಿಗೇತಕ್ಕೆ ಹೋಗುವಿರಿ? ನಡೆಯಿರಿ, ನಮ್ಮ ಸ್ವರಾಜ್ಯಕ್ಕೆ ನೆಟ್ಟಗೆ! ಅಲ್ಲಿ ನಮ್ಮವರೆಲ್ಲರೂ ತಮ್ಮ ಮಾರ್ಗ ಪ್ರತೀಕ್ಷಿಸುತ್ತಿರುವರು. ಬಾದಶಹನು ಇನ್ನು ಬದುಕಲಾರನು. ಅವನು ಇಂದೇ ಖಾತ್ರಿಯಿಂದ ಸಾಯುವನು! ನಮ್ಮ ಭವಾನೀ ಮಾತೆಯು ಇಂದು ಅವನನ್ನು ಕೊಲ್ಲುವಳು! ಈ ಹುಚ್ಚ ಮರಾಟನ ಮಾತು ಎಂದಿಗೂ ಸುಳ್ಳಾಗಲಾರದು....!" ಎಂದು ನುಡಿಯುತ್ತಿರಲು, ಜೋತ್ಯಾಜಿಯು ಅವನ ಬಾಯಿ ಮೇಲೆ ಕೈಯಿಟ್ಟು ಸುಮ್ಮನಿರಿಸಲಿಕ್ಕೆ ಪ್ರಯತ್ನಿಸಿದನು; ಆದರೆ ಅದೇ ಕಾಲಕ್ಕೆ ಛಾವಣಿಯೊಳಗಿನ ಬಾದಶಹನ ಭವ್ಯವಾದ ಶಾಮಿಯಾನದಲ್ಲಿ ಒಮ್ಮೆಲೆ ಆಕ್ರೋಶದ ಧ್ವನಿಯೆದ್ದು, ಬಾದಶಹನು ಅವ

ಸಾನಗೆಟ್ಟಿರುವನೆಂಬದು ಎಲ್ಲರಿಗೂ ತಿಳಿಯಿತು. ಬಾದಶಹನ ಅವಸಾನದ ದುಃಖವಾರ್ತೆಗಿಂತಲೂ, ಆ ಹುಚ್ಚನ ಆ ನಿಚ್ಚಳವಾದ ಭವಿಷ್ಯದ್ವಾಣಿಯನ್ನು ಕೇಳಿ ಅಲ್ಲಿಯವರೆಲ್ಲರೂ ಹೆಚ್ಚಾಗಿ ಅಚ್ಚರಿಗೊಂಡರು!

---

## ಶಾಹೂರಾಜನ ಬಂಧಮುಕ್ತತೆ.

ಶಾಹೂರಾಜನು ಅವಸರದಿಂದ ಬಾದಶಹನ ಖಾಸ ಡೇರೆಗೆ ಹೋದನು. ಒಳಗಿನಿಂದ ಏನು ವರ್ತಮಾನ ಬರುವದೋ, ಎಂದು ಅವನು ಕ್ಷಣಕಾಲದ ವರೆಗೆ ಆ ಶಾಮಿಯಾನದ ಬಾಗಿಲ ಬಳಿಯಲ್ಲಿ ನಿರೀಕ್ಷಿಸಲು, ಸೂತಕ ವೇಷ ಧಾರಿಯಾಗಿದ್ದ ಮುಖ್ಯ ವಜೀರನು ಧಾವಿಸುತ್ತ ಬಂದು, ಶಾಹೂರಾಜನ ಕೈ ಹಿಡಿದು ಕರೆದೊಯ್ದು ಬಾದಶಹನ ತಲೆಗಿಂಬಿನ ಹತ್ತರ ಕೂಡ್ರಿಸಿದನು. ಆಗ ಬಾದಶಹನ ಅವಸಾನವು ಸಂಪುಷ್ಟಕ್ಕೆ ಬಂದಿತ್ತು. ಅವನ ಕಣ್ಣುಗಳು ಒಳಸೇರಿದ್ದವು; ನಾಲಿಗೆಯು ಸೆಳೆದಿತ್ತು; ಆದರೂ ಅವನು ತೊದಲ್ನುಡಿಯಿಂದ:—"ಶಾಹೂರಾಜರೇ, ನೀವು ನನಗೋಸ್ಕರ ದುಃಖಿಸಬೇಡಿರಿ. ನೂರು ವರ್ಷ ಬದುಕಿದ್ದರೂ ಸಾವು ತಪ್ಪಿದ್ದಲ್ಲ. ಇದುವರೆಗೆ ನಿಮ್ಮನ್ನು ಸೆರೆಯಲ್ಲಿರಿಸಿ, ನಾನು ನಿಮಗೆ ರಾಜ್ಯಭೋಗವನ್ನು ದೊರೆಯಗೊಡಲಿಲ್ಲೆಂದು ನೀವು ದುಃಖಿಸುತ್ತಿರಬಹುದು; ಆದರೆ ರಾಜರೇ, ನೀವಿನ್ನು ಕೊಂಚವೂ ದುಃಖಿಸಲಾಗದು. ನಾನು ನಿಮ್ಮ ವಿಷಯಕವಾಗಿಯೇ ಆಲೋಚಿಸುತ್ತ ಬಿದ್ದುಕೊಂಡಿರಲು, ಕೆಲ ಕ್ಷಣಗಳ ಹಿಂದೆ ಪೈಗಂಬರನು ನನಗೆ ದೃಷ್ಟಾಂತ ಕೊಟ್ಟಿದ್ದೇನಂದರೆ, "ರಾಜರೇ, ನೀವಿನ್ನು ಯಾವ ವಿಷಯಕ್ಕೂ ದುಃಖಿಸಬೇಡಿರಿ-ಆಲೋಚಿಸಬೇಡಿರಿ. ಶಿವಾಜಿಯೇ ನಿಮ್ಮ ರೂಪದಿಂದ ಮತ್ತೆ ಅವತರಿಸಿರುತ್ತಾನೆ. ನಿಮ್ಮ ಅಜ್ಜನೂ ನಾವೂ ಕೂಡಿ ಹಿಂದಿನ ಜನ್ಮದಲ್ಲಿ ರಾಜ್ಯಭೋಗಕ್ಕಾಗಿ ಬದರಿಕಾಶ್ರಮದಲ್ಲಿ ತಪಸ್ಸನ್ನಾಚರಿಸಿದ್ದೆವು. ನನ್ನ ತಪಸ್ಸು ಕೇವಲ ಉಗ್ರವಾದದ್ದು; ಹಾಗೂ ನನ್ನ ಸ್ವಭಾವವು ಅತಿ ತಾಮಸವಾದದ್ದರಿಂದ ನಾನು ಮ್ಲೇಂಛನಾಗಿ ಜನ್ಮಿಸಿದೆನು. ನಿಮ್ಮ ಅಜ್ಜನಾದ ಶಿವಾಜಿಯು ಸಾತ್ವಿಕ ತಪಸ್ಸನ್ನಾಚರಿಸಿದ್ದರಿಂದ, ಅವನು ಹಿಂದುವಾಗಿ ಜನ್ಮಿಸಿದನು. ಧರ್ಮ ರಕ್ಷಣವೇ ಉಭಯತರ ಗುರಿಯಾದ್ದರಿಂದ, ನಾನು ಈ ಇಸ್ಲಾಮೀ ಧರ್ಮವನ್ನು ಹಬ್ಬಿಸಲಿಕ್ಕೆ ಟೊಂಕಕಟ್ಟಿದೆನು; ಮತ್ತು ಶಿವಾಜಿಯು ಹಿಂದು ಧರ್ಮರಕ್ಷಣಾ

ಕ್ಕಾಗಿ ದೇಹ ಧರಿಸಿದನು! ಆತನ ಆಯುಷ್ಯವು ಕಡಿಮೆಯಾದ್ದರಿಂದ. ತನ್ನ ಇಚ್ಛಾಪೂರ್ತಿಗಾಗಿ ಅವನು ನಿಮ್ಮ ರೂಪದಿಂದ ಮತ್ತೆ ಜನ್ಮಿಸಿರುತ್ತಾನೆ ಶಾಹೂರಾಜರೇ, ನಿಮ್ಮ ಭಗವಾಝೇಂಡೆಯು ದಿಲ್ಲಿಯ ಆಚೆಗೂ ನೆಲಿಸುವದು. ನನ್ನ ಮಕ್ಕಳು-ಮರಿಮಕ್ಕಳು ನಿಮ್ಮ ಆಶ್ರಯದಿಂದಲೇ ಉಪಜೀವಿಸುವರು!! ನಿಮ್ಮ ಅಜ್ಜನ ಹಿಂದುಪದ ಪಾತಶಾಹಿಯನ್ನು ಸಂಸ್ಥಾಪಿಸುವ ಕಾರ್ಯವನ್ನು ನೀವು ಸಂಪೂರ್ತಿ ಗೊಳಿಸುವಿರಿ; ಆದ್ದರಿಂದ ಶಾಹೂರಾಜರೇ, ನೀವಿನ್ನು ಸ್ವಲ್ಪವೂ ದುಃಖಿಸಬೇಡಿರಿ. ಈ ಆಸನ್ನಮರಣಿಯಾದ ವೃದ್ಧನ ಮಾತಿನಲ್ಲಿ ವಿಶ್ವಾಸವಿಡಿರಿ! ಅಲ್ಲಾನು-ಪೈಗಂಬರನು-ನಿಮ್ಮನ್ನು ಸರ್ವ ಪ್ರಕಾರದಿಂದಲೂ ಸುಖದಿಂದಿರಿಸಲಿ!!!"

ಆ ಕಾಲದಲ್ಲಿ ಶಾಹೂರಾಜನು ಬಾದಶಹನನ್ನು ಕುರಿತು ಕೇಳಬೇಕೆಂದಿದ್ದ ಪ್ರಶ್ನೆಯೇ ಬೇರೆ; ಬಾದಶಹನು ತಾನಾಗಿ ಹೇಳಿದ ಉತ್ತರವೇ ಬೇರೆ!

ಅಷ್ಟರಲ್ಲಿ ವೃದ್ಧ ಅಸದಖಾನ ವಜೀರನು ಮುಂದೆ ಬಂದು:-"ಹುಜೂರ, ಮುಂದೆ ಏನೇನು ವ್ಯವಸ್ಥೆ ಮಾಡತಕ್ಕದ್ದು?" ಎಂದು ದುಃಖದಿಂದ ಒತ್ತರಿಸಿ ಬಂದ ಕಂಠದಿಂದ ಕೇಳಲು,

ಅಂಥ ಅಂತ್ಯಾವಸ್ಥೆಯ ಸ್ಥಿತಿಯಲ್ಲೂ ಔರಂಗಜೇಬ ಬಾದಶಹನು ವಿಶೇಷವೇನೂ ಆಗದಂತೆ ತೋರ್ಪಡಿಸುತ್ತ:--"ಅದನ್ನು ನಾನೇನು ಹೇಳಲಿ? ನನ್ನ ಅಧಿಕಾರಕ್ಷೇತ್ರದೊಳಗಿನ ವ್ಯವಸ್ಥೆಯನ್ನು ನಾನು ಮಾಡಿಯೇ ಮಾಡುತ್ತೇನೆ; ಆದರೆ ನನ್ನ ಅಧಿಕಾರಕ್ಕೊಳಪಡದ ವ್ಯವಸ್ಥೆಯನ್ನು ನಾನೇನು ಮಾಡುವದು? ಆ ವ್ಯವಸ್ಥೆವನ್ನು ಅಲ್ಲಾನೇ ಮಾಡತಕ್ಕವನು. ನನ್ನ ಬೊಕ್ಕಸವನ್ನೆಲ್ಲ ತರಿಸಿ, ಬಾಕಿ ನಿಂತ ದಂಡಾಳುಗಳ ಸಂಬಳವನ್ನೆಲ್ಲ ನನ್ನ ಸಮಕ್ಷ ಕೊಟ್ಟುಬಿಡಿರಿ" ಎನ್ನಲು, ಕೂಡಲೆ ವಜೀರನು ಅದರಂತೆ ಮಾಡಿದನು. ಅದನ್ನು ನೋಡಿ ಬಾದಶಹನಿಗೆ ಬಹು ಸಮಾಧಾನವಾಯಿತು. ಆಗ ಆತನು: "ಇನ್ನು ನನಗೆ ಸುಖದಿಂದ ಮರಣ ಬರುವದು. ನಾನು ನನ್ನ ಪ್ರಿಯ ಇಸ್ಲಾಮಿ ಧರ್ಮದ ಶತ್ರುಗಳ ನಾಶಮಾಡುವ ಕೆಲಸವನ್ನು ಸಾಯುವ ವರೆಗೂ ಒಳ್ಳೇ ನಿಕರದಿಂದ ಮಾಡಿರುತ್ತೇನೆ. ಈ ಸಂಗತಿಯಿಂದಲೇ ನನ್ನ ಮೃತ್ಯುಸಮಯದಲ್ಲಿ ನನ್ನ ಮನಸ್ಸಿಗೆ ನಿಜವಾದ ಸಮಾಧಾನವೆನಿಸಿದೆ."

ಹೀಗೆ ನುಡಿಯುತ್ತಿರುವಾಗಲೇ ಬಾದಶಹನ ಜೀವಜ್ಯೋತಿಯು

ಹೊರಟು ಹೋಯಿತು! ಅಂದು ಶುಕ್ರವಾರದ ಮಧ್ಯಾಹ್ನ ಕಾಲವಾಗಿದ್ದು, ಕ್ರಿ. ಶಕದ ೨೦ನೇ ಫೆಬ್ರುವಾರಿ ೧೭೦೭ನೇ ಇಸ್ವಿಯಾಗಿತ್ತು. ಅವನು ಸಾಯುವಾಗ ಅಹಮ್ಮದನಗರಕ್ಕೆ ಬಂದಿದ್ದನು. ಆಗ ಆತನ ವಯಸ್ಸು ೮೯ ವರ್ಷವಾಗಿದ್ದು, ಅವನು ಪಟ್ಟಕ್ಕೆ ಕುಳಿತು ೫೦ ವರ್ಷಗಳಾಗಿದ್ದವು.

"ದುಷ್ಟನ್ನನು ಸತ್ತನು; ಮಹಾರಾಜ, ನಮ್ಮ ವೈರಿಯಾದ ಔರಂಗಜೇಬ ಬಾದಶಹನು ಮಡಿದನು; ಸ್ವರಾಜ್ಯದ ಶತ್ರುವು ತೀರಿಕೊಂಡನು!" ಎಂದು ಹುಚ್ಚ ಪದಮಜಿಯು ಹಾರುತ್ತ-ಜಿಗಿಯುತ್ತ ಬಂದು ಶಾಹೂರಾಜರಿಗೆ ಒದರಿ ಒದರಿ ಹೇಳತೊಡಗಿದನು. ಆಗ ಶಾಹೂರಾಜನು ಬಾದಶಹನು ಈ ಮೊದಲು ತನ್ನ ವಿಷಯವಾಗಿ ನುಡಿದ ನುಡಿಗಳ ಬಗ್ಗೆ ತನ್ನ ಮನದಲ್ಲಿ ಆಲೋಚಿಸುತ್ತ ಕುಳಿತಿದ್ದನು. ಶ್ರೀ ಶಿವಛತ್ರಪತಿಯು ತನ್ನ ನಿಧನದ ಕಾಲಕ್ಕೆ:-- "ಶಿವ ನಾಮೇ ರಾಜಾ ಹೋಯಿಲ! ತೋ ದಿಲ್ಲೀ ಪರ್ಯಂತ ರಾಜ್ಯ ಸೋಡವೀಲ" ಎಂದು ವರ್ತಿಸಿದ್ದ ಭವಿಷ್ಯವು ಈಗ ಶಾಹೂರಾಜನಿಗೆ ನೆನಪಾಗಿತ್ತು. ಪುಣ್ಯಶ್ಲೋಕ ಶಿವಾಜಿ ಮಹಾರಾಜರ ಪವಿತ್ರಮುಖದಿಂದ ಹೊರಟ ಶಬ್ದಗಳು ಖಂಡಿತವಾಗಿ ದಿಟವಾಗುವವೆಂದು ತಿಳಿದು, ಸಂಭಾಜಿಯ ಹೆಂಡತಿಯಾದ ಏಸೂಬಾಯಿಯು ತನ್ನ ಮಗನ ಹೆಸರನ್ನು ಶಿವಾಜಿ ಎಂದಿಟ್ಟಿದ್ದಳು; ರಾಜಾರಾಮನ ಹೆಂಡತಿಯಾದ ತಾರಾಬಾಯಿಯೂ ತನ್ನ ಮಗನಿಗೆ ಶಿವಾಜಿಯೆಂದೇ ಹೆಸರಿಟ್ಟಳು; ಆದರೆ ಶಾಹೂವು ದುರ್ದೈವದಿಂದ ಬಾದಶಹನ ಸೆರೆಯಲ್ಲಿರಹತ್ತಿದ್ದರಿಂದ, ಆತನ ಶಿವಾಜಿಯೆಂಬ ಹೆಸರು ಬದಲಾಗಿ 'ಶಾಹೂ' ಎಂಬ ಹೆಸರು ಬಿದ್ದಿತ್ತು. ತಾರಾಬಾಯಿಯ ಮಗನಾದ ಶಿವಾಜಿಯೇ ಶಿವಾಜಿ ಮಹಾರಾಜರ ಭವಿಷ್ಯದಂತೆ ಕೀರ್ತಿಶಾಲಿಯಾಗುವನೆಂದು ತಿಳಿದು, ಶಾಹುವು ಇದುವರೆಗೆ ಆ ಭವಿಷ್ಯದ್ವಾಣಿಯ ಬಗ್ಗೆ ಉದಾಸೀನನಾಗಿದ್ದನು; ಆದರೆ ಇಂದು ಬಾದಶಹನ ಮುಖದಿಂದ ಹೊರಟ ಭವಿಷ್ಯದಿಂದ ಶಾಹುವಿನ ಈ ಮೊದಲಿನ ಔದಾಸೀನ್ಯವೆಲ್ಲ ಲೋಪವಾಗಿ, ಅವನು ಒಳ್ಳೇ ಉತ್ಸಾಹಭರಿತನಾಗಿದ್ದನು. ಇದೇ ಕಾಲಕ್ಕೆ ಪದಮಜಿಯು ಮೇಲೆ ಹೇಳಿದಂತೆ ಒದರುತ್ತ-ಕೂಗುತ್ತ ಅಲ್ಲಿಗೆ ಬಂದನು.

ಅದನ್ನು ಕೇಳಿ, ಶಾಹುವು ಆತನನ್ನು ಸುಮ್ಮನಿರಿಸುವದಕ್ಕೆಂದು:—- "ಎಲಾ ಪದಮಜೀ, ನೀನಿದೇನನ್ನಾರಂಭಿಸಿರುವೆ? ನಿನ್ನೀ ಮಾತುಗಳನ್ನಾರಾದರೂ ಕೇಳಿದರೆ...."

ಪದಮುಜಿಯು ಶಾಹುವನ್ನು ಮತ್ತೆ ಮಾತಾಡಗೊಡದೆ:—"ಇನ್ನು ನಾವು ಯಾರಿಗೂ ಅಂಜುವ ಕಾರಣವಿಲ್ಲ. ಇಂದು ನಾವೆಲ್ಲರೂ ಬಂಧ ಮುಕ್ತರಾವೆವು; ನಮ್ಮನ್ನು ಪ್ರತಿಬಂಧಿಸಲು ಯತ್ನಿಸುತ್ತಿದ್ದ ಆ ನೀಚ ಬಾದ ಶಹನನ್ನು ಯಮದೂತರು ಇದೀಗ ಮುಸುಗೆ ಕಟ್ಟಿ ಎಳೆದೊಯ್ದುದ್ದನ್ನು ನಾನು ಕಣ್ಣಾರೆ ನೋಡಿ ಬಂದಿರುತ್ತೇನೆ" ಹೀಗೆಂದು ನುಡಿದನಲ್ಲದೆ:— "ಮಹಾರಾಜ, ನಮ್ಮ ಮರಾಠಾ ವೀರರು ತಮ್ಮ ದಾರಿ ಕಾಯುತ್ತಿರುವರು. ನಡೆಯಿರಿ ಬೇಗನೆ; ಸಮೀಪದಲ್ಲಿಯ ಜಾಧವರಾಯರ ಛಾವಣಿಗೆ ಹೋ-ಗೋಣ" ಎಂದು ಹೇಳಿದನು.

ಔರಂಗಜೇಬ ಬಾದಶಹನ ಮರಣದಿಂದ ಆ ಛಾವಣಿಯಲ್ಲಿ ವರ್ಣನಾತೀತವಾದ ಗೊಂದಲವೆದ್ದಿತು. ಅದನ್ನು ಕಣ್ಣಾರೆ ಕಂಡ ಒಬ್ಬ ಫಾರ್ಸೀ ಇತಿಹಾಸಕಾರನು ಆ ಬಗ್ಗೆ ಹೀಗೆಂದು ಬರೆದಿಟ್ಟಿರುತ್ತಾನೆ:—"ಕಟ್ಟು-ನಿಟ್ಟಾದ ಧರ್ಮಾಚರಣೆಯೇ ತನ್ನ ಆದ್ಯ ಕರ್ತವ್ಯವೆಂದು ಔರಂಗಜೇಬಬಾದ ಶಹನು ತಿಳಿಯುತ್ತಿದ್ದನು. ಧರ್ಮಾಚರಣೆಯ ಮುಂದೆ ಅವನು ತನ್ನ ಸಂಸಾರಸುಖವನ್ನು ಕೂಡ ಲೆಕ್ಕಿಸುತ್ತಿರಲಿಲ್ಲ. ಆತನ ಎಲ್ಲ ಕೆಲಸಗಳೂ ಧರ್ಮಪ್ರೇರಿತಗಳೇ ಆಗಿದ್ದವು. ಔರಂಗಜೇಬನು ಅಷ್ಟು ದೊಡ್ಡ ಸಮ್ರಾಟನಾಗಿದ್ದರೂ ನಾಚು-ರಂಗು, ಊಟ-ಉಡಿಗೆ, ಅರಿವೆ-ಅಂಚಡಿ, ಅತ್ತರ-ಗುಲಾಬ ಮೊದಲಾದ ಸುಗಂಧದ್ರವ್ಯ ಹಾಗು ಇತರ ವಿಲಾಸ ಇವುಗಳನ್ನು ಆತನೆಂದೂ ಭೋಗಿಸಲಿಲ್ಲ. ಮದ್ಯ-ಮಾಂಸಗಳನ್ನಂತೂ ಅವನು ಸ್ಪರ್ಶಿಸಲಿಲ್ಲ ಸಹ. ಕ್ರಿ. ಶ. ೧೬೬೫ರಲ್ಲಿ ಒಂದು ತಿಂಗಳ ವರೆಗೆ ಒಂದು ಧೂಮಕೇತುವು ಕಾಣಹತ್ತಿತ್ತು. ಆಗ ಆ ಇಡಿ ತಿಂಗಳ ವರೆಗೆ ಅವನು ಕೇವಲ ನಿರಾಹಾರಿಯಾಗಿದ್ದನು! ಅವನು ದಿನಾಲು ನೆಲದ ಮೇಲೊಂದು ಹುಲಿಯ ಚರ್ಮವನ್ನು ಚೆಲ್ಲಿಕೊಂಡು, ಅದರ ಮೇಲೆ ಮಲಗುತ್ತಿದ್ದನು! ಪ್ರತಿಯೊಬ್ಬನೂ ಮೈ ಮುರಿದು ದುಡಿದು ತನ್ನ ಉಪಜೀವಿಕೆಯನ್ನು ಸಾಗಿಸಬೇಕೆಂಬ ಇಸ್ಲಾಮೀ ಧರ್ಮದ ಉಚ್ಚ ಅನುಜ್ಞೆಯನ್ನು ಪಾಲಿಸುವದಕ್ಕೆಂದು ಔರಂಗಜೇಬನು ತಲೆಗೆ ಹಾಕುವ ಟೊಪ್ಪಿಗೆಗಳನ್ನು ತನ್ನ ಕೈ ಮುಟ್ಟಿ ಹೊಲಿಹೊಲಿದು ಮಾರುತ್ತಿದ್ದನು! ಆತನಿಗೆ ಸಂಪೂರ್ಣ ಕುರಾಣವು ಮುಖೋದ್ಗತವಾಗಿತ್ತು. ತನ್ನ ಅವಸಾನ ಕಾಲಕ್ಕೆ ಔರಂಗಜೇಬ ಬಾದಶಹನು ಏಕಾಂತ ಹೇಳಿದನೇನಂದರೆ, 'ನನ್ನ ಇಡಿ ಆಯುಷ್ಯದಲ್ಲಿ ನನ್ನ ಪ್ರಿಯ ಇಸ್ಲಾಮೀ ಧರ್ಮ

ಕಾರ್ಯವನ್ನು ನಾನು ಅಷ್ಟೊಂದು ಉಜ್ವಲವಾಗಿ ನಡಿಸಿರುವದಿಲ್ಲ. ಆದ್ದರಿಂದ ನನ್ನ ಮರಣದ ನಂತರ ನನ್ನ ಅಂತ್ಯವಿಧಿಯನ್ನು ಅಷ್ಟೊಂದು ವಿಜೃಂಭಣೆಯಿಂದ ಮಾಡದೆ, ತೀರ ಸಾದಾ ಪದ್ಧತಿಯಿಂದ ನೆರವೇರಿಸತಕ್ಕದ್ದು!' ತನ್ನ ಅಂತ್ಯವಿಧಿಗಾಗಿ ಸ್ವಹಸ್ತದಿಂದ ಬರೆದ ಕುರಾಣದ ಪ್ರತಿಗಳನ್ನು ಮಾರಿ ಮಾರಿ ಸಂಪಾದಿಸಿದ ಐದು ರೂಪಾಯಿಗಳನ್ನು ಆತನು ಕಾದಿಟ್ಟಿದ್ದನು! ಆತನ ಆಜ್ಞೆಯ ಮೇರೆಗೆ ಆತನ ಶವವನ್ನು ದೌಲತಾಬಾದದ ಬಳಿಯ ಖುಲದಾಬಾದ ಎಂಬಲ್ಲಿ ಶೇಖ ಝೀನುದ್ದೀನ ಎಂಬ ಪ್ರಸಿದ್ಧ ಸಾಧುವಿನ ಗೋರಿಯ ಹತ್ತರ ಗೋರಿಗೊಳಿಸಿದರು. ಆ ಧೂರ್ತನು ತನ್ನ ಗೋರಿಯ ಪೂರ್ವಸಿದ್ಧತೆಯನ್ನು ತಾನೇ ಮಾಡಿರಿಸಿದ್ದನು. ಔರಂಗಜೇಬ ಬಾದಶಹನು ಸ್ವಕಷ್ಟಾರ್ಜಿತವಾಗಿ ಸಂಪಾದಿಸಿದ ೮೦೫ ರೂಪಾಯಿಗಳನ್ನು ತನ್ನ ಅಂತ್ಯಕಾಲದಲ್ಲಿ ಬಡಬಗ್ಗರಿಗೆ ದಾನ ಕೊಡಲಿಕ್ಕೆಂದು ತೆಗೆದಿಟ್ಟಿದ್ದನು!"

ಔರಂಗಜೇಬನ ಮರಣದ ನಂತರ ಆತನ ೨ನೇ ಮಗನಾದ ಅಜೀಮಶಹನು ಅಹಮ್ಮದನಗರದಲ್ಲಿ ಪಟ್ಟಕ್ಕೆ ಕುಳಿತನು. ಝೀಬುನ್ನಿಸಾ ಬೇಗಮೆಗೆ ವಚನ ಕೊಟ್ಟ ಮೇರೆಗೆ ಝುಲ್ಫೀಕಾರಖಾನನು ಆ ಸಮಯದಲ್ಲಿ ಅಜೀಮಶಹನಿಗೆ ಹೇಳಿ, ಶಾಹೂರಾಜನನ್ನು ಬಂಧಮುಕ್ತಗೊಳಿಸಿದನು. ಕೂಡಲೆ ಶಾಹುವು ನೂತನ ಬಾದಶಹನ ಹಾಗು ಆತನ ವಜೀರನಾದ ಝುಲ್ಫೀಕಾರಖಾನನ ಅನುಮತಿಯಿಂದ ಸ್ವಪರಿವಾರದೊಡನೆ ಸ್ವರಾಜ್ಯಕ್ಕಭಿಮುಖವಾಗಿ ನಡೆದನು. ಶಾಹೂರಾಜರ ಆ ಬಂಧ ಮುಕ್ತತೆಯ ಸಂಭ್ರಮವನ್ನು ಕಂಡು, ಪದಮಜಿಯ ಹುಚ್ಚು ನಿಚ್ಚಳವಾಯಿತು! ಹಾಗು ಶಾಹುವು ಅವನನ್ನೇ ತನ್ನ ಮುಖ್ಯ ಅಂಗರಕ್ಷಕನನ್ನಾಗಿ ನಿಯಮಿಸಿಕೊಂಡನು.

---

## ಹಂಸೆಯ ದುಃಸ್ವಪ್ನ!

"ಅವ್ವನವರೇ, ನೀವು ಬಾಯಿ ಬಿಚ್ಚಿ ಹೇಳದಿದ್ದರೂ ನಾನು ನಿಮ್ಮ ದುಃಖದ ಕಾರಣವನ್ನು ತಿಳಿದಿರುತ್ತೇನೆ."

"ಎಸೂ, ನೀನು ತಿಳಿದಿರುವದಾದರೂ ಏನು?"

"ನಿಮ್ಮ ಹೊಟ್ಟೆಯಲ್ಲಿ ರಾಜಪುತ್ರನ ಜನ್ಮವಾಗುವದೆಂದು ನಿಮ್ಮ ಭವಿಷ್ಯವಿರುವದು; ಆದರೆ ಇನ್ನು ನಿಮಗೆ ಪಾಟೀಲ ಪುತ್ರನೇ...."

"ಛೀ-ಛೀ! ಏಸೂ, ನಾನು ಇದಕ್ಕಾಗಿ ದುಃಖಿಸುವೆನೇ? ನೀನು ಸುಮ್ಮನೆ ಏನಾದರೂ ಕಲ್ಪಿಸಿಕೊಂಡಿರುವೆ."

"ಹಾಗಾದರೆ ಅವ್ವನವರೇ, ನಿಮ್ಮ ದುಃಖದ ನಿಜವಾದ ಕಾರಣವನ್ನಾದರೂ ತಿಳಿಸಿರಿ. ನಿಮಗೆ ಹೇಗೂ ಈಗ ೮ ತಿಂಗಳು ತುಂಬಿ ಹೋಗಿವೆ. ಇನ್ನು ಸ್ವಲ್ಪ ದಿನಗಳಲ್ಲಿಯೇ ಅಂಬಾಭವಾನಿಯ ಕೃಪೆಯಿಂದ ನಿಮಗೆ ಪುತ್ರಮುಖ ದರ್ಶನವಾಗುವದು. ಇಂಥ ಸುಪ್ರಸಂಗದಲ್ಲಿ ನೀವು ಹೀಗೆ ಸದಾ ದುಃಖಿಗಳಾಗಿ ಕಾಣುವದೇಕೆ?"

ಹೀಗೆ ಏಸಿಯು ಹಂಸೆಯನ್ನು ಕುರಿತು ಪ್ರಶ್ನೆಮಾಡುತ್ತಿರಲು, ಅದೇ ಸಮಯಕ್ಕೆ ಶಹಾಜಿ ಪಾಟೀಲನು ಅಲ್ಲಿಗೇ ಬಂದನು. ಅವನು ಅವಸರದಿಂದ ಬಂದವನೇ, ತನ್ನ ಶಸ್ತ್ರಾಸ್ತ್ರಗಳನ್ನು ಸಜ್ಜುಗೊಳಿಸಿಕೊಳ್ಳಲಾರಂಭಿಸಿದನು. ಇಷ್ಟರಲ್ಲಿ ಆತನ ಚಿಕ್ಕ ಮಲತಮ್ಮನಾದ ಪಿರಾಜಿಯೂ ಅಲ್ಲಿಗೆ ಬಂದನು. ಅವನು ಬಹು ವಿನೋದಿ ಪ್ರಾಣಿಯು. ಆಗ ಪಿರಾಜಿಯು ತನ್ನ ಅತ್ತಿಗೆ ಹಾಗು ಅಣ್ಣನನ್ನು ಕುರಿತು:—"ಏನರೀ ದಂಪತಿಗಳೇ, ನೀವಿಬ್ಬರೂ ಜಗಳಾಡಿರುವಂತೆ ಕಾಣುತ್ತದೆ; ಯಾಕೆಂದರೆ, ಕಳೆದ ಕೆಲ ದಿನಗಳಿಂದ ನಮ್ಮ ಅತ್ತಿಗೆಯವರು ನನ್ನೊಡನೆ ಹೆಚ್ಚಾಗಿ ನಗೆದಾಡ-ಕೆಲವಾಡುವದನ್ನು ಬಿಟ್ಟು ಬಿಟ್ಟಿರುತ್ತಾರೆ. ಅದು ಏನೇ ಇರಲಿ; ಇವರು ಈಗಲೇ ಇಷ್ಟು ಮಾತು ಕಟ್ಟು ಮಾಡಿದರೆ, ನಾಳೆ ನಾವು ಆ ಬಗ್ಗೆ ಯಾರಿಗೆ ಕೇಳಬೇಕು? ನಮಗೆ ಅದನ್ನು ಹೇಳುವವರಾರು? ಹಿಂದಕ್ಕೆ ನಿಮಗೆ ಏನೇನ ಬೇಕೆಂದು ನಾನು ಇವರನ್ನು ಕೇಳಿದಾಗ, ನಿಮ್ಮನ್ನು ಕೇಳಿರೆಂದು ಇವರೂ, ಇವರನ್ನು ಕೇಳಿರೆಂದು ನೀವೂ ಒಬ್ಬರಮೇಲೊಬ್ಬರು ಹಾಕಿದ್ದಿರಿ. ಮುಂದೂ ಹಾಗೆಯೇ ಆಗಬಾರದೆಂದು ಈಗಲೇ ನಿಮ್ಮಿಬ್ಬರನ್ನು ಕುರಿತು ಒಂದು ಪ್ರಶ್ನೆ ಕೇಳುತ್ತೇನೆ. ಬೇಗನೆ ನಿಜವಾದ ಉತ್ತರವನ್ನು ಕೊಡಿರಿ."

ಶಹಾಜಿ-ಹಂಸೆಯರು ಸಮ್ಮಿಲಿತ ಸ್ವರದಿಂದ:—"ಪಿರಾಜಿ, ನೀನು ಅನ್ನುವದಾದರೂ ಏನು? ನೀನು ಕೇಳುವದಾವದು? ನಾವು ಹೇಳಬೇಕಾದದ್ದಾದರೂ ಏನು?" ಎಂದು ಕೇಳಲು.

"ಓಹೋ! ನಿಮ್ಮಿಬ್ಬರಿಗೂ ಅದು ಗೊತ್ತಿಲ್ಲವೆ? ಅತ್ತಿಗೀ, ಬೇಗನೆ ಹುಟ್ಟುವ ನಿಮ್ಮ ಮಗನಿಗೆ ನಾನು ಯಾವ ಹೆಸರಿನಿಂದ ಕರೆಯಬೇಕು? ಅಣ್ಣಾ, ನಿನ್ನ ಆ ಮುದ್ದುಮಗನ ಹೆಸರೇನೆಂದು ಇಡುವೆ? ಬೇಗನೆ ಹೇಳಿರಿ."

ಪಿರಾಜಿಯ ಆ ವಿನೋದವನ್ನು ಕೇಳಿ, ಆ ಉಭಯ ದಂಪತಿಗಳು ಪರಸ್ಪರರ ಕಡೆಗೆ ಹುಳುಹುಳು ಎಂದು ನೋಡಿ, ನಕ್ಕು:--"ಪಿರಾಜೀ, ಇಷ್ಟು ಅವಸರವೇಕೆ? ಹೆಸರಿಡುವ ಕೆಲಸವು ನಮ್ಮದಲ್ಲ; ಹಿರಿಯರದು" ಎಂದರು.

ಕೂಡಲೆ ಪಿರಾಜಿಯು:—"ಹೇಗೋ? ಹಾಗಾದರೆ ಈಗ ಕೆಳಗೆ ಹೋಗಿ ಅಪ್ಪನನನ್ನೇ ಕೇಳುತ್ತೇನೆ!" ಎಂದೆಂದು, ಹಾರುತ್ತ-ಜಿಗಿಯುತ್ತ ಮೇಲಟ್ಟವನ್ನಿಳಿದು ಹೋದನು.

ಬಳಿಕ ಶಹಾಜಿಯು ಹಂಸೆಯನ್ನು ಕುರಿತು:—"ಹಂಸಾ, ನಮ್ಮ ಗಡಿಯ ಸುತ್ತಲೂ ಶತ್ರುಗಳದೋ-ಮಿತ್ರರದೋ ತಿಳಿಯದು; ಸೈನ್ಯವು ಭರದಿಂದ ಕೂಡತೊಡಗಿವೆ. ನಾವು ಜಾತಿವಂತ ಮರಾಟರಾಗಿದ್ದರೂ ಬಾದಶಹನ ಉಪ್ಪುಂಡವರಾದ್ದರಿಂದ, ಆತನ ಪಕ್ಷದಿಂದಲೇ ಕಾದತಕ್ಕವರು. ಔರಂಗಜೇಬ ಬಾದಶಹನು ತೀರಿಕೊಂಡನೆಂತಲೂ ಆತನ ಮಗನಾದ ಅಜಿಮ ಶಹನು ಪಟ್ಟವನ್ನೇರುವನೆಂತಲೂ ಸುದ್ದಿ ಬಂದಿದೆ. ಈ ಗಡಿಬಿಡಿಯ ಪ್ರಸಂಗದಲ್ಲಿ ಬಾದಶಹನ ಸೆರೆಯಲ್ಲಿದ್ದ ಶಾಹೂರಾಜನು ಮೋಸದಿಂದ ಪಾರಾಗಿ ಹೋದನೆಂದು ಕೆಲವರೂ, ಬಾದಶಹನ ಆದೇಶದ ಮೇರೆಗೆ ಆತನ ಬಿಡುಗಡೆಯಾಗಿದೆಯೆಂದು ಕೆಲವರೂ ಅನ್ನುತ್ತಿದ್ದರೆ, ಕೆಲವರು ನಿಜವಾದ ಶಾಹೂರಾಜನು ಬಾದಶಹನ ಸೆರೆಯಲ್ಲಿಯೇ ಇದ್ದು, ವೇಷಧಾರಿಯೊಬ್ಬನು ಶಾಹೂರಾಜನ ಹೆಸರಿನಿಂದ ಮುಂದೆ ಬಂದು, ಮರಾಟರನ್ನು ಹುರಿದುಂಬಿಸಿ, ಬಾದಶಹನ ಮೇಲೆ ದಂಡೆತ್ತಿನಡೆದಿರುವನೆನ್ನುವರು ಅದು ಹೇಗೆಯೋ ಇರಲಿ; ಬಾದಹಶನ ನಾಡಿನ ರಕ್ಷಣೆಗಾಗಿ ಶತ್ರುಪಕ್ಷದವರೊಡನೆ ನಾವು ಕಾದಲೇ ಬೇಕು. ಅದಕ್ಕಾಗಿ ಪ್ರಿಯೇ, ನಾನೀಗ ನನ್ನ ಸೈನಿಕರೊಡನೆ ರಣಾಂಗಣಕ್ಕೆ ತೆರಳುವೆನು; ಹಾಗು ವೈರಿಗಳನ್ನು ಹೊಡೆದೋಡಿಸಿ, ಬೇಗನೆ ಹಿಂದಿರುಗುವೆನು" ಎಂದು ಹೇಳಿ, ಅಲ್ಲಿಂದ ಹೊರಡಲನುವಾದನು.

ಹಂಸೆಯು ಪ್ರೇಮಭರದಿಂದ ಶಹಾಜಿಯನ್ನು ಆಲಿಂಗಿಸಿ:-"ಪ್ರಿಯರೇ, ಏನಾದರೂ ನೀವಿಂದು ರಣರಂಗಕ್ಕೆ ತೆರಳಬೇಡಿರಿ. ಔರಂಗಜೇಬನು ನಮ್ಮ ಮರಾಟರ ಕಡುವೈರಿಯು. ಅವನು ಈಗ ಹೇಗೂ ತೀರಿಕೊಂಡಿರುತ್ತಾನೆ. ಆತನ ಕಡೆಯವರು ಈಗ ಬಲಗುಂದಿರುವದು ಸ್ವಾಭಾವಿಕವಾಗಿದೆ. ಶಾಹೂರಾಜನ ಪಕ್ಷದವರು ಅವನನ್ನು ಸೋಲಿಸಿ, ಸ್ವರಾಜ್ಯ ಸ್ಥಾಪಿಸುವದು ನಮ್ಮ ಮರಾಟರ ದೃಷ್ಟಿಯಿಂದ ಶ್ರೇಯಸ್ಕರವೇ ಆಗಿದೆ. ಕಾರಣ ಇಂದು

ನೀವು ಬಾದಶಹನಿಗೆ ಸಹಾಯ ಮಾಡುವ ಗೋಜಿಗೆ ಹೋಗಬೇಡಿರಿ. ನಾನು ಇಂದು ನಿಮ್ಮನ್ನು ಇಲ್ಲಿಂದ ಹೋಗಗೊಡಲಾರೆನು" ಎಂದು ಒತ್ತಾಯದಿಂದ ತಡೆದಳು.

ಆಗ ಶಹಾಜಿಯು ಆಕೆಗೆ ನಾನಾ ಬಗೆಯಿಂದ ತಿಳಿ ಹೇಳಿ, "ನಾನು ಇಂದು ಬಾದಶಹನ ಸೈನ್ಯಕ್ಕೆ ನೆರವಾಗ ಹೋಗದಿದ್ದರೆ, ನಮ್ಮಪ್ಪನು ನನ್ನನ್ನೆಂದೂ ಕ್ಷಮಿಸಲಾರನು. ನನ್ನ ಒಲವು ಮರಾಟರ ಕಡೆಗಿದ್ದರೂ, ನನ್ನ ತಂದೆಯು ಬಾದಶಹನ ಕೇವಲ ಹಸ್ತಕನು. ಆದ್ದರಿಂದ ನೀನು ನನ್ನನ್ನು ತಡೆಯಬೇಡ" ಎಂದೆನ್ನಲು,

ಹಂಸೆಯು ಶಹಾಜಿಯ ಸೆರಗನ್ನು ಹಿಡಿದು ಕಣ್ಣೀರು ಸುರಿಸುತ್ತ "ನಾಥ, ನಿನ್ನೆ ರಾತ್ರಿ ನನಗೊಂದು ದುಃಸ್ವಪ್ನವು ಬಿದ್ದಿತ್ತು. ನನ್ನ ಸ್ವಪ್ನದಲ್ಲಿ ಒಂದು ಭಯಂಕರವಾದ ಯುದ್ಧವು ನಡೆದಿದ್ದು, ಆ ರಣಸಂಗ್ರಾಮದಿಂದ ಉರಿಗಣ್ಣಿನ ರಣದೇವತೆಯೊಬ್ಬಳು ನನ್ನ ಕಡೆಗೆ ಧಾವಿಸುತ್ತ ಬಂದು, ನನ್ನ ಸೌಭಾಗ್ಯವನ್ನು ಕಸಿದುಕೊಂಡು ಹೋದದ್ದನ್ನು ನಾನು ಕಣ್ಣಾರೆ ಕಂಡಿರುತ್ತೇನೆ. ಆ ಸ್ವಪ್ನವು ಮಧ್ಯರಾತ್ರಿಯಲ್ಲಿ ಬಿದ್ದಿದ್ದರೆ, ನಾನು ಅದಕ್ಕೆ ಅಷ್ಟೊಂದು ಮಹತ್ವ ಕೊಡುತ್ತಿರಲಿಲ್ಲ; ಆದರೆ ಅದು ನಸುಕಿನಲ್ಲಿ ಬಿದ್ದದ್ದರಿಂದ ನನಗೆ ಕೇಡಾಗುವದು ಖಂಡಿತವು! ಕಾರಣ ನಾಥ, ನೀವು ಇಂದು ಆ ಸಂಗ್ರಾಮಕ್ಕೆ ಖಂಡಿತವಾಗಿಯೂ ಹೋಗಕೂಡದು."

ಹೀಗೆಂದು ಹಂಸೆಯು ಹೇಳುತ್ತಿರಲಿಕ್ಕೆ ಆ ಪಾರದದ ಗಡಿಯ ಮೇಲೆ ಶತ್ರುಪಕ್ಷದ ತೋಫಿನ ಗುಂಡುಗಳು ಬಂದು ಬೀಳಹತ್ತಿದವು. ಶಹಾಜಿಯ ತಂದೆಯು ತನ್ನ ಸೈನಿಕರನ್ನು ಊರ ಹೊರಗೆ ನಿಲ್ಲಿಸಿ, ಶಹಾಜಿಯನ್ನು ಬೇಗನೆ ಬರುವಂತೆ ಹೇಳಿ ಕಳಿಸಿದನು. ಅದರಿಂದ ನಿರುಪಾಯನಾದ ಶಹಾಜಿಯು ಹೆಂಡತಿಯ ವಿನಂತಿಯನ್ನು ಮನ್ನಿಸಲಾರದೆ, ಯುದ್ಧಕ್ಕೆ ಹೊರಟೇ ಹೋದನು.

ಔರಂಗಜೇಬನ ಭಾವಣಿಯಿಂದ ಹೊರಟ ಶಾಹೂರಾಜನು ಸ್ವರಾಜ್ಯದಲ್ಲಿ ಕಾಲಿಟ್ಟ ಕೂಡಲೆ, ಅವನಿಗೆ ನಾನಾ ಬಗೆಯ ವಿಘ್ನಗಳುಂಟಾಗಹತ್ತಿದವು. ಆತನನನ್ನು ಬಂಧಮುಕ್ತಗೊಳಿಸುವಾಗ ಝುಲ್ಫಿಕಾರಖಾನನು ಹೇಳಿದ್ದೇನಂದರೆ:-"ಶಾಹೂರಾಜರೆ, ನಾನು ನಿಮ್ಮನ್ನು ಇಂದು ಬಂಧಮುಕ್ತಗೊಳಿಸಿ, ನಿಮ್ಮ ಸ್ವರಾಜ್ಯಕ್ಕೆ ಕಳಿಸಿಕೊಡುತ್ತಿದ್ದರೂ, ಕೆಲ ದಿನಗಳ ವರೆಗೆ

ನಿಮ್ಮ ಜನರೇ ನಿಮಗೆ ವೈರಿಗಳಾಗಿ, ನಿಮ್ಮನ್ನು ಬಗೆಬಗೆಯಿಂದ ಪೀಡಿಸುವರು. ಆಗ ನೀವು ಕಂಗೆಟ್ಟು ಕೈಕಾಲುಗೆಡುವ ಪ್ರಸಂಗ ಕೂಡ ಒದಗಬಹುದು. ಅಂಥ ಪ್ರಸಂಗವೇ ಒದಗಿದರೆ, ನೀವು ಕೊಂಚವೂ ಅನುಮಾನಪಡದೆ, ನಮ್ಮ ಸಹಾಯವನ್ನು ಕೇಳಬೇಕು. ಆಗ ನಾವು ನಿಮಗೆ ತಕ್ಕ ಸಹಾಯ ಮಾಡಿ, ನಿಮ್ಮನ್ನು ಸ್ವರಾಜ್ಯಕ್ಕೆ ಪಟ್ಟಗಟ್ಟುವೆವು.'' ಶಾಹೂರಾಜನು ಅಹಮ್ಮದನಗರದಿಂದ ಹೊರಟು ಮರಾಟರ ರಾಜ್ಯದ ಗಡಿಯಲ್ಲಿ ಕಾಲಿಟ್ಟ ಕೂಡಲೆ ಅವನಿಗೆ ಇಬ್ಬಗೆಯ ಜನರಿಂದ ತೊಂದರೆಯುಂಟಾಗಹತ್ತಿತು. ರಾಜಾರಾಮ ಮಹಾರಾಜನ ಹೆಂಡತಿಯು ಇದು ವರೆಗೆ ತನ್ನ ಮಗನಾದ ಶಿವಾಜಿಯ ಹೆಸರಿನಿಂದಲೇ ಮರಾಟರ ರಾಜ್ಯವನ್ನು ನಡಿಸಿದ್ದಳಾದ್ದರಿಂದ, ಆಕೆಯೂ ಆಕೆಯ ಪಕ್ಷದ ಸರದಾರ-ಸೇನಾಪತಿಗಳೂ ಶಾಹುವನ್ನೂ, ಆತನ ಹುಕುಮನ್ನೂ ಅಮಾನ್ಯ ಮಾಡಿ, ಅವನಿಗೆ ತೊಂದರೆಗೊಡಹತ್ತಿದರು. ಅದರಂತೆ ಇದುವರೆಗೆ ಔರಂಗಜೇಬನ ಛತ್ರದಲ್ಲಿದ್ದ ಮರಾಟಾ ಸರದಾರರೂ ಜಹಗೀರದಾರರೂ ಈ ನೂತನ ಮರಾಟಾ ರಾಜನನ್ನು ಮನ್ನಿಸಲಾರದೆ, ಅವನೊಡನೆ ವೈರತ್ವದಿಂದ ನಡೆಯಹತ್ತಿದ್ದರು. ಈ ಕಾರಣಗಳಿಂದ ಆಗಿನ ಮರಾಟರ ರಾಜ್ಯದಲ್ಲಿ ಶಾಹುವನ್ನು ಬಹು ಜನರು ಮನ್ನಿಸದಾದರು. ಅದರಿಂದ ಅವನು ಅಹಮ್ಮದನಗರದಿಂದ ಹೊರಟು ಪಾರದದ ಗಡಿಯ ಬಳಿಗೆ ಬರಲಿಕ್ಕೂ, ಅವನಿಗೂ ಅವನ ವೈರಿ ಪಕ್ಷದವರಿಗೂ ತುಮುಲ ಕಾಳಗ ಹೂಡಲಿಕ್ಕೂ ಗಂಟೇ ಬಿದ್ದಿತು.

ಮೇಲೆ ಹೇಳಿದಂತೆ ಉಭಯ ಪಕ್ಷಗಳಲ್ಲಿ ನಿಕರವಾದ ರಣಸಂಗ್ರಾಮವು ನಡೆದಿರಲು, ಶಾಹೂರಾಜನ ಮೋಹಿಮೆಯು ಪಾರದದ ಗಡಿಯ ಹತ್ತರ ಬಂದಿತು. ಆ ಗಡಿಯನ್ನು ಕಂಡು, ಅದನ್ನು ಈ ಮೊದಲೊಮ್ಮೆ ನೋಡಿದ್ದ ಪದಮಜಿಗೆ ಏನೋ ನೆನಪಾದಂತಾಯಿತು. ಕೂಡಲೆ ಅವನು ಶಾಹೂರಾಜನನ್ನು ಕಂಡು:-"ಮಹಾರಾಜ, ಈ ಗಡಿಯಲ್ಲೇ ನನ್ನ ತಾಯಿಯು ಬೇನೆಯಿಂದ ಬಿದ್ದಿರುವಳು. ನಾನು ಒಳಗೆ ಹೋಗಿ ಅವಳನ್ನು ನೋಡಿ ಬರುವೆನು" ಎಂದನು.

31 DEC 1951

ಪದಮಜಿಯ ತಾಯಿಯ ಗುರುತು ಶಾಹೂರಾಜನಿಗೂ ಚೆನ್ನಾಗಿ ಇದ್ದಿತು; ಯಾಕಂದರೆ, ರಾಯಗಡದಲ್ಲಿರುವಾಗ ಅವಳು ಇವನನ್ನು ಎತ್ತಿ ಆಡಿಸಿದ್ದಳು; ಅಲ್ಲದೆ ಬಾದಶಹನ ಸೆರೆಯಲ್ಲಿದ್ದ ಹಂಸೆಯನ್ನು ಶಾಹೂರಾಜನೇ